# ಪಞ್ಚಪಾದಿಕಾ

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1962

# ಅಧ್ಯಾತ್ಮಪ್ರಕಾಶಕಾರ್ಯಾಲಯ,

## ಹೊಳೆನರಸೀಪುರ.

**( ಸ್ಥಾಪಿತವಾದದ್ದು ೧೯೨೦ )**

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು
ತಮ್ಮ ಪೂರ್ವಾಶ್ರಮದಲ್ಲಿ ಸ್ಥಾಪಿಸಿದ ಈ ಸಂಸ್ಥೆಗೆ

**ಪರಿಪಾಲಕರು :**

**ವಿಶಾಲಮೈಸೂರಿನ ರಾಜ್ಯಪಾಲರಾದ**

ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್

**ಜಿ.ಸಿ.ಬಿ., ಜಿ.ಸಿ.ಎಸ್.ಐ. ಮಹಾಸ್ವಾಮಿಯವರು.**

### ಸಂಸ್ಥೆಯು

೧. ಹನ್ನೆರಡು ಜನ ಸಭಿಕರಿಂದಾದ ಕಾರ್ಯಕಾರಿಸಮಿತಿಯ ವ್ಯವಸ್ಥೆಯಲ್ಲಿರುವದು.

೨. ಗ್ರಂಥಕಾಲಕ್ಷೇಪ, ಉಪನ್ಯಾಸಗಳು, ಪುರಾಣಶ್ರವಣ, ಭಜನೆ, ಅನುಷ್ಠಾನ, ಉತ್ಸವಗಳು– ಮುಂತಾದವುಗಳ ಮೂಲಕ ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಆದರವನ್ನುಂಟುಮಾಡುತ್ತಿರುವದು.

೩. ಶ್ರೀಶಂಕರಾಚಾರ್ಯರ ಮತ್ತು ಶ್ರೀರಾಮಾನುಜಾಚಾರ್ಯರ ಗ್ರಂಥರತ್ನಗಳನ್ನು ಸಮೂಲವಾಗಿ ಕನ್ನಡಿಸಿ ಪ್ರಕಟಿಸುತ್ತಿರುವದು.

೪. ಕನ್ನಡ, ಸಂಸ್ಕೃತ, ಇಂಗ್ಲಿಷುಭಾಷೆಗಳಲ್ಲಿ ಒಂದುನೂರಿಪ್ಪತ್ತಕ್ಕೂ ಮೇಲ್ಪಟ್ಟು ಅಧ್ಯಾತ್ಮಗ್ರಂಥಗಳನ್ನು ಹೊರಕ್ಕೆ ತಂದಿರುವದು.

೫. ಅಧ್ಯಾತ್ಮವಿದ್ಯಾಪ್ರಸಾರಕರನ್ನು ಸಜ್ಜುಗೊಳಿಸುವ ಅಧ್ಯಾತ್ಮವಿದ್ಯಾನಿಲಯವನ್ನು ಸ್ಥಾಪಿಸಿರುವದು.

೬. ಒಂದು ಅಧ್ಯಾತ್ಮಪುಸ್ತಕಭಂಡಾರವನ್ನೂ ವಾಚನಾಲಯವನ್ನೂ ಇಟ್ಟುಕೊಂಡಿರುವದು.

೭. "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯನ್ನು ಪ್ರಕಟಿಸುತ್ತಿರುವದು.

೮. "ಅಧ್ಯಾತ್ಮಪ್ರಕಾಶ ಮುದ್ರಣಾಲಯ"ವೊಂದನ್ನು ಇಟ್ಟುಕೊಂಡಿರುವದು.

೯. ಶ್ರೀದಿಗ್ವಿಜಯರಾಮನ ದೇವಸ್ಥಾನವನ್ನು ನಿರ್ಮಾಣಮಾಡಿಸಿ ಪೂಜೆಗೆ ಏರ್ಪಾಡುಮಾಡಿರುವದು.

ಅನುಶಾಂಕರವೇದಾಂತಗ್ರಂಥಾವಳಿ

ಸಂಖ್ಯೆ- ೨

ಶ್ರೀ ಪದ್ಮಪಾದಾಚಾರ್ಯ ವಿರಚಿತ

# ಪಞ್ಚಪಾದಿಕಾ

## ( ಒಂದನೆಯ ವರ್ಣಕ )

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ- ಮುಂತಾದವುಗಳೊಡನೆ

ಸಂಸ್ಕರಿಸಿದವರು ಮತ್ತು ಅನುವಾದಕರು :

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಗ್ರಂಥಾವಳಿಯ ಕ್ರಮಾಂಕ ೧೧೫

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

1962

ಒಂದನೆಯ ಮುದ್ರಣ

"ಅಧ್ಯಾತ್ಮಪ್ರಕಾಶ"ದಿಂದ ತೆಗೆದಚ್ಚು

೧೦೦೦ ಪ್ರತಿಗಳು

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

*All Rights Reserved*

ಮುದ್ರಣಕಾರರು :

ವೈ. ನರಸಪ್ಪನವರು,

ಅಧ್ಯಾತ್ಮಪ್ರಕಾಶಮುದ್ರಣಾಲಯ,

ಹೊಳೆನರಸೀಪುರ.

# ಪ್ರಕಾಶಕರ ಮುನ್ನುಡಿ

ಅನುಶಾಂಕರವೇದಾಂತಗ್ರಂಥಗಳ ಪ್ರಕಟನೆಯಲ್ಲಿ "ನೈಷ್ಕರ್ಮ್ಯ ಸಿದ್ಧಿ"ಯಲ್ಲಿ ಅನುಸರಿಸಿರುವ ಕ್ರಮವನ್ನೇ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು ಇಲ್ಲಿಯೂ ಇಟ್ಟುಕೊಂಡಿರುತ್ತಾರೆ. "ಪಂಚ ಪಾದಿಕೆ"ಯನ್ನು ಅಭ್ಯಾಸಮಾಡುವದುಕೂಡ ಕಡಿಮೆಯಾಗಿರುವ ಈ ಕಾಲದಲ್ಲಿ ಕನ್ನಡಕ್ಕೆ ಈ ಗ್ರಂಥದ ಅನುವಾದವು ದೊರೆತದ್ದು ಒಂದು ಅಮೂಲ್ಯಲಾಭವೆಂದು ನಮ್ಮ ಅಭಿಪ್ರಾಯ.

ನೈಷ್ಕರ್ಮ್ಯಸಿದ್ಧಿಯಂತೆಯೇ ಈ ಗ್ರಂಥಕ್ಕೂ ಒಂದು ವಿಷಯಾ ನುಕ್ರಮಣಿಕೆಯು ಅತ್ಯವಶ್ಯವಾಗಿತ್ತು. ಆದರೂ ಶ್ರೀಗಳಿಗೆ ಕಾಲವ್ಯವ ಧಾನವಿಲ್ಲದ್ದರಿಂದಲೂ ಪೂರ್ಣವಾಗಿ ಪ್ರಕಟಿಸಿದಲ್ಲದೆ ಆ ಅನುಕ್ರಮಣಿಕೆ ಯು ಅಷ್ಟು ಪ್ರಯೋಜನಕರವಾಗಲಾರದೆಂದು ತೋರಿದ್ದರಿಂದಲೂ ಇಲ್ಲಿ ಅದನ್ನು ಸೇರಿಸಿರುವದಿಲ್ಲ.

ಭಾಷ್ಯಗ್ರಂಥಗಳನ್ನು ವ್ಯಾಖ್ಯಾನಗಳಿಗೆ ಹೋಲಿಸಿ ಸಾಲಕ್ಷಣ್ಯ ವೈಲಕ್ಷಣ್ಯಗಳನ್ನು ನಿರ್ಣಯಿಸಬೇಕೆಂಬ ಜಿಜ್ಞಾಸುಗಳಿಗೂ ಮತಾಂತರದ ವೇದಾಂತಿಗಳು ಖಂಡಿಸುತ್ತಿರುವ ಅದ್ವೈತಿಗಳ ಅಭಿಪ್ರಾಯಗಳು ಎಷ್ಟರ ಮಟ್ಟಿಗೆ ಭಾಷ್ಯದವು, ಎಷ್ಟರಮಟ್ಟಿಗೆ ವ್ಯಾಖ್ಯಾನದವು ? – ಎಂಬುದನ್ನು ಗೊತ್ತುಪಡಿಸಬೇಕೆಂಬ ಗ್ರಂಥತತ್ತ್ವಶೋಧಕರುಗಳಿಗೂ ಈ ಅನುವಾದವು ಪ್ರಯೋಜನಕರವಾದೀತೆಂದು ನಮ್ಮ ದೃಢವಾದ ನಂಬಿಕೆ.

1-11-1962 ಪ್ರಕಾಶಕರು.

# ಪೀಠಿಕೆ

——

## ೧. ಗ್ರಂಥವಿಷಯ

"ಪಂಚಪಾದಿಕೆ" ಎಂಬ ಹೆಸರಿನ ಈ ಚಿಕ್ಕಗ್ರಂಥವು ಮೂರ್ತಿಯಲ್ಲಿ ಸಣ್ಣದಾದರೂ ಕೀರ್ತಿಯಿಂದ ಬಹಳ ದೊಡ್ಡದಾಗಿರುತ್ತದೆ. ಈ ಗ್ರಂಥವನ್ನು ಶ್ರೀಶಂಕರ ಭಗವತ್ಪಾದರವರ ಸಾಕ್ಷಾಚ್ಛಿಷ್ಯರಾದ ಶ್ರೀಪದ್ಮಪಾದಾಚಾರ್ಯರು ವಿರಚಿಸಿದರೆಂದೂ ಅದನ್ನು ಅವರು ಪೂರ್ಣವಾಗಿಯೇ ನಿರ್ಮಿಸಿದ್ದರಾದರೂ ಅದು ಕಾರಣಾಂತರದಿಂದ ನಷ್ಟವಾಗಿ ಬ್ರಹ್ಮಸೂತ್ರದ ಐದು ಪಾದಗಳವರೆಗೆ ಮಾತ್ರ ಉಳಿದುಕೊಂಡಿತೆಂದೂ ಅದರಲ್ಲಿಯೂ ನಾಲ್ಕೇ ಸೂತ್ರಗಳ ವ್ಯಾಖ್ಯಾನವು ಪ್ರಚಾರಕ್ಕೆ ಬಂದಿತೆಂದೂ ವಿಸ್ತಾರವಾಗಿ ಕಥೆಯನ್ನು "ಮಾಧವೀಯ ಶಂಕರದಿಗ್ವಿಜಯ"ದಲ್ಲಿ ವರ್ಣಿಸಿರುತ್ತದೆ. ಪದ್ಮಪಾದಾಚಾರ್ಯರ ಕಥೆಯ ವಿಷಯಕ್ಕಿರುವ ಮತಭೇದಗಳನ್ನು "ಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವ" ಎಂಬ ಗ್ರಂಥದಲ್ಲಿ ವಿಮರ್ಶೆಮಾಡಲಾಗಿರುತ್ತದೆ.

ಈವರೆಗೆ ಗ್ರಂಥಶೋಧಕರು ಬಹಳವಾಗಿ ಹುಡುಕಿದರೂ ಪೂರ್ಣವ್ಯಾಖ್ಯಾನ ಗ್ರಂಥವು ಸಿಕ್ಕಿರುವದಿಲ್ಲ. ನಾಲ್ಕನೆಯ ಸೂತ್ರದ ಭಾಷ್ಯದ ಅಭಿಪ್ರಾಯವನ್ನು ವರ್ಣಿಸುವವರೆಗಿನ ಗ್ರಂಥಭಾಗವು ಮಾತ್ರವೇ ಈಗ ಅಚ್ಚಾಗಿರುತ್ತದೆ. ಭಾಷ್ಯಕ್ಕೆ ಪೂರ್ಣವಾಗಿ ವ್ಯಾಖ್ಯಾನವನ್ನು ಬರೆಯುವ ಉದ್ದೇಶವು ಗ್ರಂಥಕರ್ತರಿಗೆ ಇತ್ತೆಂಬುದಕ್ಕೆ ಸೂಚನೆಗಳೇನೋ ಗ್ರಂಥಶರೀರದಲ್ಲಿ ದೊರೆಯುತ್ತವೆ. ಈಗ ಇರುವಷ್ಟು ಭಾಗದಲ್ಲಿ ಎಲ್ಲಿಯೂ ಗ್ರಂಥಕಾರರು ತಾವು ಶ್ರೀಶಂಕರಭಗವತ್ಪಾದರ ಸಾಕ್ಷಾಚ್ಛಿಷ್ಯರೆಂದು ಹೇಳಿಕೊಂಡಿಲ್ಲ; ಗ್ರಂಥದ ಕೊನೆಯಲ್ಲಿಕೂಡ 'ಶ್ರೀಪದ್ಮಪಾದವಿರಚಿತಾಯಾಂ' ಎಂಬ ಮಾತು ಎಲ್ಲಾ ಮೂಲಕೋಶಗಳಲ್ಲಿಯೂ ಇರುವದಿಲ್ಲ. ಈ ಗ್ರಂಥಕ್ಕೆ ಪ್ರಕಾಶಾತ್ಮರೆಂಬವರು ಬರೆದಿರುವ ವ್ಯಾಖ್ಯಾನದಲ್ಲಿಯೂ 'ಪದ್ಮಪಾದ'ರೆಂಬ ಹೆಸರಿಲ್ಲ; ಗ್ರಂಥದ ಹೆಸರನ್ನು ಪಂಚಪಾದಿಕೆಯೆಂದು ಹೇಳಿದೆಯಾದರೂ ನಾಲ್ಕೇ ಸೂತ್ರಕ್ಕೆ ತಾವು ವ್ಯಾಖ್ಯಾನವನ್ನು ಬರೆದದ್ದೇಕೆಂಬುದನ್ನು ಪ್ರಕಾಶಾತ್ಮರು ತಿಳಿಸಿಲ್ಲ. ಆ ವ್ಯಾಖ್ಯಾನವು ಅಪೂರ್ಣವಾಗಿರುವದೇಕೆಂಬುದು ಉಪಲಬ್ಧವಾಗಿರುವ ಗ್ರಂಥಭಾಗದ ಕೊನೆಯಲ್ಲಿಯೂ ಕಾಣುವದಿಲ್ಲ. ವೇದಾಂತಜಿಜ್ಞಾಸುಗಳ ಸೌಭಾಗ್ಯದಿಂದಲೇ ಮುಂದೆ ಇದ್ದಿರಬಹುದಾದ ಗ್ರಂಥಭಾಗವು ಸಿಕ್ಕಬೇಕಾಗಿದೆ.

## ೨. ಪ್ರಕೃತಾನುವಾದ

ಈಗ ನಾವು ಕನ್ನಡಿಸಿರುವ ಭಾಗವು ಪಂಚಪಾದಿಕೆಯಲ್ಲಿರುವ ಒಂಬತ್ತು ವರ್ಣಕಗಳಲ್ಲಿ ಮೊದಲನೆಯ ವರ್ಣಕವು ಮಾತ್ರ. ಈ ಭಾಗದಲ್ಲಿ ಶ್ರೀಶಂಕರಾಚಾರ್ಯರವರು ಅನುಗ್ರಹಿಸಿರುವ ಸೂತ್ರಭಾಷ್ಯದ ಉಪೋದ್ಘಾತವಾಗಿರುವ ಸುಪ್ರಸಿದ್ಧವಾದ ಅಧ್ಯಾಸಭಾಷ್ಯದ ವ್ಯಾಖ್ಯಾನವಿದೆ. ಈ ಭಾಗದಿಂದಲೇ ಪಂಚಪಾದಿಕೆಯ ಪ್ರಕ್ರಿಯೆಯ ಹಲವು ಮುಖ್ಯವಿಚಾರಗಳು ವಾಚಕರಿಗೆ ದೊರೆಯುತ್ತವೆ. ಉಳಿದ ಎಂಟು ವರ್ಣಕಗಳಲ್ಲಿರುವ ವಿಷಯಗಳನ್ನೂ ಒಟ್ಟುಗ್ರಂಥದಲ್ಲಿ ವಾಚಕರ ಮುಂದಿಟ್ಟಿರುವ ಪ್ರಕ್ರಿಯೆಯ ವಿಮರ್ಶೆಯನ್ನೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ ಪ್ರಕಟವಾಗಿರುವ 'ವೇದಾಂತವಿಚಾರದ ಇತಿಹಾಸ' ಎಂಬ ಗ್ರಂಥದಿಂದ ಮನವರಿಕೆಮಾಡಿಕೊಳ್ಳಬಹುದು. ಈಗ್ಗೆ ಮೊದಲನೆಯ ವರ್ಣಕದಲ್ಲಿ ಪ್ರತಿಪಾದಿತವಾಗಿರುವ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ವಿಮರ್ಶೆಮಾಡಲಾಗುತ್ತದೆ.

## ೩. ಅಧ್ಯಾಸಕ್ಕೆ ಉಪಾದಾನವಾಗಿರುವ ಅವಿದ್ಯೆ

ಅಧ್ಯಾಸಭಾಷ್ಯದಲ್ಲಿ ಸತ್ಯಾನೃತಸ್ವರೂಪವಾಗಿರುವ ಆತ್ಮಾನಾತ್ಮರುಗಳ ಅನ್ಯೋನ್ಯಾಧ್ಯಾಸವನ್ನೇ 'ಅವಿದ್ಯೆ' ಎಂದು ಕರೆದಿರುತ್ತದೆ. ಅಧ್ಯಾಸವು ಆತ್ಮಾನಾತ್ಮರ ಸ್ವರೂಪದ ವಿವೇಕಾಭಾವದಿಂದ (ಅವಿವೇಕೇನ) ಆಗಿರುತ್ತದೆ ಎಂದು ಸೂತ್ರಭಾಷ್ಯದಲ್ಲಿಯೂ ಗೀತಾಭಾಷ್ಯದಲ್ಲಿ (೧೩-೨೬)ಯೂ ಬಾಯಿಬಿಟ್ಟು ಹೇಳಿದೆ. ಆದರೆ ಪಂಚಪಾದಿಕೆಯಲ್ಲಿ ಅಧ್ಯಾಸಭಾಷ್ಯದಲ್ಲಿರುವ **'ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ಅಹಮಿದಂ ಮಮೇದಮ್ ಇತಿ ನೈಸರ್ಗಿಕೋऽಯಂ ಲೋಕವ್ಯವಹಾರಃ'** ಮಿಥ್ಯಾಜ್ಞಾನನಿಮಿತ್ತವಾಗಿ ಸತ್ಯಾನೃತಗಳನ್ನು ಬೆರೆಯಿಸಿ 'ನಾನು', 'ನನ್ನದು' ಎಂಬ ಸ್ವಾಭಾವಿಕವ್ಯವಹಾರವು ಆಗಿದೆ- ಎಂಬ ವಾಕ್ಯದಲ್ಲಿರುವ 'ಮಿಥ್ಯಾಜ್ಞಾನನಿಮಿತ್ತಃ' ಎಂಬ ಮಾತನ್ನು **'ಮಿಥ್ಯಾ ಚ ತತ್ ಅಜ್ಞಾನಂ ಚ ಮಿಥ್ಯಾಜ್ಞಾನಮ್ । ಮಿಥ್ಯಾ ಇತಿ ಅನಿರ್ವಚನೀಯತಾ ಉಚ್ಯತೇ । ಅಜ್ಞಾನಮ್ ಇತಿ ಚ ಜಡಾತ್ಮಿಕಾ ಅವಿದ್ಯಾಶಕ್ತಿಃ ಜ್ಞಾನಪರ್ಯುದಾಸೇನ ಉಚ್ಯತೇ । ತನ್ನಿಮಿತ್ತಃ ತದುಪಾದಾನಃ ಇತ್ಯರ್ಥಃ'** ಮಿಥ್ಯೆಯಾಗಿರುವ ಅಜ್ಞಾನವೇ ಮಿಥ್ಯಾಜ್ಞಾನವು. ಇಲ್ಲಿ ಮಿಥ್ಯೆ ಎಂದರೆ ಅನಿರ್ವಚನೀಯವು ; ಅಜ್ಞಾನವು ಎಂಬ ಮಾತಿನಿಂದ ಜ್ಞಾನವಲ್ಲದ ಜಡರೂಪವಾದ ಅವಿದ್ಯಾಶಕ್ತಿಯನ್ನು ಹೇಳಿದೆ; ಅದನ್ನು ನಿಮಿತ್ತವಾಗುಳ್ಳದ್ದು ಎಂದರೆ ಉಪಾದಾನವಾಗುಳ್ಳದ್ದು ಆ ಅಧ್ಯಾಸವು ಎಂದರ್ಥ- (ಪು. ೧೫-೧೬, ಖಂ. ೭) ಎಂದು ವ್ಯಾಖ್ಯಾನಮಾಡಿದೆ. ಇಲ್ಲಿ ಅವಿದ್ಯೆಯು ಅಧ್ಯಾಸಕ್ಕೆ ಉಪಾ

ದಾನವು, ಅದೊಂದು ಜಡಶಕ್ತಿಯು, ಅನಿರ್ವಚನೀಯುವಾದದ್ದು-ಎಂದು ಮೂರು ಅಭಿಪ್ರಾಯಗಳನ್ನು ಹೇಳಿಬುವದಲ್ಲದೆ 'ಅಧ್ಯಾಸವೇ ವ್ಯವಹಾರವು' ಎಂದೂ ಹೇಳಿರುತ್ತದೆ. ಅನಿರ್ವಚನೀಯವೆಂದರೆ ಸತ್ತೆಂದಾಗಲಿ ಅಸತ್ತೆಂದಾಗಲಿ ಹೇಳಲು ಬಾರದ್ದು (ಪು. ೪೯-೫೦, ಖಂ. ೨೫). ಆದರೆ ಭಾಷ್ಯದಲ್ಲಿ ಮಾತ್ರ ಹೀಗೆ ಸ್ಪಷ್ಟವಾಗಿ ಹೇಳಿರುವದು ಎಲ್ಲಿಯೂ ಕಾಣಬರುವದಿಲ್ಲ. ಅಧ್ಯಾಸರೂಪವಾದ ಅವಿದ್ಯೆಯಿಂದಲೇ ಬ್ರಹ್ಮದಲ್ಲಿ ಚೇತನಾಚೇತನರೂಪವಾಗಿ ವಿಭಕ್ತವಾಗಿರುವ ಜಗತ್ತು ಕಾಣಬರುತ್ತಿದೆ. ಈ ಅವಿದ್ಯೆಯಿಂದ ಕಲ್ಪಿತವಾದ ವ್ಯಾಕೃತ ಅಥವಾ ಅವ್ಯಾಕೃತವಾದ ನಾಮರೂಪಗಳೆಂಬ ರೂಪವಿಶೇಷದಿಂದಲೇ ಬ್ರಹ್ಮವು ಪರಿಣಾಮವೇ ಮುಂತಾದ ವ್ಯವಹಾರಕ್ಕೆ ಆಸ್ಪದವಾಗಿರುತ್ತದೆ. ನಿಜವಾದ ತನ್ನ ರೂಪದಿಂದ ಎಲ್ಲಾ ವ್ಯವಹಾರವನ್ನೂ ದಾಟಿರುತ್ತದೆ(ಸೂ.ಭಾ. ೨-೧-೨೭, ಭಾ.ಭಾ. ೪೬೪). 'ಆತ್ಮನೆಂದಾಗಲಿ ಆತ್ಮನಿಗಿಂತ ಬೇರೆಯೆಂದಾಗಲಿ ನಿರ್ವಚನಮಾಡಲಾಗದ ನಾಮರೂಪಗಳು ಅವಿದ್ಯೆಯಿಂದ ಆತ್ಮನಲ್ಲಿ ಕಲ್ಪಿತವಾಗಿವೆ' (ಸೂ. ಭಾ. ೨-೧-೧೪, ಭಾ.ಭಾ. ೪೦) ಎಂದು ಅಲ್ಲಿ ಹೇಳಿರುತ್ತದೆ. ಪಂಚಪಾದಿಕೆಯು ಸೂತ್ರಭಾಷ್ಯಕ್ಕೇ ಬರೆದ ವ್ಯಾಖ್ಯಾನವಾದರೂ ಭಾಷ್ಯದಲ್ಲಿರುವ ಪ್ರಸ್ಥಾನಕ್ಕೂ ಪಂಚಪಾದಿಕೆಯಲ್ಲಿರುವ ಪ್ರಸ್ಥಾನಕ್ಕೂ ಈ ಕೆಳಗೆ ಕಾಣುವಂತೆ ವೈಲಕ್ಷಣ್ಯಗಳಿವೆ ಎಂದು ಇದರಿಂದ ಗೊತ್ತಾಗುತ್ತದೆ :

| ಶಾಂಕರಭಾಷ್ಯ | ಪಂಚಪಾದಿಕೆ |
|---|---|
| ೧. ಅವಿದ್ಯೆ ಎಂಬುದು ಅಧ್ಯಾಸ, ತಪ್ಪುತಿಳಿವು. | ೧. ಅವಿದ್ಯೆ ಎಂಬುದು ಜಡಶಕ್ತಿ. |
| ೨. ಅವಿದ್ಯೆಯು ಆತ್ಮನಲ್ಲಿ ಜಡಾಜಡ ವಿಭಾಗದ ಕಲ್ಪನೆಗೆ ನಿಮಿತ್ತ, ಅನಾದಿ. | ೨. ಅವಿದ್ಯೆಯು ಅಧ್ಯಾಸಕ್ಕೆ ಉಪಾದಾನ |
| ೩. ನಾಮರೂಪಗಳು ಅವಿದ್ಯೆಯಿಂದ ಆತ್ಮನಲ್ಲಿ ತೋರುವ ಹುಸಿತೋರಿಕೆ. | ೩. ನಾಮರೂಪಗಳೇ ಅವಿದ್ಯೆ ; ಅದು ಅಧ್ಯಾಸವಾಗಿ ಪರಿಣಮಿಸುತ್ತದೆ. |
| ೪. ನಾಮರೂಪಗಳು ಅನಿರ್ವಚನೀಯ, ಎಂದರೆ ಆತ್ಮನೆಂದಾಗಲಿ, ಆತ್ಮನಲ್ಲವೆಂದಾಗಲಿ ಗೊತ್ತುಪಡಿಸಿ ಹೇಳುವದಕ್ಕಾಗದ ತೋರಿಕೆ. | ೪. ಅವಿದ್ಯಾಶಕ್ತಿಯು ಅನಿರ್ವಚನೀಯ, ಎಂದರೆ ಸತ್ತೂ ಅಲ್ಲದ ಅಸತ್ತೂ ಅಲ್ಲದ ಪದಾರ್ಥ. |

## ೪. ಅಧ್ಯಾಸದ ಲಕ್ಷಣ

ಅಧ್ಯಾಸವೆಂದರೆ 'ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ' ಸ್ಮೃತಿಯಂತಿರುವದಾಗಿ ಒಂದರಲ್ಲಿ ಹಿಂದೆ ನೋಡಿದ್ದರ ಇನ್ನೊಂದರ ತೋರುವಿಕೆ ಎಂದು ಒಂದು ಕಡೆ ; 'ಅತಸ್ಮಿಂಸ್ತದ್ಬುದ್ಧಿಃ' ಅದಲ್ಲದ್ದರಲ್ಲಿ ಅದೆಂಬ ತಿಳಿವಳಿಕೆ- ಎಂದು

ಇನ್ನೊಂದು ಕಡೆ- ಹೀಗೆ ಭಾಷ್ಯದಲ್ಲಿ ಬರೆದಿದೆ. ಆದರೆ ಪಂಚಪಾದಿಕೆಯಲ್ಲಿ **"ಸ್ಮರ್ಯತೆ ಇತಿ ಸ್ಮೃತಿಃ.... ಸ್ಮರ್ಯಮಾಣರೂಪಮಿವ ರೂಪಮ್ ಅಸ್ಯ, ನ ಪುನಃ ಸ್ಮರ್ಯತ ಏವ । ಸ್ಪಷ್ಟಂ ಪುರೋವಸ್ಥಿತತ್ವಾವಭಾಸನಾತ್ । 'ಪೂರ್ವದೃಷ್ಟಾವಭಾಸಃ' ಇತ್ಯುಪಪತ್ತಿಃ ಸ್ಮೃತಿರೂಪತ್ವೇ । ನ ಹಿ ಪೂರ್ವಮ್ ಅದೃಷ್ಟರಜತಸ್ಯ ಶುಕ್ತಿಸಂಪ್ರಯೋಗೇ ರಜತಮ್ ಅವಭಾಸತೇ"** (ಸ್ಮರಿಸಲ್ಪಡುವದರಿಂದ ಸ್ಮೃತಿಯೆನಿಸುತ್ತದೆ).... ಸ್ಮರಿಸಲ್ಪಡವ (ವಸ್ತುವಿನ) ರೂಪದಂತೆ ಇದರ ರೂಪವಿರುತ್ತದೆಯೇ ಹೊರತು (ನಿಜವಾಗಿ) ಸ್ಮರಿಸಲ್ಪಡುವದೇ ಅಲ್ಲ; ಏಕೆಂದರೆ ಸ್ಪಷ್ಟವಾಗಿ ಎದುರಿಗಿದೆ ಎಂದೇ ತೋರುತ್ತಿರುತ್ತದೆ. 'ಪೂರ್ವದೃಷ್ಟಾವಭಾಸ' (ಹಿಂದೆ ಕಂಡದ್ದರ ತೋರಿಕೆ) ಎಂಬುದು ಇದು ಸ್ಮೃತಿರೂಪವಾಗಿರುವದಕ್ಕೆ ಉಪಪತ್ತಿ. ಏಕೆಂದರೆ ಹಿಂದೆ ಬೆಳ್ಳಿಯನ್ನು ಕಾಣದೆ ಇದ್ದವನಿಗೆ ಶುಕ್ತಿಯು ಕಣ್ಣಿಗೆ ಬಿದ್ದರೆ ಬೆಳ್ಳಿ ಕಾಣಿಸುವದಿಲ್ಲ (ಪು. ೨೪-೨೫, ಖಂ. ೧೧)- ಎಂದು ಬರೆದಿರುತ್ತದೆ.

ಭಾಷ್ಯದಲ್ಲಿ ಅಧ್ಯಾಸವೆಂದರೆ ತಪ್ಪುತಿಳಿವಳಿಕೆ ಎಂದು ಸ್ಪಷ್ಟವಾಗಿ ಹೇಳಿದ್ದರೂ ಇಲ್ಲಿ ತಪ್ಪುತಿಳಿವಳಿಕೆಯಿಂದ ಕಂಡ ವಸ್ತು ಎಂದೇ ವ್ಯಾಖ್ಯಾನವನ್ನು ಮಾಡಿದೆ ಎಂಬುದನ್ನು ಲಕ್ಷಿಸಬೇಕು. **'ಯತೋ ಅರ್ಥಾತ್ ತದ್ವಿಷಯಸ್ಯ ಅವಭಾಸಸ್ಯಾಪಿ ಇದಮೇವ ಲಕ್ಷಣಮ್ ಉಕ್ತಂ ಭವತಿ'** 'ಅರ್ಥವಶದಿಂದ ಆ ವಿಷಯದ ಜ್ಞಾನಕ್ಕೂ ಇದೇ ಲಕ್ಷಣವನ್ನು ಹೇಳಿದಂತಾಗಿದೆ' (ಪು. ೨೪-೨೫) ಎಂದು ಇಲ್ಲಿ ಜ್ಞಾನರೂಪವಾದ ಅಧ್ಯಾಸವನ್ನು ಲಕ್ಷಣವಾಕ್ಯಕ್ಕೆ ಆರ್ಥಿಕಾರ್ಥವೆಂದು ಹೇಳಿರುತ್ತದೆ.

## ೫. ಪ್ರಾತಿಭಾಸಿಕವಸ್ತು

ಒಂದು ವಸ್ತುವನ್ನು ಮತ್ತೊಂದೆಂದು ತಪ್ಪಾಗಿ ತಿಳಿಯುವದೇ ಅಧ್ಯಾಸವು ಎಂದು ಲಕ್ಷಣವನ್ನು ಹೇಳಿದ ಬಳಿಕ ಅದಕ್ಕೆ ಉದಾಹರಣೆಯಾಗಿ ಭಾಷ್ಯಕಾರರು **'ತಥಾ ಚ ಲೋಕೇ ಅನುಭವಃ- ಶುಕ್ತಿಕಾ ಹಿ ರಜತವದವಭಾಸತೇ, ಏಕಶ್ಚನ್ದ್ರಃ ಸದ್ವಿತೀಯವತ್ ಇತಿ'** ಆದ್ದರಿಂದಲೇ ಲೋಕದಲ್ಲಿ 'ಕಪ್ಪೆಯಚಿಪ್ಪು ಬೆಳ್ಳಿಯಂತೆ ತೋರುತ್ತಿದೆ', 'ಒಬ್ಬ ಚಂದ್ರನೇ ತನಗೆ ಎರಡನೆಯವನು ಇರುವಂತೆ ಕಾಣುತ್ತಾನೆ'- ಎಂಬ ಅನುಭವವೂ ಇದೆ ಎಂದು ಎರಡು ಉದಾಹರಣೆಗಳನ್ನು ಕೊಟ್ಟಿರುತ್ತಾರೆ. ಈ ಉದಾಹರಣೆಗಳು ತಪ್ಪುತಿಳಿವಳಿಕೆಗೆ ಉದಾಹರಣೆಗಳೆಂಬುದು ಸ್ಪಷ್ಟ. 'ರಜತಶಬ್ದಸ್ತು ರಜತಪ್ರತೀತಿಲಕ್ಷಣಾರ್ಥಃ । ಪ್ರತ್ಯೇತ್ಯೇವ ಹಿ ಕೇವಲಂ ರಜತಮಿತಿ, ನ ತು ತತ್ರ ರಜತಮಸ್ತಿ ।' ಇಲ್ಲಿ ಬೆಳ್ಳಿ ಎಂಬ ಮಾತು ಬೆಳ್ಳಿಯ ತೋರಿಕೆಯನ್ನು ತಿಳಿಸುವದಕ್ಕೆ; ಏಕೆಂದರೆ ಸುಮ್ಮನೆ ಬೆಳ್ಳಿ ಎಂದು ತಿಳಿಯುತ್ತಾನೆಯೇ ಹೊರತು ಅಲ್ಲಿ ಬೆಳ್ಳಿಯಿರುವದಿಲ್ಲ (ಸೂ. ಭಾ. ೪-೧೫, ಭಾ. ಭಾ.

೫೧೫)– ಎಂದು ಆಚಾರ್ಯರೇ ಇದನ್ನು ಸ್ಪಷ್ಟಪಡಿಸಿರುತ್ತಾರೆ. ಆದರೆ ಪಂಚಪಾದಿಕೆಯಲ್ಲಿ ಇದೇ ವಿಷಯದಲ್ಲಿ ಹೀಗೆ ಬರೆದಿದೆ :

> 'ಸಂಸ್ಕಾರದುಷ್ಟಕಾರಣಸಂಕಲಿತಾ ಏಕಾ ಸಾಮಗ್ರೀ । ಸಾ ಚ ಏಕಮೇವ ಜ್ಞಾನಂ ಏಕಫಲಂ ಜನಯತಿ । ತಸ್ಯ ಚ ದೋಷೋತ್ಥಾಪಿತಸಂಸ್ಕಾರವಿಶೇಷಸಹಿತಸಾಮಗ್ರೀಸಮುತ್ಪನ್ನಜ್ಞಾನಸ್ಯ ಉಚಿತಮೇವ ಶುಕ್ತಿಗತಮಿಥ್ಯಾರಜತಮ್ ಆಲಮ್ಬನಮ್ ಅವಭಾಸತೇ । ತೇನ ಮಿಥ್ಯಾಲಮ್ಬನಂ ಜ್ಞಾನಂ ಮಿಥ್ಯಾಜ್ಞಾನಮ್, ನ ಸ್ವತೋ ಜ್ಞಾನಸ್ಯ ಮಿಥ್ಯಾತ್ವಮಸ್ತಿ ॥'

'ಸಂಸ್ಕಾರ ಮತ್ತು ದೋಷಯುಕ್ತಕಾರಣ– ಇವೆರಡೂ ಸೇರಿ ಒಂದೇ ಸಾಮಗ್ರಿ. ಆ (ಸಾಮಗ್ರಿಯು) ಒಂದೇ ಫಲವುಳ್ಳ ಒಂದೇ ಜ್ಞಾನವನ್ನು ಉಂಟು ಮಾಡುತ್ತದೆ. ಆ ದೋಷದಿಂದ ಎದ್ದುಕೊಂಡ ಆ ಸಂಸ್ಕಾರವಿಶೇಷಸಹಿತವಾದ ಸಾಮಗ್ರಿಯಿಂದುಂಟಾದ ಜ್ಞಾನಕ್ಕೆ ಉಚಿತವೇ ಆಗಿರುವ ಶುಕ್ತಿಗತವಾದ ಮಿಥ್ಯಾರಜತವು ವಿಷಯವಾಗಿ ಕಾಣಿಸಿಕೊಳ್ಳುತ್ತದೆ. ಹೀಗಿರುವದರಿಂದ ಮಿಥ್ಯಾವಿಷಯವುಳ್ಳದ್ದರಿಂದ ಜ್ಞಾನವು ಮಿಥ್ಯಾಜ್ಞಾನವೆನಿಸುತ್ತದೆ. ಅಷ್ಟೇ ಹೊರತು ಜ್ಞಾನವು ತಾನೇ ಮಿಥ್ಯೆಯಾಗಿರುವದೆಂಬುದಿಲ್ಲ' (ಪು. ೩೦-೩೧, ಖಂ. ೧೨).

ದೃಷ್ಟಾಂತದಲ್ಲಿಯೂ 'ಮಿಥ್ಯಾರಜತ'ವೆಂಬ ಒಂದಾನೊಂದು ಬೆಳ್ಳಿಯು ಭ್ರಾಂತಿಜ್ಞಾನಕ್ಕೆ ವಿಷಯವಾಗಿರುತ್ತದೆ ಎಂದು ಹೇಳಿರುವದನ್ನು ಲಕ್ಷಿಸಬೇಕು. ಭಾಷ್ಯದಲ್ಲಿ 'ಬೆಳ್ಳಿಯು ಅಲ್ಲಿರುವದಿಲ್ಲ' ಎಂದು ಹೇಳಿರುವದಕ್ಕೆ ಇದು ವಿರುದ್ಧವೆಂಬುದು ಸ್ಪಷ್ಟ. ವೇದಾಂತದಲ್ಲಿ ಹೇಳಿರುವ ಅಧ್ಯಾಸವು ವಸ್ತುಪ್ರಧಾನವಾಗಿರುವದೆಂಬ ತಮ್ಮ ಪ್ರಕ್ರಿಯೆಗೆ ಅನುಗುಣವಾಗಿಯೇ ಈ ವ್ಯಾಖ್ಯಾನಕಾರರು ದೃಷ್ಟಾಂತದಲ್ಲಿಯೂ ಅಧ್ಯಾಸವನ್ನು ಮಿಥ್ಯಾವಿಷಯಪ್ರಧಾನವಾಗಿಯೇ ವರ್ಣಿಸಿರುತ್ತಾರೆ.

## ೬. ಬ್ರಹ್ಮಸ್ವರೂಪಜ್ಞಾನಕ್ಕೆ ಪ್ರತಿಬಂಧಕವಾಗಿರುವ ಅವಿದ್ಯೆ

ಜೀವನಿಗೆ ತಾನು ಬ್ರಹ್ಮಸ್ವರೂಪನೆಂದು ಅರಿತುಕೊಳ್ಳುವದಕ್ಕೆ ಅಡ್ಡಿಯಾಗಿರುವದು ಅಧ್ಯಾಸಕ್ಕೆ ಉಪಾದಾನವಾಗಿರುವ 'ಅವಿದ್ಯೆ' ಎಂಬುದು ಈ ವ್ಯಾಖ್ಯಾನಕಾರರ ಮತವು.

> (೧) ಸಾ ಪ್ರತ್ಯಕ್ಚಿತಿ ಬ್ರಹ್ಮಸ್ವರೂಪಾವಭಾಸಂ ಪ್ರತಿಬಧ್ನಾತಿ, ಅಹಙ್ಕಾರಾದ್ಯತದ್ರೂಪಪ್ರತಿಭಾಸನಿಮಿತ್ತಂ ಚ ಭವತಿ; ಸುಷುಪ್ತ್ಯಾದೌ ಚ ಅಹಙ್ಕಾರಾದಿವಿಕ್ಷೇಪಸಂಸ್ಕಾರಮಾತ್ರಶೇಷಂ ಸ್ಥಿತ್ವಾ ಪುನರುದ್ಭವತಿ ॥

ನಿಮಿತ್ತವೂ ಆಗಿರುತ್ತದೆ. ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಅಹಂಕಾರವೇ ಮುಂತಾದ ವಿಕ್ಷೇಪಗಳ ಸಂಸ್ಕಾರಮಾತ್ರವಾಗಿ ಉಳಿದುಕೊಂಡಿದ್ದು ಮತ್ತೆ ಉದ್ಭವವಾಗುತ್ತದೆ.'

## ೭. ಜಗತ್ತಿನ ಅವ್ಯಾಕೃತಸ್ಥಿತಿಯೇ ಅವಿದ್ಯೆ

ಅಧ್ಯಾಸಕ್ಕೆ ಉಪಾದಾನವಾಗಿರುವ ಅವಿದ್ಯೆಯೂ ಜಗತ್ತಿನ ಮೂಲವಾದ ಅವ್ಯಾಕೃತನಾಮರೂಪಬೀಜವೂ ಒಂದೇ ಎಂಬುದು ಈ ವ್ಯಾಖ್ಯಾನಕಾರರ ಪ್ರಕ್ರಿಯೆ.

'ಯೇಯಂ ಶ್ರುತಿಸ್ಮೃತೀತಿಹಾಸಪುರಾಣೇಷು ನಾಮರೂಪಮ್, ಅವ್ಯಾಕೃತಮ್, ಅವಿದ್ಯಾ, ಮಾಯಾ, ಪ್ರಕೃತಿಃ, ಅಗ್ರಹಣಮ್, ಅವ್ಯಕ್ತಮ್, ತಮಃ, ಕಾರಣಮ್, ಲಯಃ, ಶಕ್ತಿಃ, ಮಹಾಸುಪ್ತಿಃ, ನಿದ್ರಾ, ಅಕ್ಷರಮ್, ಆಕಾಶಮ್– ಇತಿ ಚ ತತ್ರತತ್ರ ಬಹುಧಾ ಗೀಯತೇ ಚೈತನ್ಯಸ್ಯ ಸ್ವತ ಏವಾವಸ್ಥಿತಲಕ್ಷಣಬ್ರಹ್ಮಸ್ವರೂಪತಾವಭಾಸಂ ಪ್ರತಿಬಧ್ಯ ಜೀವತ್ವಾಪಾದಿಕಾ ವಿದ್ಯಾಕರ್ಮಪೂರ್ವಪ್ರಜ್ಞಾಸಂಸ್ಕಾರಚಿತ್ರಭಿತ್ತಿಃ, ಸುಷುಪ್ತೇ ಪ್ರಕಾಶಾಚ್ಛಾದನವಿಕ್ಷೇಪಸಂಸ್ಕಾರಮಾತ್ರರೂಪಸ್ಥಿತಿಃ, ಅನಾದಿರವಿದ್ಯಾ....॥' ಪು. ೭೮

ಈ ವಾಕ್ಯಬೃಂದವನ್ನೂ ಇದರ ಅರ್ಥವನ್ನೂ ಪೂರ್ಣವಾಗಿ ನೋಡಬೇಕೆನ್ನುವವರು ೭೮-೭೯ನೆಯ ಪುಟಗಳನ್ನು ನೋಡಬೇಕು. ಇಲ್ಲಿ ಹೇಳಿರುವ ವಿಷಯಗಳು ಇಷ್ಟು :

(೧) ಬ್ರಹ್ಮಸ್ವರೂಪವು ತೋರಿಕೊಳ್ಳುವದಕ್ಕೆ ಕಾರಣವಾದ ಅನಾದ್ಯವಿದ್ಯೆಯೂ ಜಗತ್ತಿನ ಪ್ರಾಗವಸ್ಥೆಯಾದ ಅವ್ಯಾಕೃತವೂ ಒಂದೇ.

(೨) ಅವಿದ್ಯೆ, ಮಾಯೆ– ಎರಡೂ ಒಂದೇ ಪದಾರ್ಥದ ಹೆಸರು.

(೩) ಅಹಂಕಾರವು ಅದರ ಪರಿಣಾಮವಿಶೇಷವು.

(೪) ಆ ಪರಿಣಾಮವು ನಿದ್ರೆಯಲ್ಲಿ (ಆದ್ದರಿಂದ ಪ್ರಲಯದಲ್ಲಿಯೂ) ಇರುವದಿಲ್ಲ.

(೫) ಆ ಪರಿಣಾಮವೇ ಆತ್ಮನ ಕರ್ತೃತ್ವಭೋಕ್ತೃತ್ವಕ್ಕೆ ಆಶ್ರಯವು.

ಭಾಷ್ಯದಲ್ಲಿ ಹೀಗಿದೆ : ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವೇ ಅವಿದ್ಯೆ ; ಅವಿದ್ಯೆಯಿಂದ ಕಲ್ಪಿತವಾಗಿರುವ ನಾಮರೂಪಗಳೇ ಮಾಯೆ (ಸೂ. ಭಾ. ೨-೧-೧೪) ; ಅಹಂಕಾರವು ಸಾಕ್ಷಿಯಲ್ಲಿ ಅಧ್ಯಸ್ತವಾಗಿದೆ ; ಸುಷುಪ್ತಿಯಲ್ಲಿಯೂ ಪ್ರಲಯದಲ್ಲಿಯೂ ಮರಣದಲ್ಲಿಯೂ ಆತ್ಮನು ಬ್ರಹ್ಮದಲ್ಲಿಯೇ ಸೇರಿರುತ್ತಾ

ನಾದರೂ ಅಲ್ಲಿ ಬುದ್ಧಿಸಂಬಂಧದ ಬೀಜಭಾವವು ಅಥವಾ ವಿಭಾಗಶಕ್ತಿಯು ಮಿಥ್ಯಾಜ್ಞಾನದಿಂದ ಕಲ್ಪಿತವಾಗಿರುತ್ತದೆ (ಸೂ. ಭಾ. ೨-೧-೯, ೨-೩-೩೧, ೪-೨-೮....).

## ೮. ಆತ್ಮನ ಅಸ್ಮತ್ಪ್ರತ್ಯಯವಿಷಯತ್ವ

ಆತ್ಮನು ಅಸ್ಮತ್ಪ್ರತ್ಯಯವಿಷಯನಾಗಿರುವದರಿಂದ (ನಾನು ಎಂಬ ಪ್ರತ್ಯಯಕ್ಕೆ ಗೋಚರವಾಗಿರುವದರಿಂದ) ಅವಿಷಯದಲ್ಲಿ ವಿಷಯದ ಅಧ್ಯಾಸವು ಹೇಗೆ? -ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ ಎಂದು ಭಾಷ್ಯದಲ್ಲಿ ಬರೆದಿರುವಾಗ ಈ ವ್ಯಾಖ್ಯಾನದಲ್ಲಿ ಬರೆದಿರುವದೇನೆಂದರೆ :

'ತದೇವಮಹಙ್ಕಾರಗ್ರನ್ಥಿರಸ್ಮಚ್ಛಬ್ದಸಂಶಬ್ದಿತಃ। ಪ್ರತ್ಯಯಶ್ಚಾಸೌ। ಆದರ್ಶೇ ಇವ ಪ್ರತಿಬಿಮ್ಬಸ್ಯ ಅನಿದಂಚಿತ್ಸಂವಲಿತತ್ವೇನ ತಸ್ಯಾಭಿವ್ಯಕ್ತಿಹೇತುತ್ವಾತ್। ಅತಃ ತಸ್ಯ ವಿಷಯವದ್ ಭವತೀತಿ ಉಪಚಾರೇಣ ಅನಿದಞ್ಚಿದಾತ್ಮಧಾತುಃ ಅಸ್ಮತ್ಪ್ರತ್ಯಯವಿಷಯ ಉಚ್ಯತೇ' (ಇದರ ಅನುವಾದವನ್ನು ೧೧೪ನೆಯ ಪುಟದಲ್ಲಿ ನೋಡಿ).

ಆತ್ಮನು 'ಅಹಂಕಾರ'ದಲ್ಲಿ ತೋರುತ್ತಾನಾದ್ದರಿಂದ ಅಸ್ಮತ್ಪ್ರತ್ಯಯವಿಷಯನೆಂದು ಉಪಚಾರಕ್ಕೆ ಕರೆಯುತ್ತಾರೆ- ಎಂಬುದು ಇದರ ಅಭಿಪ್ರಾಯ. ಇಲ್ಲಿ ಅಸ್ಮತ್ಪ್ರತ್ಯಯವಿಷಯತ್ವವನ್ನು ಭಾಷ್ಯಕಾರರು ಹೇಳಿರುವದನ್ನು ಹೀಗೆ ಪ್ರಕಾರಾಂತರವಾಗಿ ವರ್ಣಿಸಿರುವದರ ಉದ್ದೇಶವೇನೆಂಬುದು ತಿಳಿಯುವಂತಿಲ್ಲ. ಇದನ್ನು ಔಪಚಾರಿಕವೆಂದದ್ದರಿಂದ ಪೂರ್ವಪಕ್ಷಕ್ಕೆ ಸಮಾಧಾನವನ್ನು ಹೇಳಿದಂತೆ ಆಗುವದಿಲ್ಲವೆಂಬುದಂತೂ ಸ್ಪಷ್ಟ.

## ೯. ಅವಿದ್ಯೆಗೆ ಪ್ರಮಾಣ

ಭಾಷ್ಯದಲ್ಲಿ ಅಧ್ಯಾಸರೂಪವಾದ ಅವಿದ್ಯೆಯ ಮೂಲಕವೇ ಸಕಲಪ್ರಮಾಣ ಪ್ರಮೇಯವ್ಯವಹಾರಗಳೂ ಶಾಸ್ತ್ರಗಳೂ ಹೊರಟಿರುವವು- ಎಂದು ಸ್ಪಷ್ಟವಾಗಿ ಹೇಳಿ ಇದು ಸರ್ವಲೋಕಾನುಭವಸಿದ್ಧವಾಗಿದೆ ಎಂದು ತೋರಿಸಿದ್ದರೂ ಈ ವ್ಯಾಖ್ಯಾನದಲ್ಲಿ

(೧) ಅವಶ್ಯಮ್ ಏಷಾ ಅವಿದ್ಯಾಶಕ್ತಿಃ ಬಾಹ್ಯಾಧ್ಯಾತ್ಮಿಕೇಷು ವಸ್ತುಷು ತತ್ಸ್ವರೂಪಸತ್ತಾಮಾತ್ರಾನುಬನ್ಧಿನೀ ಅಭ್ಯುಪಗನ್ತವ್ಯಾ। ಅನ್ಯಥಾ ಮಿಥ್ಯಾವಭಾಸಾನುಪಪತ್ತೇಃ ॥ ಪು. ೧೫-೧೬

'ಈ ಅವಿದ್ಯಾಶಕ್ತಿಯು ಹೊರಗಿನ ಮತ್ತು (ಶರೀರದ) ಒಳಗಿನ ವಸ್ತುಗಳಲ್ಲಿ ಅವುಗಳ ಸ್ವರೂಪಸತ್ತಾಮಾತ್ರಕ್ಕೆ ಸೇರಿಕೊಂಡು ಇದೆ ಎಂದು ಅವಶ್ಯವಾಗಿ

ಒಪ್ಪಬೇಕು. ಏಕೆಂದರೆ ಹೀಗಲ್ಲದಿದ್ದರೆ ಮಿಥ್ಯಾಪದಾರ್ಥವು ತೋರಲಾರದು' ಎಂದೂ

(೨) ವಿದ್ಯತ ಏವಾತ್ಮಾಪ್ಯಗ್ರಹಣಾವಿದ್ಯಾತ್ಮಕೋ ದೋಷಃ ಪ್ರಕಾಶಸ್ಯಾಚ್ಛಾದಕಃ । ಕಥಂ ಗಮ್ಯತೇ ? ಶ್ರುತೇಸ್ತದರ್ಥಾಪತ್ತೇಶ್ಚ ॥ ಪು. ೫೫

'ಇಲ್ಲಿಯೂ ಅಗ್ರಹಣಾವಿದ್ಯಾಸ್ವರೂಪವಾದ (ಬ್ರಹ್ಮದ) ಸ್ವರೂಪವನ್ನು ಮುಚ್ಚುವ ದೋಷವು ಇದ್ದೇಇದೆ. ಅದು ಹೇಗೆ ಗೊತ್ತು ? (ಎಂದರೆ) ಶ್ರುತಿಯಿಂದಲೂ ಅದರ ಅರ್ಥಾಪತ್ತಿಯಿಂದಲೂ ಗೊತ್ತಾಗುತ್ತದೆ' ಎಂದೂ

ಅವಿದ್ಯೆಗೆ ಪ್ರಮಾಣಗಳನ್ನು ಉದಾಹರಿಸಿರುತ್ತದೆ. ಇಂಥ ಅವಿದ್ಯೆಯು ಶ್ರುತಿಜನ್ಯಜ್ಞಾನದಿಂದ ಹೇಗೆ ಹೋದೀತು ? -ಎಂಬ ಪ್ರಶ್ನೆಯನ್ನು ಇಲ್ಲಿ ಎದುರಿಸಿರುವದಿಲ್ಲ.

## ೧೦. ಆತ್ಮೈಕತ್ವವಿದ್ಯಾಪ್ರಾಪ್ತಿ

ಅನರ್ಥಕ್ಕೆ ಕಾರಣವಾದ ಅವಿದ್ಯೆಯ ನಾಶಕ್ಕಾಗಿ 'ಆತ್ಮೈಕತ್ವವಿದ್ಯಾಪ್ರಾಪ್ತಿ'ಗಾಗಿ ಸಕಲವೇದಾಂತಗಳೂ ಪ್ರಾರಂಭವಾಗಿರುತ್ತವೆ- ಎಂದು ಭಾಷ್ಯದಲ್ಲಿ ಹೇಳಿರುವ ವಿದ್ಯಾಪ್ರಾಪ್ತಿಯು ಸ್ವರೂಪವೇನು ? -ಎಂಬುದನ್ನು ವಿಮರ್ಶೆಮಾಡಿ ವಿದ್ಯೆಯು ಜ್ಞಾತೃವನ್ನಾಶ್ರಯಿಸಿಯೇ ಉಂಟಾಗುವದರಿಂದ ಅದರ ಪ್ರಾಪ್ತಿಯನ್ನು ಬೇರೆಮಾಡಿಕೊಳ್ಳತಕ್ಕದ್ದಲ್ಲವಾದರೂ 'ಜ್ಞಾನವು ಉಂಟಾದಮೇಲೂ ಅಸಂಭಾವನಾವಿಪರೀತಭಾವನೆಗಳಿಂದ ತಿರಸ್ಕೃತವಾಗಿರುತ್ತದೆ. ಆದ್ದರಿಂದ ಅದು ನೆಲೆನಿಲ್ಲುವದಕ್ಕಾಗಿ ತರ್ಕವು ಬೇಕಾಗುತ್ತದೆ ; ಆದ್ದರಿಂದ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಬೇಕಾಗುವದು' ಎಂಬ ಅಭಿಪ್ರಾಯವನ್ನು ಇಲ್ಲಿ (ಪು. ೧೫೭) ಪ್ರಕಟಿಸಿದೆ. ಭಾಷ್ಯಪ್ರಸ್ಥಾನದಲ್ಲಿಯಾದರೋ ವೇದಾಂತವಾಕ್ಯದಿಂದ ಜ್ಞಾನವುಂಟಾದ ಬಳಿಕ ಮಾಡಬೇಕಾದದ್ದು ಏನೂ ಇರುವದಿಲ್ಲವೆಂದು ಹೇಳಿ, ಬ್ರಹ್ಮಜ್ಞಾನಕ್ಕೆ ಮತ್ತೊಂದು ಪ್ರಮಾಣವನ್ನಾಗಲಿ ಸಾಧನವನ್ನಾಗಲಿ ಹುಡುಕಬೇಕಾದ ಆವಶ್ಯಕತೆಯೇನೂ ಇರುವದಿಲ್ಲವೆಂದು (ಮಾಂ. ಭಾ. ಮಂ. ೭, ಛಾ. ಭಾ. ೩೯ ಮುಂತಾದ ಕಡೆಗಳಲ್ಲಿ) ಸಾರಿರುತ್ತದೆ. ಹೀಗೆ ವೇದಾಂತದಿಂದಾಗುವ ಆತ್ಮೈಕತ್ವಜ್ಞಾನದ ವಿಷಯಕ್ಕೂ ಇಲ್ಲಿ ಮತಭೇದವಿರುತ್ತದೆ ಎಂದಾಯಿತು.

## ೧೧. ಪಂಚಪಾದಿಕೆಯಲ್ಲಿರುವ ಮಿಕ್ಕ ವಿಷಯಗಳು

ಪಂಚಪಾದಿಕೆಯಲ್ಲಿ ವಿಮರ್ಶನೀಯವಾಗಿರುವ ಇನ್ನೂ ಅನೇಕ ವಿಷಯಗಳಿವೆ. ಈಗ ನಾವು ಕನ್ನಡಿಸಿರುವ ಪ್ರಥಮವರ್ಣಕದಲ್ಲಿಯೇ ಅಖ್ಯಾತಿವಾದವೇ ಮುಂತಾದ ಮತಾಂತರದವರ ವಾದಗಳ ವಿಮರ್ಶೆ, ಅಧ್ಯಾಸವು ಕಾರಣ

ತ್ರಿತಯಜನ್ಯವೆಂಬುದು, ನಿರಾಧಾರವಾದ ನಿರವಧಿಕವಾದ ಅಧ್ಯಾಸವೇ ಇಲ್ಲವೆಂಬುದು, ಅಹಂಪ್ರತ್ಯಯದ ವಿಸ್ತೃತಚರ್ಚೆ, (ಶುಕ್ತಿರಜತ, ಸ್ಫಟಿಕ, ಪ್ರತಿಬಿಮ್ಬ, ರಜ್ಜುಸರ್ಪ, ಘಟಾಕಾಶ- ಈ) ಅಧ್ಯಾಸದೃಷ್ಟಾಂತಗಳ ಸಾರ್ಥಕ್ಯದ ವರ್ಣನೆ, ಅರ್ಥಕ್ರಿಯಾಕಾರಿತ್ವವಿಷಯದಲ್ಲಿ ವಿಜ್ಞಾನವಾದಕ್ಕೂ ವೇದಾಂತಕ್ಕೂ ತಾರತಮ್ಯ, ಅನರ್ಥಹೇತುವಾದ ಅವಿದ್ಯೆಯ ನಾಶದಲ್ಲಿ ಶಬ್ದದ ವ್ಯಾಪಾರವಿಲ್ಲವೆಂಬುದು, ಜ್ಞಾನವಾದಮೇಲೂ ಅವಿದ್ಯಾಸಂಸ್ಕಾರವು ಅಹಂಕಾರಗ್ರಂಥಿಗೆ ಕಾರಣವಾಗಿರಬಹುದೆಂಬುದು- ಇಷ್ಟು ವಿಷಯಗಳು ಮನಸ್ಸಿಗೆ ತಂದುಕೊಳ್ಳುವಹಾಗಿವೆ.

ಆದರೆ ಮುಖ್ಯವಾಗಿ ಅಧ್ಯಸ್ತವಾಗಿರುವ ಅನರ್ಥವು ಬ್ರಹ್ಮಜ್ಞಾನದಿಂದ ನಾಶವಾಗುತ್ತದೆ ಎಂಬ ಜ್ಞಾನಪ್ರಧಾನವಾದ ಭಾಷ್ಯವನ್ನು ಕಾರ್ಯಕಾರಣಪ್ರಕ್ರಿಯಾಪ್ರಧಾನವಾದ ಅವಿದ್ಯೋಪಾದಾನವಾದಕ್ಕೆ ಹೊಂದಿಸಿಕೊಂಡಿರುವದೇ ಈ ಟೀಕೆಯ ಪ್ರಸ್ಥಾನದಲ್ಲಿರುವ ವಿಶೇಷವು; ಆದ್ದರಿಂದಲೇ ನಾವು ಆ ವಿಷಯವನ್ನು ಸ್ವಲ್ಪ ಹೆಚ್ಚು ವಿಸ್ತಾರವಾಗಿ ಇಲ್ಲಿ ವಿವರಿಸಿ ವಾಚಕರ ಮುಂದೆ ಇಟ್ಟಿರುತ್ತೇವೆ.

## ೧೨. ವಿವರಣವ್ಯಾಖ್ಯಾನ

ಪಂಚಪಾದಿಕೆಯಮೇಲೆ 'ವಿವರಣ'ವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಪ್ರಕಾಶಾತ್ಮಯತಿಗಳ ವ್ಯಾಖ್ಯಾನವಿರುವದೂ ಇದಕ್ಕೊಂದು ಹೆಚ್ಚಿನ ಸ್ಥಾನವನ್ನು ಕೊಟ್ಟಿರುತ್ತದೆ. ವಿವರಣಾಚಾರ್ಯರು ಪಂಚಪಾದಿಕೆಯ ಅಭಿಪ್ರಾಯಗಳನ್ನು ವಿಶದಪಡಿಸಿರುವದಲ್ಲದೆ ಕೆಲವು ವೇಳೆ ಅದಕ್ಕೆ ವಿರುದ್ಧವಾಗಿಯೂ ತಮ್ಮ ಮತವನ್ನು ಪ್ರದರ್ಶಿಸುವದಕ್ಕೆ ಹಿಂಜರಿದಿಲ್ಲ. ಹೀಗೆ ವಿವರಣದಿಂದ ಸಂಸ್ಕಾರವನ್ನು ಹೊಂದಿದ ವೇದಾಂತಪ್ರಸ್ಥಾನವು ಈಗ ವಿವರಣಪ್ರಸ್ಥಾನವೆಂದೇ ಜಿಜ್ಞಾಸುಗಳಲ್ಲಿ ಪ್ರಖ್ಯಾತವಾಗಿರುತ್ತದೆ. ಪ್ರಕೃತವಾದ ಅನುವಾದದಲ್ಲಿ ವಿವರಣಾಚಾರ್ಯರ ಸ್ವಂತ ಅಭಿಪ್ರಾಯಗಳನ್ನು ಅಲ್ಲಲ್ಲಿ ಟಿಪ್ಪಣಿಯಲ್ಲಿ ತೋರಿಸಿರುತ್ತದೆಯಾದರೂ ಅವುಗಳನ್ನು ಈ ಪೀಠಿಕೆಯಲ್ಲಿ ಗ್ರಂಥವಿಸ್ತರಭೀತಿಯಿಂದ ವಿಮರ್ಶೆಗೆ ತೆಗೆದುಕೊಂಡಿರುವದಿಲ್ಲ.

## ೧೩. ಉಪಸಂಹಾರ

ಬ್ರಹ್ಮಸೂತ್ರಕ್ಕೆ ನಮಗೆ ದೊರೆತಿರುವ ವ್ಯಾಖ್ಯಾನಗಳಲ್ಲಿ ಪಂಚಪಾದಿಕೆಯು ಅತ್ಯಂತಪ್ರಾಚೀನವಾದದ್ದು. ಪುರಾತನಗ್ರಂಥತತ್ತ್ವಶೋಧಕರಾಗಲಿ, ವೇದಾಂತಪ್ರಕ್ರಿಯಾಸತತ್ತ್ವನಿರ್ಧಾರಕರಾಗಲಿ ಈ ಟೀಕೆಯನ್ನು ಸಾಕಾದಷ್ಟುಮಟ್ಟಿಗೆ ಒಳಹೊಕ್ಕು ಇನ್ನೂ ವಿಮರ್ಶಿಸಿಲ್ಲವೆಂದೇ ನಮ್ಮ ಭಾವನೆ. ಈಗ ಅನುವಾದ ಮಾಡಿರುವ ವರ್ಣಕದಿಂದ ಈ ದಿಕ್ಕಿನಲ್ಲಿ ಜಿಜ್ಞಾಸುಗಳಿಗೆ ಒಂದಿಷ್ಟಾದರೂ ಪ್ರಯೋಜನವಾದರೆ ನಾವು ಧನ್ಯರು.

# ಪ್ರಕೃತಾನುವಾದದ ವಿಶೇಷಗಳು

ಈ ಪ್ರಕಟನೆಯಲ್ಲಿ ಅಧ್ಯಾಸಭಾಷ್ಯವನ್ನು ಭಾಗಭಾಗವಾಗಿ ಒಡೆದುಕೊಂಡು ಅದಕ್ಕೆ ಹೊಂದುವಷ್ಟು ಪಂಚಪಾದಿಕಾಮೂಲವನ್ನು ಜೋಡಿಸಿ ಕನ್ನಡಿಸಿರುತ್ತದೆ. ಹೀಗೆ ಗ್ರಂಥವನ್ನು ಪರಿಷ್ಕರಿಸುವದರಲ್ಲಿ ಪ್ರಸ್ಥಾನತ್ರಯದ ಭಾಷ್ಯಗ್ರಂಥಗಳಲ್ಲಿ ಅನುಸರಿಸಿರುವ ಕ್ರಮವನ್ನೇ ಹಿಂಬಾಲಿಸಿರುತ್ತದೆ ; ಎಂದರೆ ಗ್ರಂಥವನ್ನು ಕೆಲವು ಖಂಡಗಳಾಗಿ ಒಡೆದು ತಕ್ಕ ತಲೆಬರಹಗಳನ್ನು ಜೋಡಿಸಿ ಹಿತಮಿತವಾದ ಟಿಪ್ಪಣಿಗಳನ್ನು ಅಡಿಯಲ್ಲಿ ಕೊಟ್ಟಿರುತ್ತದೆ ; ವಿಚಾರಪ್ರಚೋದಕವಾದ ಪೀಠಿಕೆಯನ್ನೂ ಜೋಡಿಸಿರುತ್ತದೆ. ಗ್ರಂಥದ ಸಾರವನ್ನು ಮಾತ್ರ ಇಲ್ಲಿ ಕೊಟ್ಟಿಲ್ಲ. ಇದಕ್ಕೆ ಮೂಲ ಗ್ರಂಥಕಾರರು ಪ್ರಾಸಂಗಿಕವಾಗಿ ಅನೇಕ ವಿಷಯಗಳನ್ನು ವಿಮರ್ಶೆಗೆ ತೆಗೆದುಕೊಂಡಿರುವದೂ ಒಂದು ಕಾರಣ ; ಅಧ್ಯಾಸಭಾಷ್ಯಭಾಗದ ಸಾರವೇ ಇದರ ಸಾರವಾದ್ದರಿಂದ ಇದನ್ನು ಓದುಗರೇ ಊಹಿಸಿಕೊಳ್ಳಬಹುದೆಂಬುದೂ ಒಂದು ಕಾರಣ.

ಈ ಗ್ರಂಥದ ಸಂಪಾದನೆಯನ್ನು ಮಾಡುವಾಗ ಇ. ಜೆ. ಲಾಜರಸ್ ಕಂಪನಿಯವರು ಮುದ್ರಿಸಿರುವ ಪುಸ್ತಕ, ಕಲಕತ್ತೆಯಲ್ಲಿ ಮಹಾಮಹೋಪಾಧ್ಯಾಯ ವೇದಾಂತವಿಶಾರದ ವೇ॥ ಅನಂತಕೃಷ್ಣಶಾಸ್ತ್ರಿಗಳವರು ಪ್ರಕಟಿಸಿರುವ ಪುಸ್ತಕ (Metropolitan Printing & Publishing House), ಮದರಾಸಿನಲ್ಲಿ ಶಾಸ್ತ್ರರತ್ನಾಕರ ಪ್ರೋಲಗವ್ ಎಸ್. ಶ್ರೀರಾಮಶಾಸ್ತ್ರಿಗಳವರು ಬರೆದಿರುವ ಪುಸ್ತಕ (Govt. Oriental Manuscripts Library)- ಈ ಮೂರು ಪುಸ್ತಕಗಳ ಸಹಾಯದಿಂದ ಸಂಸ್ಕರಿಸಿ ಪ್ರಕಾಶಕ್ಕೆ ತರಲಾಗಿದೆ.

ಗ್ರಂಥವು ಬಹಳ ಬಿಗಿಯಾದ ಶೈಲಿಯಲ್ಲಿ ಸಂಕ್ಷಿಪ್ತವಾಕ್ಯಗಳಿಂದ ರಚಿತವಾಗಿರುತ್ತದೆ. ಅದನ್ನು ಅಕ್ಷರಪ್ರಧಾನವಾಗಿಯೇ ಕನ್ನಡಿಸಬೇಕಾದ ಆವಶ್ಯಕತೆಯು ಅನೇಕ ಸಂದರ್ಭಗಳಲ್ಲಿ ಬಂದೊದಗಿತು. ಇದರಿಂದ ಗ್ರಂಥದ ಕೆಲವು ಭಾಗಗಳ ಅರ್ಥವು ಅನಿವಾರ್ಯವಾಗಿ ಕಷ್ಟವಾಗಿರುತ್ತದೆ. ಇದೇ ಈ ಬಗೆಯ ಅನುವಾದಕ್ಕೆ ಮೊದಲಾದ್ದರಿಂದ ಇಲ್ಲಿ ಅನಿವಾರ್ಯವಾಗಿ ಆಗಿರಬಹುದಾದ ಸ್ಖಾಲಿತ್ಯಗಳನ್ನು ವಿದ್ವಾಂಸರು ತೋರಿಸಿಕೊಟ್ಟು ಉಪಕರಿಸಬೇಕೆಂದು ಅನುವಾದಕರ ಪ್ರಾರ್ಥನೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ
ಶುಭಕೃತು ಕಾರ್ತಿಕ ಕೃಷ್ಣ ೫
ತಾ॥ 16-11-62

ಅನುವಾದಕ.

# ಗ್ರಂಥವಿಭಾಗಕ್ರಮ


| | ಪುಟ |
|---|---|
| ಪ್ರಕಾಶಕರ ಮುನ್ನುಡಿ | 3 |
| ಪೀಠಿಕೆ | 4-13 |
| ವಿಷಯಾನುಕ್ರಮಣಿಕೆ | 14-16 |
| ತಿದ್ದುಪಡಿ | 17-19 |
| ಸಂಕೇತಾಕ್ಷರವಿವರಣೆ | 20 |
| ಪಂಚಪಾದಿಕೆ | ೧-೧೭೭ |


---

# ವಿಷಯಾನುಕ್ರಮಣಿಕೆ


## ಮಂಗಲ ೧

## ಅಧ್ಯಾಸಭಾಷ್ಯದ ಸಂಬಂಧ

ಶಾಸ್ತ್ರದ ವಿಷಯಪ್ರಯೋಜನಗಳು– ಅಧ್ಯಾಸವರ್ಣನೆಯ ಪ್ರಯೋಜನ.

ಪುಟ ೨-೭

ಭಾಷ್ಯದಲ್ಲಿ ಮಂಗಲವಿಲ್ಲದಿರುವದೇನೂ ದೋಷವಲ್ಲ.

ಪುಟ ೭-೯

## ೧. ಅಧ್ಯಾಸಪ್ರತಿಜ್ಞಾಭಾಷ್ಯ–ಪೂರ್ವಪಕ್ಷ

ಆಕ್ಷೇಪ: ವಿರುದ್ಧಸ್ವಭಾವವುಳ್ಳವುಗಳಾದ್ದರಿಂದ ಆತ್ಮಾನಾತ್ಮರುಗಳ ಅಧ್ಯಾಸವಿಲ್ಲ.

ಪುಟ ೯-೧೩

## ೨. ಅಧ್ಯಾಸಪ್ರತಿಜ್ಞಾಭಾಷ್ಯ-ಸಿದ್ಧಾಂತ

ಪರಿಹಾರ– ಅಧ್ಯಾಸವು ಅನುಭವದಲ್ಲಿದೆ– ಅಧ್ಯಾಸಕ್ಕೆ ಮಿಥ್ಯಾಜ್ಞಾನವೇ ಉಪಾದಾನ– ನಾನು ನನ್ನದು ಎಂಬಿವು ಅಧ್ಯಾಸವೇ. ಪುಟ ೧೩-೨೦

## ೩. ಅಧ್ಯಾಸಲಕ್ಷಣಭಾಷ್ಯ

ಲಕ್ಷಣಸಂಭಾವನಾಭಾಷ್ಯದ ಆವಶ್ಯಕತೆ– ಲಕ್ಷಣವಾಕ್ಯದ ವಿಷಯಕ್ಕೆ ಪ್ರಶ್ನೆ ಮತ್ತು ಆಕ್ಷೇಪ– ಲಕ್ಷಣವಾಕ್ಯದ ಅರ್ಥ– ಅಖ್ಯಾತಿವಾದ– ಅಖ್ಯಾತಿವಾದದ ಖಂಡನೆ– (ಅಖ್ಯಾತಿವಾದಿಯಿಂದ ಅಧ್ಯಾಸದ ಬಗ್ಗೆ ಕಲ್ಪಾಂತರಗಳ ವಿಮರ್ಶೆ– ಸಿದ್ಧಾಂತ: ಶುಕ್ತಿಗತಮಿಥ್ಯಾರಜತವೇ ಭ್ರಾಂತಿಗೆ ವಿಷಯ– ಶುಕ್ತಿರಜತವು ಮಾಯಾಮಯ– ಅಧ್ಯಾಸಲಕ್ಷಣದ ವಿಷಯಕ್ಕೆ ಆಕ್ಷೇಪಸಮಾಧಾನಗಳು– ನಾಮಾದಿಗಳಲ್ಲಿ ಬ್ರಹ್ಮದ ಅಧ್ಯಾಸವೆಂಬುದಿಲ್ಲ– ಲಕ್ಷಣಭಾಷ್ಯವ್ಯಾಖ್ಯಾನೋಪಸಂಹಾರ. ಪುಟ ೨೦-೪೩

## ೪. ಅಧ್ಯಾಸದ ವಿಷಯಕ್ಕೆ ಮತಾಂತರಗಳು

ಮತಾಂತರಗಳ ವಿವರಣೆ– ಸ್ವಮತಕ್ಕೆ ಎಲ್ಲರ ಅನುಮತಿ– ಅಧ್ಯಾಸಲಕ್ಷಣವಾಕ್ಯದಲ್ಲಿ ಪದಕೃತ್ಯ– (ಪರತ್ರ ಎಂಬ ಪದದ ಪ್ರಯೋಜನ– ನಿರಧಿಷ್ಠಾನವಾದವು ಅಯುಕ್ತ– 'ಸ್ಮೃತಿರೂಪ', 'ಪೂರ್ವದೃಷ್ಟ' ಎಂಬ ವಿಶೇಷಣಗಳ ಪ್ರಯೋಜನ.) ಪುಟ ೪೩-೫೨

## ೫.[1] ಅಧ್ಯಾಸಕ್ಕೆ ದೃಷ್ಟಾಂತಗಳು

ಎರಡು ದೃಷ್ಟಾಂತಗಳ ಉದ್ದೇಶ– ಪ್ರಕೃತಾಧ್ಯಾಸದಲ್ಲಿ ದೋಷಜನ್ಯತ್ವವಿದೆ– ಸ್ವಯಂಜ್ಯೋತಿಯಾದ ಆತ್ಮನಲ್ಲಿಯೂ ಅಧ್ಯಾಸವಾಗಬಹುದು– ದೇಹಾದಿಗಳಲ್ಲಿ ಅಹಂಪ್ರತ್ಯಯವು ಮುಖ್ಯವೆ ? ಅಹಂಪ್ರತ್ಯಯವು ದೇಹಾದಿಗಳಲ್ಲಿಯೂ ಇರುವದು ವಿರುದ್ಧವಲ್ಲ.

ಪುಟ ೫೨–೬೫

## ೬. ಪ್ರಕೃತಾಧ್ಯಾಸವಿಷಯಕ್ಕೆ ಅಸಂಭಾವನಾಪರಿಹಾರ

ಪ್ರಕೃತಾಧ್ಯಾಸದ ವಿಷಯಕ್ಕೆ ಆಕ್ಷೇಪ ; ಆತ್ಮನು ವಿಷಯನಲ್ಲ– ಸಮಾಧಾನ : ಆತ್ಮನು ಅಸ್ಮತ್ಪ್ರತ್ಯಯವಿಷಯನು–ಅಹಂಪ್ರತ್ಯಯವಿಚಾರ– (ಪ್ರಾಭಾಕರನ ಪೂರ್ವಪಕ್ಷ–ಪ್ರಾಭಾಕರ ಖಂಡನೆಯೂ ಸಿದ್ಧಾಂತವೂ– ಸುಷುಪ್ತ್ಯನುಭವವೂ ಪೂರ್ವಪಕ್ಷಿಗೆ ವಿರುದ್ಧ)– ಆತ್ಮನ ಅಹಂಕರ್ತೃತ್ವದ ಬಗ್ಗೆ ಭಾಷ್ಯಾಭಿಪ್ರಾಯ– ಅಹಂಕಾರದಲ್ಲಿ ಇದಮಂಶದ ಮಿಥ್ಯಾತ್ವಕ್ಕೆ ಉದಾಹರಣೆಗಳು (ಸ್ಫಟಿಕ– ಪ್ರತಿಬಿಂಬ– ರಜ್ಜುಸರ್ಪ– ಘಟಾಕಾಶ)– ಪ್ರಮಾತೃಪ್ರಮಾಣಪ್ರಮೇಯಫಲವ್ಯವಹಾರ– ಸಿದ್ಧಾಂತಕ್ಕೂ ವಿಜ್ಞಾನವಾದಕ್ಕೂ ತಾರತಮ್ಯ (ವಿಜ್ಞಾನವಾದಿಗಳೂ ಗ್ರಾಹ್ಯಗ್ರಾಹಕಭೇದವನ್ನು ಒಪ್ಪಬೇಕು– ಪೂರ್ವಪಕ್ಷ : ಅಹಂಕಾರವು ಅರ್ಥಕ್ರಿಯಾಕಾರಿಯಾದ್ದರಿಂದ ಕ್ಷಣಿಕ– ಸಿದ್ಧಾಂತ : ಅರ್ಥಕ್ರಿಯೆಯಿದ್ದರೆ ಸತ್ತು ಎಂಬುದು ಸರಿಯಲ್ಲ– ಸ್ಥಿರವಾದದ್ದೂ ಸಹಕಾರಿಗಳ ನೆರವಿನಿಂದ ಅರ್ಥಕ್ರಿಯಾಕಾರಿಯಾಗಬಹುದು– ಸಹಕಾರಿಗಳ ವಿಷಯಕ್ಕೆ ವಿವಾದ– ವಿಜ್ಞಾನವಾದಮತಸಾಂಕರ್ಯಪರಿಹಾರದ ಉಪಸಂಹಾರ)– ಅಸ್ಮತ್ಪ್ರತ್ಯಯವಿಷಯತ್ವಭಾಷ್ಯದ ಯೋಜನೆ– ಆತ್ಮನು ಅಪರೋಕ್ಷನಾಗಿರುವದರಿಂದಲೂ ಅಧ್ಯಾಸಾರ್ಹನು.

ಪುಟ ೬೫–೧೧೮

## ೭. ವಿದ್ಯಾವಿದ್ಯಾವಿವೇಕಲಕ್ಷಣಭಾಷ್ಯ

ಅಧ್ಯಾಸವೇ ಅವಿದ್ಯೆ– ಅಧ್ಯಾಸವೆಂದು ಮೊದಲು ಕರೆದದ್ದೇಕೆ ?

ಪುಟ ೧೧೮–೧೨೦

## ೮. ಅಧ್ಯಾಸಸದ್ಭಾವಭಾಷ್ಯ–ಪ್ರಮಾತೃತ್ವ

ಮುಂದಿನ ಭಾಷ್ಯದ ಸಂಬಂಧ– ಪ್ರಮಾಣಗಳು ಅವಿದ್ಯಾವದ್ವಿಷಯವೆಂಬುದು ಹೇಗೆ ? –ಅವಿದ್ಯಾವದ್ವಿಷಯವಾಗಿದ್ದರೂ ಪ್ರಾಮಾಣ್ಯವು ಹೇಗೆ ?

ಪುಟ ೧೨೦–೧೨೬

## ೯. ಪ್ರಮಾಣವ್ಯವಹಾರಕ್ಕೆ ಪಶ್ವಾದಿದೃಷ್ಟಾಂತದ ಭಾಷ್ಯ

ವ್ಯವಹಾರವು ಅವಿವೇಕಪೂರ್ವಕವೆಂಬುದಕ್ಕೆ ಪಶ್ವಾದಿದೃಷ್ಟಾಂತ.

ಪುಟ ೧೨೬–೧೩೦

---

1. ಗ್ರಂಥದಲ್ಲಿ ೪ ಎಂದು ತಪ್ಪಾಗಿ ಅಚ್ಚಾಗಿದೆ.
2. ಈ ತಲೆಬರಹವು ಗ್ರಂಥದಲ್ಲಿ ಬಿಟ್ಟುಹೋಗಿದೆ.

## ೧೦. ಶಾಸ್ತ್ರೀಯವ್ಯವಹಾರವೂ ಅವಿದ್ಯಾಪುರಸ್ಸರವೆಂಬ ಭಾಷ್ಯ

ಶಾಸ್ತ್ರೀಯವ್ಯವಹಾರವು ಅವಿದ್ಯಾಪುರಸ್ಸರ– ಕರ್ಮಾಚರಣೆಗೂ ಆತ್ಮಜ್ಞಾನವು ಬೇಕು– ಪರಮಾತ್ಮಜ್ಞಾನಕ್ಕಿಂತ ಮೊದಲು ಪ್ರವರ್ತಿಸುವ ಶಾಸ್ತ್ರವು ಅವಿದ್ಯಾವಂತರಿಗೆ– ಕರ್ಮಶಾಸ್ತ್ರವು ಅವಿದ್ಯಾಪೂರ್ವಕವೆಂಬುದಕ್ಕೆ ಉದಾಹರಣೆಗಳು.

ಪುಟ ೧೩೦-೧೩೬

## ೧೧. ಅಧ್ಯಾಸದ ಉದಾಹರಣೆಗಳ ಭಾಷ್ಯ

ಮುಂದಿನ ಗ್ರಂಥಕ್ಕೆ ಸಂಬಂಧ– ಪುತ್ರಾದಿಗಳ ಅಧ್ಯಾಸವು ಮುಖ್ಯವೇ– ದೇಹಾದಿಗಳ ಅಧ್ಯಾಸ–ಅಂತಃಕರಣಾದಿಗಳಲ್ಲಾಗುವ ಅಧ್ಯಾಸದ ವಿಷಯಕ್ಕೆ ಆಕ್ಷೇಪಸಮಾಧಾನಗಳು–

ಪುಟ ೧೩೭-೧೪೪

## ೧೨. ಅಧ್ಯಾಸನಿಗಮನಭಾಷ್ಯ

ಅಧ್ಯಾಸದ ಉಪಸಂಹಾರದ ಬಗ್ಗೆ ಆಕ್ಷೇಪಸಮಾಧಾನಗಳು– (ಅಧ್ಯಾಸವೇ ವ್ಯವಹಾರ) ಅಧ್ಯಾಸವು ಅನಂತವೆಂಬುದು– ಮಿಥ್ಯಾಪ್ರತ್ಯಯರೂಪತ್ವಾದಿವಿಶೇಷಣಗಳು.

ಪುಟ ೧೪೪-೧೪೭

## ೧೩. ವೇದಾಂತದ ಪ್ರಯೋಜನ–ಆತ್ಮೈಕತ್ವವಿದ್ಯೆ

ಅನಾದಿಯಾದ ಅಧ್ಯಾಸಕ್ಕೆ ನಾಶವು ಹೇಗೆ?– 'ಅನರ್ಥಹೇತುವಿನ ನಾಶಕ್ಕಾಗಿ' ಎಂಬ ಭಾಷ್ಯವಾಕ್ಯದ ಸ್ವಾರಸ್ಯ– ತತ್ತ್ವಮಸಿವಾಕ್ಯದ ಜ್ಞಾನದಿಂದ ಅವಿದ್ಯಾನಿರಾಸವು ಹೇಗೆ? 'ವಿದ್ಯಾಪ್ರಾಪ್ತಿಗಾಗಿ' ಎಂಬುದರ ಅಭಿಪ್ರಾಯ– ಬ್ರಹ್ಮವಿದ್ಯೆಯಿಂದ ಅವಿದ್ಯೆಯು ಹೋಗಿದ್ದರೂ ಅಹಂಕಾರಾನುವೃತ್ತಿ– ಸರ್ವವೇದಾಂತಗಳೂ ಆತ್ಮೈಕತ್ವವಿದ್ಯೆಗೇ ಪ್ರಾರಂಭವಾಗಿವೆ.

ಪುಟ ೧೪೭-೧೬೩

## ೧೪. ಮೀಮಾಂಸಾಸಂಬಂಧಭಾಷ್ಯ

ಉಪನಿಷತ್ತುಗಳಿಗೂ ಶಾರೀರಕಮೀಮಾಂಸೆಗೂ ಸಂಬಂಧ– ಶಾಸ್ತ್ರದ ವಿಷಯ ಪ್ರಯೋಜನಗಳು.[1]

ಪುಟ ೧೬೩-೧೬೪

## ೧೫. ಸೂತ್ರಾವತರಣಿಕಾಭಾಷ್ಯ

ಮೊದಲು ಪ್ರಯೋಜನವಿಷಯಗಳನ್ನು ಹೇಳಿರುವದಕ್ಕೆ ಕಾರಣ.

ಪುಟ ೧೬೫-೧೬೬

---

1. ಗ್ರಂಥದಲ್ಲಿ ತಲೆಬರಹವನ್ನು ಹೀಗೆಂದು ತಿದ್ದಿಕೊಳ್ಳಬೇಕು.

# ತಿದ್ದುಪಡಿ

**ವಿಶೇಷ:** ವಿಷಯಾನುಕ್ರಮಣಿಕೆಯಲ್ಲಿ ತೋರಿಸಿರುವಂತೆ ಗ್ರಂಥದಲ್ಲಿರುವ ತಲೆಬರಹಗಳಲ್ಲಿ ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕು; ಗ್ರಂಥದಲ್ಲಿರುವ ಮುಖ್ಯವಾದ ತಪ್ಪುಗಳನ್ನು ಮಾತ್ರ ಇಲ್ಲಿ ತೋರಿಸಿದೆ.

| ಪುಟ | ಸಾಲು | ತಪ್ಪು | ಓದಿಕೊಳ್ಳಬೇಕಾದದ್ದು |
|---|---|---|---|
| 4 (ಪೀಠಿಕೆ) | ಕೆಳಗಿನಿಂದ ೮ | ಹೇಳಿಕೊಂಡಿಲ್ಲ | ಹೇಳಿಕೊಂಡಿಲ್ಲ, ಮಂಗಲದ ಳನೆಯ ಶ್ಲೋಕದಲ್ಲಿರುವ 'ಭಾಷ್ಯವಿತ್ತಕಗುರೂನ್' ಎಂಬ ವಿಶೇಷಣದಿಂದ, ಈ ಅರ್ಥವನ್ನು ಹೇಗೋ ಊಹಿಸಿಕೊಳ್ಳಬೇಕಾಗಿದೆ. |
| 4 (ಪೀಠಿಕೆ) | ಕೆಳಗಿನಿಂದ ೪ | ತಿಳಿಸಿಲ್ಲ. | ತಿಳಿಸಿಲ್ಲ. ಮಂಗಲವು ಗ್ರಂಥದ ನಿರ್ವಿಘ್ನಪರಿಸಮಾಪ್ತಿಗೆ ಕಾರಣವೆಂದು ಈ ಗ್ರಂಥಕರ್ತರು ಹೇಳಿಕೊಂಡಿದ್ದರೂ ಅವರು ಬರೆದಿರುವ ಗ್ರಂಥವೇಕೆ ಅಪೂರ್ಣವಾಯಿತು?– ಎಂಬುದನ್ನು ಅವರು ಹೇಳಿಲ್ಲ. |
| ೨ | ಟಿಪ್ಪಣಿ 2 | ಶ್ರವಣಾದಿಗಳು | ಶ್ರವಣಾದಿಗಳನ್ನು ವಿಧಿಸಿರುವಂತೆ ತೋರುವದು. |
| ೪ | ೫ | ರಸತಾಸಂಸಾರಿ | ರಸತಾ ಸಂಸಾರಿ |
| ೨೨ | ೭ | (ಬಾಧ) | ಅ (ಬಾಧ) |
| ೨೬ | ೧೬ | ಅನನ್ನೇವ | ಅಸನ್ನೇವ |
| ೨೭ | ೨೦ | ತಿಳಿಯಬೇಕು೬ | ತಿಳಿಯಬೇಕು |
| ,, | ಟಿಪ್ಪಣಿ 6 | | 6 ಎಂಬ ಸಂಖ್ಯೆಯನ್ನು ತೆಗೆಯಿರಿ; ಈ ಟಿಪ್ಪಣಿಯನ್ನು 5ನೆಯ ಟಿಪ್ಪಣಿಗೇ ಸೇರಿಸಿಕೊಂಡು ಓದಿರಿ. |
| ೨೮ | ಕೆಳಗಿನಿಂದ ೫ | ಯಾವದಿದು? | ಯಾವದು? |
| ೨೯ | ಟಿಪ್ಪಣಿ 1 | ಜ್ಞಾನವನ್ನು | ಜ್ಞಾನವನ್ನೂ |
| ೩೧ | ೧೬ | ಸಮ್ಯಗಿವ | ಸಮ್ಯಗಿವ। |
| ,, | ಕೊನೆಯ ಸಾಲು | ಬಾರದು? | ಬಾರದು?[1] |

ಇದಕ್ಕೆ ಸೇರಿಸಿಕೊಳ್ಳಬೇಕಾದ ಟಿಪ್ಪಣಿ: 1. ಹೀಗಿದ್ದರೂ ಇಲ್ಲಿ ಮಿಥ್ಯಾರಜತವೂ ಇದೆ ಎಂದೇಕೆ ಹೇಳಬೇಕೋ ತಿಳಿಯದು.

| | | | |
|---|---|---|---|
| ೪೪ | ಕೆಳಗಿನಿಂದ ೧೩ | ಪ್ರತ್ಯೊಂದು | ಮತ್ತೊಂದು |
| ೬೭ | ಕೆಳಗಿನಿಂದ ೫ | ಅಹಂಕಾರವು | ಅಹಂಕಾರವು; |

| ಪುಟ | ಸಾಲು | ತಪ್ಪು | ಸೇರಿಸಿಕೊಳ್ಳಬೇಕಾದದ್ದು |
|---|---|---|---|
| ೭೧ | ಟಿಪ್ಪಣಿ 1 | ಅದನ್ನು | ಅದನ್ನೂ |
| ೭೭ | ಟಿಪ್ಪಣಿ 2 | ಎಂದು ಹೇಳುವದಕ್ಕೆ | ಎಂದು ಪೂರ್ವಪಕ್ಷಿಯ ಅಭಿಪ್ರಾಯವನ್ನು ಹೊರಡಿಸುವದಕ್ಕೆ |
| ೭೯ | ೬ | ಸಂಸಗೋಃ | ಸಂಸರ್ಗೋಃ |
| ೮೦ | ಟಿಪ್ಪಣಿ 1 | ಪು. ೫೧ | ಪು. ೧೫–೧೭ |
| ೮೬ | ಕೆಳಗಿನಿಂದ ೧೦ | ಹಾಗೇನೂ ಕಾಣಿಸುವದಿಲ್ಲ | ಹಾಗಿದ್ದುಕೊಂಡಿರುವದು ಕಂಡಿಲ್ಲ |
| ೮೯ | ಕೆಳಗಿನಿಂದ 7 | (ಬೇರೆಬೇರೆ....) | (ಬೇರೆಬೇರೆಯಾಗಿ) ತೋರುವವದನ್ನು |
| ೯೦ | ಟಿಪ್ಪಣಿ 3-L. 3 | ಜೀವನು | ಮುಂದಿನ ವಾಕ್ಯದಲ್ಲಿ ಜೀವನು |
| ೯೧ | ಟಿಪ್ಪಣಿ 1 | ಹಿಂದೆ | ಹಿಂದೆ (ಪು. ೮೧ರಲ್ಲಿ) |
| ೯೬ | ೧೫ | ವಿಚ್ಛೇದಾವಭಾಸೇಽಪಿ | ವಿಚ್ಛೇದಾಭಾಸೇಽಪಿ । |
| ೯೭ | ೨ | ಅವಭಾಸೇತ | ಅವಭಾಸೇತ । |
| ೧೦೭ | ಕೆಳಗಿನಿಂದ ೧೩ | ಜನಯಂತಿ । | ಜನಯತಿ, |
| ೧೦೯ | ೩ | ತದಾ | ತಥಾ |
| ೧೧೩ | ಟಿಪ್ಪಣಿ 3 | ಕಾರಕತ್ವವ್ಯಂಜಕತ್ವ | ಕಾರಕತ್ವರೂಪವಾದ ಅಥವಾ ವ್ಯಂಜಕತ್ವರೂಪವಾದ |
| ೧೧೯ | ಕೆಳಗಿನಿಂದ ೧೧ | ತಸ್ಮಾತ್ಪತ್ತ್ವಮ್ ಸದೇವ | ತಸ್ಮಾತ್ಸತ್ತ್ವಮ್ ತದೇವ |
| ೧೨೯ | ೨ | ಯುಕ್ತಮುಕ್ತಮ್ । ಪಶ್ವಾದೀನಾಂ | ಯುಕ್ತಮುಕ್ತಮ್ 'ಪಶ್ವಾದೀನಾಂ' |
| ೧೨೯ | ಟಿಪ್ಪಣಿ 1 | ಪ್ರಮಾತೃತ್ವ | ಪ್ರಮಾತೃತ್ವವ್ಯವಹಾರ |
| ೧೩೨ | ಕೆಳಗಿನಿಂದ ೯ | ತೋರಿಸಿಕೊಡುವೆವು. | ತೋರಿಸಿಕೊಡುವೆವು.[2] |

ಇಲ್ಲಿ ಸೇರಿಸಿಕೊಳ್ಳಬೇಕಾದ ಟಿಪ್ಪಣಿ ೨. 'ಗ್ರಂಥವು ಈಗಿರುವದಕ್ಕಿಂತ ಇನ್ನು ಮುಂದೆ ಇತ್ತು ಅಥವಾ ಮುಂದುವರಿಯಬೇಕೆಂಬ ಇಚ್ಛೆ ಗ್ರಂಥಕರ್ತರಿಗಿತ್ತು ಎಂಬುದಕ್ಕೆ ಇದೂ ಒಂದು ಗಮಕ'.

| ಪುಟ | ಸಾಲು | ತಪ್ಪು | ಸೇರಿಸಿಕೊಳ್ಳಬೇಕಾದದ್ದು |
|---|---|---|---|
| ೧೩೪ | ತಲೆಬರಹ | ಆತ್ಮಜ್ಞಾನಕ್ಕಿಂತ | ಪರಮಾರ್ಥಾತ್ಮಜ್ಞಾನಕ್ಕಿಂತ |
| ೧೩೫ | ಟಿಪ್ಪಣಿ 1 | ಭೋಕ | ಭೋಕ್ತೃ |
| ೧೪೧ | ೨ | ದೇಹಧರ್ಮಿ | ದೇಹಧರ್ಮ |
| ೧೪೧ | ಟಿಪ್ಪಣಿ 2 | ಅಧ್ಯಾಸಮಾಡುವರು | ಅಧ್ಯಾಸಮಾಡುವದಿಲ್ಲ |
| ೧೪೩ | ಟಿಪ್ಪಣಿ 2 | ಇಲ್ಲಿ ಸೇರಿಸಿಕೊಳ್ಳಬೇಕಾದದ್ದು: | |

"ಇಲ್ಲಿ ಉತ್ತರದಲ್ಲಿ 'ನೀನು ಹೇಳಿರುವದು ನಿಜ' ಎಂದು ಆತ್ಮನಿಗೆ ಧರ್ಮಗಳಿಲ್ಲವೆಂದೇ ಒಪ್ಪಿದೆಯಾದರೂ ಹಿಂದೆ (ಪು. ೧೨ರಲ್ಲಿ) ಮತ್ತೊಂದು ಬಗೆಯ ಸಮಾಧಾನವನ್ನು ಹೇಳಿದೆ."

| ಪುಟ | ಸಾಲು | ತಪ್ಪು | ಸೇರಿಸಿಕೊಳ್ಳಬೇಕಾದದ್ದು |
|---|---|---|---|
| ೧೪೬ | ೧೩ | ಕರ್ತೃತ್ವಭೋಕ್ತೃತ್ವ ಪ್ರವರ್ತನಃ | ....ಪ್ರವರ್ತನಃ[1] |

ಇಲ್ಲಿ ಸೇರಿಸಿಕೊಳ್ಳಬೇಕಾದ ಟಿಪ್ಪಣಿ: 'ಪ್ರವರ್ತಕಃ' ಎಂದೇ ಅಚ್ಚಿನ ಭಾಷ್ಯಪುಸ್ತಕಗಳ ಪಾಠ.

| ಪುಟ | ಸಾಲು | ತಪ್ಪು | ಸೇರಿಸಿಕೊಳ್ಳಬೇಕಾದದ್ದು |
|---|---|---|---|
| ೧೪೭ | ಕೆಳಗಿನಿಂದ ೯ | ರೂಪಾವಗಾಹಿ ಜ್ಞಾನವ್ | ರೂಪಾವಗಾಹಿಜ್ಞಾನಮ್ |
| ೧೪೮ | ೬ | ಜ್ಞಾನಾನ್ತರಸಮುತ್ಪನ್ನಮ್ | ಜ್ಞಾನಾನ್ತರಮುತ್ಪನ್ನಮ್1' |
| | ಇಲ್ಲಿ ಸೇರಿಸಿಕೊಳ್ಳಬೇಕಾದ ಟಿಪ್ಪಣಿ : 'ಸಮುತ್ಪನ್ನಮ್' ಎಂಬ ಅಚ್ಚಿನ ಪಾಠವು ತಪ್ಪು. | | |
| ೧೫೨ | ಕೆಳಗಿನಿಂದ ೬ | ಪ್ರತೀತಿಸಿದ್ಧೇಃ ; | ಪ್ರತೀತಿಸಿದ್ಧೇಃ |
| ೧೫೩ | ೫ | ಪ್ರತ್ಯಙ್ | ಪೃಥಙ್ |
| ೧೫೩ | ಟಿಪ್ಪಣಿ1 | ಪ್ರಯೋಗವಿಲ್ಲದಿದ್ದರೂ | ಪ್ರಯೋಗವಿಲ್ಲದಿದ್ದರೂ ; |
| ೧೫೫ | ಕೆಳಗಿನಿಂದ ೧೩ | ಉಪಲಭ್ಯೇತ। | ಉಪಲಭ್ಯೇತ, |

ವಿಶೇಷವಿಜ್ಞಾಪನೆ : ಸಂಪಾದಕರಿಗೆ ದೇಹಸ್ವಾಸ್ಥ್ಯವಿಲ್ಲದ್ದು, ಅವರು ಸ್ಥಲಾಂತರಕ್ಕೆ ಹೋದದ್ದು– ಮುಂತಾದ ಅನಿವಾರ್ಯಕಾರಣಗಳಿಂದ ಬಹಳ ಅಶುದ್ಧಗಳು ಬಿದ್ದಿವೆ. ಇವುಗಳನ್ನು ದಯವಿಟ್ಟು ಮೊದಲೇ ತಿದ್ದಿಕೊಂಡೇ ಓದಿಕೊಳ್ಳಬೇಕಾಗಿ ಪ್ರಾರ್ಥನೆ. ಗ್ರಂಥವು ಬಹಳ ಕ್ಲಿಷ್ಟವಾದ್ದರಿಂದ ಈ ಶುದ್ಧಾಶುದ್ಧಪತ್ರಿಕೆಯನ್ನು ದೊಡ್ಡದಾದರೂ ಸೇರಿಸಬೇಕಾಯಿತು.

# ಸಂಕೇತಾಕ್ಷರಗಳ ವಿವರಣೆ

——o——

| | |
|---|---|
| ಕ॥ ಪಾಠ | ವೇ॥ ಅನಂತಕೃಷ್ಣಶಾಸ್ತ್ರಿಗಳು ಸಂಪಾದಿಸಿರುವ ಕಲ್ಕತ್ತಾನಗರದ ಪುಸ್ತಕದ ಪಾಠ |
| ಖಂ॥ | ಖಂಡ |
| ಗೀ. | ಭಗವದ್ಗೀತೆ |
| ಗೌ. ಕಾ. | ಗೌಡಪಾದಕಾರಿಕೆಗಳು |
| ಛಾಂ. | ಛಾಂದೋಗ್ಯೋಪನಿಷತ್ತು |
| ಜೈ. ಸೂ. | ಜೈಮಿನೀಯ ಸೂತ್ರ |
| ತ. ಬೋ. | ತತ್ತ್ವಬೋಧಿನೀ (ವಿವರಣವ್ಯಾಖ್ಯಾನ) |
| ನ್ಯಾ. ಭಾಷ್ಯ | ನ್ಯಾಯಸೂತ್ರಭಾಷ್ಯ |
| ನೈ. ಸಿ. | ನೈಷ್ಕರ್ಮ್ಯಸಿದ್ಧಿ |
| ಪು. | ಪುಟ |
| ಪಂ. ವಿ. | ಪಂಚಪಾದಿಕಾ ವಿವರಣವ್ಯಾಖ್ಯಾನ |
| ಪಂ. ಪಾ | ಪಂಚಪಾದಿಕೆ |
| ಬೃ. | ಬೃಹದಾರಣ್ಯಕೋಪನಿಷತ್ತು |
| ಬ್ರ. ಸಿ. | ಬ್ರಹ್ಮಸಿದ್ಧಿ (ಮಂಡನಮಿಶ್ರಕೃತ) |
| ಭಾ. ಭಾ. | ಭಾಷ್ಯಭಾಗ |
| ಮನು. | ಮನುಸ್ಮೃತಿ |
| ಮಾಂ. ಭಾ. | ಮಾಂಡೂಕ್ಯಭಾಷ್ಯ |
| ಮುಂ. | ಮುಂಡಕೋಪನಿಷತ್ತು |
| ಯೋ. ಸೂ. | ಪಾತಂಜಲ ಯೋಗಸೂತ್ರ |
| ವೇ. ಸೂ. | ವೇದಾಂತಸೂತ್ರಗಳು (ಬಾದರಾಯಣಕೃತ) |
| ಶಾ. ಭಾ. | ಶಾಬರಭಾಷ್ಯ |
| ಶ್ವೇ. | ಶ್ವೇತಾಶ್ವತರ ಉಪನಿಷತ್ತು |
| ಸೂ. ಭಾ. | ಬ್ರಹ್ಮಸೂತ್ರಭಾಷ್ಯ |

|| ಓಂ ||

# ಪ ಞ್ಚ ಪಾ ದಿ ಕಾ

## ಮಂಗಲ

ಅನಾದ್ಯಾನನ್ದಕೂಟಸ್ಥಜ್ಞಾನಾನನ್ತಸದಾತ್ಮನೇ ।
ಅಭೂತದ್ವೈತಜಾಲಾಯ ಸಾಕ್ಷಿಣೇ ಬ್ರಹ್ಮಣೇ ನಮಃ || ೧ ||

೧. ಅನಾದ್ಯಾನಂದವೂ ಕೂಟಸ್ಥಜ್ಞಾನವೂ ಅನಂತಸದ್ರೂಪವೂ ಆದ, ಇಲ್ಲದಿರುವ ದ್ವೈತಸಮೂಹವುಳ್ಳ, ಸಾಕ್ಷಿಯಾದ ಬ್ರಹ್ಮಕ್ಕೆ ನಮಸ್ಕಾರ !

ನಮಃ ಶ್ರುತಿಶಿರಃಪದ್ಮಷಣ್ಡಮಾರ್ತಣ್ಡಮೂರ್ತಯೇ ।
ಬಾದರಾಯಣಸಂಜ್ಞಾಯ ಮುನಯೇ ಶಮವೇಶ್ಮನೇ || ೨ ||

೨. ವೇದಾಂತಗಳೆಂಬ ಕಮಲಸಮೂಹಕ್ಕೆ ಸೂರ್ಯರೂಪನಾಗಿರುವ ಬಾದರಾಯಣನೆಂಬ ಹೆಸರಿನ, ಶಾಂತಿನಿಲಯನಾದ ಮುನಿಗೆ ನಮಸ್ಕಾರ !

ನಮಾಮ್ಯಭೋಗಿಪರಿವಾರಸಂಪದಂ
ನಿರಸ್ತಭೂತಿಮನುಮಾರ್ಧವಿಗ್ರಹಮ್ ।
ಅನುಗ್ರಮುನ್ಮೃದಿತಕಾಲಲಾಞ್ಛನಂ
ವಿನಾ ವಿನಾಯಕಮಪೂರ್ವಶಙ್ಕರಮ್ || ೩ ||

೩. ಭೋಗಿ (ಸರ್ಪದ) ಪರಿವಾರಸಂಪತ್ತಿಲ್ಲದ, (ವಿರಕ್ತಪರಿವಾರದ ಸಂಪತ್ತುಳ್ಳ), ವಿಭೂತಿಯನ್ನು ತಿರಸ್ಕರಿಸಿರುವ (ಅಷ್ಟೈಶ್ವರ್ಯಗಳನ್ನೂ ತ್ಯಾಗಮಾಡಿರುವ), ಉಮಾರ್ಧವಿಗ್ರಹನಲ್ಲದ (ಅನುಮಾನವನ್ನು ಅರ್ಧಮಟ್ಟಿಗೆ ಉಪಯೋಗಿಸುವ ವಾಗ್ಯುದ್ಧವುಳ್ಳ), ಉಗ್ರನಲ್ಲದ (ಶಾಂತನಾದ), ಕರಿಯ ಕಂಠಚಿಹ್ನೆಯನ್ನು ತೊಡೆದುಹಾಕಿರುವ (ಕಾಲವೆಂಬ ಕಲಂಕವನ್ನು- ಅಥವಾ ಅವಿದ್ಯೆಯನ್ನು- ನಾಶಗೊಳಿಸಿಕೊಂಡಿರುವ), ವಿನಾಯಕನಿಲ್ಲದ (ಸ್ವತಂತ್ರಪ್ರಜ್ಞನಾದ, ಅಥವಾ ಬೌದ್ಧಪಕ್ಷವನ್ನು ಪರಿಹರಿಸಿರುವ) ಅಪೂರ್ವಶಂಕರನನ್ನು[1] ನಮಿಸುತ್ತೇನೆ.

---

1. ಶಿವನಿಗಿಂತ ವಿಲಕ್ಷಣವಾಗಿರುವವರು ಶಂಕರಾಚಾರ್ಯರು- ಎಂಬರ್ಥವನ್ನು ಸೂಚಿಸುವ ಶ್ಲೇಷಾರ್ಥದ ಪದಗಳನ್ನು ಇಲ್ಲಿ ಪ್ರಯೋಗಿಸಿದೆ.

**ಯದ್ವಕ್ತ್ರಮಾನಸಸರಃಪ್ರತಿಲಬ್ಧಜನ್ಮ**
**ಭಾಷ್ಯಾರವಿನ್ದಮಕರನ್ದರಸಂ ಪಿಬನ್ತಿ ।**
**ಪ್ರತ್ಯಾಶಮುನ್ಮುಖವಿನೀತವಿನೇಯಭೃಙ್ಗಾ-**
**ಸ್ತಾನ್ ಭಾಷ್ಯವಿತ್ತಕಗುರೂನ್ ಪ್ರಣಮಾಮಿ ಮೂರ್ಧ್ನಾ ॥೪॥**

೪. ಯಾರ ಮುಖವೆಂಬ ಮಾನಸಸರೋವರದಲ್ಲಿ ಹುಟ್ಟಿದ ಭಾಷ್ಯಕಮಲದ ಮಕರಂದರಸವನ್ನು ಪ್ರತಿದಿಕ್ಕಿನಲ್ಲಿಯೂ ಉನ್ಮುಖರಾಗಿ ವಿನೀತರಾಗಿರುವ ಶಿಷ್ಯರೆಂಬ ಭೃಂಗಗಳು ಕುಡಿಯುತ್ತಿರುವರೋ ಆ ಭಾಷ್ಯವಿತ್ತವುಳ್ಳ ಗುರುಗಳನ್ನು ತಲೆಬಾಗಿ ನಮಸ್ಕರಿಸುವೆನು.

**ಪದಾದಿವೃನ್ತಭಾರೇಣ ಗರಿಮಾಣಂ ಬಿಭರ್ತಿ ಯತ್ ।**
**ಭಾಷ್ಯಂ ಪ್ರಸನ್ನಗಮ್ಭೀರಂ ತದ್ವ್ಯಾಖ್ಯಾಂ ಶ್ರದ್ಧಯಾಽಽರಭೇ ॥ ೫ ॥**

೫. ಪದವೇ ಮುಂತಾದವುಗಳೆಂಬ ತೊಟ್ಟಿನಿಂದ ಭಾರವಾಗಿರುವ ತೂಕವುಳ್ಳ, ತಿಳಿಯಾಗಿ ಆಳವಾಗಿರುವ ಭಾಷ್ಯವಿದೆಯಲ್ಲ, ಅದರ ವ್ಯಾಖ್ಯೆಯನ್ನು ಶ್ರದ್ಧೆಯಿಂದ ಆರಂಭಿಸಿರುತ್ತೇನೆ.[1]

# ಒಂದನೆಯ ವರ್ಣಕ-ಅಧ್ಯಾಸ

## ಅಧ್ಯಾಸಭಾಷ್ಯದ ಸಂಬಂಧ

### ಶಾಸ್ತ್ರದ ವಿಷಯಪ್ರಯೋಜನಗಳು

(ಪಂಚಪಾದಿಕಾ)

೧. 'ಯುಷ್ಮದಸ್ಮತ್ಪ್ರತ್ಯಯಗೋಚರಯೋಃ' ಇತ್ಯಾದಿ 'ಅಹಮಿದಮ್', 'ಮಮೇದಮ್' ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ ಇತ್ಯನ್ತಂ ಭಾಷ್ಯಮ್ 'ಅಸ್ಯಾನರ್ಥಹೇತೋಃ ಪ್ರಹಾಣಾಯ, ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ' ಇತ್ಯನೇನ ಭಾಷ್ಯೇಣ ಪರ್ಯವಸ್ಯತ್, ಶಾಸ್ತ್ರಸ್ಯ ವಿಷಯಃ, ಪ್ರಯೋಜನಂ ಚ ಅರ್ಥಾತ್ ಪ್ರಥಮಸೂತ್ರೇಣ ಸೂಚಿತೇ[2] ಇತಿ ಪ್ರತಿಪಾದಯತಿ। ಏತಚ್ಚ 'ತಸ್ಮಾತ್ ಬ್ರಹ್ಮ ಜಿಜ್ಞಾಸಿತವ್ಯಮ್' ಇತ್ಯಾದಿ ಭಾಷ್ಯೇ ಸ್ಪಷ್ಟತರಂ ಪ್ರದರ್ಶಯಿಷ್ಯಾಮಃ[3] ॥

---

1. ಮಂಗಲಶ್ಲೋಕದ ವಿಷಯಕ್ಕೆ ಪೀಠಿಕೆಯನ್ನು ನೋಡಬೇಕು.

2. 'ಸೂತ್ರಿತೇ' ಎಂಬ ಪಾಠವು ಬೇಕಿಲ್ಲ. 'ಶ್ರೋತವ್ಯಃ' ಎಂದು ವಿಚಾರವನ್ನು ಇಲ್ಲಿ ವಿಧಿಸಿದೆ; ಅದನ್ನು ಸೂತ್ರದಲ್ಲಿ ಸೂಚಿಸಿದೆ –ಎಂಬ ವಿವರಣಕಾರರ ಮತವು ಮೂಲಸಮ್ಮತವಲ್ಲವೆಂದು ತೋರುತ್ತದೆ. ಮುಂದೆ ನವಮವರ್ಣಕದಲ್ಲಿ ಶ್ರವಣಾದಿಗಳು ಅರ್ಥವಾದವೆಂದು ಗ್ರಂಥಕರ್ತರೇ ಹೇಳಿರುತ್ತಾರೆ.

3. ಈ ಮಾತಿಲ್ಲದ ಪಾಠವೂ ಉಂಟು.

(ಅರ್ಥ)

'ಯುಷ್ಮದಸ್ಮತ್ಪ್ರತ್ಯಯಗೋಚರಯೋಃ' ಎಂಬಲ್ಲಿಂದ ಮೊದಲಾಗಿ 'ಅಹಮಿದಂ ಮಮೇದಮ್ ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ' ಎಂಬವರೆಗಿನ ಭಾಷ್ಯವು 'ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ'[1] (ಈ ಅನರ್ಥಹೇತುವನ್ನು ನಾಶಗೊಳಿಸುವದಕ್ಕಾಗಿ ಆತ್ಮೈಕತ್ವಪ್ರಾಪ್ತಿಗಾಗಿ ಎಲ್ಲಾ ವೇದಾಂತಗಳೂ ಆರಂಭವಾಗಿರುತ್ತವೆ) ಎಂಬ ಭಾಷ್ಯದಲ್ಲಿ ಪರ್ಯವಸಾನವಾಗಿರುವದರಿಂದ ಶಾಸ್ತ್ರಕ್ಕೆ ವಿಷಯವೂ ಪ್ರಯೋಜನವೂ ಅರ್ಥವಶದಿಂದ ಪ್ರಥಮಸೂತ್ರದಲ್ಲಿ ಸೂಚಿತವಾಗಿವೆ –ಎಂದು ತಿಳಿಸಿಕೊಡುತ್ತದೆ. ಇದನ್ನು 'ತಸ್ಮಾತ್ ಬ್ರಹ್ಮ ಜಿಜ್ಞಾಸಿತವ್ಯಮ್' (ಆದ್ದರಿಂದ ಬ್ರಹ್ಮವನ್ನು ಜಿಜ್ಞಾಸೆಮಾಡಬೇಕು) ಎಂದುಮುಂತಾಗಿರುವ ಭಾಷ್ಯದಲ್ಲಿ ಇನ್ನೂ ಸ್ಪಷ್ಟವಾಗಿ ತೋರಿಸಿಕೊಡುವೆವು.

## ಅಧ್ಯಾಸವರ್ಣನೆಯ ಪ್ರಯೋಜನ

(ಪಂಚಪಾದಿಕಾ)

೨. ಅತ್ರಾಹ—ಯದ್ಯೇವಮ್ ಏತಾವದೇವಾಸ್ತು ಭಾಷ್ಯಮ್ 'ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ' ಇತಿ। ತತ್ರ 'ಅನರ್ಥಹೇತೋಃ ಪ್ರಹಾಣಾಯ' ಇತಿ ಪ್ರಯೋಜನನಿರ್ದೇಶಃ, 'ಆತ್ಮೈಕತ್ವವಿದ್ಯಾಪ್ರತಿಪತ್ತಯೇ' ಇತಿ ವಿಷಯಪ್ರದರ್ಶನಮ್। ಕಿಮ್ ಅನೇನ ಯುಷ್ಮದಸ್ಮದಿತ್ಯಾದಿನಾ ಅಹಂ ಮನುಷ್ಯ ಇತಿ ದೇಹೇನ್ದ್ರಿಯಾದಿಷು ಅಹಮ್, ಮಮೇದಮ್–ಇತ್ಯಭಿಮಾನಾತ್ಮಕಸ್ಯ ಲೋಕವ್ಯವಹಾರಸ್ಯ ಅವಿದ್ಯಾನಿರ್ಮಿತತ್ವ[2] ಪ್ರದರ್ಶನಪರೇಣ ಭಾಷ್ಯೇಣ ?

ಉಚ್ಯತೇ। ಬ್ರಹ್ಮಜ್ಞಾನಂ ಹಿ ಸೂತ್ರಿತಮ್ ಅನರ್ಥಹೇತುನಿಬರ್ಹಣಮ್। ಅನರ್ಥಶ್ಚ ಪ್ರಮಾತೃತಾಪ್ರಮುಖಂ ಕರ್ತೃತ್ವಭೋಕ್ತೃತ್ವಮ್। ತದ್ ಯದಿ ವಸ್ತುಕೃತಮ್, ನ ಜ್ಞಾನೇನ ನಿಬರ್ಹಣೀಯಮ್ ; ಯತೋ ಜ್ಞಾನಮ್ ಅಜ್ಞಾನಸ್ಯೈವ ನಿವರ್ತಕಮ್। ತದ್ ಯದಿ ಕರ್ತೃತ್ವಭೋಕ್ತೃತ್ವಮ್ ಅಜ್ಞಾನಹೇತುಕಂ ಸ್ಯಾತ್ ತತೋ ಬ್ರಹ್ಮಜ್ಞಾನಮ್ ಅನರ್ಥಹೇತುನಿಬರ್ಹಣಮ್ ಉಚ್ಯಮಾನಮ್ ಉಪಪದ್ಯೇತ[3]। ತೇನ ಸೂತ್ರಕಾರೇಣೈವ ಬ್ರಹ್ಮಜ್ಞಾನ

1. ಇದು ಭಾಷ್ಯದ ಮೊದಲನೆಯ ವಾಕ್ಯವು ; ಇದನ್ನು ೫ನೆಯ ಖಂಡದ ಆದಿಯಲ್ಲಿ ಪೂರ್ಣವಾಗಿ ಕೊಟ್ಟಿದೆ.

2. 'ಅವಿದ್ಯಾನಿಮಿತ್ತತ್ವ' ಎಂಬುದಕ್ಕಿಂತ ಈ ಪಾಠವೇ ಮೇಲು.

3. 'ಉಪಪದ್ಯತೇ' ಪಾ॥

ಮ್ ಅನರ್ಥಹೇತುನಿಬರ್ಹಣಂ ಸೂಚಯತಾ ಅವಿದ್ಯಾಹೇತುಕಂ ಕರ್ತೃತ್ವಭೋಕ್ತೃತ್ವಂ ಪ್ರದರ್ಶಿತಂ ಭವತಿ। ಅತಃ ತತ್ಪ್ರದರ್ಶನದ್ವಾರೇಣ ಸೂತ್ರಾರ್ಥೋಪಪತ್ತ್ಯುಪಯೋಗಿತಯಾ ಸಕಲತನ್ತ್ರೋಪೋದ್ಘಾತಃ ಪ್ರಯೋಜನವತ್ ಅಸ್ಯ ಭಾಷ್ಯಸ್ಯ। ತಥಾ ಚಾಸ್ಯ ಶಾಸ್ತ್ರಸ್ಯ ಐದಂಪರ್ಯಂ ಸುಖೈಕತಾನ -ಸದಾತ್ಮಕ- ಕೂಟಸ್ಥಚೈತನ್ಯೈಕರಸತಾಸಂಸಾರಿತ್ವಾಭಿಮತಸ್ಯ ಆತ್ಮನಃ ಪಾರಮಾರ್ಥಿಕಂ ಸ್ವರೂಪಮ್ ಇತಿ ವೇದಾನ್ತಾಃ ಪರ್ಯವಸ್ಯನ್ತಿ ಇತಿ ಪ್ರತಿಪಾದಿತಮ್। ತಚ್ಚ 'ಅಹಂ ಕರ್ತಾ ಸುಖೀ ದುಃಖೀ' ಇತಿ ಪ್ರತ್ಯಕ್ಷಾಭಿಮತೇನ, ಅಬಾಧಿತಕಲ್ಪೇನ, ಅವಭಾಸೇನ, ವಿರುಧ್ಯತೇ। ಅತಃ, ತದ್ವಿರೋಧಪರಿಹಾರಾರ್ಥಂ ಬ್ರಹ್ಮಸ್ವರೂಪವಿಪರೀತರೂಪಮ್ ಅವಿದ್ಯಾನಿರ್ಮಿತಮಾತ್ಮನಃ ಇತಿ ಯಾವತ್ ನ ಪ್ರತಿಪಾದ್ಯತೇ,[1] ತಾವತ್ ಜರದ್ಗವಾದಿವಾಕ್ಯವತ್ ಅನರ್ಥಕಂ ಪ್ರತಿಭಾತಿ। ಅತಃ, ತನ್ನಿವೃತ್ತ್ಯರ್ಥಮ್, ಅವಿದ್ಯಾವಿಲಸಿತಮ್ ಅಬ್ರಹ್ಮಸ್ವರೂಪತ್ವ[2]ಮಾತ್ಮನ ಇತಿ ಪ್ರತಿಪಾದಯಿತವ್ಯಮ್। ವಕ್ಷ್ಯತಿ ಚೈತತ್ 'ಅವಿರೋಧಲಕ್ಷಣೇ' ಜೀವಪ್ರಕ್ರಿಯಾಯಾಂ ಸೂತ್ರಕಾರಃ 'ತದ್ಗುಣಸಾರತ್ವಾತ್' (ವೇ. ಸೂ. ೨-೩-೨೯) ಇತ್ಯಾದಿನಾ॥

(ಅರ್ಥ)

ಇಲ್ಲಿ ಆಕ್ಷೇಪಕನು ಹೇಳುತ್ತಾನೇನೆಂದರೆ, ಹೀಗಾದರೆ[3] 'ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ' ಎಂದಿಷ್ಟೇ ಇರಲಿ. ಆಗ 'ಅನರ್ಥಹೇತೋಃ ಪ್ರಹಾಣಾಯ' (ಅನರ್ಥಹೇತುವಿನ ನಾಶಕ್ಕಾಗಿ) ಎಂದು ಪ್ರಯೋಜನವನ್ನು ಹೇಳಿದಂತಾಗುವದು ; 'ಆತ್ಮೈಕತ್ವವಿದ್ಯಾಪ್ರತಿಪತ್ತಯೇ' (ಆತ್ಮೈಕತ್ವವಿದ್ಯಾಪ್ರಾಪ್ತಿಗಾಗಿ) ಎಂದು ವಿಷಯವನ್ನು ತಿಳಿಸಿದಂತಾಗುವದು. (ಹೀಗಿರುವಲ್ಲಿ) 'ಯುಷ್ಮದಸ್ಮತ್' ಎಂದು ಮುಂತಾಗಿ 'ನಾನು ಮನುಷ್ಯನು' ಎಂದು ದೇಹೇಂದ್ರಿಯಾದಿಗಳಲ್ಲಿ ನಾನು, ನನ್ನದಿದು-ಎಂಬ ಅಭಿಮಾನರೂಪದ ಲೋಕವ್ಯವಹಾರವು ಅವಿದ್ಯಾನಿರ್ಮಿತವೆಂದು ತೋರಿಸಿಕೊಡುವದರಲ್ಲಿ ತಾತ್ಪರ್ಯವುಳ್ಳ ಭಾಷ್ಯದಿಂದೇನು[4] ?

(ಪರಿಹಾರ) :— ಹೇಳುತ್ತೇವೆ, ಬ್ರಹ್ಮಜ್ಞಾನವಲ್ಲವೆ, ಅನರ್ಥಹೇತುವನ್ನು ನಾಶಗೊಳಿಸುವದೆಂದು ಸೂತ್ರದಲ್ಲಿ ಹೇಳಿರುವದು ? ಅನರ್ಥವು ಪ್ರಮಾ

---

1. 'ಪ್ರದರ್ಶ್ಯತೇ' ಪಾ॥
2. 'ಅಬ್ರಹ್ಮಸ್ವರೂಪಮ್', 'ಅಬ್ರಹ್ಮರೂಪಮ್', 'ಅಬ್ರಹ್ಮರೂಪತ್ವಮ್' ಪಾ॥
3. ವಿಷಯ, ಪ್ರಯೋಜನ- ಇವೆರಡನ್ನೇ ತಿಳಿಸಬೇಕೆಂದಾದರೆ.
4. ಜನರ ವ್ಯವಹಾರವು ಮನುಷ್ಯತ್ವಾಭಿಮಾನರೂಪವಾಗಿದೆ ಎಂದು ತಿಳಿಸುವ ಭಾಷ್ಯದ ಪ್ರಯೋಜನವೇನು ?

ತೃತ್ವವೇ ಮೊದಲಾಗಿರುವ ಕರ್ತೃತ್ವಭೋಕ್ತೃತ್ವವು,[1] ಅದು ವಸ್ತುಕೃತವೇ[2] ಆಗಿದ್ದರೆ ಜ್ಞಾನದಿಂದ ನಾಶವಾಗಲಾರದು ; ಏಕೆಂದರೆ ಜ್ಞಾನವು ಅಜ್ಞಾನವನ್ನೇ ನೀಗತಕ್ಕದ್ದು. ಆದ್ದರಿಂದ ಕರ್ತೃತ್ವಭೋಕ್ತೃತ್ವವು ಅಜ್ಞಾನಹೇತುಕವಾಗಿದ್ದರೆ ಬ್ರಹ್ಮಜ್ಞಾನವು ಅನರ್ಥಹೇತುನಾಶಕವೆಂದು ಹೇಳಿದ್ದು ಯುಕ್ತವಾಗುವದು. ಆದ್ದರಿಂದ ಬ್ರಹ್ಮಜ್ಞಾನವು ಅನರ್ಥಹೇತುನಾಶಕವೆಂದು ಸೂಚಿಸಿದ್ದರಿಂದ[3] ಸೂತ್ರಕಾರರೇ ಕರ್ತೃತ್ವಭೋಕ್ತೃತ್ವವು ಅವಿದ್ಯಾಹೇತುಕವೆಂದು ತಿಳಿಸಿದಂತೆ ಆಗಿರುತ್ತದೆ. ಆದ್ದರಿಂದ ಅದನ್ನು ತಿಳಿಸಿಕೊಡುವ ಮೂಲಕ ಸೂತ್ರಾರ್ಥದ ಉಪಪಾದನಕ್ಕೆ ಉಪಯೋಗವಾಗಲೆಂದು ಸಕಲತಂತ್ರಕ್ಕೂ[4] ಉಪೋದ್ಘಾತವನ್ನು ಮಾಡುವದು[5] ಈ ಭಾಷ್ಯಕ್ಕೆ ಪ್ರಯೋಜನವು. ಅಂತೂ ಹೀಗೆ, ಸುಖವೊಂದೇ ರೂಪವುಳ್ಳ,[6] ಸದಾತ್ಮಕವಾದ,[7] ಕೂಟಸ್ಥಚೈತನ್ಯೈಕರಸ[8]ವಾಗಿರುವ (ಸ್ವರೂಪವೇ)- ಸಂಸಾರಿಯೆಂದು (ಜನರು) ಭಾವಿಸಿಕೊಂಡಿರುವ- ಆತ್ಮನ ಪಾರಮಾರ್ಥಿಕಸ್ವರೂಪವು ಎಂದು (ತಿಳಿಸುವದರಲ್ಲಿ) ವೇದಾಂತಗಳು[9] ಪರ್ಯವಸಾನವಾಗಿವೆ- ಎಂದು ಈ ಶಾಸ್ತ್ರದ ತಾತ್ಪರ್ಯವನ್ನು ತಿಳಿಸಿದಂತೆ ಆಗಿರುತ್ತದೆ.[10] ಆದರೆ ಅದು ನಾನು ಕರ್ತೃ, ಸುಖಿ, ದುಃಖಿ -ಎಂದು ಅಬಾಧಿತವೆಂಬಂತೆ ಇರುವ ಪ್ರತ್ಯಕ್ಷಾ(ನುಭವವೆಂದು ಜನರು) ಭಾವಿಸಿಕೊಂಡಿರುವ ತಿಳವಳಿಕೆಗೆ ವಿರುದ್ಧ

---

1. ಪ್ರಮಾತೃತ್ವದಿಂದ ಕರ್ತೃತ್ವವುಂಟಾಗಿ ಆಮೇಲೆ ಫಲಭೋಗದಿಂದ ಭೋಕ್ತೃವೆಂದೆನಿಸಿರುತ್ತಾನೆ.

2. ವಸ್ತುಸ್ವಭಾವದಿಂದಲೇ ಪ್ರಮಾತೃತ್ವವೇ ಮುಂತಾದ ಅನರ್ಥವಾಗಿದ್ದರೆ.

3. ಜ್ಞಾನದಿಂದ ಮೋಕ್ಷವು ಪ್ರಾಪ್ತಿಯಾಗುವದೆಂದು ಸೂತ್ರದಲ್ಲಿ ಹೇಳಿದೆ; ಆದ್ದರಿಂದ ಅನರ್ಥವು ಜ್ಞಾನದಿಂದ ಹೋಗುತ್ತದೆ ಎಂದು ಹೇಳಿದಂತೆ ಆಗಿದೆ.

4. ವೇದಾಂತಮೀಮಾಂಸಾಶಾಸ್ತ್ರಕ್ಕೆಲ್ಲ.

5. "ಉಪೋದ್ಘಾತವೆಂದರೆ ಪ್ರತಿಪಾದ್ಯವಾದ ವಿಷಯವನ್ನು ಬುದ್ಧಿಯಲ್ಲಿಟ್ಟುಕೊಂಡು ಆದಕ್ಕಾಗಿ ಮೊದಲೇ ಮತ್ತೊಂದರ್ಥವನ್ನು ವರ್ಣಿಸುವದು" -ಪಂ. ವಿ.

6. ದುಃಖದ ಬೆರಕೆಯಿಲ್ಲದ ಆನಂದಸ್ವರೂಪವಾದ.

7. ಅಸತ್ತಿನ ಸಂಬಂಧವಿಲ್ಲದ.

8. ನಿರ್ವಿಕಾರವಾದ ಚೈತನ್ಯದ. ಏಕರಸವೆಂಬ ಮಾತು ಆತ್ಮಸ್ವರೂಪದಲ್ಲಿ ವೈಚಿತ್ರ್ಯವಿಲ್ಲವೆಂದು ತಿಳಿಸುವದು. ಸಚ್ಚಿದಾನಂದ- ಎಂಬುದು ಮೂರು ರೂಪಗಳಲ್ಲ, ಇವೆಲ್ಲ ಒಂದೇ ತತ್ತ್ವವೆಂದರ್ಥ.

9. ಉಪನಿಷತ್ತುಗಳು.

10. ಬ್ರಹ್ಮಾತ್ಮೈಕತ್ವವೇ ಸರ್ವವೇದಾಂತಪ್ರತಿಪಾದ್ಯವೆಂಬುದರಲ್ಲಿ ಈ ಶಾಸ್ತ್ರದ ತಾತ್ಪರ್ಯವಿದೆ ಎಂದರ್ಥ.

ವಾಗಿರುತ್ತದೆ.[1] ಆದ್ದರಿಂದ ಆ ವಿರೋಧವನ್ನು ಪರಿಹರಿಸುವದಕ್ಕಾಗಿ ಬ್ರಹ್ಮ ಸ್ವರೂಪಕ್ಕೆ ವಿರುದ್ಧವಾಗಿರುವ ಆತ್ಮನ ರೂಪವು ಅವಿದ್ಯಾನಿರ್ಮಿತವೆಂದು ಎಲ್ಲಿಯ ವರೆಗೆ ತಿಳಿಸಿಕೊಡುವದಿಲ್ಲವೋ ಅಲ್ಲಿಯವರೆಗೆ, ಜರದ್ಗವಾದಿವಾಕ್ಯದಂತೆ[2] (ಈ ವಾಕ್ಯವೂ) ಅರ್ಥವಿಲ್ಲದ್ದೆಂದು ತೋರುತ್ತಿರುವದು. ಆದ್ದರಿಂದ ಆ (ದೋಷ ವನ್ನು) ತೊಲಗಿಸುವದಕ್ಕಾಗಿ ಆತ್ಮನ ಅಬ್ರಹ್ಮರೂಪವು[3] ಅವಿದ್ಯಾಕಾರ್ಯವು ಎಂದು ತೋರಿಸಿಕೊಡಬೇಕು. ಇದನ್ನು ಸೂತ್ರಕಾರರು **ಅವಿರೋಧಲಕ್ಷಣ** ದಲ್ಲಿ[4] ಜೀವಪ್ರಕರಣದಲ್ಲಿ 'ತದ್ಗುಣಸಾರತ್ವಾತ್....' (ವೇ. ಸೂ. ೨-೩-೨೯) ಮುಂತಾಗಿರುವ ಸೂತ್ರದಿಂದ ಮುಂದೆ ಹೇಳಿಯೂ ಇರುತ್ತಾರೆ.

(ಪಂಚಪಾದಿಕಾ)

೩. ಯದ್ಯೇವಮ್ ಏತದೇವ ಪ್ರಥಮಮಸ್ತು। ನೈವಮ್। ಅರ್ಥ ವಿಶೇಷೋಪಪತ್ತೇಃ। ಅರ್ಥವಿಶೇಷೇ ಹಿ ಸಮನ್ವಯೇ ಪ್ರದರ್ಶಿತೇ, ತದ್ವಿರೋಧಾ ಶಙ್ಕಾಯಾಂ ತನ್ನಿರಾಕರಣಮ್ ಉಪಪದ್ಯತೇ। ಅಪ್ರದರ್ಶಿತೇ ಪುನಃ ಸಮನ್ವಯ ವಿಶೇಷೇ ತದ್ವಿರೋಧಾಶಙ್ಕಾ ತನ್ನಿರಾಕರಣಂ ಚ ನಿರ್ವಿಷಯಂ ಸ್ಯಾತ್। ಭಾಷ್ಯ ಕಾರಸ್ತು ತತ್ ಸಿದ್ಧಮೇವ, ಆದಿಸೂತ್ರೇಣ ಸಾಮರ್ಥ್ಯಬಲೇನ ಸೂಚಿತಂ ಸುಖಪ್ರತಿಪತ್ತ್ಯರ್ಥಂ ವರ್ಣಯತಿ– ಇತಿ ನ ದೋಷಃ ॥

(ಅರ್ಥ)

(ಆಕ್ಷೇಪ) :– ಹೀಗೆಂದಾದರೆ, ಇದೇ[5] ಮೊದಲಿರಲಿ!

(ಪರಿಹಾರ) :– ಹಾಗಲ್ಲ. ಏಕೆಂದರೆ ಅರ್ಥವಿಶೇಷವು ಯುಕ್ತವಾಗಿರು ತ್ತದೆ. (ಇದರ ವಿವರ) : ಸಮನ್ವಯವೆಂಬ ಅರ್ಥವಿಶೇಷವನ್ನು ತಿಳಿಸಿದಮೇಲೆಯೇ ಅಲ್ಲವೆ, ಅದರಲ್ಲಿ ವಿರೋಧವನ್ನು ಶಂಕಿಸಿದಾಗ ಅದನ್ನು ನಿರಾಕರಿಸುವದು ಯುಕ್ತ ವಾಗುತ್ತದೆ?[6] (ಹಾಗಲ್ಲದೆ) ಸಮನ್ವಯವೆಂಬ ವಿಶೇಷವನ್ನು ತಿಳಿಸದೆ ಇರುವಾಗ

1. ಜನಗಳು 'ನಾವು ದುಃಖಿಗಳು, ಮರ್ತ್ಯರು, ಹುಟ್ಟಿ ನಾಶವಾಗುವ ಜ್ಞಾನ ವುಳ್ಳವರು'– ಎಂದೇ ಗಟ್ಟಿಯಾಗಿ ನಂಬಿಕೊಂಡಿರುತ್ತಾರೆ. ಅದಕ್ಕೆ ಶಾಸ್ತ್ರಾರ್ಥವು ವಿರುದ್ಧ ವಾಗಿದೆ.

2. ಜರದ್ಗವಃ ಕಮ್ಬಲಪಾದುಕಾಭ್ಯಾಂ ದ್ವಾರಿ ಸ್ಥಿತೋ ಗಾಯತಿ ಮದ್ರಕಾಣಿ। ತಂ ಬ್ರಾಹ್ಮಣೀ ಪೃಚ್ಛತಿ ಪುತ್ರಕಾಮಾ ರಾಜನ್ ರುಮಾಯಾಂ ಲಶುನಸ್ಯ ಕೋಽರ್ಘಃ ॥ (ಶಾ.ಭಾ. ೧–೧–೩೨) ಇದೇ ಜರದ್ಗವಾದಿವಾಕ್ಯ. ಮುದಿಯೆತ್ತು ಕಂಬಳಿಯ ಪಾದುಕೆ ಗಳನ್ನು ಹಾಕಿಕೊಂಡು ಬಾಗಿಲಲ್ಲಿ ನಿಂತು ಮದ್ರದೇಶದ ಹಾಡುಗಳನ್ನು ಹಾಡುತ್ತಿದೆ. ಪುತ್ರ ಕಾಮಳಾದ ಬ್ರಾಹ್ಮಣಿಯು ಆ (ಎತ್ತನ್ನು) 'ರಾಜನೆ, ರುಮಾಪ್ರದೇಶದಲ್ಲಿ ಬೆಳ್ಳುಳ್ಳಿಗೆ ಎಷ್ಟು ಬೆಲೆ?' ಎಂದು ಕೇಳುತ್ತಿದಾಳೆ– ಎಂದು ಶ್ಲೋಕದ ಅರ್ಥ.

3. ಜೀವತ್ವವು. 4. ೨ನೆಯ ಅಧ್ಯಾಯದಲ್ಲಿ. 5. ಆ ಸೂತ್ರವೇ.

6. ಆದ್ದರಿಂದ ಸೂತ್ರಕಾರರು ಮೊದಲು ಬ್ರಹ್ಮದಲ್ಲಿ ವೇದಾಂತಸಮನ್ವಯವನ್ನು ತೋರಿಸಿರುತ್ತಾರೆ.

ಲೋ, ಎಂದರೆ, ಆದರಲ್ಲಿ ವಿರೋಧದ ಶಂಕೆಗೂ ಅದರ ನಿರಾಕರಣಕ್ಕೂ ವಿಷಯವೇ ಇಲ್ಲದೆಹೋಗುವದು. ಭಾಷ್ಯಕಾರರೋ, ಎಂದರೆ ಆ (ಸೂತ್ರ)ದಲ್ಲಿ ಸಿದ್ಧ ವಾಗಿರುವದನ್ನೇ ಮೊದಲನೆಯ ಸೂತ್ರದಲ್ಲಿ ಅರ್ಥವಶದಿಂದ ಸೂಚಿತವಾಗಿರು ವದನ್ನು (ಜಿಜ್ಞಾಸುಗಳಿಗೆ) ಸುಲಭವಾಗಿ ತಿಳಿಯಲೆಂದು ವರ್ಣಿಸಿರುತ್ತಾರೆ.[1] ಆದ್ದರಿಂದ ದೋಷವಿಲ್ಲ.

# ಭಾಷ್ಯದಲ್ಲಿ ಮಂಗಲವಿಲ್ಲದಿರುವದೇನೂ ದೋಷವಲ್ಲ

(ಪಂಚಪಾದಿಕಾ)

೪. ನನು ಚ ಗ್ರನ್ಥಕರಣಾದಿಕಾರ್ಯಾರಮ್ಭೇ ಕಾರ್ಯಾನುರೂಪಮ್ ಇಷ್ಟದೇವತಾಪೂಜಾನಮಸ್ಕಾರೇಣ ಬುದ್ಧಿಸಂನಿಧಾಪಿತಾಥವೃದ್ಧ್ಯಾದಿಶಬ್ದೈಃ, ದಧ್ಯಾದಿದರ್ಶನೇನ ವಾ, ಕೃತಮಙ್ಗಲಾಃ ಶಿಷ್ಟಾಃ ಪ್ರವರ್ತನ್ತೇ। ಶಿಷ್ಟಾಚಾರಶ್ಚ ನಃ ಪ್ರಮಾಣಮ್। ಪ್ರಸಿದ್ಧಂ ಚ ಮಙ್ಗಲಾಚರಣಸ್ಯ ವಿಘ್ನೋಪಶಮನಂ ಪ್ರಯೋ ಜನಮ್। ಮಹತಿ ಚ ನಿಃಶ್ರೇಯಸಪ್ರಯೋಜನೇ ಗ್ರನ್ಥಮ್ ಆರಭಮಾಣಸ್ಯ ವಿಘ್ನಬಾಹುಲ್ಯಂ ಸಂಭಾವ್ಯತೇ। ಪ್ರಸಿದ್ಧಂ ಚ 'ಶ್ರೇಯಾಂಸಿ ಬಹುವಿಘ್ನಾನಿ' ಇತಿ। ವಿಜ್ಞಾಯತೇ ಚ 'ತಸ್ಮಾದೇಷಾಂ ತನ್ನ ಪ್ರಿಯಂ ಯದೇತನ್ಮನುಷ್ಯಾ ವಿದ್ಯುಃ' (ಬೃ. ೧-೪-೧೦) ಇತಿ। ಯೇಷಾಂ ಚ ಯನ್ನ ಪ್ರಿಯಮ್, ತೇ ತದ್ ವಿಘ್ನನ್ತಿ -ಇತಿ ಪ್ರಸಿದ್ಧಂ ಲೋಕೇ। ತತ್ ಕಥಮ್ ಉಲ್ಲಙ್ಘ್ಯ ಶಿಷ್ಟಾಚಾರಮ್, ಅಕೃತ ಮಙ್ಗಲ ಏವ ವಿಸ್ರಬ್ಧಂ ಭಾಷ್ಯಕಾರಃ ಪ್ರವವೃತೇ ?

ಅತ್ರ ಉಚ್ಯತೇ। 'ಯುಷ್ಮದಸ್ಮತ್'- ಇತ್ಯಾದಿ 'ತದ್ಧರ್ಮಾಣಾಮಪಿ ಸುತರಾಮ್ ಇತರೇತರಭಾವಾನುಪಪತ್ತಿಃ' ಇತ್ಯನ್ತಮೇವ ಭಾಷ್ಯಮ್। ಅಸ್ಯ ಚ ಅಯಮ್ ಅರ್ಥಃ। ಸರ್ವೋಪಪ್ಲವರಹಿತೋ ವಿಜ್ಞಾನಘನಃ ಪ್ರತ್ಯಗರ್ಥಃ ಇತಿ। ತತ್ ಕಥಙ್ನ ಪರಮಾರ್ಥತ ಏವಂಭೂತೇ ವಸ್ತುನಿ ರೂಪಾನ್ತರ ವದವಭಾಸೋ ಮಿಥ್ಯಾ ಇತಿ ಕಥಯಿತುಮ್ ತತ್ ಅನ್ಯಪರಾದೇವ ಭಾಷ್ಯ ವಾಕ್ಯಾತ್ ನಿರಸ್ತಸಮಸ್ತೋಪಪ್ಲವಂ ಚೈತನ್ಯೈಕತಾನಮ್ ಆತ್ಮಾನಂ ಪ್ರತಿ ಪದ್ಯಮಾನಸ್ಯ ಕುತೋ ವಿಘ್ನೋಪಪ್ಲವಸಂಭವಃ ? ತಸ್ಮಾತ್, ಅಗ್ರಣೀಃ ಶಿಷ್ಟಾಚಾರಪರಿಪಾಲನೇ ಭಾಷ್ಯಕಾರಃ[2] ॥

(ಅರ್ಥ)

(ಆಕ್ಷೇಪ):—ಗ್ರಂಥವನ್ನು ರಚಿಸುವದೇ ಮುಂತಾದ ಕಾರ್ಯಗಳನ್ನು ಆರಂಭಿಸುವಾಗ, ಶಿಷ್ಟರಾದವರು ಕಾರ್ಯಕ್ಕೆ ಅನುಗುಣವಾಗಿ ಇಷ್ಟದೇವತೆಯ

1. ಏಕೆಂದರೆ ಇದು ಇಡಿಯ ಶಾಸ್ತ್ರಕ್ಕೆ ಉಪೋದ್ಘಾತವಾಗಿರುತ್ತದೆ.
2. 'ಪ್ರತಿಪಾಲನೇ ಭಗವಾನ್ ಭಾಷ್ಯಕಾರಃ' ಪಾ॥

ಪೂಜೆ, ನಮಸ್ಕಾರ- ಇವುಗಳಿಂದ, ಅಥವಾ ಬುದ್ಧಿಯಿಂದ ಮನಸ್ಸಿನಲ್ಲಿ (ಮಂಗಲವನ್ನು) ಹತ್ತಿರವಿಟ್ಟುಕೊಂಡು 'ಅಥ', 'ವೃದ್ಧಿ'[1]- ಮುಂತಾದ ಶಬ್ದಗಳನ್ನು (ಮೊದಲಿಡುವದ)ರಿಂದಲಾಗಲಿ, ದಧ್ಯಾದಿ(ಮಂಗಲವಸ್ತುಗಳನ್ನು) ದರ್ಶನಮಾಡುವದರಿಂದಲಾಗಲಿ[2] ಮಂಗಲವನ್ನು ಮಾಡಿ (ಕರ್ಮದಲ್ಲಿ) ತೊಡಗುತ್ತಾರೆ. ಶಿಷ್ಟಾಚಾರವೂ ನಮಗೆ ಪ್ರಮಾಣವು.[3]

ಮಂಗಲವನ್ನು ಆಚರಿಸಿದ್ದಕ್ಕೆ ವಿಘ್ನವು ನಾಶವಾಗುವದೆಂಬ ಪ್ರಯೋಜನ -ಎಂಬುದು ಪ್ರಸಿದ್ಧವೂ ಆಗಿದೆ.[4] ನಿಃಶ್ರೇಯಸವೆಂಬ ಮಹಾಪ್ರಯೋಜನಕ್ಕಾಗಿ ಗ್ರಂಥವನ್ನು ಆರಂಭಿಸುತ್ತಿರುವಾತನಿಗೆ ವಿಘ್ನವು ಬಹಳವಾಗಿರಬಹುದಾಗಿದೆ. 'ಶ್ರೇಯಸ್ಸಿಗೆ ಬಹಳ ವಿಘ್ನಗಳು'[5] ಎಂಬುದು ಪ್ರಸಿದ್ಧವೂ ಆಗಿದೆ. 'ಆದ್ದರಿಂದ ಮನುಷ್ಯರು ಈ (ತತ್ತ್ವ)ವನ್ನು ತಿಳಿದಾರೆಂಬುದು ಈ (ದೇವತೆ)ಗಳಿಗೆ ಪ್ರಿಯವಲ್ಲ' (ಬೃ.೧-೪-೧೦) ಎಂದು (ಶ್ರುತಿಯಿಂದ) ತಿಳಿದೂಬರುತ್ತಿದೆ. ಯಾರಿಗೆ ಯಾವದು ಪ್ರಿಯವಲ್ಲವೋ, ಅವರು ಅದಕ್ಕೆ ಅಡ್ಡಿಮಾಡುವರೆಂಬುದು ಲೋಕದಲ್ಲಿ ಪ್ರಸಿದ್ಧವೂ ಆಗಿದೆ. ಹೀಗಿರುವಲ್ಲಿ ಶಿಷ್ಟಾಚಾರವನ್ನು ಮೀರಿ (ಯಾವ) ಮಂಗಲವನ್ನೂ ಮಾಡದೆಯೇ ಹೆಚ್ಚಿನ ಭರವಸೆಯಿಂದ ಭಾಷ್ಯಕಾರರು (ಈ ಕಾರ್ಯದಲ್ಲಿ) ತೊಡಗಿಬಿಟ್ಟಿರುವರಲ್ಲ, (ಇದು) ಹೇಗೆ ?

ಇದಕ್ಕೆ ಹೇಳುತ್ತೇವೆ. 'ಯುಷ್ಮದಸ್ಮತ್' ಎಂದು ಮೊದಲಾಗಿ 'ತದ್ಧರ್ಮಣಾಮಿತರೇತರಭಾವಾನುಪಪತ್ತಿಃ' ಎಂಬವರೆಗಿನ ಭಾಷ್ಯವೇ (ಮಂಗಲವು). ಪ್ರತ್ಯಗರ್ಥವು[6] ಯಾವ ಉಪಪ್ಲವವೂ[7] ಇಲ್ಲದ ವಿಜ್ಞಾನಘನವು[8] -ಎಂಬಿದು ಇದಕ್ಕೆ ಅರ್ಥವು. ಆದ್ದರಿಂದ ಪರಮಾರ್ಥದಿಂದ ಹೀಗಿರುವ ವಸ್ತುವಿನಲ್ಲಿ ಮತ್ತೊಂದು ರೂಪಾಂತರವುಳ್ಳದ್ದಾಗಿರುವದು ಹೇಗೂ ಹುಸಿತೋರಿಕೆಯೇ[9] ಎಂದು ಹೇಳುವದಕ್ಕೆ (ಇದು ಬಂದಿದೆ). ಆದ್ದರಿಂದ ಅನ್ಯಪರವಾಗಿರುವ[10] (ಈ)

---

1. 'ಅಥ' ಎಂಬ ಮಂಗಲಸೂಚಕಶಬ್ದವು ಪೂರ್ವೋತ್ತರಮೀಮಾಂಸಾಸೂತ್ರಗಳಲ್ಲಿದೆ; ಇನ್ನೂ ಅನೇಕಗ್ರಂಥಗಳ ಆರಂಭದಲ್ಲಿರುತ್ತದೆ. 'ವೃದ್ಧಿಃ' ಎಂಬ ಶಬ್ದವು ಪಾಣಿನಿಯ ವ್ಯಾಕರಣದ ಮೊದಲಿನಲ್ಲಿದೆ.

2. ಇದು ಒಳ್ಳೆಯ ಕೆಲಸವನ್ನು ಆರಂಭಿಸುವಾಗ ಮಾಡುವ ಮಂಗಲ.

3. ಶ್ರುತಿಸ್ಮೃತಿಗಳಂತೆ ಬಲ್ಲವರ ನಡೆಯೂ ಪ್ರಮಾಣವೇ.

4. ಪ್ರಕೃತಪಂಚಪಾದಿಕೆಗೆ ಮಂಗಲವಿದ್ದರೂ ಸಮಾಪ್ತಿಯಾಗಿಲ್ಲ; ಈ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

5. ಇದೊಂದು ನಾಣ್ಣುಡಿ.

6. ಎಲ್ಲಕ್ಕೂ ಒಳಗಿರುವ ಆತ್ಮನು.

7. ವಿಘ್ನದೋಷವೂ.

8. ಅರಿವಿನ ಗಟ್ಟಿಯು, ಅರಿವಿಗಿಂತ ಬೇರೆಯ ಪದಾರ್ಥದ ಸೇರಿಕೆಯಿಲ್ಲದ್ದು.

9. ಇಂಥ ಬ್ರಹ್ಮವಸ್ತುವಿನಲ್ಲಿ ಜೀವತ್ವವು ಕಾಣುತ್ತಿರುವದು.

10. ಇದು ಬ್ರಹ್ಮವಸ್ತುವಿನಲ್ಲಾಗಿರುವ ಅಧ್ಯಾಸವನ್ನು ಹೇಳುವದಕ್ಕೆ ಬಂದಿದೆ ಯಾದರೂ ಪರಮಾತ್ಮನನ್ನೂ ಸ್ಮರಿಸಿಕೊಂಡಂತೆ ಆಗಿದೆ.

ಭಾಷ್ಯದಿಂದಲೇ ಸಮಸ್ತ ಉಪಪ್ಲವಗಳನ್ನೂ ಪರಿಹರಿಸಿಕೊಂಡಿರುವ ಚೈತನ್ಯವೊಂದೇ ಆಗಿರುವ ಆತ್ಮನನ್ನು ಮನದಂದುಕೊಂಡಿರುವ (ಭಾಷ್ಯಕಾರರಿಗೆ) ವಿಘ್ನದ ತೊಡಕು ಹೇಗೆ ಆಗಬೇಕು? ಆದ್ದರಿಂದ ಭಾಷ್ಯಕಾರರು ಶಿಷ್ಟಾಚಾರಪಾಲನೆಯಲ್ಲಿ ಮುಂದಾಳುಗಳಾಗಿರುತ್ತಾರೆ.

## ೧. ಅಧ್ಯಾಸಪ್ರತಿಜ್ಞಾಭಾಷ್ಯ – ಪೂರ್ವಪಕ್ಷ

**ಯುಷ್ಮದಸ್ಮತ್ಪ್ರತ್ಯಯಗೋಚರಯೋರ್ವಿಷಯವಿಷಯಿಣೋಃ, ತಮಃಪ್ರಕಾಶವದ್ ವಿರುದ್ಧಸ್ವಭಾವಯೋಃ, ಇತರೇತರಭಾವಾನುಪಪತ್ತೌ ಸಿದ್ಧಾಯಾಂ ತದ್ಧರ್ಮಾಣಾಮಪಿ ಸುತರಾಮ್ ಇತರೇತರಭಾವಾನುಪಪತ್ತಿಃ, ಇತ್ಯತೋಽಸ್ಮತ್ಪ್ರತ್ಯಯಗೋಚರೇ ವಿಷಯಿಣಿ ಚಿದಾತ್ಮಕೇ ಯುಷ್ಮತ್ಪ್ರತ್ಯಯಗೋಚರಸ್ಯ ವಿಷಯಸ್ಯ ತದ್ಧರ್ಮಾಣಾಂ ಚ ಅಧ್ಯಾಸಃ, ತದ್ವಿಪರ್ಯಯೇಣ ವಿಷಯಿಣಃ, ತದ್ಧರ್ಮಾಣಾಂ ಚ ವಿಷಯೇಽಧ್ಯಾಸಃ, ಮಿಥ್ಯಾ ಇತಿ ಭವಿತುಂ ಯುಕ್ತಮ್ ॥**

### ಆಕ್ಷೇಪ :– ವಿರುದ್ಧಸ್ವಭಾವವುಳ್ಳವುಗಳಾದ್ದರಿಂದ ಆತ್ಮಾನಾತ್ಮರುಗಳ ಅಧ್ಯಾಸವಿಲ್ಲ

(ಪಂಚಪಾದಿಕಾ)

೫. 'ವಿಷಯವಿಷಯಿಣೋಃ, ತಮಃಪ್ರಕಾಶವದ್ ವಿರುದ್ಧಸ್ವಭಾವಯೋಃ ಇತರೇತರಭಾವಾನುಪಪತ್ತೌ ಸಿದ್ಧಾಯಾಮ್' ಇತಿ। ಕೋಽಯಂ ವಿರೋಧಃ? ಕೀದೃಶೋ ವಾ ಇತರೇತರಭಾವೋಽಭಿಪ್ರೇತಃ, ಯಸ್ಯಾನುಪಪತ್ತೇಃ 'ತಮಃ ಪ್ರಕಾಶವತ್' ಇತಿ ನಿದರ್ಶನಮ್? ಯದಿ ತಾವತ್, ಸಹಾನವಸ್ಥಾನಲಕ್ಷಣೋ ವಿರೋಧಃ, ತತಃ ಪ್ರಕಾಶಭಾವೇ ತಮಸೋ ಭಾವಾನುಪಪತ್ತಿಃ। ತದಸತ್। ದೃಶ್ಯತೇ ಹಿ ಮನ್ದಪ್ರದೀಪೇ ವೇಶ್ಮನಿ ಅಸ್ಪಷ್ಟಂ ರೂಪದರ್ಶನಮ್ ಇತರತ್ರ ಚ ಸ್ಪಷ್ಟಮ್। ತೇನ ಜ್ಞಾಯತೇ ಮನ್ದಪ್ರದೀಪೇ ವೇಶ್ಮನಿ ತಮಸೋಽಪಿ ಈಷದನುವೃತ್ತಿರಿತಿ। ತಥಾ ಛಾಯಾಯಾಮಪಿ ಔಷ್ಣ್ಯಮ್ ತಾರತಮ್ಯೇನೋಪಲಭ್ಯಮಾನಮ್ ಆತಪಸ್ಯಾಪಿ ತತ್ರ ಅವಸ್ಥಾನಂಸೂಚಯತಿ। ಏತೇನ ಶೀತೋಷ್ಣಯೋರಪಿ ಯುಗಪತ್ ಉಪಲಬ್ಧೇಃ ಸಹಾವಸ್ಥಾನಮ್ ಉಕ್ತಂ ವೇದಿತವ್ಯಮ್ ॥

ಉಚ್ಯತೇ। ಪರಸ್ಪರಾನಾತ್ಮತಾಲಕ್ಷಣೋ ವಿರೋಧಃ। ನ ಜಾತಿವ್ಯಕ್ತ್ಯೋ ರಿವ ಪರಮಾರ್ಥತಃ ಪರಸ್ಪರಸಂಭೇದಃ ಸಂಭವತಿ- ಇತ್ಯರ್ಥಃ। ತೇನ ಇತರೇತರಭಾವಸ್ಯ ಇತರೇತರಸಂಭೇದಾತ್ಮಕತ್ವಸ್ಯ ಅನುಪಪತ್ತಿಃ। ಕಥಮ್? ಸ್ವತಸ್ತಾವದ್, ವಿಷಯಿಣಃ ಚಿದೇಕರಸತ್ವಾತ್ ನ ಯುಷ್ಮದಂಶಸಂಭವಃ। ಅಪರಿಣಾಮಿತ್ವಾತ್; ನಿರಞ್ಜನತ್ವಾಚ್ಚ ನ ಪರತಃ। ವಿಷಯಸ್ಯಾಪಿ ನ ಸ್ವತಃ ಚಿತ್ಸಂಭವಃ। ಸಮತ್ವಾದ್ ವಿಷಯತ್ವಹಾನೇಃ; ನ ಪರತಃ ಚಿತೇಃ ಅಪ್ರತಿಸಂಕ್ರಮತ್ವಾತ್। **'ತದ್ಧರ್ಮಾಣಾಮಪಿ ಸುತರಾಮ್'** ಇತಿ। ಏವಂ ಸ್ಥಿತೇ ಸ್ವಾಶ್ರಯಮ್ ಅತಿರಿಚ್ಯ ಧರ್ಮಾಣಾಮ್ ಅನ್ಯತ್ರ ಭಾವಾನುಪಪತ್ತಿಃ ಸುಪ್ರಸಿದ್ಧಾ ಇತಿ ದರ್ಶಯತಿ। ಇತಿಶಬ್ದೋ ಹೇತ್ವರ್ಥಃ। ಯಸ್ಮಾದೇವಮ್ ಉಕ್ತೇನ ನ್ಯಾಯೇನ ಇತರೇತರಭಾವಾಸಂಭವಃ, ಅತಃ **'ಅಸ್ಮತ್ಪ್ರತ್ಯಯಗೋಚರೇ ವಿಷಯಿಣಿ ಚಿದಾತ್ಮಕೇ'** ಇತಿ। ಅಸ್ಮತ್ಪ್ರತ್ಯಯೇ ಯೋಽನಿದಮಂಶಃ, ಚಿದೇಕರಸಃ, ತಸ್ಮಿನ್ ತದ್ಬಲನಿರ್ಭಾಸಿತತಯಾ ಲಕ್ಷಣತೋ ಯುಷ್ಮದರ್ಥಸ್ಯ ಮನುಷ್ಯಾಭಿಮಾನಸ್ಯ ಸಂಭೇದ ಇವಾವಭಾಸಃ, ಸ ಏವಾಧ್ಯಾಸಃ। **ತದ್ಧರ್ಮಾಣಾಂ** ಚ ಇತಿ। ಯದ್ಯಪಿ ವಿಷಯಾಧ್ಯಾಸೇ ತದ್ಧರ್ಮಾಣಾಮಪಿ ಅರ್ಥಸಿದ್ಧೋಽಧ್ಯಾಸಃ, ತಥಾಪಿ ವಿನಾಪಿ ವಿಷಯಾಧ್ಯಾಸೇನ ತದ್ಧರ್ಮಾಧ್ಯಾಸೋ ಬಾಧಿರ್ಯಾದಿಷು[1] ಶ್ರೋತ್ರಾದಿಧರ್ಮೇಷು ವಿದ್ಯತೇ ಇತಿ ಪೃಥಗ್ ಧರ್ಮಗ್ರಹಣಮ್। **ತದ್ವಿಪರ್ಯಯೇಣ ವಿಷಯಿಣಃ, ತದ್ಧರ್ಮಾಣಾಂ ಚ** – ಇತಿ। ಚೈತನ್ಯಸ್ಯ ತದ್ಧರ್ಮಾಣಾಂ ಚ ಇತ್ಯರ್ಥಃ! ನನು ವಿಷಯಿಣಃ, ಚಿದೇಕರಸಸ್ಯ ಕುತೋ ಧರ್ಮಾಃ, ಯೇ ವಿಷಯೇ ಅಧ್ಯಸ್ಯೇರನ್? ಉಚ್ಯತೇ। ಆನನ್ದಃ, ವಿಷಯಾನುಭವಃ ನಿತ್ಯತ್ವಮ್ ಇತಿ ಸನ್ತಿ ಧರ್ಮಾಃ, ಅಪೃಥಕ್ತ್ವೇಽಪಿ ಚೈತನ್ಯಾತ್ ಪೃಥಗಿವ ಅವಭಾಸನ್ತೇ- ಇತಿ ನ ದೋಷಃ। ಅಧ್ಯಾಸೋ ನಾಮ ಅತದ್ರೂಪೇ ತದ್ರೂಪಾವಭಾಸಃ; **ಸ ಮಿಥ್ಯಾ ಇತಿ ಭವಿತುಂ ಯುಕ್ತಮ್**– ಇತಿ। ಮಿಥ್ಯಾಶಬ್ದೋ ದ್ವ್ಯರ್ಥಃ; ಅಪಹ್ನವವಚನಃ, ಅನಿರ್ವಚನೀಯತಾವಚನಶ್ಚ। ಅತ್ರ ಅಯಮ್ ಅಪಹ್ನವವಚನಃ। ಮಿಥ್ಯಾಭವಿತುಂ ಯುಕ್ತಮ್, ಅಭಾವ ಏವ ಅಧ್ಯಾಸಸ್ಯ ಯುಕ್ತಃ ಇತ್ಯರ್ಥಃ ॥

(ಅರ್ಥ)

(ಪ್ರಶ್ನೆ):- **'ವಿಷಯವಿಷಯಿಣೋಃ, ತಮಃಪ್ರಕಾಶವದ್ ವಿರುದ್ಧಸ್ವಭಾವಯೋಃ ಇತರೇತರಭಾವಾನುಪಪತ್ತೌ ಸಿದ್ಧಾಯಾಮ್'** (ವಿಷಯ ವಿಷಯಿಗಳು ತಮಃಪ್ರಕಾಶಗಳಂತೆ ವಿರುದ್ಧಸ್ವಭಾವವುಳ್ಳವಾಗಿರುವದರಿಂದ ಇತರೇತರಭಾವವು ಹೊಂದುವದಿಲ್ಲವೆಂಬುದು ಸಿದ್ಧವಾಗಿರುವದರಿಂದ,) ಎಂಬಲ್ಲಿ (ತಿಳಿಸಿರುವ) ಈ ವಿರೋಧವು ಯಾವದು? ಇತರೇತರಭಾವವೆಂಬುದಾದರೂ

1. 'ಬಧಿರಾದಿಷು' ಪಾ॥

ಎಂಥದ್ದು ? ಅದು ಹೊಂದುವದಿಲ್ಲವೆಂಬುದಕ್ಕಲ್ಲವೆ, 'ಕತ್ತಲೆಬೆಳಕುಗಳಂತೆ' ಎಂಬ ದೃಷ್ಟಾಂತವನ್ನು ಕೊಟ್ಟಿರುವದು ? ಮೊದಲನೆಯದಾಗಿ, (ಎರಡೂ) ಜೊತೆಯಲ್ಲಿರಲಾರವೆಂಬುದೇ ವಿರೋಧವೆನ್ನುವದಾದರೆ, ಆಗ ಬೆಳಕು ಇದ್ದಲ್ಲಿ ಕತ್ತಲೆ ಇರಲಾರದು (ಎಂದಂತೆ ಆಗುವದು. ಆದರೆ) ಅದು ಹಾಗಿಲ್ಲ. ಏಕೆಂದರೆ ಸ್ವಲ್ಪ ಬೆಳಕಿನ ದೀಪವಿರುವ ಮನೆಯಲ್ಲಿ ಅಸ್ಪಷ್ಟವಾಗಿಯೂ (ಹಾಗಿಲ್ಲದ) ಬೇರೆಯ ಕಡೆಯಲ್ಲಿ ಸ್ಪಷ್ಟವಾಗಿಯೂ ರೂಪವು ಕಾಣಿಸುತ್ತಿರುತ್ತದೆ. ಇದರಿಂದ ಸ್ವಲ್ಪ ಬೆಳಕಿನ ದೀಪವಿರುವ ಮನೆಯಲ್ಲಿ ಕತ್ತಲೆಯೂ ಒಂದಿಷ್ಟು ಇದ್ದುಕೊಂಡಿರುತ್ತದೆ ಎಂದು ತಿಳಿಯಬೇಕಾಗುತ್ತದೆ. ಹೀಗೆಯೇ ನೆರಳಿನಲ್ಲಿಯೂ ಬಿಸಿಯು ತಾರತಮ್ಯದಿಂದ ಕಾಣಬರುವದರಿಂದ[1] ಬಿಸಿಲೂ ಅಲ್ಲಿರುವದೆಂಬುದನ್ನು ಸೂಚಿಸುತ್ತದೆ (ಯಲ್ಲವೆ)? ಇದರಿಂದ ಶೀತೋಷ್ಣಗಳೂ ಒಮ್ಮೆಯೇ ಕಾಣಬರುವದರಿಂದ (ಅವೂ) ಜೊತೆಯಲ್ಲಿ(ರಬಹುದೆಂಬುದನ್ನು) ಹೇಳಿದಂತಾಯಿತೆಂದು ತಿಳಿಯಬೇಕು.

(ಉತ್ತರ) :– ಹೇಳುತ್ತೇವೆ. ಒಂದು ಮತ್ತೊಂದಾಗಿರಲಾರದೆಂಬುದೇ (ಇಲ್ಲಿ) ವಿರೋಧವು. ಜಾತಿವ್ಯಕ್ತಿಗಳಂತೆ ನಿಜವಾಗಿ ಒಂದಕ್ಕೊಂದರ ಸಂಮಿಶ್ರಣವು ಆಗುವಹಾಗಿಲ್ಲ ಎಂದರ್ಥ.[2] ಹೀಗಿರುವದರಿಂದ ಇತರೇತರಸಂಮಿಶ್ರಣರೂಪವಾದ ಇತರೇತರಭಾವವು ಕೂಡುವದಿಲ್ಲ (ಎಂದರ್ಥ).[3] ಹೇಗೆಂದರೆ, ಮೊದಲನೆಯದಾಗಿ ವಿಷಯಿಯು ಚಿದೇಕರಸವಾಗಿರುವದರಿಂದ ಅದರಲ್ಲಿ ಸ್ವತಃ (ತನ್ನಿಂದತಾನೇ) ಯುಷ್ಮದಂಶವು[4] ಇರುವಂತಿಲ್ಲ; (ಅದು) ಪರಿಣಾಮಿಯಲ್ಲದ್ದರಿಂದಲೂ ನಿರಂಜನ[5]ವಾಗಿರುವದರಿಂದಲೂ ಮತ್ತೊಂದರಿಂದ ಬರುವಂತಿಲ್ಲ. ವಿಷಯಕ್ಕೂ ಸ್ವತಃ ಚಿದಂಶವು ಇರುವಂತಿಲ್ಲ; ಏಕೆಂದರೆ ವಿಷಯತ್ವವೇ ಇಲ್ಲವಾಗಿಬಿಡುವದೆಂಬುದು (ಇಲ್ಲಿಯೂ) ಸಮವಾಗಿರುತ್ತದೆ.[6] ಮತ್ತೊಂದರಿಂದಲೂ ಬರುವಂತಿಲ್ಲ ; ಏಕೆಂದರೆ, ಚೈತನ್ಯವು (ಮತ್ತೊಂದರಲ್ಲಿ) ಸೇರಿಕೊಳ್ಳುವದಲ್ಲ.

---

1. ಕತ್ತಲೆಬೆಳಕುಗಳು ಜೊತೆಯಲ್ಲಿರಲಾರವೆಂದೇ ಭಾಷ್ಯಕಾರರು . ಮುಂ. ಭಾ. ಅವತರಣಿಕೆಯಲ್ಲಿ ಹೇಳಿರುತ್ತಾರೆ; ಈ. ಭಾ. ದ ಉಪಸಂಹಾರದಲ್ಲಿ ಶೀತೋಷ್ಣಗಳು ಜೊತೆಯಲ್ಲಿರಲಾರವೆಂದಿರುತ್ತಾರೆ.

2. ಜಾತಿವ್ಯಕ್ತಿಗಳ ಸಂಬಂಧವು ತಾದಾತ್ಮ್ಯವು ಎಂತ ಭಾಷ್ಯದಲ್ಲಿ ಎಲ್ಲಿಯೂ ಉದಾಹರಿಸಿರುವಂತಿಲ್ಲ.

3. ಇವೆರಡಕ್ಕೂ ತಾದಾತ್ಮ್ಯಸಾಮರ್ಥ್ಯವಿಲ್ಲವೆಂಬುದು ವಿರೋಧ; ವಿರೋಧವಿರುವದರಿಂದ ಇತರೇತರಭಾವವೆಂಬ ಕಾರ್ಯವು ಹೊಂದುವದಿಲ್ಲವೆಂಬುದು ಫಲವು. ಪಂ. ವಿ.

4. ವಿಷಯಾಂಶವು, ಅನಾತ್ಮಾಂಶವು. 5 ಮತ್ತೊಂದರ ಅಂಟು ಇಲ್ಲದ್ದು.

6. ಆತ್ಮನು ಚಿದ್ರೂಪವೇ ಆಗಿರುವದರಿಂದ ಅದರಲ್ಲಿ ಜಡವಸ್ತುವಿನ ಧರ್ಮವು ಸೇರಿದರೆ ಹೇಗೆ ಅದರ ವಿಷಯಿತ್ವವು ಹೋಗಿಬಿಡುವದೋ ಹಾಗೆಯೇ ವಿಷಯದಲ್ಲಿ ಚಿದಂಶವಿದ್ದರೆ ಅದರ ವಿಷಯತ್ವಕ್ಕೇ ಧಕ್ಕೆ ಬರುತ್ತದೆ.

**'ತದ್ಧರ್ಮಾಣಾಮಪಿ ಸುತರಾಮ್'** (ಅವುಗಳ ಧರ್ಮಗಳಿಗೆ ಇತರೇತರ ಭಾವವೆಂಬುದು ತೀರ ಹೊಂದದ ಮಾತಾಗಿದೆ)- ಎಂಬ (ವಾಕ್ಯವು) ಹೀಗಿರುವಲ್ಲಿ ತಮ್ಮ ಆಶ್ರಯವನ್ನು ಬಿಟ್ಟು ಧರ್ಮಗಳು ಮತ್ತೊಂದು ಕಡೆಯಲ್ಲಿರುವದಿಲ್ಲ ವೆಂಬುದು ಅತ್ಯಂತಪ್ರಸಿದ್ಧವಾಗಿರುತ್ತದೆ ಎಂದು ತಿಳಿಸುತ್ತದೆ.

(ಇತ್ಯತಃ ಎಂಬಲ್ಲಿರುವ) ಇತಿಶಬ್ದವು ಕಾರಣವೆಂಬರ್ಥವುಳ್ಳದ್ದು. ಮೇಲೆ ಹೇಳಿದ ಕಾರಣದಿಂದ- ಒಂದು ಇನ್ನೊಂದಾಗಲಾರದಷ್ಟೆ ? ಆದ್ದರಿಂದ- 'ನಾನು' ಎಂಬ ಪ್ರತ್ಯಯಕ್ಕೆ ಗೋಚರವಾಗಿರುವ ವಿಷಯಿಯಾದ ಚೈತನ್ಯದಲ್ಲಿ- ನಾನು ಎಂಬ ಪ್ರತ್ಯಯದಲ್ಲಿ[1] ಇದಮಂಶವಲ್ಲದ (ವಿಷಯಾಂಶವಲ್ಲದ) ಚಿದೇಕರಸವಾಗಿರುವ (ಆತ್ಮನಲ್ಲಿ) ಅದರ ಬಲದಿಂದ ತೋರುವದರಿಂದ ಲಕ್ಷಣದಿಂದ ಯುಷ್ಮದರ್ಥ(ವಿಷಯಾಂಶ)ವೆನಿಸುವ ಮನುಷ್ಯಾಭಿಮಾನವು ಬೆರೆತುಕೊಂಡಿರುವಂತೆ ತೋರುವದೆಂಬ ಅಧ್ಯಾಸವು (ಇರಲಾರದು). **'ತದ್ಧರ್ಮಾಣಾಂ ಚ'** ಮತ್ತು ಅದರ ಧರ್ಮಗಳ ಅಧ್ಯಾಸವೂ ಇರಲಾರದು. ವಿಷಯವನ್ನು ಅಧ್ಯಾಸಮಾಡಿದರೆ ಅದರ ಧರ್ಮಗಳ ಅಧ್ಯಾಸವು ತಾನೇ ಸಿದ್ಧವಾಗಿರುತ್ತದೆಯಾದರೂ ವಿಷಯಾಧ್ಯಾಸವಿಲ್ಲದೆಯೂ ಅದರ ಧರ್ಮದ ಅಧ್ಯಾಸವಾಗುವದು ಕಿವುಡುತನವೇ ಮುಂತಾದ ಶ್ರೋತ್ರೇಂದ್ರಿಯಾದಿಗಳ ಧರ್ಮಗಳನ್ನು (ಅಧ್ಯಾಸಮಾಡುವಲ್ಲಿ) ಇರುತ್ತದೆಯಾಗಿ 'ಧರ್ಮ'ವನ್ನು (ಇಲ್ಲಿ) ಬೇರೆಯಾಗಿ ತೆಗೆದುಕೊಂಡು (ಹೇಳಿದೆ).[2]

**'ತದ್ವಿಪರ್ಯಯೇಣ ವಿಷಯಿಣಸ್ತದ್ಧರ್ಮಾಣಾಂ ಚ'** (ಅದಕ್ಕೆ ವಿಪರೀತವಾಗಿ. ವಿಷಯಿಯನ್ನೂ ಅದರ ಧರ್ಮಗಳನ್ನೂ) ಎಂದರೆ ಚೈತನ್ಯವನ್ನೂ ಅದರ ಧರ್ಮಗಳನ್ನೂ ಅಧ್ಯಾಸಮಾಡುತ್ತಾರೆಂಬುದು ಮಿಥ್ಯೆ ಎಂದರ್ಥ.

(ಆಕ್ಷೇಪ) :- ಚಿದೇಕರಸವಾಗಿರುವ ವಿಷಯಿಗೆ ಧರ್ಮಗಳೆಲ್ಲಿಂದ ಬಂದವು ? (ಅವು) ಇದ್ದರಲ್ಲವೆ, ವಿಷಯದಲ್ಲಿ ಅಧ್ಯಾಸಮಾಡುವದೆಂಬುದು ?

(ಪರಿಹಾರ) :- ಹೇಳುತ್ತೇವೆ. ಆನಂದ, ವಿಷಯಾನುಭವ, ನಿತ್ಯತ್ವ- ಎಂಬ ಧರ್ಮಗಳು ಅದಕ್ಕೆ ಉಂಟು. (ಅವು ಚೈತನ್ಯಕ್ಕಿಂತ) ಬೇರೆಯಾಗಿಲ್ಲ

---

1. ನಾನು ಎಂಬುದು ಬರಿಯ ಚಿನ್ಮಾತ್ರವಾಗಿದ್ದರೆ 'ನಾನು ಮನುಷ್ಯನು' ಎಂಬ ಅಧ್ಯಾಸವಾಗಲಾರದು ; ಏಕೆಂದರೆ ಮನುಷ್ಯಾಭಿಮಾನವು ವಿಷಯವಾಗಿರುತ್ತದೆ.

2. ವಿಷಯಿಯಲ್ಲಿ ವಿಷಯದ ಅಧ್ಯಾಸವಾಗಲಾರದು ಎಂದದ್ದರಿಂದ ಅದರಲ್ಲಿ ಅದರ ಧರ್ಮವೂ ಅಧ್ಯಾಸವಾಗುವಂತಿಲ್ಲವೆಂದು ತಾನೇ ಸಿದ್ಧವಾಗುತ್ತದೆಯಾದರೂ 'ನಾನು ಕಿವಿ' ಎಂದು ಅಧ್ಯಾಸಮಾಡದೆಯೇ ಕಿವಿಯ ಧರ್ಮವಾದ ಕಿವುಡನ್ನು ಮಾತ್ರ ಅಧ್ಯಾಸಮಾಡಿಕೊಳ್ಳುವದೂ ಇರುವದರಿಂದ ಧರ್ಮಗಳ ಅಧ್ಯಾಸವೂ ಆಗಲಾರದು ಎಂದು ಬೇರೆಯಾಗಿಯೇ ಧರ್ಮಾಧ್ಯಾಸವನ್ನು ಅಲ್ಲಗಳೆದಿದೆ ಎಂದಭಿಪ್ರಾಯ.

ವಾದರೂ ಬೇರೆಯಾಗಿರುವಂತೆ ತೋರುತ್ತವೆ. ಆದ್ದರಿಂದ (ಧರ್ಮಗಳು ಎಂದದ್ದರಲ್ಲಿ) ದೋಷವಿಲ್ಲ.

(ವಿಷಯವಿಷಯಿಗಳ ಪರಸ್ಪರವಾದ) ಅಧ್ಯಾಸವು-ಎಂದರೆ ಅಂಥದ್ದಲ್ಲದ್ದರಲ್ಲಿ ಆ ರೂಪದ ತೋರುವಿಕೆಯು- **'ಮಿಥ್ಯೇತಿ ಭವಿತುಂ ಯುಕ್ತಮ್'** (ಮಿಥ್ಯೆಯೆಂದಾಗಬೇಕು). ಮಿಥ್ಯಾಶಬ್ದಕ್ಕೆ ಇಲ್ಲವೆಂಬರ್ಥವು, **ಅನಿರ್ವಚನೀಯ**[1]ವೆಂಬರ್ಥ- (ಹೀಗೆ) ಎರಡರ್ಥಗಳಿವೆ. ಇಲ್ಲಿ ಇದಕ್ಕೆ ಇಲ್ಲವೆಂದರ್ಥ. ಮಿಥ್ಯೆಯೆಂದಾಗಬೇಕು, ಎಂದರೆ, ಅಧ್ಯಾಸವು ಇಲ್ಲವೆಂದೇ ಆಗಬೇಕು- ಎಂದರ್ಥ.

## ೨. ಅಧ್ಯಾಸಪ್ರತಿಜ್ಞಾಭಾಷ್ಯ-ಸಿದ್ಧಾಂತ

**ತಥಾಪಿ ಅನ್ಯೋನ್ಯಸ್ಮಿನ್ ಅನ್ಯೋನ್ಯಾತ್ಮಕತಾಮ್, ಅನ್ಯೋನ್ಯಧರ್ಮಾಂಶ್ಚ ಅಧ್ಯಸ್ಯ ಇತರೇತರಾವಿವೇಕೇನ, ಅತ್ಯನ್ತವಿವಿಕ್ತಯೋಃ, ಧರ್ಮಧರ್ಮಿಣೋಃ, ಮಿಥ್ಯಾಜ್ಞಾನನಿಮಿತ್ತಃ, ಸತ್ಯಾನೃತೇ ಮಿಥುನೀಕೃತ್ಯ 'ಅಹಮಿದಮ್', 'ಮಮೇದಮ್'- ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ ॥**

### ಪರಿಹಾರ: ಅಧ್ಯಾಸವು ಅನುಭವದಲ್ಲಿದೆ

(ಪಂಚಪಾದಿಕಾ)

೬. ಯದ್ಯಪ್ಯೇವಮ್, ತಥಾಪಿ ನೈಸರ್ಗಿಕಃ ಪ್ರತ್ಯಕ್ಚೈತನ್ಯಸತ್ತಾವಗಾತ್ರಾನುಬನ್ಧೀ, ಅಯಮ್ ಯುಷ್ಮದಸ್ಮದೋರಿತರೇತರಾಧ್ಯಾಸಾತ್ಮಕಃ, **'ಅಹಮಿದಮ್', 'ಮಮೇದಮ್' ಇತಿ ಲೋಕವ್ಯವಹಾರಃ** । ತೇನ ಯಥಾ ಅಸ್ಮದರ್ಥಸ್ಯ ಸದ್ಭಾವೋ ನೋಪಾಲಮ್ಭಮರ್ಹತಿ, ಏವಮ್ ಅಧ್ಯಾಸಸ್ಯಾಪಿ ಇತ್ಯಭಿಪ್ರಾಯಃ। 'ಲೋಕ' ಇತಿ ಮನುಷ್ಯೋಽಹಮಿತ್ಯಭಿಮನ್ಯಮಾನಃ; ಪ್ರಾಣಿನಿಕಾಯ ಉಚ್ಯತೇ। ವ್ಯವಹರಣಂ ವ್ಯವಹಾರಃ। ಲೋಕ ಇತಿ ವ್ಯವಹಾರಃ ಲೋಕವ್ಯವಹಾರಃ ; ಮನುಷ್ಯೋಽಹಮ್ ಇತ್ಯಭಿಮಾನ ಇತ್ಯರ್ಥಃ। **'ಸತ್ಯಾನೃತೇ ಮಿಥುನೀಕೃತ್ಯ'** ಇತಿ। ಸತ್ಯಮ್ ಅನಿದಂಚೈತನ್ಯಮ್। ಅನೃತಂ ಯುಷ್ಮದರ್ಥಃ ; ಸ್ವರೂಪತೋಽಪಿ ಅಧ್ಯಸ್ತಸ್ವರೂಪತ್ವಾತ್ । 'ಅಧ್ಯಸ್ಯ', 'ಮಿಥುನೀಕೃತ್ಯ'- ಇತಿ ಚ ಕ್ತ್ವಾಪ್ರತ್ಯಯಃ, ನ ಪೂರ್ವಕಾಲತ್ವಮ್ ಅನ್ಯತ್ವಂ ಚ

---

1. ಅನಿರ್ವಚನೀಯವೆಂಬ ಮಾತನ್ನು ಹೀಗೆ ವಿಶೇಷಣವಿಲ್ಲದೆ ಭಾಷ್ಯದಲ್ಲಿ ಸ್ವತಂತ್ರವಾಗಿ ಉಪಯೋಗಿಸಿದ್ದಿಲ್ಲ. ಪೀಠಿಕೆಯನ್ನು ನೋಡಿ.

ಲೋಕವ್ಯವಹಾರಾತ್ ಅಙ್ಗೀಕೃತ್ಯ ಪ್ರಯುಕ್ತಃ 'ಭುಕ್ತ್ವಾ ವ್ರಜತಿ' ಇತಿವತ್ ಕ್ರಿಯಾನ್ತರಾನುಪಾದಾನಾತ್ । **'ಅಧ್ಯಸ್ಯ ನೈಸರ್ಗಿಕೋಽಯಂ ಲೋಕ ವ್ಯವಹಾರಃ'** ಇತಿ ಸ್ವರೂಪಮಾತ್ರಪರ್ಯವಸಾನಾತ್। ಉಪಸಂಹಾರೇ ಚ **'ಏವಮಯಮನಾದಿರನನ್ತೋ ನೈಸರ್ಗಿಕೋಽಧ್ಯಾಸಃ'** ಇತಿ ತಾವನ್ಮಾತ್ರೋಪಸಂಹಾರಾತ್। ಅತಃ, 'ಚೈತನ್ಯಂ ಪುರುಷಸ್ಯ ಸ್ವರೂಪಮ್' ಇತಿವತ್ ವ್ಯಪದೇಶಮಾತ್ರಂ ದ್ರಷ್ಟವ್ಯಮ್ ॥

(ಅರ್ಥ)

ಹೀಗಿರುವದೇನೊ ಸರಿ; ಆದರೂ ಈ ಯುಷ್ಮದಸ್ಮತ್ತುಗಳ (ನೀನು ನಾನುಗಳ) ಇತರೇತರಾಧ್ಯಾಸರೂಪವಾದ **'ಅಹಮಿದಮ್ ಮಮೇದಮಿತಿ ಲೋಕವ್ಯವಹಾರಃ'** 'ನಾನು ಇದು', 'ನನ್ನದಿದು' ಎಂಬ ಲೋಕವ್ಯವಹಾರವು ನೈಸರ್ಗಿಕವು, ಎಂದರೆ ಪ್ರತ್ಯಕ್ಚೈತನ್ಯಸತ್ತಾಮಾತ್ರಕ್ಕೆ ಸಂಬಂಧಿಸಿರುತ್ತದೆ.[1] ಆದ್ದರಿಂದ ಹೇಗೆ ಅಸ್ಮದರ್ಥವು (ನಾನೆಂಬ ವಸ್ತು) ಇರುವದನ್ನು ದೂರುವದರಿಂದಾಗುವದಿಲ್ಲವೋ ಅಧ್ಯಾಸವು ಇರುವದನ್ನೂ ದೂರುವದಕ್ಕಿಲ್ಲ– ಎಂದು ಅಭಿಪ್ರಾಯ. ('ಲೋಕವ್ಯವಹಾರಃ' ಎಂಬಲ್ಲಿ) **ಲೋಕ** ಎಂಬ ಮಾತಿನಿಂದ 'ನಾನು ಮನುಷ್ಯನು' ಎಂದು ಅಭಿಮಾನಪಡುವ ಪ್ರಾಣಿನಿಕಾಯವನ್ನು ಹೇಳಿರುತ್ತದೆ ; ವ್ಯವಹಾರವೆಂದರೆ ವ್ಯವಹರಿಸುವದು. ಲೋಕವೆಂಬ ವ್ಯವಹಾರವು **ಲೋಕವ್ಯವಹಾರವು** ; 'ನಾನು ಮನುಷ್ಯನು' ಎಂಬ ಅಭಿಮಾನವು ಎಂದರ್ಥ.[2]

**ಸತ್ಯಾನೃತೇ ಮಿಥುನೀಕೃತ್ಯ** (ಸತ್ಯಾನೃತಗಳನ್ನು ಕಲೆಬೆರಕೆಮಾಡಿ– ಎಂದು ಭಾಷ್ಯ). ಸತ್ಯವಾದದ್ದು ಅಸಿದಂಚೈತನ್ಯವು[3] ; ಅನೃತವಾದದ್ದು ಎಂದರೆ ಯುಷ್ಮದರ್ಥವು (ನೀನು ಎನಿಸಿಕೊಳ್ಳಬಲ್ಲ ವಿಷಯವು), ಏಕೆಂದರೆ ಅದು ಸ್ವರೂಪದಿಂದಲೂ ಅಧ್ಯಸ್ತವಾದ ಸ್ವರೂಪವುಳ್ಳದ್ದಾಗಿದೆ.[4]

ಅಧ್ಯಸ್ಯ (ಅಧ್ಯಾಸಮಾಡಿ) ಎಂದೂ ಮಿಥುನೀಕೃತ್ಯ (ಕಲೆಬೆರಕೆಮಾಡಿ) ಎಂದೂ ಕ್ತ್ವಾ (ಭೂತಕಾಲಕೃದಂತಾವ್ಯಯ)ಪ್ರತ್ಯಯವನ್ನು– (ಅಧ್ಯಾಸವು) ಹಿಂದಿನಕಾಲದ್ದೆಂದಾಗಲಿ ಲೋಕವ್ಯವಹಾರಕ್ಕಿಂತ ಬೇರೆಯೆಂದಾಗಲಿ ಇಟ್ಟು

1. ಆತ್ಮನ ಜೊತೆಗೆ ಸ್ವಭಾವದಿಂದಲೇ ಇದ್ದುಕೊಂಡುಬಿಟ್ಟಿದೆ ಎಂದರ್ಥ.

2. ಈ ಅರ್ಥವು ಭಾಷ್ಯವಾಕ್ಯದಿಂದ ಸರಳವಾಗಿ ಹೊರಡುವದಿಲ್ಲ; ಭಾಮತಿಯಲ್ಲಿ ಬೇರೆಯ ಅರ್ಥವೇ ಇದೆ.

3. ಇದು ಎನ್ನಿಸಿಕೊಳ್ಳಲಾರದ ವಿಷಯವಲ್ಲದ, ಚೈತನ್ಯವು.

4. ಆತ್ಮನು ಸ್ವರೂಪದಿಂದ ಅಧ್ಯಸ್ತನಾಗಿಲ್ಲವೆಂಬ ಅಭಿಪ್ರಾಯವು ಇದರಲ್ಲಡಗಿದೆ.

ಕೊಂಡು ಪ್ರಯೋಗಮಾಡಿಲ್ಲ; ಏಕೆಂದರೆ 'ಉಂಡುಹೋಗುತ್ತಾನೆ' ಎಂಬಂತೆ ಇಲ್ಲಿ ಮತ್ತೊಂದು ಕ್ರಿಯೆಯನ್ನು ತೆಗೆದುಕೊಂಡು ಹೇಳಿಲ್ಲ.[1] ಏಕೆಂದರೆ ಅಧ್ಯಾಸ ಮಾಡುವ ಈ ಲೋಕವ್ಯವಹಾರವು ನೈಸರ್ಗಿಕವಾಗಿದೆ ಎಂದು ಸ್ವರೂಪಮಾತ್ರದಲ್ಲಿಯೇ ಮುಗಿದಿದೆ.[2] ಉಪಸಂಹಾರದಲ್ಲಿ 'ಹೀಗೆ ಅನಾದಿಯೂ ಅನಂತವೂ ಆಗಿರುವ ಈ ನೈಸರ್ಗಿಕವಾದ ಅಧ್ಯಾಸವು' ಎಂದಿಷ್ಟೇ ಉಪಸಂಹಾರಮಾಡಿದೆ.[3] ಆದ್ದರಿಂದ 'ಚೈತನ್ಯವು ಮನುಷ್ಯನ ಸ್ವರೂಪವು' ಎಂಬಂತೆ (ಇದು) ಬರಿಯ ಶಬ್ದ(ವ್ಯವಹಾರ) ಮಾತ್ರವಾಗಿದೆ ಎಂದು ತಿಳಿಯಬೇಕು.[4]

## ಅಧ್ಯಾಸಕ್ಕೆ ಮಿಥ್ಯಾಜ್ಞಾನವೇ ಉಪಾದಾನ

(ಪಂಚಪಾದಿಕಾ)

೭. ಮಿಥ್ಯಾಜ್ಞಾನನಿಮಿತ್ತಃ ಇತಿ। ಮಿಥ್ಯಾ ಚ ತದಜ್ಞಾನಂ ಚ ಮಿಥ್ಯಾಜ್ಞಾನಮ್। ಮಿಥ್ಯಾ ಇತಿ ಅನಿರ್ವಚನೀಯತಾ ಉಚ್ಯತೇ। ಅಜ್ಞಾನಮ್ ಇತಿ ಚ ಜಡಾತ್ಮಿಕಾ ಅವಿದ್ಯಾಶಕ್ತಿಃ ಜ್ಞಾನಪರ್ಯುದಾಸೇನೋಚ್ಯತೇ। ತನ್ನಿಮಿತ್ತಃ। ತದುಪಾದಾನ ಇತ್ಯರ್ಥಃ॥

ಕಥಂ ಪುನಃ, ನೈಮಿತ್ತಿಕವ್ಯವಹಾರಸ್ಯ ನೈಸರ್ಗಿಕತ್ವಮ್? ಅತ್ರೋಚ್ಯತೇ। ಅವಶ್ಯಮ್ ಏಷಾ ಅವಿದ್ಯಾಶಕ್ತಿಃ, ಬಾಹ್ಯಾಧ್ಯಾತ್ಮಿಕೇಷು ವಸ್ತುಷು ತತ್ಸ್ವರೂಪ ಸತ್ತಾಮಾತ್ರಾನುಬನ್ಧಿನೀ ಅಭ್ಯುಪಗನ್ತವ್ಯಾ। ಅನ್ಯಥಾ ಮಿಥ್ಯಾರ್ಥಾವಭಾಸಾ

---

1. ಊಟಮಾಡುವದು ಬೇರೆಯ ಕ್ರಿಯೆ, ಹೋಗುವದು ಬೇರೆಯ ಕ್ರಿಯೆ; ಇವುಗಳಲ್ಲಿ ಊಟವು ಮೊದಲು ಎಂಬುದನ್ನು ಭೂತಕೃದಂತಾವ್ಯಯಪ್ರತ್ಯಯವು ಹೇಳುತ್ತದೆ. ಅಧ್ಯಾಸಮಾಡಿ ಕಲೆಬೆರಕೆಮಾಡಿಕೊಂಡು- ಎಂಬಲ್ಲಿ ಹೀಗೆ ಎರಡು ಕ್ರಿಯೆಗಳಿಲ್ಲ.

2. ಅಧ್ಯಾಸಮಾಡಿ ಲೋಕವ್ಯವಹಾರವು- ಎಂದಿರುವದರಿಂದ ಅಧ್ಯಾಸವೇ ಲೋಕವ್ಯವಹಾರವೆಂದು ಅಭಿಪ್ರಾಯವೆಂತ ತಿಳಿಯಬೇಕಾಗಿದೆ ಎಂದು ಭಾವ. ಈ ಅರ್ಥವೂ ಭಾಷ್ಯಕ್ಕೆ ಸರಳವಾಗಿ ಹೊಂದುವದಿಲ್ಲ.

3. ಅಲ್ಲಿ ಅಧ್ಯಾಸ, ಕಲೆಬೆರಕೆಮಾಡುವದು, ವ್ಯವಹಾರ- ಇವನ್ನು ಬೇರ್ಪಡಿಸಿ ಹೇಳಿಲ್ಲ- ಎಂದಭಿಪ್ರಾಯ. ನಿಜವಾಗಿ ಅಲ್ಲಿಯೂ ಕರ್ತೃತ್ವಭೋಕ್ತೃತ್ವವ್ಯವಹಾರವನ್ನು ಹೇಳಿದೆ.

4. ಮನುಷ್ಯನ ಸ್ವರೂಪವೇ ಚೈತನ್ಯವು, ಅವು ಎರಡು ಬೇರೆಬೇರೆಯ ಪದಾರ್ಥಗಳಲ್ಲ. ಹಾಗೆಯೇ ಇಲ್ಲಿಯೂ ಅಧ್ಯಾಸ, ಮಿಥುನೀಕರಣ, ವ್ಯವಹಾರ- ಎಲ್ಲಾ ಒಂದೇ ಪದಾರ್ಥ- ಎಂದು ಅಭಿಪ್ರಾಯ. ಭಾಮತಿಯಲ್ಲಿ ಅಧ್ಯಾಸವು ವ್ಯವಹಾರಕ್ಕೆ ಕಾರಣವೆಂದು ಹೇಳಿದೆ. ಭಾಷ್ಯವೂ ಅಧ್ಯಾಸದಿಂದಲೇ ಎಲ್ಲಾ ವ್ಯವಹಾರವೂ ಆಗಿದೆ- ಎಂಬ ಅಭಿಪ್ರಾಯಕ್ಕೆ ಬೆಂಬಲವನ್ನು ಕೊಡುವಂತಿದೆ.

ನುಪಪತ್ತೇಃ । ಸಾ ಚ ನ ಜಡೇಷು ವಸ್ತುಷು ತತ್ಸ್ವರೂಪಾವಭಾಸಂ ಪ್ರತಿ ಬಧ್ನಾತಿ । ಪ್ರಮಾಣವೈಕಲ್ಯಾದೇವ ತದಗ್ರಹಣಸಿದ್ಧೇಃ । ರಜತಪ್ರತಿಭಾಸಾತ್ ಪ್ರಾಕ್ ಊರ್ಧ್ವಂ ಚ ಸತ್ಯಾಮಪಿ ತಸ್ಯಾಂ ಸ್ವರೂಪಗ್ರಹಣದರ್ಶನಾತ್ । ಅತಃ ತತ್ರ ರೂಪಾನ್ತರಾವಭಾಸಹೇತುರೇವ ಕೇವಲಮ್ । ಪ್ರತ್ಯಗಾತ್ಮನಿ ತು ಚಿತಿಸ್ವಭಾವತ್ವಾತ್ ಸ್ವಯಂಪ್ರಕಾಶಮಾನೇ ಬ್ರಹ್ಮಸ್ವರೂಪಾನವಭಾಸಸ್ಯ ಅನನ್ಯನಿಮಿತ್ತತ್ವಾತ್, ತದ್ಗತನಿಸರ್ಗಸಿದ್ಧಾವಿದ್ಯಾಶಕ್ತಿಪ್ರತಿಬನ್ಧಾದೇವ ತಸ್ಯ ಅನವಭಾಸಃ । ಅತಃ ಸಾ ಪ್ರತ್ಯಕ್ಚಿತಿ ಬ್ರಹ್ಮಸ್ವರೂಪಾವಭಾಸಂ ಪ್ರತಿಬಧ್ನಾತಿ, ಅಹಙ್ಕಾರಾದ್ಯತದ್ರೂಪಪ್ರತಿಭಾಸನಿಮಿತ್ತಂ ಚ ಭವತಿ ; ಸುಷುಪ್ತ್ಯಾದೌ ಚ, ಅಹಙ್ಕಾರಾದಿವಿಕ್ಷೇಪಸಂಸ್ಕಾರಮಾತ್ರಶೇಷಂ ಸ್ಥಿತ್ವಾ ಪುನರುದ್ಭವತಿ- ಇತ್ಯತೋ ನೈಸರ್ಗಿಕೋಽಪಿ ಅಹಙ್ಕಾರಮಮಕಾರಾತ್ಮಕೋ ಮನುಷ್ಯಾದ್ಯಭಿಮಾನೋ ಲೋಕವ್ಯವಹಾರಃ, ಮಿಥ್ಯಾಜ್ಞಾನನಿಮಿತ್ತ ಉಚ್ಯತೇ, ಸ ಪುನರಾಗನ್ತುಕತ್ವೇನ। ತೇನ ನೈಸರ್ಗಿಕತ್ವಂ ನೈಮಿತ್ತಿಕತ್ವೇನ ನ ವಿರುಧ್ಯತೇ ॥

(ಅರ್ಥ)

**ಮಿಥ್ಯಾಜ್ಞಾನನಿಮಿತ್ತಃ** ('ಮಿಥ್ಯಾಜ್ಞಾನನಿಮಿತ್ತವಾದ' ಎಂದು ಭಾಷ್ಯ). ಮಿಥ್ಯೆಯಾದ ಅಜ್ಞಾನವು ಮಿಥ್ಯಾಜ್ಞಾನವು.[1] 'ಮಿಥ್ಯೆ'ಯೆಂಬ (ಮಾತಿನಿಂದ) **ಅನಿರ್ವಚನೀಯತ್ವವನ್ನು** ಹೇಳಿದೆ; 'ಅಜ್ಞಾನ'ವೆಂಬ (ಮಾತಿನಿಂದ) ಜಡಾತ್ಮಕವಾದ **ಅವಿದ್ಯಾಶಕ್ತಿ**ಯನ್ನು -ಜ್ಞಾನವನ್ನು ಅಲ್ಲಗಳೆದು - ಹೇಳಿದೆ.[2] ಅದನ್ನು ನಿಮಿತ್ತವಾಗುಳ್ಳದ್ದು, ಎಂದರೆ ಅದೇ ಉಪಾದಾನವಾಗುಳ್ಳದ್ದು[3]- ಎಂದರ್ಥ.

(ಆಕ್ಷೇಪ) :- ನೈಮಿತ್ತಿಕವಾದ ವ್ಯವಹಾರವು ನೈಸರ್ಗಿಕವೆಂಬುದು ಹೇಗೆ[4] ?

---

1. ಮಿಥ್ಯಾಜ್ಞಾನವೆಂಬ ಭಾಷ್ಯದ ಮಾತನ್ನು ಹೀಗೆ ಒಡೆದು ವಿವರಿಸಿರುವದು ಈ ಪ್ರಸ್ಥಾನಕ್ಕೆ ಮಾಸಲು. ಭಾಮತೀವ್ಯಾಖ್ಯಾನದಲ್ಲಾಗಲಿ ಭಾಷ್ಯದಲ್ಲಾಗಲಿ ಇದು ಕಂಡು ಬರುವದಿಲ್ಲ. ಭಾಮತಿಯಲ್ಲಿ 'ಮಿಥ್ಯಾಜ್ಞಾನನಿಮಿತ್ತ' ಎಂದರೆ ಅಧ್ಯಾಸದಿಂದ ಆಗಿರುವ (ವ್ಯವಹಾರ).

2. ಇಲ್ಲಿ 'ಅಜ್ಞಾನ' ಎಂದರೆ ಅಚೇತನ; ಜ್ಞಾನವಲ್ಲದ್ದು ಎಂಬರ್ಥದಲ್ಲಿ ಉಪಯೋಗಿಸಿದೆ ಎಂದರ್ಥ.

3. ಉಪಾದಾನ ಎಂದರೆ ಮಣ್ಣು ಮಡಕೆಗೆ ಕಾರಣವಾಗಿರುವಂತೆ ಇರುವ ಕಾರಣ ; ಅಧ್ಯಾಸಕ್ಕೆ ಅಜ್ಞಾನವು, ಎಂದರೆ ಅವಿದ್ಯಾಶಕ್ತಿಯು ಉಪಾದಾನ ಎಂದು ಹೇಳಿದಂತೆ ಆಯಿತು.

4. ಒಂದು ಕಾರಣದಿಂದ ಆಗಿರುವದು ಅಧ್ಯಾಸವು ಸ್ವಭಾವದಿಂದ ಯಾವಾಗಲೂ ಇದೆ- ಎಂದರೆ ಹೇಗೆ ? ಎಂದು ಆಕ್ಷೇಪ.

(ಪರಿಹಾರ) :- ಇದಕ್ಕೆ ಹೇಳುತ್ತೇವೆ. ಈ ಅವಿದ್ಯಾಶಕ್ತಿಯು ಹೊರಗಿನ ಮತ್ತು (ಶರೀರದ) ಒಳಗಿನ ವಸ್ತುಗಳಲ್ಲಿ ಅವುಗಳ ಸ್ವರೂಪಸತ್ತಾಮಾತ್ರಕ್ಕೆ[1] ಸೇರಿಕೊಂಡು ಇದೆ ಎಂದು ಅವಶ್ಯವಾಗಿ ಒಪ್ಪಬೇಕು.[2] ಏಕೆಂದರೆ ಹೀಗಲ್ಲದಿದ್ದರೆ, ಮಿಥ್ಯಾಪದಾರ್ಥವು ತೋರಲಾರದು.[3] ಮತ್ತು ಈ (ಶಕ್ತಿಯು) ಜಡವಸ್ತುಗಳಲ್ಲಿ ಅವುಗಳ ಸ್ವರೂಪವು ತೋರಿಕೆಗೆ ಅಡ್ಡಿಯಾಗಿರುವದಿಲ್ಲ; ಏಕೆಂದರೆ ಪ್ರಮಾಣವಿಲ್ಲದ್ದರಿಂದಲೇ ಅವುಗಳನ್ನು ಅರಿಯದಿರುವದೆಂಬುದು ಸಿದ್ಧವಾಗುತ್ತದೆ.[4] ಬೆಳ್ಳಿಯು ತೋರುವ ಮುಂಚೆಯೂ ಆಮೇಲೆಯೂ ಆ (ಅವಿದ್ಯೆ)ಯಿದ್ದರೂ (ವಸ್ತು)ಸ್ವರೂಪವನ್ನು ಗ್ರಹಿಸುವದು ಕಂಡುಬರುತ್ತದೆ.[5] ಆದ್ದರಿಂದ ಅಲ್ಲಿ ಬೇರೊಂದು ರೂಪದಿಂದ ತೋರುವದಕ್ಕೆ ಮಾತ್ರ ಕಾರಣವಾಗಿರುತ್ತದೆ. ಪ್ರತ್ಯಗಾತ್ಮನಲ್ಲಿಯಾದರೋ (ಅವನು) ಚೈತನ್ಯಸ್ವಭಾವದವನಾದ್ದರಿಂದ ತಾನೇ ಹೊಳೆಯುತ್ತಿದ್ದರೂ ಬ್ರಹ್ಮಸ್ವರೂಪವು ಕಾಣದೆ ಇರುವದಕ್ಕೆ ಮತ್ತೊಂದು ನಿಮಿತ್ತವಿಲ್ಲವಾದ್ದರಿಂದ ಅವನಲ್ಲಿರುವ, ಸ್ವಭಾವದಿಂದ ಸಿದ್ಧವಾಗಿರುವ, ಅವಿದ್ಯಾಶಕ್ತಿಯು ಅಡ್ಡಿಯಿಂದಲೇ ಅದು ತೋರದೆಇರುತ್ತದೆ ಅನ್ನಬೇಕು. ಆದ್ದರಿಂದ ಅದು ಪ್ರತ್ಯಕ್ಚೈತನ್ಯದಲ್ಲಿ ಬ್ರಹ್ಮಸ್ವರೂಪವು ತೋರುವದಕ್ಕೆ ಅಡ್ಡಿಯಾಗಿರುತ್ತದೆ; ಅಹಂಕಾರವೇ ಮುಂತಾದ ಅದರಲ್ಲಿಲ್ಲದ ರೂಪವು ತೋರಿಕೊಳ್ಳುವದಕ್ಕೆ ನಿಮಿತ್ತವೂ ಆಗಿರುತ್ತದೆ.[6] ಸುಷುಪ್ತಿಯೇ ಮುಂತಾದ (ಅವಸ್ಥೆಯಲ್ಲಿ ಅಹಂಕಾರವೇ ಮುಂತಾದ ವಿಕ್ಷೇಪಗಳ ಸಂಸ್ಕಾರಮಾತ್ರವಾಗಿ ಉಳಿದುಕೊಂಡಿದ್ದು

---

1. ಬಾಹ್ಯವಸ್ತುಗಳ ಸ್ವರೂಪವೆಂದರೇನೆಂಬುದು ಇಲ್ಲಿ ಸ್ಪಷ್ಟವಾಗಿಲ್ಲ; ಆತ್ಮಚೈತನ್ಯವೆಂದು ವ್ಯಾಖ್ಯಾನಕಾರರು ಹೇಳುತ್ತಾರೆ.

2. 'ಒಪ್ಪಬೇಕು' ಎಂದದ್ದರಿಂದ ಇದು ಯುಕ್ತಿಸಿದ್ಧವೆಂದಾಯಿತು. ಇಲ್ಲಿ 'ಏಷಾ' ಎಂದು ಪ್ರತ್ಯಕ್ಷ, 'ಅವಶ್ಯಮ್' ಎಂದು ಅನುಮಾನ_ಇವುಗಳನ್ನು ಸೂಚಿಸಿದೆ ಎಂದು ಪಂ. ವಿ.

3. ಮಿಥ್ಯಾಪದಾರ್ಥವು ತೋರುವದಕ್ಕೆ ಒಂದು ಉಪಾದಾನವು ಬೇಕು; ಇಲ್ಲದಿದ್ದರೆ ತೋರಲಾರದು _ಎಂದು ಅರ್ಥಾಪತ್ತಿಪ್ರಮಾಣವನ್ನು ಹೇಳಿದಂತಾಯಿತು.

4. ಇಲ್ಲಿ 'ಪ್ರಮಾಣವೈಕಲ್ಯಾತ್' ಎಂಬ ಮಾತಿಗೆ ಆಯಾ ವಿಷಯದ ಪ್ರಮಾಣವಿಲ್ಲದ್ದರಿಂದ ಎಂಬುದು ಸಹಜವಾದ ಅರ್ಥ; ಚೈತನ್ಯವೆಂಬ ಪ್ರಮಾಣವು ಅವೃತವಾಗಿರುವದರಿಂದಲೇ ಎಂಬರ್ಥವನ್ನು ಪಂ. ವಿ. ದಲ್ಲಿ ತೆಗೆದಿದೆ.

5. ಬೆಳ್ಳಿಯ ತೋರಿಕೆ ಹೋದಮೇಲೆ ಅಜ್ಞಾನವಿದ್ದೇಇರುವದರಿಂದ ಅದು ಅಜ್ಞಾನನಿಮಿತ್ತವಲ್ಲವೆಂದಾಗುವದಿಲ್ಲವೆ ?_ ಎಂದು ಆಕ್ಷೇಪಿಸಿ ಅವಿದ್ಯೆಯ ಅವಸ್ಥಾಭೇದಗಳೇ ಶುಕ್ತಿಕಾದಿಜ್ಞಾನದಿಂದ ನಿವೃತ್ತವಾಗುತ್ತವೆ_ ಎಂಬ ಪರಿಹಾರವನ್ನು ಪಂ. ವಿ. ದಲ್ಲಿ ಕೊಟ್ಟಿದೆ.

6. ಇದಿಷ್ಟೂ ಈ ಪ್ರಸ್ಥಾನಕ್ಕೆ ಮೀಸಲು; ಇದು ಭಾಷ್ಯದಲ್ಲಾಗಲಿ, ಭಾಮತಿಯಲ್ಲಾಗಲಿ ಇಲ್ಲ.

ಮತ್ತೆ ಉದ್ಭವವಾಗುತ್ತದೆ.[1] ಆದ್ದರಿಂದ ಅಹಂಕಾರಮಮಕಾರರೂಪವಾದ ಮನುಷ್ಯಾದ್ಯಭಿಮಾನವೆಂಬ ಲೋಕವ್ಯವಹಾರವು ನೈಸರ್ಗಿಕವಾದರೂ ಮಿಥ್ಯಾಜ್ಞಾನನಿಮಿತ್ತವೆಂದು ಹೇಳಿದೆಯೇ ಹೊರತು ಆಗಂತುಕವೆಂದಲ್ಲ.[2] ಆದ್ದರಿಂದ ನೈಸರ್ಗಿಕವಾದರೂ ನೈಮಿತ್ತಿಕವೆಂಬುದಕ್ಕೆ ವಿರುದ್ಧವಲ್ಲ.[3]

## ನಾನುನನ್ನದು ಎಂಬಿವು ಅಧ್ಯಾಸವೇ

(ಪಂಚಪಾದಿಕಾ)

೮. 'ಅನ್ಯೋನ್ಯಧರ್ಮಾಂಶ್ಚ' ಇತಿ ಪೃಥಗ್ ಧರ್ಮಗ್ರಹಣಂ ಧರ್ಮಮಾತ್ರಸ್ಯಾಪಿ ಕಸ್ಯಚಿತ್ ಅಧ್ಯಾಸಃ– ಇತಿ ದರ್ಶಯಿತುಮ್ । 'ಇತರೇತರಾವಿವೇಕೇನ' ಇತಿ। ಏಕತಾಪತ್ತ್ಯೈವ ಇತ್ಯರ್ಥಃ। ಕಸ್ಯ ಧರ್ಮಿಣಃ ಕಥಂ ಕುತ್ರ ಚ ಅಧ್ಯಾಸಃ, ಧರ್ಮಮಾತ್ರಸ್ಯ ವಾ ಕ್ವ ಅಧ್ಯಾಸಃ? ಇತಿ ಭಾಷ್ಯಕಾರಃ ಸ್ವಯಮೇವ ವಕ್ಷ್ಯತಿ । 'ಅಹಮಿದಂ', 'ಮಮೇದಮ್'– ಇತಿ ಅಧ್ಯಾಸಸ್ಯ ಸ್ವರೂಪಂ ದರ್ಶಯತಿ । 'ಅಹಮ್' ಇತಿ ತಾವತ್ ಪ್ರಥಮೋಽಧ್ಯಾಸಃ। ನನು 'ಅಹಮ್' ಇತಿ ನಿರಂಶಂ ಚೈತನ್ಯಮಾತ್ರಂ ಪ್ರತಿಭಾಸತೇ, ನಾಂಶಾನ್ತರಮ್ ಅಧ್ಯಸ್ತಮ್ ಅನಧ್ಯಸ್ತಮ್ ವಾ ? ಯಥಾ ಅಧ್ಯಸ್ತಾಂಶಾನ್ತರಭಾವಃ, ತಥಾ ದರ್ಶಯಿಷ್ಯಾಮಃ। ನನು 'ಇದಮ್' ಇತಿ ಅಹಙ್ಕರ್ತುರ್ಭೋಗಸಾಧನಂ ಕಾರ್ಯಕರಣಸಙ್ಘಾತೋಽವಭಾಸತೇ, ಮಮೇದಮ್ ಇತಿ ಚ ಅಹಙ್ಕರ್ತ್ರಾ ಸ್ವತ್ವೇನ ತಸ್ಯ ಸಂಬನ್ಧಃ। ತತ್ರ ನ ಕಿಞ್ಚಿತ್ ಅಧ್ಯಸ್ತಮಿವ ದೃಶ್ಯತೇ । ಉಚ್ಯತೇ । ಯದ್ಯೈವ ಅಹಂಕರ್ತಾ ಅಧ್ಯಾಸಾತ್ಮಕಃ, ತದ್ಯೈವ ತದುಪಕರಣಸ್ಯಾಪಿ ತದಾತ್ಮಕತ್ವಸಿದ್ಧಿಃ । ನ ಹಿ ಸ್ವಪ್ನಾವಾಪ್ತರಾಜ್ಯಾಭಿಷೇಕಸ್ಯ ಮಾಹೇನ್ದ್ರಜಾಲನಿರ್ಮಿತಸ್ಯ ವಾ ರಾಜ್ಞಃ, ರಾಜ್ಯೋಪಕರಣಂ ಪರಮಾರ್ಥಸತ್ ಭವತಿ । ಏವಮ್ ಅಹಙ್ಕರ್ತೃತ್ವಪ್ರಮುಖಃ ಕ್ರಿಯಾಕಾರಕಫಲಾತ್ಮಕೋ ಲೋಕವ್ಯವಹಾರೋಽಧ್ಯಸ್ತಃ, ನಿತ್ಯಶುದ್ಧಬುದ್ಧಮುಕ್ತಸ್ವಭಾವೇ ಆತ್ಮನಿ । ಅತಃ, ತಾದೃಶಬ್ರಹ್ಮಾತ್ಮಾನುಭವಪರ್ಯನ್ತಾತ್, ಜ್ಞಾನಾತ್ ಅನರ್ಥಹೇತೋಃ ಅಧ್ಯಾಸಸ್ಯ ನಿವೃತ್ತಿಃ ಉಪಪದ್ಯತೇ– ಇತಿ ತದರ್ಥವಿಷಯವೇದಾನ್ತಮೀಮಾಂಸಾರಮ್ಭಃ ಉಪಪದ್ಯತೇ ॥

---

1. ಅಗ್ರಹಣ (ಅರಿಯದಿರುವದು), ಮಿಥ್ಯಾಜ್ಞಾನ (ತಪ್ಪುತಿಳಿವಳಿಕೆ), ಅದರ ಸಂಸ್ಕಾರ –ಇವುಗಳಿಗಿಂತ ಬೇರೆಯಾದ ಅಜ್ಞಾನವು ಅಲ್ಲಿರುತ್ತದೆ– ಎಂದು ಪಂ. ವಿ.ದಲ್ಲಿ ಸಾಧಿಸಿದೆ.

2. ಹಿಂದೆ 'ಮನುಷ್ಯನು ನಾನೆಂಬ ವ್ಯವಹಾರವು' ಎಂದು ಹೇಳಿತ್ತು ; ಇಲ್ಲಿ 'ಮನುಷ್ಯಾದಿ' ಎಂದು ಆದಿಶಬ್ದವನ್ನು ಸೇರಿಸಿದೆ. ವ್ಯವಹಾರವು ಹೊಸದಾಗಿ ಹೊರಗಿನಿಂದ ಬಂದದ್ದಲ್ಲ, ಸ್ವಾಭಾವಿಕವಾಗಿರುವ ಅಜ್ಞಾನದಿಂದಾದದ್ದೇ– ಎಂದರ್ಥ.

3. ಕಾರಣರೂಪದಿಂದ ನೈಸರ್ಗಿಕ, ಕಾರ್ಯರೂಪದಿಂದ ನೈಮಿತ್ತಿಕ. ಪಂ. ವಿ.

(ಅರ್ಥ)

ಅನ್ಯೋಽನ್ಯಧರ್ಮಾಂಶ್ಚ (ಒಂದರ ಧರ್ಮಗಳನ್ನೊಂದರಲ್ಲಿಯೂ) ಎಂದು ಧರ್ಮವನ್ನು ಬೇರೆಯಾಗಿ ಹಿಡಿದು (ಹೇಳಿರುವದು) ಯಾವದಾದರೊಂದು ಬರಿಯ ಧರ್ಮವೂ ಅಧ್ಯಾಸವಾಗಬಹುದೆಂದು ತಿಳಿಸುವದಕ್ಕೆ. 'ಇತರೇತರಾವಿವೇಕೇನ' (ಒಂದರಿಂದೊಂದನ್ನು ವಿಂಗಡಿಸಿಕೊಳ್ಳದೆ) ಎಂದರೆ ಒಂದೇ ಆಗಿ ಮಾಡಿಕೊಂಡೇ[1] ಎಂದರ್ಥ; ಯಾವ ಧರ್ಮಿಯನ್ನು ಹೇಗೆ, ಮತ್ತು ಯಾವದರಲ್ಲಿ ಅಧ್ಯಾಸ(ಮಾಡು ತ್ತಾರೆ) ? ಬರಿಯ ಧರ್ಮವನ್ನಾದರೂ (ಹೇಗೆ, ಏತರಲ್ಲಿ) ಅಧ್ಯಾಸ(ಮಾಡು ತ್ತಾರೆ) ? —ಎಂಬುದನ್ನು ಭಾಷ್ಯಕಾರರೇ ಮುಂದೆ ಹೇಳಿರುತ್ತಾರೆ.

'ಅಹಮಿದಂ ಮಮೇದಮ್' (ನಾನು ಇದು, ನನ್ನದಿದು) ಎಂದು ಅಧ್ಯಾಸದ ಸ್ವರೂಪವನ್ನು ತೋರಿಸಿರುತ್ತಾರೆ, ಮೊದಲನೆಯದಾಗಿ 'ನಾನು' ಎಂಬುದೇ ಮೊದಲನೆಯ ಅಧ್ಯಾಸ.[2]

(ಆಕ್ಷೇಪ) :—'ನಾನು' ಎಂದು ಯಾವ ಅಂಶವೂ ಇಲ್ಲದ ಬರಿಯ ಚೈತನ್ಯ ವೇ ತೋರುತ್ತಿದೆಯಲ್ಲವೆ ? (ಅದರಲ್ಲಿ) ಅಧ್ಯಸ್ತವಾದ, ಅಥವಾ ಅಧ್ಯಸ್ತವಲ್ಲದ ಮತ್ತೊಂದು ಅಂಶವು ತೋರುವದಿಲ್ಲವಲ್ಲ !.

(ಪರಿಹಾರ):- ಅಧ್ಯಸ್ತವಾದ ಮತ್ತೊಂದು[3] ಅಂಶವು ಇರುವದು ಹೇಗೆಂಬುದನ್ನು[4] ಮುಂದೆ ತೋರಿಸಿಕೊಡುವೆವು.

(ಆಕ್ಷೇಪ):- ಇದು ಎಂಬುದು ಅಹಂಕರ್ತೃವಿಗೆ ಭೋಗಸಾಧನವಾದ ಕಾರ್ಯಕರಣಸಂಘಾತವು[5] ತೋರುತ್ತದೆ; 'ನನ್ನದಿದು' ಎಂದು ಅಹಂಕರ್ತೃವಿಗೆ ಅವನ ಸ್ವತ್ತಾಗಿರುವ (ಅದರ) ಸಂಬಂಧವು (ತೋರುತ್ತದೆ). ಅಲ್ಲಿ ಯಾವದೂ ಅಧ್ಯಸ್ತವಾಗಿರುವಂತೆ ಕಾಣುವದಿಲ್ಲವಲ್ಲ[6] !

---

1. ವಿವೇಚಿಸಿ ತಿಳಿದುಕೊಳ್ಳದೆ ಒಂದೇ ಎಂದು ಮಾಡಿಕೊಂಡೇ.

2. ಅನಾದಿಯಾದ ಅಜ್ಞಾನದ ಅಧ್ಯಾಸವು ಇದ್ದರೂ ಕಾದಾಚಿತ್ಕ (ಯಾವಾಗಲೋ ಒಂದುವೇಳೆ ಆಗುವ) ಅಧ್ಯಾಸವನ್ನಿಟ್ಟುಕೊಂಡು ಹೀಗೆಂದಿದೆ. ಪಂ. ವಿ.

3. 'ಅಧ್ಯಸ್ತಾಂಶಾಂತರ' ಎಂಬ ಪಾಠಕ್ಕೆ ಇದು ಅರ್ಥ. 'ಅಧ್ಯಸ್ತಾಂಶಾಂತರ್ಭಾವಃ' —ಎಂಬ ಪಾಠಕ್ಕೆ ಅಧ್ಯಸ್ತವಾದ ಅಂಶವೂ ಇದರೊಳಗೆ ಸೇರಿದೆ ಎಂಬುದನ್ನು —ಎಂದು ಅರ್ಥ.

4. ಆತ್ಮನೂ ಅಹಂಕಾರವೂ ಸೇರಿ 'ನಾನು' ಎಂಬ ಅಧ್ಯಾಸವಾಗಿದೆ ಎಂಬುದನ್ನು.

5. ಶರೀರೇಂದ್ರಿಯಗಳ ಗುಂಪು.

6. ನಾನು ಎಂಬುವನು ಆತ್ಮ, ನನ್ನದು ಎಂಬುದು ಅವನಿಗೆ ಸೇರಿದ ಶರೀರ— ಎಂದಿಷ್ಟೇ ಅಲ್ಲವೆ, ನಿಜವಾದದ್ದು ? —ಎಂದು ಅಭಿಪ್ರಾಯ. ನಾನು ಎಂಬುದೂ ಅಧ್ಯಾಸ ವಾದ್ದರಿಂದ ನನ್ನದೂ ಎಂಬುದೂ ಅಧ್ಯಾಸವೆಂದೇ ಆಯಿತು —ಎಂಬುದು ಇದಕ್ಕೆ ಮುಂದೆ ಹೇಳಿರುವ ಪರಿಹಾರ.

(ಪರಿಹಾರ) :- ಹೇಳುತ್ತೇವೆ. ಯಾವಾಗ ಅಹಂಕರ್ತೃವು ಅಧ್ಯಾಸಾತ್ಮಕ(ನೆಂದಾದನೋ) ಆಗಲೇ ಅವನ ಉಪಕರಣವೂ ಆ (ಅಧ್ಯಾಸದ) ಸ್ವರೂಪವಾದದ್ದೇ ಎಂದು ಏರ್ಪಡುತ್ತದೆ. ಕನಸಿನಲ್ಲಿ ರಾಜ್ಯಾಭಿಷೇಕವನ್ನು ಮಾಡಿಸಿಕೊಂಡ, ಅಥವಾ ಮಹೇಂದ್ರಜಾಲದಿಂದ ನಿರ್ಮಿತನಾಗಿರುವ, ರಾಜನಿಗೆ ರಾಜ್ಯೋಪಕರಣವು ನಿಜವಾಗಿಯೂ ಇರುವದಾಗಲಾರದಷ್ಟೆ ?

ಹೀಗೆ ಅಹಂಕರ್ತೃತ್ವವೇ ಮುಂತಾದ ಕ್ರಿಯಾಕಾರಕಫಲಾತ್ಮಕವಾದ ಲೋಕವ್ಯವಹಾರವು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಆತ್ಮನಲ್ಲಿ ಅಧ್ಯಸ್ತವಾಗಿರುತ್ತದೆ. ಆದ್ದರಿಂದ ಅಂಥ[1] ಬ್ರಹ್ಮಾತ್ಮನ ಅನುಭವದಲ್ಲಿ ಕೊನೆಗಾಣುವ ಜ್ಞಾನದಿಂದ ಅನರ್ಥಕ್ಕೆ ಕಾರಣವಾಗಿರುವ ಅಧ್ಯಾಸವು ನಿವೃತ್ತವಾಗಬಹುದಾಗಿದೆಯಾಗಿ[2], ಆ ಪ್ರಯೋಜನವೂ ವಿಷಯವೂ[3] ಇರುವ ವೇದಾಂತ ಮೀಮಾಂಸೆಯನ್ನು ಪ್ರಾರಂಭಮಾಡಿರುವದು ಹೊಂದುತ್ತದೆ.

## ೩. ಅಧ್ಯಾಸಲಕ್ಷಣಭಾಷ್ಯ

**ಆಹ– ಕೋಽಯಮಧ್ಯಾಸೋ ನಾಮೇತಿ ? ಉಚ್ಯತೇ । ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ ॥**

### ಲಕ್ಷಣಸಂಭಾವನಾಭಾಷ್ಯದ ಆವಶ್ಯಕತೆ

(ಪಂಚಪಾದಿಕಾ)

೯. **'ಆಹ – ಕೋಽಯಮಧ್ಯಾಸೋ ನಾಮ ?'** ಇತ್ಯಾದ್ಯಾರಭ್ಯ ಅಧ್ಯಾಸಸಿದ್ಧಿಪರಂ ಭಾಷ್ಯಮ್, ತತ್ರಾಪಿ **'ಕಥಂ ಪುನರವಿದ್ಯಾವದ್ವಿಷಯಾಣಿ'** ಇತ್ಯತಃ ಪ್ರಾಕ್ ಅಧ್ಯಾಸಸ್ವರೂಪತತ್ಸಂಭಾವನಾಯ; ತದಾದಿ ತತ್ಸದ್ಭಾವನಿರ್ಣಯಾರ್ಥಮ್– ಇತಿ ವಿಭಾಗಃ। ಯದ್ಯೇವಮ್, ತತ್ಸ್ವರೂಪತತ್ಸಂಭಾವನೋಪನ್ಯಾಸಃ ಪೃಥಗ್ ನ ಕರ್ತವ್ಯಃ। ನ ಹಿ ಅನಿರ್ಜ್ಞಾತರೂಪಮ್ ಅಸಂಭಾವ್ಯಮಾನಂ ಚ ನಿರ್ಣೀಯತೇ ಚ ಇತಿ ದುಃಸಂಪಾದಮ್[4] ವಿಶೇಷತೋಽಧ್ಯಕ್ಷಾನುಭವನಿರ್ಣಯೇ। ಉಚ್ಯತೇ। ನ ದೇಹೇನ್ದ್ರಿಯಾದಿಷು ಅಹಂಮಮಾಭಿಮಾನವತ ಏವ ಪ್ರಮಾತೃತ್ವಪ್ರದರ್ಶನಮಾತ್ರೇಣ ತಸ್ಯ ಅಧ್ಯಾಸಾತ್ಮಕತಾ ಸಿಧ್ಯತಿ।

---

1. ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ.
2. ಅಹಂಕಾರಾದಿಗಳೆಲ್ಲ ಹುಸಿ, ಆತ್ಮನಿಗೆ ಸೇರಿಲ್ಲ ಎಂದಾಗುತ್ತದೆ.
3. ಅನರ್ಥಕ್ಕೆ ಕಾರಣವಾದ ಅಧ್ಯಾಸವು ಹೋಗುವದೇ ಪ್ರಯೋಜನ; ಬ್ರಹ್ಮವೇ ನಾನು ಎಂಬ ಆತ್ಮೈಕತ್ವವು ವಿಷಯವು. ಇದರ ಜ್ಞಾನವು ಶಾಸ್ತ್ರದಿಂದ ಆಗುತ್ತದೆಯಾದ್ದರಿಂದ ವೇದಾಂತಮೀಮಾಂಸಾಶಾಸ್ತ್ರವನ್ನು ಪ್ರಾರಂಭಿಸಿದ್ದು ಸರಿ ಎಂದು ಅಭಿಪ್ರಾಯ.
4. ಈ ವಾಕ್ಯವು ಏನೋ ಹೆಚ್ಚುಕಡಿಮೆಯಾಗಿರುವಂತೆ ತೋರುತ್ತದೆ.

ತತ್ ಕಸ್ಯ ಹೇತೋಃ ? ಲೋಕೇ ಶುಕ್ತಿರಜತದ್ವಿಚನ್ದ್ರಾದಿವತ್ ಅಧ್ಯಾಸಾನುಭವಾಭಾವಾತ್। ಬಾಧೇ ಹಿ ಸತಿ ಸ ಭವತಿ ; ನೇಹ ಸ ವಿದ್ಯತೇ। ತಸ್ಮಾದ್, ಅಧ್ಯಾಸಸ್ಯ ಲಕ್ಷಣಮ್ ಅಭಿಧಾಯ ತಲ್ಲಕ್ಷಣವ್ಯಾಪ್ತಸ್ಯ ಸದ್ಭಾವಃ ಕಥನೀಯಃ ॥

ನನ್ವೇವಮಪಿ ತಲ್ಲಕ್ಷಣಸ್ಯ ವಸ್ತುನಃ ಸದ್ಭಾವಮಾತ್ರಮ್ ಇಹ ಕಥನೀಯಮ್। ನ ಹಿ ಯತ್ರ ಯಸ್ಯ ಸದ್ಭಾವಃ ಪ್ರಮಾಣತಃ ಪ್ರತಿಪನ್ನಃ, ತತ್ರೈವ ತಸ್ಯ ಅಸಂಭಾವನಾಶಙ್ಕಾ, ಯೇನ ತದ್ವಿನಿವೃತ್ತಯೇ ತತ್ಸಂಭಾವನಾ ಅಪರಾ ಕಥ್ಯೇತ। ಸತ್ಯಮೇವಮ್ । ವಿಷಯವಿಶೇಷಸ್ತು ಪ್ರಯತ್ನೇನ ಅನ್ವಿಚ್ಛದ್ಭಿರಪಿ ಅನುಪಲಭ್ಯಮಾನಕಾರಣದೋಷೇ ವಿಜ್ಞಾನೇ, ಅವಭಾಸಮಾನೋಽಪಿ ಪೂರ್ವಪ್ರವೃತ್ತೇನ ಸಕಲಲೋಕವ್ಯಾಪಿನಾ ನಿಶ್ಚಿತೇನ ಪ್ರಮಾಣೇನ ಅಸಂಭಾವ್ಯಮಾನತಯಾ ಅಪೋದ್ಯಮಾನೋ ದೃಶ್ಯತೇ । ತದ್ಯಥಾ- ಔತ್ಪಾತಿಕಃ ಸವಿತರಿ ಸುಷಿಃ, ಯಥಾ ವಾ ಮಾಹೇನ್ದ್ರಜಾಲಕುಶಲೇನ ಪ್ರಾಸಾದಾದೇರ್ನಿಗರಣಮ್ । ಏವಮ್ ಅವಿಷಯೇ, ಅಸಙ್ಗೇ, ಕೇನಚಿದಪಿ ಗುಣಾದಿನಾ ಅಧ್ಯಾಸಹೇತುನಾ ರಹಿತೇ ನಿಷ್ಕಲಙ್ಕಚೈತನ್ಯತಯಾ ಅನ್ಯಗತಸ್ಯಾಪಿ ಅಧ್ಯಾಸಸ್ಯ ಅಪನೋದನಸಮರ್ಥೇ ಅಧ್ಯಾಸಾವಗಮಃ, ಅವಿಭಾವ್ಯಮಾನಕಾರಣದೋಷೋ ವಿಭ್ರಮಃ -ಇತ್ಯಾಶಙ್ಕ್ಯೇತ। ತಸ್ಮಾ ಶಙ್ಕಾ ಇತಿ ಸದ್ಭಾವಾತಿರೇಕೇಣ ಸಂಭವೋಽಪಿ ಪೃಥಕ್ ಕಥನೀಯಃ । ತದುಚ್ಯತೇ ॥

(ಅರ್ಥ)

**'ಆಹ-ಕೋಽಯಮಧ್ಯಾಸೋ ನಾಮ?'** (ಪೂರ್ವಪಕ್ಷಿ ಕೇಳುತ್ತಾನೆ: ಈ ಅಧ್ಯಾಸವೆಂಬುದು ಯಾವದು ?) ಎಂದು ಮೊದಲಾಗಿರುವ (ವಾಕ್ಯ)ದಿಂದ ಹಿಡಿದು (ಮುಂದಕ್ಕೆ ಇರುವ) ಭಾಷ್ಯವು ಅಧ್ಯಾಸಸಿದ್ಧಿಪರವಾದದ್ದು. ಅದರಲ್ಲಿಯೂ 'ಕಥಂ ಪುನರವಿದ್ಯಾವದ್ವಿಷಯಾಣಿ' (ಪ್ರಮಾಣಗಳೂ ಶಾಸ್ತ್ರಗಳೂ ಅವಿದ್ಯಾವಂತರ ವಿಷಯವಾದವು ಎಂಬುದು ಹೇಗೆ ?) ಎಂಬುದಕ್ಕಿಂತ ಹಿಂದಿರುವ (ಭಾಷ್ಯವು) **ಅಧ್ಯಾಸದ ಸ್ವರೂಪ, ಅದರ ಸಂಭಾವನೆ**- (ಇವುಗಳ)ಗಾಗಿ ಬರೆದದ್ದು ; ಅಲ್ಲಿಂದ ಮೊದಲಾಗಿರುವದು ಅದು ಇದೆ ಎಂಬುದನ್ನು ನಿರ್ಣಯಿಸುವದಕ್ಕಾಗಿ (ಬರೆದದ್ದು)- ಎಂದು (ಗ್ರಂಥದ) ವಿಭಾಗ.

(ಆಕ್ಷೇಪ) :— ಹೀಗಾದರೆ, ಅದರ ಸ್ವರೂಪ, ಅದರ ಸಂಭಾವನೆ -ಇವುಗಳನ್ನು ಬೇರೆಯಾಗಿ ಹೇಳಬೇಕಾದದ್ದಿಲ್ಲ. ಏಕೆಂದರೆ, (ಯಾವದರ) ರೂಪವು ಗೊತ್ತಾಗಿಲ್ಲವೋ, (ಯಾವದು) ಸಂಭಾವಿತವಾಗಿಯೂ ಇಲ್ಲವೋ, ಅದನ್ನು ನಿರ್ಣಯಿಸುತ್ತಾರೆಂಬುದು ಇಲ್ಲವಷ್ಟೆ[1] ? ಅದರಲ್ಲಿಯೂ ಪ್ರತ್ಯಕ್ಷಾನುಭವದಿಂದ

1. ಆದ್ದರಿಂದ ನಿರ್ಣಯಿಸುವದರಿಂದಲೇ ಸ್ವರೂಪಸಂಭಾವನೆಗಳೂ ಸಿದ್ಧವಾಗುವವಲ್ಲ !

ನಿರ್ಣಯವಾಗಿರುವಾಗ (ಇದು) ಹೊಂದುವದೇ ಇಲ್ಲವಲ್ಲ[1] !

(ಪರಿಹಾರ) :— ಹೇಳುತ್ತೇವೆ. ದೇಹೇಂದ್ರಿಯಾದಿಗಳಲ್ಲಿ ನಾನುನನ್ನದೆಂಬ ಅಭಿಮಾನವಿರುವಾತನಿಗೇ ಪ್ರಮಾತೃತ್ವ(ವೆಂದು) ತೋರಿಸಿಕೊಟ್ಟಮಾತ್ರದಿಂದ ಅದು ಅಧ್ಯಾಸವೆಂದು ಸಿದ್ಧಿಯಾಗುವದಿಲ್ಲ. ಇದು ಯಾವ ಕಾರಣದಿಂದ ? ಎಂದರೆ ಲೋಕದಲ್ಲಿ ಶುಕ್ತಿರಜತ, ದ್ವಿಚಂದ್ರ– ಮುಂತಾದವುಗಳಂತೆ ಅಧ್ಯಾಸ ವೆಂಬ ಅನುಭವವಿಲ್ಲದ್ದರಿಂದ. ಬಾಧವಾದರಲ್ಲವೆ, ಅದಾಗುವದು ? ಇಲ್ಲಿ (ಬಾಧ)ವಿರುವದಿಲ್ಲ. ಆದ್ದರಿಂದ ಅಧ್ಯಾಸದ ಲಕ್ಷಣವನ್ನು ಹೇಳಿ, ಆ ಲಕ್ಷಣ ದಿಂದ ವ್ಯಾಪ್ತವಾಗಿರುವ (ಆತ್ಮಾನಾತ್ಮಾಧ್ಯಾಸವು) ಇದೆ ಎಂದು ಹೇಳಬೇಕು.[2]

(ಆಕ್ಷೇಪ) :— ಹೀಗಾದರೂ ಆ ಲಕ್ಷಣವುಳ್ಳ (ಅಧ್ಯಾಸ)ವಸ್ತುವಿನ ಸದ್ಭಾವವನ್ನು ಮಾತ್ರ ಇಲ್ಲಿ ಹೇಳಬೇಕು. ಏಕೆಂದರೆ ಎಲ್ಲಿ ಯಾವದರ ಇರವು ಪ್ರಮಾಣದಿಂದ ತಿಳಿದುಬಂದಿರುವದೋ ಅಲ್ಲಿಯೇ ಅದು ಇರಲಾರದೆಂಬ ಶಂಕೆ ಯಿರುವದಿಲ್ಲವಷ್ಟೆ ? (ಆ ಶಂಕೆ)ಯಿದ್ದರಲ್ಲವೆ, ಅದನ್ನು ತೊಲಗಿಸುವದಕ್ಕಾಗಿ ಅದರ ಸಂಭಾವನೆಯನ್ನು ಬೇರೆಯಾಗಿ ಹೇಳಬೇಕು ?

(ಪರಿಹಾರ) :—ನಿಜ, ಹೀಗೆಯೇ (ಸರಿ). ಆದರೆ ಒಂದೊಂದು ವಿಷಯವು ಪ್ರಯತ್ನದಿಂದ ಹುಡುಕಿದಮೇಲೂ ಕಾರಣದೋಷವು ಕಾಣದ ಜ್ಞಾನದಲ್ಲಿ ತೋರಿಬಂದರೂ ಮೊದಲು ಪ್ರವೃತ್ತವಾಗಿದ್ದ ಸರ್ವಲೋಕವ್ಯಾಪಿಯಾದ ನಿಶ್ಚಿತ ವಾದ ಪ್ರಮಾಣದಿಂದ ಅಸಂಭಾವಿತವೆಂದು ಅಲ್ಲಗಳೆಯುವದು ಕಂಡುಬರುತ್ತದೆ. ಉದಾಹರಣೆಗೆ ಸೂರ್ಯನಲ್ಲಿ ಕಾಣಬರುವ ಉತ್ಪಾತಸೂಚಕವಾದ ರಂಧ್ರ, ಅಥವಾ ಮಾಹೇಂದ್ರಜಾಲ(ವಿದ್ಯೆಯಲ್ಲಿ) ಕುಶಲನಾದವನು ಅರಮನೆಯೇ ಮುಂತಾದದ್ದನ್ನು ನುಂಗುವದು– (ಇವನ್ನು ಕಂಡರೂ ಜನರು ಹಿಂದಿನ ಪ್ರಮಾಣಬಲದಿಂದ ಅಲ್ಲಗಳೆ

---

1. ಅನುಭವದಿಂದ ನಿರ್ಣಯವಾದದ್ದಕ್ಕೆ ಸ್ವರೂಪವನ್ನೂ ಸಂಭಾವನೆಯನ್ನೂ (ಅದು ಇರಬೇಕೆಂಬುದನ್ನು) ತೋರಿಸಿಕೊಡಬೇಕಾದದ್ದೇಕೆ ? ಎಂದಭಿಪ್ರಾಯ. 'ವಿಶೇಷತಃ' ಎಂಬ ಮಾತಿಗೆ (ಅದರಲ್ಲಿಯೂ ಎಂದರ್ಥವನ್ನು ಕೊಡದೆ) ಅಸಾಧಾರಣರೂಪದಿಂದ (ನಿರ್ಣಯ ವಾಗಿರುವದರಿಂದ) ಎಂಬರ್ಥವನ್ನು ಪಂ.ವಿ.ದಲ್ಲಿ ತೆಗೆದಿದೆ. ಇದು ಅಧ್ಯಾಸವೆಂಬುದು ಹೇಗೆ ? ಎಂಬ ಪ್ರಶ್ನೆ ಏಳಬಹುದು– ಎಂದಭಿಪ್ರಾಯವಿರಬಹುದು. ಭಾಷ್ಯದಲ್ಲೇನೋ ಈ ಆಕ್ಷೇಪಕ್ಕೆ ಉತ್ತರವು ಸೇರಿದೆ ಎಂದು ತೋರುತ್ತದೆ.

2. ಶುಕ್ತಿರಜತಾದ್ಯಧ್ಯಾಸಗಳಿಗೂ ಆತ್ಮಾನಾತ್ಮಾಧ್ಯಾಸಕ್ಕೂ ಸಮಾನವಾಗಿರುವ ಅಧ್ಯಾ ಸದ ಲಕ್ಷಣವನ್ನು ಹೇಳಿದಮೇಲೆಯೇ ಆತ್ಮಾನಾತ್ಮಗಳಲ್ಲಿ ಅಂಥ ಅಧ್ಯಾಸವಾಗಿದೆ ಎಂದು ತೋರಿಸಬೇಕು.

ಯುತ್ತಾರೆ).[1] ಹೀಗೆಯೇ ಅವಿಷಯನಾದ[2] ಅಸಂಗನಾದ[3], ಅಧ್ಯಾಸಕ್ಕೆ ಕಾರಣ ವಾದ ಯಾವ ಗುಣಗಳೂ ಇಲ್ಲದ[4], ನಿಷ್ಕಲಂಕಚೈತನ್ಯನಾಗಿರುವದರಿಂದ[5] ಮತ್ತೊಂದರಲ್ಲಿರುವ ಅಧ್ಯಾಸವನ್ನುಕೂಡ ನೀಗಲು ಸಮರ್ಥನಾಗಿರುವ ಆತ್ಮನಲ್ಲಿ ಅಧ್ಯಾಸವಾಗಿದೆಯೆಂದು ತೋರಿದರೂ ಕಾರಣದೋಷವು[6] ತೋರದ್ದರಿಂದ ಇದು ಭ್ರಾಂತಿ ಎಂದು ಆಶಂಕೆಮಾಡಬಹುದಾಗಿರುತ್ತದೆ. ಅದನ್ನು ಆಶಂಕೆಮಾಡದಿರಲಿ- ಎಂದು ಸದ್ಭಾವವನ್ನಲ್ಲದೆ ಸಂಭವವನ್ನೂ ಬೇರೆಯಾಗಿ ಹೇಳಬೇಕು. (ಆದ್ದರಿಂದ) ಅದನ್ನು ಹೇಳಿರುತ್ತದೆ.[7]

## ಲಕ್ಷಣವಾಕ್ಯದ ವಿಷಯಕ್ಕೆ ಪ್ರಶ್ನೆ ಮತ್ತು ಆಕ್ಷೇಪ

(ಪಂಚಪಾದಿಕಾ)

೧೦. 'ಆಹ-ಕೋಽಯಮಧ್ಯಾಸೋ ನಾಮ ?' ಇತಿ । ಕಿಂ ವೃತ್ತಸ್ಯ ಪ್ರಶ್ನೇ, ಆಕ್ಷೇಪೇ ಚ ಪ್ರಯೋಗದರ್ಶನಾತ್, ಉಭಯಸ್ಯ ಚ ಇಹ ಸಂಭವಾತ್, ತನ್ತ್ರೇಣ ವಾಕ್ಯಮ್ ಉಚ್ಚರಿತಮ್ । ತತ್ರಾಪಿ ಪ್ರಥಮಂ ಪ್ರಶ್ನಸ್ಯ ಪ್ರತಿವಚನಂ ಸ್ವರೂಪಮ್ ಆಖ್ಯಾಯ, ಪುನಸ್ತಸ್ಯೈವ ಸಂಭವಮ್ ಆಕ್ಷಿಪ್ಯ ಪ್ರತಿವಿಧತ್ತೇ । ತತ್ರ ಏವಂಭೂತೇ ವಿಷಯೇ ಶ್ರೋತೄಣಾಂ ಸುಖಪ್ರಬೋಧಾರ್ಥಂ ವ್ಯಾಚಕ್ಷಾಣಾಃ, ಪ್ರತಿವಾದಿನಂ ತತ್ರಸ್ಥಮಿವ ಸಮುತ್ಥಾಪ್ಯ, ತೇನ ಆಕ್ಷಿಪ್ತಮ್, ಅನೇನ ಪೃಷ್ಟಮಿತಿ ಮತ್ವಾ ಪ್ರತ್ಯುಕ್ತಮ್ ; ಪುನರಸೌ ಸ್ವಾಭಿಪ್ರಾಯಂ ವಿವೃಣೋತಿ- ಇತಿ ಆಕ್ಷೇಪಮ್ ಅವತಾರ್ಯ ಪ್ರತಿವಿಧಾನಂ ಪ್ರತಿಪದ್ಯನ್ತೇ । ಸರ್ವತ್ರ ಏವಂ ವಿಧೇ ಗ್ರನ್ಥಸಂನಿವೇಶೇ ಏಷ ಏವ ವ್ಯಾಖ್ಯಾಪ್ರಕಾರಃ ॥

(ಅರ್ಥ)

**ಆಹ-ಕೋಽಯಮಧ್ಯಾಸೋ ನಾಮ ?** (ಪೂರ್ವಪಕ್ಷಿ ಹೇಳುತ್ತಾನೆ : ಈ ಅಧ್ಯಾಸವೆಂಬುದು ಯಾವದು?) ಎಂಬಲ್ಲಿ ಯಾವದು?-ಎಂಬ ಮಾತು ಆದದ್ದರ

1. ಸೂರ್ಯನೊಳಗೆ ರಂಧ್ರವಾಗಿದೆ ಎಂದು ಕಂಡರೂ ಅದು ನಿಜವೆಂದು ಯಾರೂ ನಂಬುವದಿಲ್ಲ. ಮಾಯಾವಿಯು ಅರಮನೆಯನ್ನೇ ನುಂಗಿದ್ದು ಕಣ್ಣಿಗೆ ಕಂಡರೂ ನಮಗೆ ಹಾಗೆ ಕಾಣಿಸುತ್ತಿದೆ ಎನ್ನುತ್ತಾರೆ ; ನಿಜವಾಗಿ ನುಂಗಿದ್ದಾನೆ ಎಂದು ನಂಬುವದಿಲ್ಲ.

2. ಅಧಿಷ್ಠಾನವೂ ಆರೋಪ್ಯವೂ ಒಂದೇ ಜ್ಞಾನಕ್ಕೆ ವಿಷಯವಾಗಬೇಕು, ಆದರೆ ಆತ್ಮನು ವಿಷಯನಲ್ಲ.

3. ದ್ರಷ್ಟೃವಾದ ಆತ್ಮನಲ್ಲಿ ದೋಷವಿಲ್ಲದ್ದರಿಂದಲೂ ಅಧ್ಯಾಸವಾಗಿರಲಾರದು.

4. ಸಾದೃಶ್ಯವೇ ಮುಂತಾದ ಕಾರಣವಿಲ್ಲದ್ದರಿಂದ ಅಧ್ಯಾಸವಾಗಿರಲಾರದು.

5. ಅಧಿಷ್ಠಾನವು ಸ್ಪಷ್ಟವಾಗಿ ತೋರುತ್ತಿರುವದರಿಂದ ಅಧ್ಯಾಸವಾಗುವಹಾಗಿಲ್ಲ.

6. ಅಧ್ಯಾಸಕ್ಕೆ ಕಾರಣದೋಷವಿರಬೇಕೆಂದು ಮೀಮಾಂಸಕರ ಮತ. ಇಲ್ಲಿ ಅದಿಲ್ಲ ವೆಂದು ಭಾವ. ಇದು ಮುಂದೆ ಸ್ಪಷ್ಟವಾಗುವದು.

7. ಲಕ್ಷಣದ ಸಂಭಾವನಾಪ್ರಮಾಣಗಳನ್ನು.

ಪ್ರಶ್ನೆ ಮತ್ತು ಆಕ್ಷೇಪ (ಈ ಎರಡ)ರಲ್ಲಿಯೂ ಪ್ರಯೋಗವಾಗುವದು ಕಂಡಿರುವದರಿಂದಲೂ, ಎರಡೂ ಇಲ್ಲಿ ಆಗಬಹುದಾಗಿರುವದರಿಂದಲೂ ವಾಕ್ಯವನ್ನು ತಂತ್ರದಿಂದ[1] ಉಚ್ಚರಿಸಿದೆ. ಆದರಲ್ಲಿಯೂ ಮೊದಲು ಪ್ರಶ್ನೆಗೆ ಉತ್ತರವಾಗಿ ಸ್ವರೂಪವನ್ನು ಹೇಳಿ, ಮತ್ತೆ ಅದೇ ಸಂಭವಿಸುವದಿಲ್ಲವೆಂದು ಆಕ್ಷೇಪಿಸಿ ಸಮಾಧಾನ ಮಾಡುತ್ತಾರೆ. ಇಲ್ಲಿ ಇಂಥ ವಿಷಯದಲ್ಲಿ ಶ್ರೋತೃಗಳಿಗೆ ಸುಲಭವಾಗಿ ತಿಳಿಯುವದಕ್ಕಾಗಿ, ವ್ಯಾಖ್ಯಾನಮಾಡುವವರು ಪ್ರತಿವಾದಿಯು ಅಲ್ಲಿಯೇ ಇರುವಂತೆ ಕಲ್ಪಿಸಿ, 'ಅವನು ಆಕ್ಷೇಪಿಸಿದನು ; ಕೇಳಿದನೆಂದು ಭಾವಿಸಿ ಇವನು ಉತ್ತರವನ್ನು ಕೊಟ್ಟನು, ಮತ್ತೆ ಅವನು ತನ್ನ ಅಭಿಪ್ರಾಯವನ್ನು ವಿವರಿಸುತ್ತಾನೆ'– ಎಂದು ಆಕ್ಷೇಪವನ್ನು (ಮುಂದಕ್ಕೆ) ತಂದು ಸಮಾಧಾನವನ್ನು ತಿಳಿಯಿಸುತ್ತಾರೆ. ಈ ಬಗೆಯ ಗ್ರಂಥಸಂನಿವೇಶದಲ್ಲಿ ಎಲ್ಲಾ ಕಡೆಯಲ್ಲಿಯೂ ಇದೇ ವ್ಯಾಖ್ಯಾನಮಾಡುವ ಪ್ರಕಾರವು.

## ಲಕ್ಷಣವಾಕ್ಯದ ಅರ್ಥ

### (ಪಂಚಪಾದಿಕಾ)

೧೧. 'ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ' ಇತಿ ಪ್ರಶ್ನವಾಕ್ಯಸ್ಥಿತಮ್ ಅಧ್ಯಾಸಮ್ ಉದ್ದಿಶ್ಯ ಲಕ್ಷಣಂ ವಿಧೀಯತೇ। ತತ್ರ 'ಪರತ್ರ' ಇತ್ಯುಕ್ತೇ ಅರ್ಥಾತ್ ಪರಸ್ಯ ಅವಭಾಸಮಾನತಾ ಸಿದ್ಧಾ। ತಸ್ಯ ವಿಶೇಷಣಂ 'ಸ್ಮೃತಿರೂಪತ್ವಮ್'। ಸ್ಮರ್ಯತೇ ಇತಿ ಸ್ಮೃತಿಃ। ಅಸಂಜ್ಞಾಯಾಮಪಿ ಅಕರ್ತರಿ ಕಾರಕೇ ಘಞಾದೀನಾಂ ಪ್ರಯೋಗದರ್ಶನಾತ್ । ಸ್ಮರ್ಯಮಾಣರೂಪಮಿವ ರೂಪಮ್ ಅಸ್ಯ। ನ ಪುನಃ ಸ್ಮರ್ಯತ ಏವ। ಸ್ಪಷ್ಟಂ ಪುರೋಽವಸ್ಥಿತತ್ವಾವಭಾಸನಾತ್! 'ಪೂರ್ವದೃಷ್ಟಾವಭಾಸಃ' ಇತ್ಯುಪಪತ್ತಿಃ ಸ್ಮೃತಿರೂಪತ್ವೇ। ನ ಹಿ ಪೂರ್ವಮ್ ಅದೃಷ್ಟರಜತಸ್ಯ ಶುಕ್ತಿಸಂಪ್ರಯೋಗೇ ರಜತಮ್ ಅವಭಾಸತೇ। ಯತೋಽರ್ಥಾತ್ ತದ್ವಿಷಯಸ್ಯ ಅವಭಾಸಸ್ಯಾಪಿ ಇದಮೇವ ಲಕ್ಷಣಮ್ ಉಕ್ತಂ ಭವತಿ। ಕಥಮ್ ? ತದುಚ್ಯತೇ। ಸ್ಮೃತೇಃ ರೂಪಮಿವ ರೂಪಮ್ ಅಸ್ಯ; ನ ಪುನಃ ಸ್ಮೃತಿರೇವ। ಪೂರ್ವಪ್ರಮಾಣವಿಷಯವಿಶೇಷಸ್ಯ ತಥಾ ಅನವಭಾಸಕತ್ವಾತ್। ಕಥಂ ಪುನಃ ಸ್ಮೃತಿರೂಪತ್ವಮ್ ? ಪೂರ್ವಪ್ರಮಾಣದ್ವಾರಸಮುತ್ಥತ್ವಾತ್। ನ ಹಿ ಅಸಂಪ್ರಯುಕ್ತಾವಭಾಸಿನಃ ಪೂರ್ವಪ್ರವೃತ್ತತದ್ವಿಷಯಪ್ರಮಾಣದ್ವಾರಸಮುತ್ಥತ್ವಮ್ ಅನ್ತರೇಣ ಸಮುದ್ಭವಃ ಸಂಭವತಿ ॥

### (ಅರ್ಥ)

'ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ' (ಸ್ಮೃತಿರೂಪವಾಗಿದ್ದು ಮತ್ತೊಂದು ಕಡೆಯಲ್ಲಿ ಹಿಂದೆ ಕಂಡದ್ದರ ತೋರುವಿಕೆ) ಎಂದು, (ಈ

1. ಒಂದೇ ಕಾಲಕ್ಕೆ ಎರಡರ್ಥವಾಗುವಂತೆ.

ಅಧ್ಯಾಸವು ಯಾವದು ? ಎಂಬ) ಪ್ರಶ್ನವಾಕ್ಯದಲ್ಲಿರುವ ಅಧ್ಯಾಸವನ್ನು ಉದ್ದೇಶಿಸಿ ಲಕ್ಷಣವನ್ನು ವಿಧಾನಮಾಡಿದೆ.[1] ಇಲ್ಲಿ 'ಮತ್ತೊಂದು ಕಡೆಯಲ್ಲಿ' ಎಂದರೆ 'ಮತ್ತೊಂದರ ತೋರಿಕೆ' ಎಂಬುದು (ತಾನೇ) ಅರ್ಥದಿಂದ ಏರ್ಪಡುತ್ತದೆ. ಅದಕ್ಕೆ 'ಸ್ಮೃತಿರೂಪ'ವಾಗಿರುವದೆಂಬುದು ವಿಶೇಷಣವು. ಸ್ಮರಿಸಲ್ಪಡುವದರಿಂದ ಸ್ಮೃತಿ(ಯೆನಿಸುತ್ತದೆ). ಏಕೆಂದರೆ ಕರ್ತೃವಲ್ಲದ ಕಾರಕವು ಸಂಜ್ಞೆಯಲ್ಲದಿದ್ದರೂ ಘಞ್ (ಮುಂತಾದ) ಪ್ರತ್ಯಯಗಳನ್ನು ಪ್ರಯೋಗಿಸುವದು ಕಂಡುಬರುತ್ತದೆ.[2] ಸ್ಮರಿಸಲ್ಪಡುವ (ವಸ್ತುವಿನ) ರೂಪದಂತೆ ಇದರ ರೂಪವಿರುತ್ತದೆಯೇ ಹೊರತು (ನಿಜವಾಗಿ) ಸ್ಮರಿಸಲ್ಪಡುವದೇ ಅಲ್ಲ ; ಏಕೆಂದರೆ ಸ್ಪಷ್ಟವಾಗಿ ಎದುರಿಗಿದೆ ಎಂದೇ ತೋರುತ್ತಿರುತ್ತದೆ.[3] ಪೂರ್ವದೃಷ್ಟಾವಭಾಸ : (ಹಿಂದೆ ಕಂಡದ್ದರ ತೋರಿಕೆ) ಎಂಬುದು (ಇದು) ಸ್ಮೃತಿರೂಪವಾಗಿರುವದಕ್ಕೆ ಉಪಪತ್ತಿ.[4] ಏಕೆಂದರೆ ಹಿಂದೆ ಬೆಳ್ಳಿಯನ್ನು ಕಾಣದೆಇದ್ದವನಿಗೆ ಶುಕ್ತಿಯು ಕಣ್ಣಿಗೆ ಬಿದ್ದರೆ ಬೆಳ್ಳಿ ಕಾಣಿಸುವದಿಲ್ಲ.[5] ಏಕೆಂದರೆ **ಅರ್ಥವಶದಿಂದ ಆ ವಿಷಯದ ಅವಭಾಸ(ಜ್ಞಾನ)ಕ್ಕೂ ಇದೇ ಲಕ್ಷಣವನ್ನು ಹೇಳಿದಂತಾಗಿದೆ.**[6] ಹೇಗೆ ? ಎಂದರೆ ಅದನ್ನು ಹೇಳುತ್ತೇವೆ, ಸ್ಮೃತಿಯ ರೂಪದಂತೆ ರೂಪವು ಇದಕ್ಕೆ ಇದೆಯೇ ಹೊರತು (ಇದು) ಸ್ಮೃತಿಯೇ ಅಲ್ಲ ; ಏಕೆಂದರೆ ಹಿಂದಿನ ಯಾವದೊಂದು ಪ್ರಮಾಣದ ವಿಷಯವೂ ಹಾಗೆ ತೋರಿಸಿರುವದಿಲ್ಲ.[7] ಹಾಗಾದರೆ (ಇದು) ಸ್ಮೃತಿರೂಪ

1. 'ಅಧ್ಯಾಸವು' ಎಂಬುದು ಉದ್ದೇಶ (Subject), ಈ ವಾಕ್ಯದಲ್ಲಿ ಹೇಳಿರುವದೇ ವಿಧೇಯ (Predicate).

2. ಘಞ್ ಮುಂತಾದ ಪ್ರತ್ಯಯಗಳು ಭಾವಾರ್ಥದಲ್ಲಿಯೇ ಸಾಮಾನ್ಯವಾಗಿ ಪ್ರಯೋಗವಾಗುತ್ತವೆ. ಆದರೆ ಪಾಣಿನಿ ೩-೩-೧೯ರಲ್ಲಿ ಕರ್ತೃವಲ್ಲದ ಕಾರಕವು ಸಂಜ್ಞಾನಾಮವಾದರೆ ಘಞ್ಪ್ರತ್ಯಯವು ಬರುತ್ತದೆ ಎಂದಿದೆ. ಸ್ಮೃತಿ ಎಂಬುದು ಸಂಜ್ಞೆಯಲ್ಲದಿದ್ದರೂ ಇಲ್ಲಿ ಬಂದಿರುವ ಕ್ತಿನ್ (ತಿ ಎಂಬ) ಕೃತ್ಪ್ರತ್ಯಯವನ್ನು ಕರ್ತೃವಲ್ಲದ ಕರ್ಮಾರ್ಥದಲ್ಲಿ ಪ್ರಯೋಗಿಸಿದೆ ಎಂದು ತಿಳಿಯಬೇಕು. ಹೀಗೆ ಪ್ರಯೋಗಿಸುವದುಂಟು ಎಂದರ್ಥ. ಸೂತ್ರದಲ್ಲಿ 'ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂದು ಚಶಬ್ದವಿದೆ ; ಆದ್ದರಿಂದ ಕ್ತಿನ್ ಪ್ರತ್ಯಯವು ಭಾವಾರ್ಥದಲ್ಲಿಯೂ ಕರ್ತೃಭಿನ್ನಕಾರಕಾರ್ಥದಲ್ಲಿಯೂ ಸಂಜ್ಞೆಯನ್ನು ಹೇಳುವದಕ್ಕೂ ಅಸಂಜ್ಞೆಯನ್ನು ಹೇಳುವದಕ್ಕೂ ಪ್ರಯೋಗವಾಗಬಹುದಾಗಿದೆ. (ತ. ಬೋ.)

3. 'ಇದು ಬೆಳ್ಳಿ' ಎಂದು ಎದುರಿಗೆ ಇರುವಂತೆಯೇ ಕಾಣುತ್ತದೆ. 4. ಯುಕ್ತಿ.

5. ಬೆಳ್ಳಿಯನ್ನು ಹಿಂದೆ ನೋಡಿದ ಸಂಸ್ಕಾರವಿದ್ದವನಿಗೇ ಭ್ರಾಂತಿಯು ಬೆಳ್ಳಿ ಕಾಣಿಸುತ್ತದೆ

6. ಅಧ್ಯಾಸವೆಂಬುದು ತಪ್ಪುತಿಳಿವಳಿಕೆಯೆಂದೇ ಭಾಷ್ಯದಲ್ಲಿದ್ದರೂ ತಪ್ಪುತಿಳಿವಳಿಕೆಯಿಂದ ತೋರುವ ಪದಾರ್ಥ- ಎಂಬರ್ಥವನ್ನೇ ಮುಖ್ಯವಾಗಿ ಶಬ್ದವು ಹೇಳುತ್ತದೆಯೆಂದೂ ಅರ್ಥವಶದಿಂದ ಮಿಥ್ಯಾಜ್ಞಾನವೂ ತೋರುತ್ತದೆಯೆಂದೂ ಹೇಳಿರುವದನ್ನು ಲಕ್ಷಿಸಬೇಕು. ಇದು ಈ ಪ್ರಸ್ಥಾನಕ್ಕೆ ಮಾಸಲು.

7. ಇದು ಬೆಳ್ಳಿಯೆಂದು ಹಿಂದಿನ ಪ್ರಮಾಣದಿಂದ ತಿಳಿದುಬಂದಿಲ್ಲ.

ವೆಂಬುದು ಹೇಗೆ? ಎಂದರೆ ಹಿಂದಿನ ಪ್ರಮಾಣದ ದ್ವಾರದಿಂದ ಉಂಟಾಗಿರುವದರಿಂದ. ಸಂಪ್ರಯುಕ್ತವಾಗದ್ದ (ಕಣ್ಣಿಗೆ ಬೀಳದ್ದ)ನ್ನು ತೋರಿಸುವ (ಜ್ಞಾನಕ್ಕೆ) ಹಿಂದೆ ಆ ವಿಷಯದಲ್ಲಿ ತೊಡಗಿದ ಪ್ರಮಾಣದಿಂದ ಉಂಟಾಗದೆ ಜನ್ಮವುಂಟಾಗಲಾರದಷ್ಟೆ?[1]

## ಅಖ್ಯಾತಿವಾದ

### (ಪಂಚಪಾದಿಕಾ)

೧೩. ಅಪರ ಆಹ। ನನು ಅನ್ಯಸಂಪ್ರಯುಕ್ತೇ ಚಕ್ಷುಷಿ ಅನ್ಯವಿಷಯಜ್ಞಾನಂ ಸ್ಮೃತಿರೇವ। ಪ್ರಮೋಷಸ್ತು ಸ್ಮರಣಾಭಿಮಾನಸ್ಯ। ಇನ್ದ್ರಿಯಾಣಾಂ ಜ್ಞಾನಕಾರಣಾನಾಂ ಕೇನಚಿದೇವ ದೋಷವಿಶೇಷೇಣ ಕಸ್ಯಚಿದೇವ ಅರ್ಥವಿಶೇಷಸ್ಯ ಸ್ಮೃತಿಸಮುದ್ಬೋಧಃ ಕ್ರಿಯತೇ। ಸಂಪ್ರಯುಕ್ತಸ್ಯ ಚ ದೋಷೇಣ ವಿಶೇಷಪ್ರತಿಭಾಸಹೇತುತ್ವಂ ಕರಣಸ್ಯ ವಿಹನ್ಯತೇ। ತೇನ ದರ್ಶನಸ್ಮರಣಯೋರ್ನಿರನ್ತರೋತ್ಪನ್ನಯೋಃ ಕರಣದೋಷಾದೇವ ವಿವೇಕಾನವಧಾರಣಾತ್ ದೂರಸ್ಥಯೋರಿವ ವನಸ್ಪತ್ಯೋಃ ಅನುತ್ಪನ್ನೇ ಏವ ಏಕತ್ವಾವಭಾಸೇ ಉತ್ಪನ್ನಭ್ರಮಃ। ನನು ಅನಾಸ್ವಾದಿತತಿಕ್ತರಸಸ್ಯಾಪಿ ಬಾಲಕಸ್ಯ ಪಿತ್ತದೋಷಾತ್ ಮಧುರೇ ತಿಕ್ತಾವಭಾಸಃ ಕಥಂ ಸ್ಮರಣಂ ಸ್ಯಾತ್? ಉಚ್ಯತೇ। ಸ ಜನ್ಮಾನ್ತರಾನುಭೂತತ್ವಾತ್। ಅನ್ಯಥಾ ಅನನುಭೂತತ್ವಾವಿಶೇಷೇ ಅತ್ಯನ್ತಮ್ ಅನನ್ಯೇವ ಕಶ್ಚಿತ್ ಸಪ್ತಮೋ ರಸಃ ಕಿಮಿತಿ ನಾವಭಾಸೇತ? ತಸ್ಮಾತ್, ಪಿತ್ತಮೇವ ಮಧುರಾಗ್ರಹಣೇ ತಿಕ್ತಸ್ಮೃತೌ ತತ್ಪ್ರಮೋಷೇ ಚ ಹೇತುಃ। ಕಾರ್ಯಗಮ್ಯತ್ವಾತ್ ಹೇತುಭಾವಸ್ಯ। ಏತೇನ ಅನ್ಯಸಂಪ್ರಯೋಗೇ ಅನ್ಯವಿಷಯಸ್ಯ ಜ್ಞಾನಸ್ಯ ಸ್ಮೃತಿತ್ವತತ್ಪ್ರಮೋಷೌ ಸರ್ವತ್ರ ವ್ಯಾಖ್ಯಾತೌ ದ್ರಷ್ಟವ್ಯೌ॥

### (ಅರ್ಥ)

ಇಲ್ಲಿ ಮತ್ತೊಬ್ಬ (ವಾದಿ) ಹೇಳುತ್ತಾನೇನೆಂದರೆ ಚಕ್ಷುರಿಂದ್ರಿಯವು ಒಂದರೊಡನೆ ಸಂಯುಕ್ತವಾಗಿರುವಲ್ಲಿ[2] ಮತ್ತೊಂದರ ವಿಷಯದ ಜ್ಞಾನವುಂಟಾದರೆ (ಅದು) ಸ್ಮೃತಿಯೇ. ಆದರೆ ಸ್ಮರಣಾಭಿಮಾನದ ಪ್ರಮೋಷವು ಮಾತ್ರ

1. 'ಪೂರ್ವದೃಷ್ಟಾವಭಾಸಃ' ಎಂಬುದಕ್ಕೆ ಹಿಂದೆ ಕಂಡದ್ದರಂತೆ ಇರುವ ವಸ್ತು ಎಂದು ಅರ್ಥಾಧ್ಯಾಸಲಕ್ಷಣವಾಕ್ಯದಲ್ಲಿ ಅರ್ಥ. ಜ್ಞಾನಾಧ್ಯಾಸದಲ್ಲಿ ಹಿಂದೆ ನೋಡಿದ್ದಂತಿರುವ ಜ್ಞಾನ ಎಂದರ್ಥ. ಹಿಂದೆ ಪ್ರಮಾಣದಿಂದ ನಿಜವಾದ ಬೆಳ್ಳಿಯ ಅನುಭವವುಂಟಾಗಿದ್ದವನಿಗೇ ಈಗ ಭ್ರಾಂತಿಯಿಂದ ಅದರ ನೆನಪು ಆಗಬಹುದು; ಮಿಕ್ಕವರಿಗೆ ಆಗಲಾರದು– ಎಂದು ವಾಕ್ಯಕ್ಕೆ ಅರ್ಥ.

2. ಚಕ್ಷುರಿಂದ್ರಿಯಕ್ಕೂ ಯಾವದಾದರೊಂದು ವಿಷಯಕ್ಕೂ ಸಂಯೋಗವಾದರೆ ಆ ವಿಷಯದ ಜ್ಞಾನವೇ ಆಗಬೇಕಷ್ಟೆ; ಅಂಥ ಸ್ಥಳದಲ್ಲಿ– ಎಂದರ್ಥ.

(ಆಗಿರುತ್ತದೆ).[1] ಜ್ಞಾನಕ್ಕೆ ಕಾರಣವಾಗಿರುವ ಇಂದ್ರಿಯಗಳ ಯಾವದೋ ಒಂದು ದೋಷವಿಶೇಷದಿಂದ ಯಾವದೋ ಒಂದು(ಗೊತ್ತಾದ) ವಿಷಯವಿಶೇಷದ ಸ್ಮೃತಿ ಎದ್ದುಕೊಳ್ಳುತ್ತದೆ. ಕರಣಕ್ಕೆ ಸಂಪ್ರಯುಕ್ತವಾದ (ವಸ್ತುವಿನ) ಗೊತ್ತಾದ ಜ್ಞಾನಕ್ಕೆ ಕಾರಣವಾಗುವದು ದೋಷದಿಂದ ತಪ್ಪಿಹೋಗುತ್ತದೆ. ಇದರಿಂದ ಕಂಡದ್ದು, ಸ್ಮರಿಸಿದ್ದು– ಇವೆರಡೂ ಬಿಡುವಿಲ್ಲದೆ ಉಂಟಾಗುವಲ್ಲಿ, ಕರಣದೋಷದಿಂದಲೇ ವಿಂಗಡಿಸಿ ಗೊತ್ತುಪಡಿಸಿಕೊಳ್ಳದೆ ಇರುವದರಿಂದ– ದೂರದಲ್ಲಿರುವ ಎರಡು ಮರಗಳ (ವಿಷಯದಲ್ಲಿ) ಹೇಗೋ ಹಾಗೇ– ಒಂದೆಂಬ ಜ್ಞಾನವು ಉಂಟಾಗದಿದ್ದರೂ ಹುಟ್ಟಿತೆಂಬ ಭ್ರಮೆಯುಂಟಾಗುತ್ತದೆ.[2]

(ಆಕ್ಷೇಪ): — ಕಹಿರಸವನ್ನು ಸವಿನೋಡದೆ ಇರುವ ಮಗುವಿಗೂ ಪಿತ್ತದೋಷದಿಂದ 'ಸಿಹಿಯಲ್ಲ, ಕಹಿ' ಎಂಬ ಜ್ಞಾನವಾದರೆ (ಅದು) ಹೇಗೆ ಸ್ಮರಣೆಯಾದೀತು ?[3]

(ಪರಿಹಾರ) : — ಹೇಳುತ್ತೇವೆ. (ಅದು) ಜನ್ಮಾಂತರದಲ್ಲಿ ಅನುಭವಿಸಿದ್ದದ್ದರಿಂದ ಆಗುತ್ತದೆ.[4] ಹಾಗಿಲ್ಲದಿದ್ದರೆ ಅನುಭವಿಸದೆ ಇರುವದೆಂಬುದು ಸಮಾನವಾಗಿರುವಲ್ಲಿ ಅತ್ಯಂತವಾಗಿ ಇಲ್ಲದೆಯೇ ಇರುವ ಯಾವದೋ ಒಂದು ಏಳನೆಯ ರಸವು ಏತಕ್ಕೆ ತೋರಿಕೊಳ್ಳಬಾರದು ? ಆದ್ದರಿಂದ ಪಿತ್ತವೇ ಸಿಹಿಯನ್ನು ಗ್ರಹಿಸದೆ ಇರುವದಕ್ಕೂ, ಕಹಿಯ ನೆನಪು ಉಂಟಾಗುವದಕ್ಕೂ, ಆ (ನೆನಪು) ಹಾರಿಹೋಗುವದಕ್ಕೂ ಕಾರಣವು. ಏಕೆಂದರೆ ಕಾರ್ಯದಿಂದಲೇ ಹೇತುವನ್ನು ನಿಶ್ಚಯಿಸಬೇಕಾಗುತ್ತದೆ.[5] ಇದರಿಂದ ಒಂದರ ಸಂಪ್ರಯೋಗವಾದಲ್ಲಿ ಆಗುವ ಅನ್ಯವಿಷಯದ ಜ್ಞಾನವೆಂಬುದು ಎಲ್ಲಾ ಕಡೆಯಲ್ಲಿಯೂ ನೆನಪು ಮತ್ತು ಅದರ ನಾಶ (ಇವುಗಳಿಂದ ಆದದ್ದೆಂದು) ವಿವರಿಸಿ ಹೇಳಿದಂತಾಯಿತೆಂದು ತಿಳಿಯಬೇಕು.[6]

---

1. 'ನೆನಪಾಯಿತು' ಎಂಬ ತಿಳಿವು ಹೋಗಿಬಿಟ್ಟಿರುತ್ತದೆ.

2. ದೂರಕ್ಕೆ ಒಂದೇ ಮರವೆಂದು ಕಂಡಂತೆ ಭ್ರಾಂತಿಯಾಗಿ ಹತ್ತಿರಕ್ಕೆ ಹೋಗಲು ಎರಡು ಮರಗಳಿವು ಎಂದು ಅರಿವಾಗುವದುಂಟು. ಇದರಿಂದ ಈಗ ಆದ ಜ್ಞಾನ, ಹಿಂದಿನ ವಿಷಯದ ನೆನಪು– ಎರಡೂ ಸೇರಿ ಒಂದೇ ಜ್ಞಾನವಾಯಿತೆಂಬ ಭ್ರಾಂತಿಯಾಗುತ್ತದೆ ಎಂದು ಅಭಿಪ್ರಾಯ.

3 ಮಗು ಕಹಿಯನ್ನೇನೂ ಹಿಂದೆ ಅನುಭವಿಸಿಲ್ಲವಷ್ಟೆ ?–ಎಂದು ಆಕ್ಷೇಪಕನ ಭಾವ.

4. ಅನುಭವಿಸದೆ ಎಂದಿಗೂ ನೆನಪಾಗುವದಿಲ್ಲ– ಎಂಬ ನಿಯಮವನ್ನು ಸಾಧಿಸುವದಕ್ಕೆ ಹೀಗೆಂದು ವಾದಿ ಕಲ್ಪಿಸಿರುತ್ತಾನೆ. ಜನ್ಮಾಂತರದ ಸ್ಮರಣೆ ಆಗುವದಿಲ್ಲವೆಂದು ಶಾಬರಭಾಷ್ಯದಲ್ಲಿ ಹೇಳಿರುವದು ಪ್ರಾಯಿಕವಾಗಿ ಆಗುವದಿಲ್ಲ ಎಂಬ ಅಭಿಪ್ರಾಯದಿಂದ ಹೇಳಿದ್ದು ಎಂದು ಭಾವ.

5. ಪಿತ್ತದಿಂದ ಕಹಿಯ ನೆನಪೇ ಏತಕ್ಕೆ ಮಗುವಿಗೆ ಬರಬೇಕು ?– ಎಂದರೆ ಅದಕ್ಕೆ ಅಂಥ ಶಕ್ತಿಯಿದೆ ಎಂದು ಅದರ ಕಾರ್ಯದಿಂದ ಅನುಮಾನಿಸಬೇಕಾಗಿದೆ ಎಂದು ಉತ್ತರವನ್ನು ಹೇಳಿದಂತೆ ಆಯಿತು.

6. ಜನ್ಮಾಂತರದಲ್ಲಿ ಅನುಭವವಾದದ್ದು ಮರೆತುಹೋದದ್ದಕ್ಕೆ ಪಿತ್ತವೇ ಕಾರಣವೆಂದು ಹೇಗೆ ನಿಶ್ಚಯಿಸಿದಿರಿ ?– ಎಂಬ ಪ್ರಶ್ನೆಗೆ ಉತ್ತರವಿದು.

## ಅಖ್ಯಾತಿವಾದದ ಖಂಡನೆ

(ಪಂಚಪಾದಿಕಾ)

೧೩. ಉಚ್ಯತೇ । ಕೋಽಯಂ ಸ್ಮರಣಾಭಿಮಾನೋ ನಾಮ? ನ ತಾವತ್ ಜ್ಞಾನಾನುವಿದ್ಧತಯಾ ಗ್ರಹಣಮ್ । ನ ಹಿ ಅತಿವೃತ್ತಸ್ಯ ಜ್ಞಾನಸ್ಯ ಗ್ರಾಹ್ಯವಿಶೇಷಣತಯಾ ವಿಷಯಭಾವಃ । ತಸ್ಮಾತ್, ಶುದ್ಧಮೇವಾರ್ಥಂ ಸ್ಮೃತಿರವಭಾಸಯತಿ ನ ಜ್ಞಾನಾನುವಿದ್ಧಮ್ । ತಥಾ ಚ ಪದಾತ್ ಪದಾರ್ಥಸ್ಮೃತೌ ನ ದೃಷ್ಟೋ ಜ್ಞಾನಸಂಭೇದಃ, ಜ್ಞಾನಸ್ಯಾಪಿ ಶಬ್ದಾರ್ಥತ್ವಪ್ರಸಙ್ಗಾತ್ । ತಥಾ ಇಷ್ಟಭೂಭಾಗವಿಷಯಾ ಸ್ಮೃತಿಃ 'ಸ ಸೇವ್ಯಃ' ಇತಿ ಗ್ರಾಹ್ಯಮಾತ್ರನಿಷ್ಠಾ, ನ ಜ್ಞಾನಪರಾಮರ್ಶಿನೀ । ಅಪಿ ಚ ಭೂಯಸ್ಯಃ ಜ್ಞಾನಪರಾಮರ್ಶಶೂನ್ಯಾ ಏವ ಸ್ಮೃತಯಃ । ನಾಪಿ ಜ್ಞಾನಸ್ಯ ಸ್ಮರಣಾಭಿಮಾನೋ ನಾಮ ರೂಪಭೇದೋಽವಭಾಸತೇ । ನ ಹಿ ನಿತ್ಯಾನುಮೇಯಂ ಜ್ಞಾನಮ್, ಅನ್ಯದ್ ವಾ ವಸ್ತು 'ಸ್ವತ ಏವ ರೂಪಸಂಭಿನ್ನಂ ಗೃಹ್ಯತೇ । ಅತ ಏವೋಕ್ತಮ್' 'ಅನಾಕಾರಾಮೇವ ಬುದ್ಧಿಮ್ ಅನುಮಿಮೀಮಹೇ' (ಶಾ. ಭಾ. ಜೈ. ಸೂ. ೧-೧-೫) ಇತಿ । ಅನಾಕಾರಾಮ್ ಅನಿರೂಪಿತಾಕಾರವಿಶೇಷಾಮ್, ಅನಿರ್ದಿಷ್ಟಸ್ವಲಕ್ಷಣಾಮ್ ಇತ್ಯರ್ಥಃ । ಅತೋ ನ ಸ್ವತಃ ಸ್ಮರಣಾಭಿಮಾನಾತ್ಮಕತಾ । ನಾಪಿ ಗ್ರಾಹ್ಯವಿಶೇಷನಿಮಿತ್ತಃ ಸ್ಮರಣಾಭಿಮಾನಃ । ಪ್ರಮಾಣಗ್ರಾಹ್ಯಸ್ಯೈವ ಅವಿಕಲಾನಧಿಕಸ್ಯ[1] ಗೃಹ್ಯಮಾಣತ್ವಾತ್ । ನಾಪಿ ಫಲವಿಶೇಷನಿಮಿತ್ತಃ । ಪ್ರಮಾಣಫಲವಿಷಯಮಾತ್ರಾವಚ್ಛಿನ್ನಫಲತ್ವಾತ್ । ಯಃ ಪುನಃ ಕ್ವಚಿತ್ ಕದಾಚಿತ್ ಅನುಭೂತಚರೇ 'ಸ್ಮರಾಮಿ' ಇತ್ಯನುವೇಧಃ, ಸ ವಾಚಕಶಬ್ದಸಂಯೋಜನಾನಿಮಿತ್ತಃ । ಯಥಾ ಸಾಸ್ನಾದಿಮದಾಕೃತೌ ಗೌರಿತ್ಯಭಿಮಾನಃ । ತಸ್ಮಾತ್ ಪೂರ್ವಪ್ರಮಾಣಸಂಸ್ಕಾರಸಮುತ್ಥಿತಯಾ ತದ್ವಿಷಯಾವಭಾಸಿತ್ವಮಾತ್ರಂ ಸ್ಮೃತೇಃ; ನ ಪುನಃ ಪ್ರತೀತಿತೋಽರ್ಥತೋ ವಾ ಅಧಿಕೋಽಂಶೋಽಸ್ತಿ, ಯಸ್ಯ ದೋಷನಿಮಿತ್ತಃ ಪ್ರಮೋಷಃ ಪರಿಕಲ್ಪ್ಯೇತ । ನ ಚೇಹ ಪೂರ್ವಪ್ರಮಾಣವಿಷಯಾವಭಾಸಿತ್ವಮಸ್ತಿ, ಪುರೋಽವಸ್ಥಿತಾರ್ಥಪ್ರತಿಭಾಸನಾತ್- ಇತ್ಯುಕ್ತಮ್ । ಅತೋ ನಾನ್ಯಸಂಪ್ರಯೋಗೇ ಅನ್ಯವಿಷಯಜ್ಞಾನಂ ಸ್ಮೃತಿಃ, ಕಿಂ ತು ಅಧ್ಯಾಸಃ ॥

(ಅರ್ಥ)

(ಸಿದ್ಧಾಂತಿ):- (ಇದಕ್ಕೆ) ಹೇಳುತ್ತೇವೆ. ಈ ಸ್ಮರಣಾಭಿಮಾನವೆಂಬುದು ಯಾವದಿದು? (೧)ಮೊದಲನೆಯದಾಗಿ ಜ್ಞಾನಕ್ಕೆ ಸಂಬಂಧಪಟ್ಟಂತೆ ಗ್ರಹಿಸುವದು[2]

1. 'ಅವಿಕಲಾವಧಿಕಸ್ಯ' ಎಂಬುದಕ್ಕಿಂತ ಈ ಪಾಠವೇ ಮೇಲು.

2. ಹಿಂದೆ ಅರಿತ ವಿಷಯವನ್ನು ನೆನಪಿಗೆ ತಂದುಕೊಳ್ಳುವಾಗ ಆ ವಿಷಯವೇ ನಮ್ಮ ನೆನಪಿಗೆ ವಿಷಯವಾಗಿರುವದೇ ಹೊರತು ಹಿಂದೆ ಆಗಿದ್ದ ಆದರ ಅರಿವೂ ನೆನಪಿಗೆ ವಿಷಯವಾಗುವದಿಲ್ಲ.

ಎಂಬುದಲ್ಲ. ಏಕೆಂದರೆ ಹಿಂದೆ ಆಗಿಹೋಗಿರುವ ಜ್ಞಾನವು ಗ್ರಾಹ್ಯವಾದ ವಿಷಯಕ್ಕೆ ವಿಶೇಷಣವಾಗಿ (ಇಲ್ಲಿ ಸ್ಮರಣೆಗೆ) ವಿಷಯವಾಗಿರುವದಿಲ್ಲ. ಆದ್ದರಿಂದ ಬರಿಯ ವಿಷಯವನ್ನೇ ಸ್ಮೃತಿಯು ತಿಳಿಸುತ್ತದೆಯೇ ಹೊರತು (ಹಿಂದಿನ) ಜ್ಞಾನದಿಂದ ಕೂಡಿದ್ದನ್ನು (ತಿಳಿಸು)ವದಿಲ್ಲ. ಆದ್ದರಿಂದಲೇ ಪದದಿಂದ ಪದದ ಅರ್ಥವನ್ನು ನೆನಪಿಸಿಕೊಳ್ಳುವಾಗ, ಜ್ಞಾನದ ಸಂಮಿಶ್ರಣವೇನೂ ಕಾಣಬಂದಿರುವದಿಲ್ಲ: ಏಕೆಂದರೆ (ಹಾಗಾದರೆ) ಜ್ಞಾನವೂ ಶಬ್ದಕ್ಕೆ ಅರ್ಥವೆಂದಾಗಬೇಕಾದೀತು.[1] ಇದರಂತೆ (ತನಗೆ) ಇಷ್ಟವಾದ ಭೂಭಾಗದ ವಿಷಯವಾದ- 'ಅದನ್ನು (ನಾನು ಸೇವಿಸಬೇಕು' ಎಂದು (ಆಗುವ)- ಸ್ಮೃತಿಯು ಗ್ರಾಹ್ಯವಾದ (ವಿಷಯದಲ್ಲಿ) ಮಾತ್ರವೇ ಇರುವದೇ ಹೊರತು (ಅದರ) ಜ್ಞಾನವನ್ನೇನೂ ತೋರಿಸುವದಿಲ್ಲ. ಇದೂ ಅಲ್ಲದೆ ಎಷ್ಟೋ ಸ್ಮೃತಿಗಳಲ್ಲಿ (ಹಿಂದಿನ) ಜ್ಞಾನದ[2] ಪರಾಮರ್ಶವಿರುವದೇ ಇಲ್ಲ. (೨) ಜ್ಞಾನಕ್ಕೆ ಸ್ಮರಣಾಭಿಮಾನವೆಂಬ ರೂಪವಿಶೇಷವೂ ತನ್ನಲ್ಲಿರುವದು ತೋರುವದೆಂಬುದೂ ಇಲ್ಲ. ನಿತ್ಯಾನುಮೇಯವಾದದ್ದು ಜ್ಞಾನವೇ ಆಗಲಿ, ಮತ್ತೆಯಾವ ವಸ್ತುವೇ ಆಗಲಿ, ತಾನೇ ಆಕಾರದಿಂದೊಡಗೂಡಿ ಕಾಣಬರುವದಿಲ್ಲವಷ್ಟೆ ? ಆದ್ದರಿಂದಲೇ 'ಅನಾಕಾರವಾದ ಬುದ್ಧಿಯನ್ನೇ ಅನುಮಾನಿಸುತ್ತೇವೆ' (ಶಾ. ಭಾ. ೧-೧-೫) ಎಂದು ಶಾಬರಭಾಷ್ಯದಲ್ಲಿ ಹೇಳಿರುತ್ತದೆ. 'ಅನಾಕಾರವಾದ' ಎಂದರೆ ಇಂಥ ಆಕಾರವುಳ್ಳದ್ದು ಎಂದು ಗೊತ್ತಾಗದಿರುವ, ತನ್ನ ಸ್ವರೂಪವು ಗೊತ್ತಾಗದಂತಿರುವ- ಎಂಬರ್ಥ. ಆದ್ದರಿಂದ (ಜ್ಞಾನವು) ಸ್ವತಃ ಸ್ಮರಣಾಭಿಮಾನರೂಪವಾಗಿರುವಂತಿಲ್ಲ. (೩) ಗ್ರಾಹ್ಯವಾದ (ವಿಷಯ)ವಿಶೇಷದ ನಿಮಿತ್ತದಿಂದಲೂ ಸ್ಮರಣಾಭಿಮಾನವಾಗುವಂತಿಲ್ಲ; ಏಕೆಂದರೆ ಪ್ರಮಾಣಕ್ಕೆ ತಿಳಿಯಬರುವ (ವಿಷಯವೇ) ಯಾವ ಹೆಚ್ಚುಕಡಿಮೆಯೂ ಇಲ್ಲದೆ ತಿಳಿಯಬರುತ್ತದೆ. (೪) ಯಾವದಾದರೊಂದು ಫಲದ ನಿಮಿತ್ತದಿಂದ (ಸ್ಮರಣಾಭಿಮಾನವಾಗುವದೆಂಬುದೂ) ಇಲ್ಲ; ಏಕೆಂದರೆ ಪ್ರಮಾಣ, ವಿಷಯ, ಫಲ- ಈ ಮೂರಕ್ಕೇ (ಜ್ಞಾನವು) ಕಟ್ಟುಬಿದ್ದಿರುತ್ತದೆ.[3] ಇನ್ನು ಒಂದೊಂದು ಕಡೆಯಲ್ಲಿ, ಯಾವಾಗಲೋ ಒಮ್ಮೆ ಅನುಭವಿಸಿದ್ದ (ವಿಷಯದಲ್ಲಿ) '(ಅದು) ನನ್ನ ನೆನಪಿಗೆ ಬರುತ್ತಿದೆ' ಎಂದು (ಜ್ಞಾನಕ್ಕೆ) ಸಂಬಂಧವಿರು

---

1. ಒಂದು ಶಬ್ದದ ಜ್ಞಾನವಾದ ಬಳಿಕ, ಅದರ ಅರ್ಥವು ನಮ್ಮ ನೆನಪಿಗೆ ಬರುತ್ತದೆ; ಆಗ ಶಬ್ದದ ಜ್ಞಾನವೂ ಆ ನೆನಪಿಗೆ ವಿಷಯವಾಗಿರುವದಿಲ್ಲ. ಹಾಗೆ ಬರುವದಾಗಿದ್ದರೆ ಶಬ್ದದ ಅರ್ಥವಿದು ಎಂದು ವಿಷಯದಂತೆ ಅದರ ಜ್ಞಾನವನ್ನು ನಾವು ಸೇರಿಸಿಕೊಂಡು ನೆನಪಿಸಿಕೊಳ್ಳುತ್ತಿದ್ದೆವು.

2. ಈ ಪ್ರಕರಣದಲ್ಲಿ ಜ್ಞಾನವೆಂದರೆ ಪೂರ್ವಾನುಭವವೇ.

3. ಅಲ್ಲಿ ಸ್ಮರಣಾಭಿಮಾನವೆಂಬುದೇನೂ ತೋರುವದಿಲ್ಲ.

ವಂತೆ (ಕಾಣುತ್ತದೆಯಷ್ಟೆ)? ಅದು ವಾಚಕಶಬ್ದವನ್ನು ಜೋಡಿಸಿಕೊಂಡದ್ದರಿಂದಾದದ್ದು.[1] ಗಂಗೆದೊಗಲು ಮುಂತಾದದ್ದರಿಂದೊಡಗೂಡಿರುವ ಆಕೃತಿಯಲ್ಲಿ 'ಎತ್ತು' ಎಂಬ ಅಭಿಮಾನದಂತೆಯೇ (ಆ ಸ್ಮರಣಾಭಿಮಾನವು). ಆದ್ದರಿಂದ ಹಿಂದಿನ ಪ್ರಮಾಣದ ಸಂಸ್ಕಾರದಿಂದುಂಟಾಗಿರುವದರಿಂದ, ಆ ವಿಷಯವನ್ನು ತೋರಿಸುವದಷ್ಟೇ ಸ್ಮೃತಿಯೇ ಹೊರತು, ಜ್ಞಾನದಿಂದಲಾಗಲಿ ವಿಷಯದಿಂದಲಾಗಲಿ ಹೆಚ್ಚಿನ ಅಂಶವು ಯಾವದೂ (ಅದಕ್ಕೆ) ಇರುವದಿಲ್ಲ. ಹಾಗಿದ್ದಿದ್ದರೆ ದೋಷನಿಮಿತ್ತದಿಂದ (ಆ ಸ್ಮರಣಾಭಿಮಾನವೆಂಬ ಅಂಶವು) ಹಾರಿಹೋಯಿತೆಂದು ಕಲ್ಪಿಸಬಹುದಾಗಿತ್ತು. ಈ (ಪ್ರಕೃತವಾದ ಜ್ಞಾನದಲ್ಲಿ) ಪೂರ್ವಪ್ರಮಾಣದ ವಿಷಯವನ್ನು ತಿಳಿಸುವದೆಂಬುದೂ ಇಲ್ಲ;[2] ಏಕೆಂದರೆ (ಇದು) ಎದುರಿಗಿರುವ ವಿಷಯವನ್ನೇ ತೋರಿಸುತ್ತದೆ– ಎಂದು ಹೇಳಿದ್ದಾಯಿತು. ಆದ್ದರಿಂದ ಒಂದರ ಸಂಪ್ರಯೋಗವಾದಲ್ಲಿ ಮತ್ತೊಂದರ ವಿಷಯವಾದ ಜ್ಞಾನವು ಸ್ಮೃತಿಯಲ್ಲ, ಮತ್ತೇನೆಂದರೆ ಅಧ್ಯಾಸವೇ.

## ಅಖ್ಯಾತಿವಾದಿಯಿಂದ ಅಧ್ಯಾಸದ ಬಗ್ಗೆ ಕಲ್ಪಾಂತರಗಳ ವಿಮರ್ಶೆ

(ಪಂಚಪಾದಿಕಾ)

೧೪. ನನ್ವೇವಂ ಸತಿ ವೈಪರೀತ್ಯಮಾಪದ್ಯತೇ 'ರಜತಮಿವ ಭಾಸತೇ, ಶುಕ್ತಿರಾಲಮ್ಬನಮ್' ಇತಿ । ನೈತತ್ ಸಂವಿದನುಸಾರಿಣಾಮನುರೂಪಮ್ ।

---

1. ಇಲ್ಲಿಯವರೆಗಿನ ಖಂಡನಯುಕ್ತಿಯ ಅಭಿಪ್ರಾಯವೇನೆಂದರೆ, 'ಸ್ಮರಣೆಯಾಗುತ್ತದೆ, ಸ್ಮರಣೆಯೆಂಬ ಅಭಿಮಾನವು ಇಲ್ಲದೆಹೋಗಿರುತ್ತದೆ' ಎಂಬುದು ಪೂರ್ವಪಕ್ಷವಷ್ಟೆ? ಇದು ಸರಿಯಲ್ಲ; ಏಕೆಂದರೆ ಸ್ಮರಣೆಯಾಗುವಾಗ ಅದರ ಜೊತೆಗೆ ಸ್ಮರಣಾಭಿಮಾನವು– ಇದು ಸ್ಮರಣೆ ಎಂಬ ಅರಿವು– ಇರುವದೇ ಇಲ್ಲ. (೧) 'ಹಿಂದೆ ನಾನು ಇದನ್ನು ಅರಿತಿದ್ದೆನು' ಎಂಬುದೇ ಸ್ಮರಣಾಭಿಮಾನವೆನ್ನುವದಾದರೆ, ಸ್ಮರಣೆಯಲ್ಲಿ ಅದು ಇರುವದಿಲ್ಲವೆನ್ನುವದು ಸ್ಪಷ್ಟ. ಏಕೆಂದರೆ ಸ್ಮರಣೆಯು ವಿಷಯಕ್ಕೆ ಸಂಬಂಧಪಟ್ಟದ್ದೇ ಹೊರತು ಜ್ಞಾನದ ಸ್ಮರಣೆಯಲ್ಲ. (೨) ಈ ಜ್ಞಾನವು ಸ್ಮರಣಾಭಿಮಾನವು– ಎಂದು ಗೊತ್ತಾಗಿ ಹೇಳುವದಕ್ಕೆ ಬರುವದಿಲ್ಲ; ಏಕೆಂದರೆ ಅಖ್ಯಾತಿವಾದಿಯ ಮತದಲ್ಲಿ ಜ್ಞಾನವು ಅನಾಕಾರವಾಗಿದ್ದು ಅನುಮೇಯವಾಗಿರುತ್ತದೆ. ಇದಕ್ಕೆ ಶಾಬರಭಾಷ್ಯದ ಪ್ರಾಮಾಣ್ಯವಿದೆ. (೩) ಸ್ಮರಣೆಗೆ ಯಾವದು ವಿಷಯವಾಗಿದ್ದರೂ ಇದು ಸ್ಮರಣಾಭಿಮಾನದಿಂದ ಕೂಡಿದ ಸ್ಮೃತಿಯ ವಿಷಯವು– ಎಂಬ ವಿಶೇಷರೂಪವೇನೂ ಇರುವದಿಲ್ಲ. ಆದ್ದರಿಂದ ವಿಷಯನಿಮಿತ್ತದಿಂದ ಸ್ಮರಣಾಭಿಮಾನವಾಗುತ್ತದೆ ಎನ್ನುವದಕ್ಕಿಲ್ಲ. (೪) ಹಿಂದಿನ ಶ್ರವಣ, ವಿಷಯ, ಫಲ– ಇವುಗಳಿಂದಾಗಿದ್ದಂತೆಯೇ ಎಂದರೆ ಹಿಂದೆ ಯಾವ ಪ್ರಮಾಣದಿಂದ, ಯಾವ ವಿಷಯವನ್ನು, ಹೇಗೆ ಅರಿತಿದ್ದನೋ ಹಾಗೆಯೇ ಈಗಲೂ ಸ್ಮರಣೆಯ ಫಲವು, ಕೊನೆಯಲ್ಲಾಗುವ ಅರಿವು, ಆಗುವದು. ಆದ್ದರಿಂದ ಫಲನಿಮಿತ್ತದಿಂದಲೂ ಸ್ಮರಣಾಭಿಮಾನವಾಗುವಂತಿಲ್ಲ. ಆದ್ದರಿಂದ ಸ್ಮರಣಾಭಿಮಾನವೆಂಬುದು ಇಲ್ಲವೇ ಇಲ್ಲ.

2. ಸ್ಮರಣೆಯಾಗುವಾಗಲೇ ಸ್ಮರಣಾಭಿಮಾನವಾಗುವದಿಲ್ಲ. ಆದರೆ ಒಂದನ್ನು ಇನ್ನೊಂದೆಂದು ತಿಳಿಯುವದು ಸ್ಮರಣೆಯೇ ಅಲ್ಲ, ಭ್ರಾಂತಿಜ್ಞಾನ; ಹೀಗಿರುವಲ್ಲಿ ಇದರಲ್ಲಿ ಹಿಂದಿನ ಪ್ರಮಾಣದ ವಿಷಯವೆಲ್ಲಿಂದ ಬಂತು? ಇದು ಸ್ಮೃತಿರೂಪವೇ ಹೊರತು ಸ್ಮೃತಿಯಲ್ಲ.

ನನು ಶುಕ್ತೇಃ ಸ್ವರೂಪೇಣಾಪಿ ಅವಭಾಸನೇ ಸಂವಿತ್ಪ್ರಯುಕ್ತವ್ಯವಹಾರಯೋಗ್ಯತ್ವಮೇವಾಲಮ್ಬನಾರ್ಥಃ । ಸೈವ ಇದಾನೀಂ ರಜತವ್ಯವಹಾರಯೋಗ್ಯಾ ಪ್ರತಿಭಾಸತೇ; ತತ್ರ ಕಿಮಿತಿ ಆಲಮ್ಬನಂ ನ ಸ್ಯಾತ್ ? (೧) ಅಥ ತಥಾರೂಪಾವಭಾಸನಂ ಶುಕ್ತೇಃ ಪಾರಮಾರ್ಥಿಕಮ್, ಉತಾಹೋ ನ ? ಯದಿ ಪಾರಮಾರ್ಥಿಕಮ್ 'ನೇದಂ ರಜತಮ್' ಇತಿ ಬಾಧೋ ನ ಸ್ಯಾತ್, 'ನೇಯಂ ಶುಕ್ತಿಃ' ಇತಿ ಯಥಾ। ಭವತಿ ಚ ಬಾಧಃ। ತಸ್ಮಾತ್ ನೈಷ ಪಕ್ಷಃ ಪ್ರಮಾಣವಾನ್ । (೨) ಅಥ ಶುಕ್ತೇರೇವ ದೋಷನಿಮಿತ್ತೋ ರಜತರೂಪಃ ಪರಿಣಾಮ ಉಚ್ಯತೇ । ಏತದಪಿ ಅಸಾರಮ್ । ನ ಹಿ ಕ್ಷೀರಪರಿಣಾಮೋ ದಧನಿ 'ನೇದಂ ದಧಿ' ಇತಿ ಬಾಧೋ ದೃಷ್ಟಃ। ನಾಪಿ 'ಕ್ಷೀರಮಿದಮ್' ಇತಿ ಪ್ರತೀತಿಃ । ಇಹ ತು ತದುಭಯಂ ದೃಶ್ಯತೇ । ಕಿಞ್ಚ, ರಜತರೂಪೇಣ ಚೇತ್ ಪರಿಣತಾ ಶುಕ್ತಿಃ, ಕ್ಷೀರಮಿವ ದಧಿರೂಪೇಣ, ತದಾ ದೋಷಾಪಗಮೇಽಪಿ ತಥೈವ ಅವತಿಷ್ಠೇತ । ನನು ಕಮಲಮುಕುಲವಿಕಾಸಪರಿಣಾಮಹೇತೋಃ ಸಾವಿತ್ರಸ್ಯ ತೇಜಸಃ ಸ್ಥಿತಿಹೇತುತ್ವಮಪಿ ದೃಷ್ಟಮ್ । ತದಪಗಮೇ ಪುನರ್ಮುಕುಲೀಭಾವದರ್ಶನಾತ್ । ತಥಾ ಇಹಾಪಿ ಸ್ಯಾತ್ । ನ। ತಥಾ ಸತಿ ತದ್ವದೇವ ಪೂರ್ವಾವಸ್ಥಾಪರಿಣಾಮಬುದ್ಧಿಃ ಸ್ಯಾತ್, ನ ಬಾಧಪ್ರತೀತಿಃ ಸ್ಯಾತ್। (೩) ಅಥ ಪುನರ್ದುಷ್ಟಕಾರಣಜನ್ಯಾಯಾಃ ಪ್ರತೀತೇರೇವ ರಜತೋತ್ಪಾದ ಇತಿ ಮನ್ಯೇತ। ಏತದಪಿ ನ ಸಮ್ಯಗಿವ ಕಥಮ್ ? ಯಸ್ಯಾಃ ಪ್ರತೀತೇಸ್ತದುತ್ಪಾದಃ। ತಸ್ಯಾಸ್ತಾವತ್ ನ ತದಾಲಮ್ಬನತ್ವಮ್ । ಪೂರ್ವೋತ್ತರಭಾವೇನ ಭಿನ್ನಕಾಲತ್ವಾತ್ । ನ ಪ್ರತೀತ್ಯನ್ತರಸ್ಯ । ಪುರುಷಾನ್ತರಪ್ರತೀತೇರಪಿ ತತ್ಪ್ರಸಙ್ಗಾತ್ । ನನು ಕಿಮಿತಿ ಪುರುಷಾನ್ತರಪ್ರತೀತೇರಪಿ ತತ್ಪ್ರಸಙ್ಗಃ ದುಷ್ಟಸಾಮಗ್ರೀಜನ್ಮನೋ ಹಿ ಪ್ರತೀತೇಃ, ತದಾಲಮ್ಬನಮ್ । ನೈವಮ್ । ಪ್ರತೀತ್ಯನ್ತರಸ್ಯಾಪಿ ತದ್ವಿಧಸ್ಯ ರಜತಾನ್ತರೋತ್ಪಾದನೇನೈವ ಉಪಯುಕ್ತತ್ವಾತ್, ಪ್ರಥಮಪ್ರತ್ಯಯವತ್ । ಅತೋಽನುತ್ಪನ್ನಸಮಮೇವ ಸ್ಯಾತ್। ತದೇವಂ ಪಾರಿಶೇಷ್ಯಾತ್ ಸ್ಮೃತೇಃ ಪ್ರಮೋಷ ಏವಾವತಿಷ್ಠೇತ ॥

(ಅರ್ಥ)

(ಆಕ್ಷೇಪ):—ಹಾಗಾದರೆ 'ಬೆಳ್ಳಿಯು ತೋರುತ್ತದೆ, ಶುಕ್ತಿಯು ವಿಷಯು' ಎಂದು ತಲೆಕೆಳಗಾಗುವದಲ್ಲ ! ಅನುಭವವನ್ನು ಅನುಸರಿಸುವ ವಾದಿಗಳಿಗೆ ಈ (ಮತವು) ತಕ್ಕದ್ದಲ್ಲವಲ್ಲ !

(ಸಿದ್ಧಾಂತಿ) :— ಶುಕ್ತಿಯು ತನ್ನ ರೂಪದಿಂದಲೂ ತೋರಿಕೊಳ್ಳುವಾಗ ಅನುಭವದಿಂದುಂಟಾಗುವ ವ್ಯವಹಾರಕ್ಕೆ ಯೋಗ್ಯವಾಗಿರುತ್ತದೆ- ಎಂಬುದೇ ಆಲಂಬನ(ಶಬ್ದದ) ಅರ್ಥ. ಅದೇ ಈಗ ರಜತವ್ಯವಹಾರಕ್ಕೆ ಯೋಗ್ಯವಾಗಿ ತೋರುತ್ತಿರುತ್ತದೆ; ಹೀಗಿರುವಲ್ಲಿ (ಅದು) ಏತಕ್ಕೆ ಆಲಂಬನವಾಗಬಾರದು ?

(ಅಖ್ಯಾತಿವಾದಿ) :— ಹಾಗಾದರೆ ಆ ರೂಪದಿಂದ ಶುಕ್ತಿಯು ತೋರುವದೆಂಬುದು ಪಾರಮಾರ್ಥಿಕವೊ ಅಲ್ಲವೊ ? (೧) ಪಾರಮಾರ್ಥಿಕವೆಂದರೆ ಇದು ಬೆಳ್ಳಿಯಲ್ಲ ಎಂದು ಬಾಧಿತವಾಗಬಾರದು, 'ಇದು ಶುಕ್ತಿಯಲ್ಲ' ಎಂದು ಹೇಗೆ ಬಾಧವಾಗುವದಿಲ್ಲವೋ ಹಾಗೆಯೇ (ಬಾಧವಾಗಬಾರದು). ಆದರೆ ಬಾಧವೇನೋ ಆಗುತ್ತದೆ ; ಆದ್ದರಿಂದ ಈ ಪಕ್ಷಕ್ಕೆ ಪ್ರಮಾಣವಿಲ್ಲ. (೨) ಹೀಗಲ್ಲದೆ ಶುಕ್ತಿಯೇ ದೋಷದ ನಿಮಿತ್ತದಿಂದ ಬೆಳ್ಳಿಯಾಗಿ ಪರಿಣಮಿಸುತ್ತದೆ ಎನ್ನುವಿರಾದರೆ, ಈ (ಪಕ್ಷದಲ್ಲಿಯೂ) ಸಾರವಿಲ್ಲ. ; ಏಕೆಂದರೆ ಹಾಲಿನ ಪರಿಣಾಮವಾದ ಮೊಸರಿನ (ವಿಷಯ)ದಲ್ಲಿ 'ಇದು ಮೊಸರಲ್ಲ' ಎಂದು ಬಾಧವು ಕಂಡುಬರುವದಿಲ್ಲವಷ್ಟೆ ? ಇದು ಹಾಲೇ ಎಂದೂ ಜ್ಞಾನವಾಗುವದಿಲ್ಲವಷ್ಟೆ ? ಇಲ್ಲಿಯಾದರೂ ಆ ಎರಡೂ[1] ಕಂಡುಬರುತ್ತದೆ. ಇದೂ ಅಲ್ಲದೆ ಹಾಲು ಮೊಸರಿನರೂಪದಿಂದ (ಪರಿಣಾಮವಾಗು)ವಂತೆ ಶುಕ್ತಿಯು ಬೆಳ್ಳಿಯ ರೂಪದಿಂದ ಪರಿಣಾಮವಾಗುವದಾದರೆ ದೋಷವು ಹೋದಮೇಲೂ ಹಾಗೆಯೇ ಇದ್ದುಕೊಂಡಿರಬೇಕು.

(ಪರಿಣಾಮವಾದಿಯ ಆಕ್ಷೇಪ) :— ಕಮಲದ ಮೊಗ್ಗು ಅರಳುವದಕ್ಕೆ ಕಾರಣವಾಗಿರುವ ಸೂರ್ಯನ ಬೆಳಕು (ಆ ಪರಿಣಾಮವು) ಹಾಗೆಯೇ ಇರುವದಕ್ಕೆ ಕಾರಣವಾಗಿರುವದೂ ಕಂಡಿದೆ ; ಏಕೆಂದರೆ (ಆ ಬೆಳಕು) ಹೋಗಲು ಮತ್ತೆ (ಅದು) ಮೊಗ್ಗಾಗುವದೂ ಕಂಡಿದೆಯಲ್ಲ !

(ಅಖ್ಯಾತಿವಾದಿ) :— ಹಾಗಲ್ಲ. ಹಾಗಾದರೆ ಅದರಂತೆಯೇ ಹಿಂದಿನ ಅವಸ್ಥೆಗೆ ಪರಿಣಾಮವಾಯಿತೆಂಬ ಬುದ್ಧಿಯಾಗಬೇಕೇ ಹೊರತು ಬಾಧಿತವಾಯಿತೆಂಬ ಅರಿವು ಆಗಬಾರದಾಗುವದು.

(೩) ಹೀಗೂ ಅಲ್ಲದೆ ದುಷ್ಟಕಾರಣದಿಂದುಂಟಾದ[2] ಜ್ಞಾನದಿಂದಲೇ ಬೆಳ್ಳಿಯು ಹುಟ್ಟುತ್ತದೆ ಎಂದು ಬಗೆಯುವದಾದರೊ ? (ಎಂದರೆ) ಇದೂ ಸರಿಯಾಗಿ (ತೋರುವ)ದಿಲ್ಲ. ಹೇಗೆಂದರೆ, ಯಾವ ಜ್ಞಾನದಿಂದ ಅದು ಉಂಟಾಗುವದೋ, ಆ (ಜ್ಞಾನ)ಕ್ಕಂತೂ ಆ (ಬೆಳ್ಳಿ) ವಿಷಯವಲ್ಲ ; ಏಕೆಂದರೆ (ಒಂದು) ಹಿಂದಿನ, (ಮತ್ತೊಂದು) ಮುಂದಿನ (ಕಾಲಕ್ಕೆ– ಹೀಗೆ ಅವು) ಬೇರೆ ಬೇರೆಯ ಕಾಲಗಳಿಗೆ ಸೇರಿರುತ್ತವೆ.[3] ಮತ್ತೊಂದು ಜ್ಞಾನಕ್ಕೂ (ಆ ಬೆಳ್ಳಿಯು ವಿಷಯ)ವಲ್ಲ ; ಏಕೆಂದರೆ ಮತ್ತೊಬ್ಬ ಮನುಷ್ಯನ ಜ್ಞಾನಕ್ಕೂ (ಅದು) ಹಾಗೆ (ವಿಷಯ)ವಾಗಬೇಕಾಗುವದು.

---

1. "ಇದು ಬೆಳ್ಳಿಯಲ್ಲ" ಎಂದೂ 'ಕಪ್ಪೆಯಚಿಪ್ಪೇ' ಎಂದೂ ಅರಿವಾಗುವದು.

2. ದೋಷಯುಕ್ತವಾದ ಕರಣದಿಂದುಂಟಾಗುವ.

3. ಜ್ಞಾನವುಂಟಾದಮೇಲೆ ಅದರಿಂದ ಬೆಳ್ಳಿಯುಂಟಾಗುತ್ತದೆ. ಆದ್ದರಿಂದ ಬೆಳ್ಳಿಯುಂಟಾಗುವದು ಮುಂದಿನಕಾಲ. 4. ಬೆಳ್ಳಿಯುಂಟಾಗುವಕಾಲಕ್ಕೆ ಇರುವ ಮತ್ತೊಂದು ಜ್ಞಾನಕ್ಕೇ ಅದು ವಿಷಯವಾಗಲಿ !— ಎಂಬ ಶಂಕೆಗೆ ಪರಿಹಾರವಿದು.

(ಆಕ್ಷೇಪ) :—ಮತ್ತೊಬ್ಬ ಮನುಷ್ಯನ ಜ್ಞಾನಕ್ಕೂ (ಅದು) ಹಾಗೆ (ವಿಷಯ)ವಾಗಬೇಕಾಗುವದೆಂಬುದೇಕೆ? ದುಷ್ಟಸಾಮಗ್ರಿಯಿಂದುಂಟಾದ ಜ್ಞಾನಕ್ಕಲ್ಲವೆ, ಆ (ಬೆಳ್ಳಿಯು) ವಿಷಯ(ವೆಂತ ನಾವು ಹೇಳಿರುವದು)[1]?

(ಅಖ್ಯಾತಿವಾದಿ) :—ಹಾಗಲ್ಲ. ಏಕೆಂದರೆ ಮೊದಲನೆಯ ಜ್ಞಾನದಂತೆ ಅಂಥ ಮತ್ತೊಂದು ಜ್ಞಾನವೂ ಮತ್ತೊಂದು ಬೆಳ್ಳಿಯನ್ನುಂಟುಮಾಡುವದರಲ್ಲಿಯೇ ಉಪಯುಕ್ತವಾಗಿರುತ್ತದೆ.[2] ಆದ್ದರಿಂದ (ಬೆಳ್ಳಿಯು) ಹುಟ್ಟದಂತೆಯೇ ಆಗಲಿಲ್ಲ. ಅಂತೂ ಹೀಗೆ ಪರಿಶೇಷನ್ಯಾಯದಿಂದ[3] ಸ್ಮೃತಿಯು ಹಾರಿಹೋಗುವದೆಂಬ (ಮತವೇ) ನಿಲ್ಲುತ್ತದೆ.

## ಸಿದ್ಧಾಂತ: ಶುಕ್ತಿಗತಮಿಥ್ಯಾರಜತವೇ ಭ್ರಾಂತಿಗೆ ವಿಷಯ

(ಪಂಚಪಾದಿಕಾ)

೧೪. ನನು ಸ್ಮೃತೇಃ ಪ್ರಮೋಷೋ ನ ಸಂಭವತಿ ಇತ್ಯುಕ್ತಮ್। ತಥಾ ಚ ತನ್ತ್ರಾನ್ತರೀಯಾ ಆಹುಃ 'ಅನುಭೂತವಿಷಯಾಸಂಪ್ರಮೋಷಾ (?) ಸ್ಮೃತಿಃ' (ಯೋ. ಸೂ. ೧-೧೧) ಇತಿ। ಕಾ ತರ್ಹಿ ಗತಿಃ ಶುಕ್ತಿಸಂಪ್ರಯೋಗೇ ರಜತಾವಭಾಸಸ್ಯ? ಉಚ್ಯತೇ। ನೇನ್ದ್ರಿಯಜಜ್ಞಾನಾತ್ ಸಂಸ್ಕಾರಜಂ ಸ್ಮರಣಂ ಪೃಥಗೇವ ಸ್ಮರಣಾಭಿಮಾನಶೂನ್ಯಂ ಸಮುತ್ಪನ್ನಮ್, ಕಿಂ ತು ಏಕಮೇವ ಸಂಸ್ಕಾರಸಹಿತಾತ್ ಇನ್ದ್ರಿಯಾತ್। ಕಥಮೇತತ್? ಉಚ್ಯತೇ। ಕಾರಣದೋಷಃ ಕಾರ್ಯವಿಶೇಷೇ ತಸ್ಯ ಶಕ್ತಿಂ ನಿರುನ್ಧನ್ನೇವ ಸಂಸ್ಕಾರವಿಶೇಷಮಪಿ ಉದ್ಬೋಧಯತಿ। ಕಾರ್ಯಗಮ್ಯತ್ವಾತ್ ಕಾರಣದೋಷಶಕ್ತೇಃ। ಅತಃ ಸಂಸ್ಕಾರದುಷ್ಟಕಾರಣಸಂಕಲಿತಾ, ಏಕಾ ಸಾಮಗ್ರೀ। ಸಾ ಚ, ಏಕಮೇವ ಜ್ಞಾನಮ್ ಏಕಫಲಂ ಜನಯತಿ। ತಸ್ಯ ಚ ದೋಷೋತ್ಥಾಪಿತಸಂಸ್ಕಾರವಿಶೇಷಸಹಿತಸಾಮಗ್ರೀಸಮುತ್ಪನ್ನಜ್ಞಾನಸ್ಯ ಉಚಿತಮೇವ ಶುಕ್ತಿಗತಮಿಥ್ಯಾರಜತಮ್ ಆಲಮ್ಬನಮ್ ಅವಭಾಸತೇ। ತೇನ ಮಿಥ್ಯಾಲಮ್ಬನಂ ಜ್ಞಾನಂ ಮಿಥ್ಯಾಜ್ಞಾನಮ್, ನ ಸ್ವತೋ ಜ್ಞಾನಸ್ಯ ಮಿಥ್ಯಾತ್ವಮಸ್ತಿ। ಬಾಧಾಭಾವಾತ್ ॥

(ಅರ್ಥ)

(ಸಿದ್ಧಾಂತಿ) :—ಸ್ಮೃತಿಯು ಹಾರಿಹೋಗಲಾರದೆಂದು (ನಾವು) ಹೇಳಿದ್ದೆವಲ್ಲ! ಆದ್ದರಿಂದಲೇ ಬೇರೊಂದು ಶಾಸ್ತ್ರದ (ಅನುಯಾಯಿ)ಗಳೂ 'ಅನುಭೂತ

---

1. ದೋಷವಿಲ್ಲದಿರುವ ಕರಣದಿಂದ ಹುಟ್ಟಿದ ಜ್ಞಾನಕ್ಕೆ ಅದು ಕಾಣಬೇಕಾದದ್ದಿಲ್ಲವಲ್ಲ!

2. ಪ್ರತಿಯೊಂದು ದುಷ್ಟಕರಣಜನ್ಯಜ್ಞಾನಕ್ಕೂ ತನ್ನತನ್ನ ಬೆಳ್ಳಿಯನ್ನುಂಟುಮಾಡುವ ಶಕ್ತಿಯಿರುತ್ತದೆಯಷ್ಟೆ?

3. ಈ ಯಾವ ಪಕ್ಷವೂ ನಿಲ್ಲುವದಿಲ್ಲವಾದ್ದರಿಂದ ಉಳಿದಿರುವ ನಮ್ಮ ಅಖ್ಯಾತಿಮತವೇ ಸರಿಯೆಂದಾಗುತ್ತದೆ ಎಂದು ಅಭಿಪ್ರಾಯ.

ವಿಷಯಾ ಅಸಂಪ್ರಮೋಷಾ ಸ್ಮೃತಿಃ' (ಯೋ. ಸೂ. ೧-೧೧)[1] ಅನುಭವಕ್ಕೆ ವಿಷಯವಾಗಿಯೂ ತೊಲಗಿಹೋಗದೆಯೂ ಇರುವದೇ ಸ್ಮೃತಿ –ಎಂದು ಹೇಳುತ್ತಾರಲ್ಲವೆ ?

(ಅಖ್ಯಾತಿವಾದಿಯ ಪ್ರಶ್ನೆ) :—ಹಾಗಾದರೆ ಶುಕ್ತಿಯನ್ನು (ಇಂದ್ರಿಯದಿಂದ) ನೋಡಿದಾಗ ಬೆಳ್ಳಿ ತೋರುವದಕ್ಕೆ ಗತಿಯೇನು[2] ?

(ಸಿದ್ಧಾಂತಿ) :—ಹೇಳುತ್ತೇವೆ. ಇಂದ್ರಿಯದಿಂದ ಹುಟ್ಟುವ ಜ್ಞಾನಕ್ಕಿಂತ ಬೇರೆಯಾಗಿಯೇ ಸಂಸ್ಕಾರದಿಂದ ನೆನಪೆಂಬ ಅರಿವು ಇಲ್ಲದ ನೆನಪು (ಅಲ್ಲಿ) ಹುಟ್ಟಿರುವದಿಲ್ಲ. ಮತ್ತೇನೆಂದರೆ, ಸಂಸ್ಕಾರದೊಡಗೂಡಿದ ಇಂದ್ರಿಯದಿಂದ ಒಂದೇ (ಜ್ಞಾನವು ಉಂಟಾಗಿರುತ್ತದೆ).

(ಪ್ರಶ್ನೆ) :—ಇದು ಹೇಗೆ ?

(ಉತ್ತರ) :—ಹೇಳುತ್ತೇವೆ. ಕಾರಣದೋಷವು[3] ಆಯಾ ಕಾರ್ಯದಲ್ಲಿ (ಅದರ) ಶಕ್ತಿಯನ್ನು ತಡೆಗಟ್ಟಿಯೇ ಆಯಾ ಸಂಸ್ಕಾರವನ್ನೂ ಎಬ್ಬಿಸುತ್ತದೆ. (ಎನ್ನುತ್ತೇವೆ).[4] ಏಕೆಂದರೆ ಕಾರಣದೋಷದ ಶಕ್ತಿಯನ್ನು ಕಾರ್ಯದಿಂದಲೇ ಗೊತ್ತುಮಾಡಿಕೊಳ್ಳಬೇಕಾಗಿರುತ್ತದೆ.[5] ಆದ್ದರಿಂದ **ಸಂಸ್ಕಾರ ಮತ್ತು ದೋಷಯುಕ್ತಕಾರಣ –ಇವೆರಡೂ ಸೇರಿ ಒಂದೇ ಸಾಮಗ್ರಿ; ಆ (ಸಾಮಗ್ರಿಯು) ಒಂದೇ ಫಲವುಳ್ಳ ಒಂದೇ ಜ್ಞಾನವನ್ನು ಉಂಟುಮಾಡುತ್ತದೆ.** ಆ ದೋಷದಿಂದ ಎದ್ದುಕೊಂಡ ಆ ಸಂಸ್ಕಾರವಿಶೇಷಸಹಿತವಾದ ಸಾಮಗ್ರಿಯಿಂದುಂಟಾದ ಜ್ಞಾನಕ್ಕೆ ಉಚಿತವೇ ಆಗಿರುವ ಶುಕ್ತಿಗತವಾದ **ಮಿಥ್ಯಾರಜತವು**[6] ವಿಷಯವಾಗಿ ಕಾಣಿಸಿಕೊಳ್ಳುತ್ತದೆ. ಹೀಗಿರುವದರಿಂದ

---

1. ಇಲ್ಲಿ ಪಾತಂಜಲಸೂತ್ರಾಕ್ಷರಗಳು ಹೀಗಿವೆ. "ಅನುಭೂತವಿಷಯಾಸಂಪ್ರಮೋಷಃ ಸ್ಮೃತಿಃ". ಮುದ್ರಿತಪುಸ್ತಕದಲ್ಲೇನೋ ಮೇಲೆ ಕೊಟ್ಟಿರುವಂತೆಯೇ ಇದೆ.

2. ಅನುಭವವೂ ಅಲ್ಲದೆ, ನೆನಪೂ ಅಲ್ಲದೆ ಇದ್ದರೆ ಎಂಥ ಜ್ಞಾನವದು ?

3. ಇಂದ್ರಿಯದಲ್ಲಿರುವ ದೋಷವು ಕಣ್ಣುಪರೆ ಮುಂತಾದದ್ದು.

4. ಕಣ್ಣಿನ ದೋಷವು ಕಪ್ಪೆಯಚಿಪ್ಪನ್ನು ತಿಳಿಸದಂತೆ ಮಾಡಿ, ಬೆಳ್ಳಿಯ ಸಂಸ್ಕಾರವನ್ನು ಎಬ್ಬಿಸುತ್ತದೆ.

5. ಹೀಗಾದರೂ ಬೆಳ್ಳಿಯ ಸಂಸ್ಕಾರವೇ ಏತಕ್ಕೆ ಎದ್ದುಕೊಳ್ಳಬೇಕು ? –ಎಂದು ಆಕ್ಷೇಪಿಸಬಾರದು, ಕರಣದೋಷವು ಯಾವ ಕಾರ್ಯವನ್ನುಂಟುಮಾಡುತ್ತದೆ ಎಂಬುದನ್ನು ಮೊದಲೇ ಗೊತ್ತುಮಾಡುವದಕ್ಕೆ ಬರುವದಿಲ್ಲ; ಎಂಥ ಜ್ಞಾನವಾಗುತ್ತದೆಯೋ ನೋಡಿ ಅದಕ್ಕೆ ಆ ಶಕ್ತಿಯಿತ್ತು ಎಂದು ನಿಶ್ಚಯಿಸಬೇಕಾಗುವದು.

6. ಶುಕ್ತಿಯಲ್ಲಿ ಮಿಥ್ಯಾರಜತವು –ಹುಸಿಬೆಳ್ಳಿ–ಇತ್ತೆಂಬುದಕ್ಕೆ ಪ್ರಮಾಣವೇನೂ ಇಲ್ಲವಾದರೂ ಅಂಥ ವಿಲಕ್ಷಣವಾದ ವಸ್ತು ಅಲ್ಲಿತ್ತೆಂದು ಇಲ್ಲಿ ಕಲ್ಪಿಸಿದೆ. ಈ ವಿಷಯಕ್ಕೆ ಮುಂದೆ ಗ್ರಂಥಕಾರರ ಪೂರ್ಣಾಭಿಪ್ರಾಯವು ಸ್ಪಷ್ಟವಾಗಬೇಕಾಗಿದೆ.

ಮಿಥ್ಯಾವಿಷಯವುಳ್ಳದ್ದರಿಂದ ಜ್ಞಾನವು ಮಿಥ್ಯಾಜ್ಞಾನ(ವೆನಿಸುತ್ತದೆ, ಅಷ್ಟೇ ಹೊರತು ಜ್ಞಾನವು ತಾನೇ ಮಿಥ್ಯೆಯಾಗಿರುವದೆಂಬುದಿಲ್ಲ.[1] ಏಕೆಂದರೆ (ಜ್ಞಾನಕ್ಕೆ) ಬಾಧೆಯಿರುವದಿಲ್ಲ.[2]

(ಪಂಚಪಾದಿಕಾ)

೧೫. ಭಿನ್ನಜಾತೀಯಜ್ಞಾನಹೇತುಸಾಮಗ್ರ್ಯೋಃ, ಕಥಮೇಕಜ್ಞಾನೋತ್ಪಾದನಮ್ ಇತಿ ಚೇತ್। ನೈಷ ದೋಷಃ। ದೃಶ್ಯತೇ ಹಿ ಲಿಙ್ಗಜ್ಞಾನಸಂಸ್ಕಾರಯೋಃ ಸಂಭೂಯ ಲಿಙ್ಗಿಜ್ಞಾನೋತ್ಪಾದನಮ್, ಪ್ರತ್ಯಭಿಜ್ಞಾನೋತ್ಪಾದನಂ ಚ। ಅಕ್ಷಸಂಸ್ಕಾರಯೋರುಭಯತ್ರಾಪಿ ಸ್ಮೃತಿಗರ್ಭಮ್ ಏಕಮೇವ ಪ್ರಮಾಣಜ್ಞಾನಮ್। ಸಂಸ್ಕಾರಾನುದ್ಬೋಧೇ ತದಭಾವಾತ್। ತಸ್ಮಾತ್, ಲಿಙ್ಗದರ್ಶನಮೇವ ಸಂಬನ್ಧಜ್ಞಾನಸಂಸ್ಕಾರಮ್ ಉದ್ಬೋಧ್ಯ ತತ್ಸಹಿತಂ ಲಿಙ್ಗಿಜ್ಞಾನಂ ಜನಯತೀತಿ ವಕ್ತವ್ಯಮ್। ಅಯಮೇವ ಚ ನ್ಯಾಯಃ ಪ್ರತ್ಯಭಿಜ್ಞಾನೇಽಪಿ। ನ ಪುನಃ ಜ್ಞಾನದ್ವಯೇ ಪ್ರಮಾಣಮಸ್ತಿ। ತಥಾ ಭಿನ್ನಜಾತೀಯಜ್ಞಾನಹೇತುಭ್ಯೋ ನೀಲಾದಿಭ್ಯ ಏಕಂ ಚಿತ್ರಜ್ಞಾನಂ ನಿದರ್ಶನೀಯಮ್। ತತ್ರ ಲೈಙ್ಗಿಕಜ್ಞಾನಪ್ರತ್ಯಭಿಜ್ಞಾಚಿತ್ರಜ್ಞಾನಾನಾಮ್ ಅದುಷ್ಟಕಾರಣಾರಬ್ಧತ್ವಾತ್ ಯಥಾರ್ಥಮೇವ ಅವಭಾಸಃ। ಇಹ ತು ಕಾರಣದೋಷಾತ್, ಅತಥಾಭೂತಾರ್ಥಾವಭಾಸಃ ಇತಿ ವಿಶೇಷಃ। ಏವಂ ಚ ಸತಿ ನಾನುಭವವಿರೋಧಃ, ಪ್ರತಿಭಾಸಮಾನಸ್ಯ ರಜತಸ್ಯೈವಾ(ವ ?)ಲಮ್ಬನತ್ವಾತ್॥

(ಅರ್ಥ)

(ಅಖ್ಯಾತಿವಾದಿಯ ಆಕ್ಷೇಪ) :—ಬೇರೆಬೇರೆಯ ಜಾತಿಯ ಜ್ಞಾನಕ್ಕೆ ಕಾರಣವಾಗಿರುವ ಸಾಮಗ್ರಿಗಳೆರಡು (ಸೇರಿ) ಒಂದೇ ಜ್ಞಾನವನ್ನುಂಟುಮಾಡಿರುವದು ಹೇಗೆ[3] ?

(ಪರಿಹಾರ) :—ಇದೇನೂ ದೋಷವಲ್ಲ. ಏಕೆಂದರೆ, ಲಿಂಗಜ್ಞಾನ, ಸಂಸ್ಕಾರ-ಇವೆರಡೂ ಒಟ್ಟಾಗಿ ಲಿಂಗಿಜ್ಞಾನವನ್ನುಂಟುಮಾಡುವದೂ[4] ಪ್ರತ್ಯಭಿ

1. ವಿಷಯವು ಸತ್ಯವಾದರೆ ಜ್ಞಾನವೂ ಸತ್ಯ, ಮಿಥ್ಯೆಯಾದರೆ ತಾನೂ ಮಿಥ್ಯೆ-ಎಂದರ್ಥ. ಜ್ಞಾನದಿಂದ ವಿಷಯದ ಸ್ವಭಾವವನ್ನು ನಿರ್ಣಯಿಸಬೇಕೆಂಬುದನ್ನು ಬಿಟ್ಟು ಇಲ್ಲಿ ವಿಷಯದಿಂದಲೇ ಜ್ಞಾನವನ್ನು ನಿರ್ಣಯಿಸಬೇಕೆಂದಿದೆಯೆಂಬುದನ್ನು ಲಕ್ಷಿಸಬೇಕು.

2. ನನಗೆ ಬೆಳ್ಳಿಯ ಜ್ಞಾನವಾಗಲಿಲ್ಲ ಎಂದೇನೂ ಬಾಧಿತವಾಗುವದಿಲ್ಲ.

3. ಇಂದ್ರಿಯಸಂಪ್ರಯೋಗವು ಜ್ಞಾನಕ್ಕೆ ಕಾರಣ, ಸಂಸ್ಕಾರವು ಸ್ಮೃತಿಗೆ ಕಾರಣ; ಹೀಗಿರುವಲ್ಲಿ ಇವೆರಡೂ ಸೇರಿ ಅಧ್ಯಾಸರೂಪವಾದ ಒಂದೇ ಜ್ಞಾನವನ್ನುಂಟುಮಾಡಿದ್ದು ಹೇಗೆ?

4. ಲಿಂಗವೆಂದರೆ ಹೊಗೆಯೇ ಮುಂತಾದ ರೂಪದ ಗುರುತು; ಲಿಂಗಿಯೆಂದರೆ ಬೆಂಕಿಯೇ ಮುಂತಾದ ಸಾಧ್ಯ.

ಜ್ಞಾನವನ್ನುಂಟುಮಾಡುವದೂ ಕಂಡುಬರುತ್ತದೆಯಲ್ಲವೆ[1] ? ಇಂದ್ರಿಯಸಂಸ್ಕಾರಗಳಿಂದ (ಈ) ಎರಡು ಕಡೆಗಳಲ್ಲಿಯೂ ಸ್ಮೃತಿಯನ್ನೊಳಗೊಂಡ ಒಂದೇ ಪ್ರಮಾಣಜ್ಞಾನವಾಗಿರುತ್ತದೆ; ಏಕೆಂದರೆ ಸಂಸ್ಕಾರವು ಎದ್ದುಕೊಳ್ಳದಿರುವಾಗ ಆ (ಜ್ಞಾನ) ವುಂಟಾಗುವದಿಲ್ಲ.[2] ಆದ್ದರಿಂದ ಲಿಂಗವನ್ನು ಕಂಡದ್ದೇ ಸಂಬಂಧಜ್ಞಾನದ ಸಂಸ್ಕಾರವನ್ನು ಎಬ್ಬಿಸಿ ಅದರೊಡಗೂಡಿದ ಲಿಂಗಿಜ್ಞಾನವನ್ನುಂಟುಮಾಡುತ್ತದೆ ಎಂದು ಹೇಳಬೇಕಾಗುತ್ತದೆ. ಪ್ರತ್ಯಭಿಜ್ಞಾನದಲ್ಲಿಯೂ ಇದೇ ನ್ಯಾಯವು (ಹೊಂದುತ್ತದೆ).[3] ಇಷ್ಟೇ ಹೊರತು ಎರಡು ಜ್ಞಾನಗಳಾಗುವವೆಂಬುದಕ್ಕೆ ಪ್ರಮಾಣವಿಲ್ಲ.[4] ಹೀಗೆಯೇ ಬೇರೆಬೇರೆಯ ಜಾತಿಯ ಜ್ಞಾನಗಳ ಹೇತುಗಳಾದ ನೀಲಾದಿಗಳಿಂದ ಒಂದು ಚಿತ್ರಜ್ಞಾನ[5](ವಾಗುವದನ್ನು ಇಲ್ಲಿ)ಉದಾಹರಿಸಬಹುದು. ಇಲ್ಲಿ ಲಿಂಗಿಯ ಜ್ಞಾನ, ಪ್ರತ್ಯಭಿಜ್ಞೆ, ಚಿತ್ರಜ್ಞಾನ– ಇವುಗಳು ದುಷ್ಟವಲ್ಲದ ಕಾರಣಗಳಿಂದ ಉಂಟಾಗಿರುವದರಿಂದ ಅವುಗಳ ಜ್ಞಾನವು ಯಥಾರ್ಥವೇ (ಆಗಿರುತ್ತದೆ).[6] ಇಲ್ಲಿಯಾದರೋ[7] ಕಾರಣದಲ್ಲಿರುವ ದೋಷದಿಂದ[8] ಹಾಗೆ (ನಿಜವಾ)ಗಿಲ್ಲದ (ಬೆಳ್ಳಿಯ) ಜ್ಞಾನ(ವಾಗಿದೆ) ಎಂಬುದು ವಿಶೇಷವು. ಮತ್ತು ಹಾಗಾದರೇ ಅನುಭವಕ್ಕೆ ವಿರೋಧವಾಗುವದಿಲ್ಲ; ಏಕೆಂದರೆ ತೋರುವ ಬೆಳ್ಳಿಯೇ (ಬೆಳ್ಳಿ -ಎಂಬ ಜ್ಞಾನಕ್ಕೆ) ವಿಷಯವಾಗಿರುತ್ತದೆ.[9]

---

1. ಪ್ರತ್ಯಭಿಜ್ಞಾನವೆಂದರೆ ಅವನೇ ಇವನು ಎಂದು ನೆನಪಿನಿಂದ ಹಿಂದೆ ಕಂಡಿದ್ದದ್ದನ್ನು ಗುರುತಿಸಿ ತಿಳಿದುಕೊಳ್ಳುವದು.

2. ಸಂಸ್ಕಾರದಿಂದ ಹೊಗೆಯಿರುವಲ್ಲಿ ಬೆಂಕಿಯೆಂಬ ಸ್ಮೃತಿಯುಂಟಾದರೇ ಲಿಂಗದರ್ಶನವು ಲಿಂಗಿಜ್ಞಾನಕ್ಕೆ ಕಾರಣವಾಗುವದು. ಹೀಗೆಯೇ ಸಂಸ್ಕಾರದಿಂದೆದ್ದ ಸ್ಮೃತಿಯೇ ಪ್ರತ್ಯಭಿಜ್ಞಾನಕ್ಕೆ ಕಾರಣವಾಗುವದು. ಸಂಸ್ಕಾರವು ಎದ್ದುಕೊಳ್ಳದೆ ನೆನಪುಂಟಾಗದೆ ಇದ್ದರೆ ಈ ಎರಡು ಜ್ಞಾನಗಳೂ ಆಗುವದಿಲ್ಲ.

3. ಅಲ್ಲಿಯೂ ಎದ್ದುಕೊಂಡ ಸಂಸ್ಕಾರವೇ ಕಾರಣವಾಗಿರುತ್ತದೆ.

4. ಲಿಂಗಜ್ಞಾನ, ಲಿಂಗಿಜ್ಞಾನ– ಎಂದಾಗಲಿ, ನೆನಪು ಮತ್ತು ಜ್ಞಾನ– ಎಂದಾಗಲಿ ಎರಡು ಜ್ಞಾನಗಳಾಗುವದಿಲ್ಲ.

5. ರತ್ನಗಂಬಳಿ ಮುಂತಾದವುಗಳಂತೆ ಬಗೆಬಗೆಯ ಬಣ್ಣಗಳುಳ್ಳ ವಸ್ತುವಿನ ಜ್ಞಾನಕ್ಕೆ 'ಚಿತ್ರಜ್ಞಾನ' (ಬಗೆಬಗೆಯ ಬಣ್ಣಗಳ ಜ್ಞಾನ)ವೆಂದು ಹೆಸರು.

6. ಲಿಂಗಜ್ಞಾನದಿಂದಾಗುವ (ಪರಾಮರ್ಶ) ಸ್ಮೃತಿ, ಬೇರೆಬೇರೆಯ ಬಣ್ಣಗಳ ಜ್ಞಾನ– ಇವುಗಳಲ್ಲಿ ದೋಷವಿಲ್ಲದ್ದರಿಂದ ಇವು ಹುಸಿಯಲ್ಲ.

7. ಶುಕ್ತಿರಜತಜ್ಞಾನದಲ್ಲಿಯಾದರೋ.

8. ಕಾರಣವಾದ ಕಣ್ಣು ಮುಂತಾದವುಗಳಲ್ಲಿರುವ ದೋಷ.

9. 'ಹುಸಿಯಾದ ಬೆಳ್ಳಿಯನ್ನೇ ಕಂಡೆನು' ಎಂಬಲ್ಲಿ ಮಿಥ್ಯಾರಜತವೇ ವಿಷಯ ಎಂದು ಭಾವ. ಮುಂದಿನ ಖಂಡದಲ್ಲಿ ಇದು ಸ್ಪಷ್ಟವಾಗುವದು.

## ಶುಕ್ತಿರಜತವು ಮಾಯಾಮಯ

(ಪಂಚಪಾದಿಕಾ)

೧೬. ಅತೋ ಮಾಯಾಮಯಂ ರಜತಮ್। ಅಥ ಪುನಃ ಪಾರಮಾರ್ಥಿಕಂ ಸ್ಯಾತ್, ಸರ್ವೈರೇವ ಗೃಹ್ಯೇತ। ಯತೋ ನ ಹಿ ಪಾರಮಾರ್ಥಿಕಂ ರಜತಂ ಕಾರಣದೋಷಂ ಸ್ವಜ್ಞಾನೋತ್ಪತ್ತೌ ಅಪೇಕ್ಷತೇ। ಯದಿ ಅಪೇಕ್ಷೇತ, ತದಾ ತದಭಾವೇ ನ ತತ್ರ ಜ್ಞಾನೋತ್ಪತ್ತಿರಾಲೋಕಾಭಾವ ಇವ ರೂಪೇ। ಮಾಯಾಮಾತ್ರತ್ವೇ ತು ಮನ್ತ್ರಾದ್ಯುಪಹತಚಕ್ಷುಷ ಇವ ದೋಷೋಪಹತಜ್ಞಾನಕಾರಣಾ ಏವ ಪಶ್ಯನ್ತೀತಿ ಯುಕ್ತಮ್। ಕಿಞ್ಚ, 'ನೇದಂ ರಜತಮ್' ಇತಿ ಬಾಧೋಽಪಿ ಮಾಯಾಮಯತ್ವಮೇವ ಸೂಚಯತಿ। ಕಥಮ್? ತೇನ ಹಿ ತಸ್ಯ ನಿರುಪಾಖ್ಯತಾಪಾದನಪೂರ್ವಕಂ ಮಿಥ್ಯಾತ್ವಂ ಜ್ಞಾಪ್ಯತೇ 'ನೇದಂ ರಜತಂ ಮಿಥ್ಯೈವ ಆಭಾಸಿಷ್ಟ' ಇತಿ। ನ ಚ ತತ್ ಕೇನಚಿದ್ರೂಪೇಣ ರೂಪವತ್ತ್ವೇ ಅವಕಲ್ಪತೇ; ಸಂಪ್ರಯುಕ್ತಶುಕ್ತಿವತ್, ನಿರಸ್ಯಮಾನವಿಷಯಜ್ಞಾನವಚ್ಚ ॥

(ಅರ್ಥ)

ಆದ್ದರಿಂದ (ಕಪ್ಪೆಚಿಪ್ಪಿನ) ಬೆಳ್ಳಿಯು ಮಾಯಾಮಯವು.[1] ಹೀಗಲ್ಲದೆ (ಅದು) ನಿಜ(ವಾದ ಬೆಳ್ಳಿಯೇ) ಆಗಿದ್ದರೆ, ಎಲ್ಲರಿಗೂ (ಹಾಗೆಂದು) ಕಾಣಬೇಕಾಗುವದು.[2] ಏಕೆಂದರೆ ನಿಜವಾದ ಬೆಳ್ಳಿಗೆ ತನ್ನ (ವಿಷಯದ) ಜ್ಞಾನವುಂಟಾಗುವದಕ್ಕೆ ಕಾರಣದೋಷವೇನೂ ಬೇಕಿರುವದಿಲ್ಲವಷ್ಟೆ ? (ಹಾಗೆ) ಬಯಸುವದಾದರೆ ಆಗ ಅದಿಲ್ಲದಿರುವಾಗ, ಅದರಲ್ಲಿ ಜ್ಞಾನವುಂಟಾಗಬಾರದು; ಬೆಳಕಿಲ್ಲದೆ ಇರುವಾಗ ರೂಪದಲ್ಲಿ (ಜ್ಞಾನವುಂಟಾಗುವದಿಲ್ಲವಲ್ಲ), ಹಾಗೆ.[3] (ಆ ಬೆಳ್ಳಿಯು) ಮಾಯಾಮಾತ್ರವೇ ಎಂದಾದರೊ, ಮಂತ್ರವೇ ಮುಂತಾದವುಗಳಿಂದ ತಡೆಗಟ್ಟಿರುವ ಕಣ್ಣುಳ್ಳವರಿಗೆ (ಆಗು)ವಂತೆ ದೋಷವು ತಡೆಗಟ್ಟಿದ ಜ್ಞಾನಕಾರಣವುಳ್ಳವರೇ (ಅದನ್ನು) ನೋಡುತ್ತಾರೆಂಬುದು ಯುಕ್ತವಾಗುವದು.[4] ಇದೂ ಅಲ್ಲದೆ, 'ಇದು ಬೆಳ್ಳಿಯಲ್ಲ' ಎಂಬ ಬಾಧವೂ (ಅದು) ಮಾಯಾಮಯವೇ ಎಂದು ಸೂಚಿಸುತ್ತದೆ ಹೇಗೆ? ಎಂದರೆ, ಆ (ಬಾಧ)ವು ಅದನ್ನು ನಿರುಪಾಖ್ಯವಾಗಿ ಮಾಡಿ[5] 'ಇದು ಬೆಳ್ಳಿಯಲ್ಲ,

---

1. ಮಾಯೆ, ಅವಿದ್ಯೆ- ಎರಡೂ ಒಂದೇ ಎಂದು ಪಂ. ವಿ.ಯಲ್ಲಿ ವಿಚಾರಪೂರ್ವಕವಾಗಿ ನಿರ್ಣಯಿಸಿದೆ.

2. ದೋಷವಿಲ್ಲದವರಿಗೆ ನಿಜವಾದ ಬೆಳ್ಳಿ ಕಾಣಬಾರದಾಗುವದು.

3. ಬೆಳಕು ರೂಪದರ್ಶನಕ್ಕೆ ಕಾರಣವಾಗಿರುವಂತೆ, ದೋಷವೂ ಬೆಳ್ಳಿಯ ಜ್ಞಾನಕ್ಕೆ ಕಾರಣವಾದರೆ ನಿರ್ದೋಷವಾದ ಕಣ್ಣಿನವರಿಗೆ ಅದು ಕಾಣಬಾರದಾಗುವದು.

4. ಮಂತ್ರಾದಿಗಳಿಂದಾದ ಕಣ್ಣುಕಟ್ಟಿಗೆ ಒಳಗಾದವರಿಗೇ ಅಲ್ಲವೆ, ಮಾಯಾಮಯವಸ್ತುಗಳು ಕಾಣಿಸುವದು ?

5. ಅನಿರ್ವಚನೀಯವಾಗಿ ಮಾಡಿ.

ಮಿಥ್ಯೆಯಾಗಿಯೇ ತೋರಿತು'[1] ಎಂದು ಅದರ ಮಿಥ್ಯಾತ್ವವನ್ನೇ ತಿಳಿಸಿಕೊಡುತ್ತದೆ. ಆದರೆ ಹೀಗಾಗುವದು (ಅದಕ್ಕೆ) ಯಾವದಾದರೊಂದು ರೂಪದಿಂದ ರೂಪವಿದ್ದರೆ[2] ಹೀಗಾಗುವದು ಸಂಪ್ರಯುಕ್ತಶುಕ್ತಿಗೆ[3] ಅಥವಾ ನಾವು ಅಲ್ಲಗಳೆದಿರುವ ವಿಷಯ ಜ್ಞಾನಕ್ಕೆ ಹೇಗೆ ಇದು ಹೊಂದುವದಿಲ್ಲವೋ- ಹಾಗೆ ಹೊಂದಲಾರದು.[4]

## ಅಧ್ಯಾಸಲಕ್ಷಣದ ವಿಷಯಕ್ಕೆ ಆಕ್ಷೇಪಸಮಾಧಾನಗಳು

(ಪಂಚಪಾದಿಕಾ)

೧೭. ನನು ನ ವ್ಯಾಪಕಮಿದಂ ಲಕ್ಷಣಮ್ । ಸ್ವಪ್ನಶೋಕಾದೌ ಅಸಂಭವಾತ್ । ನ ಹಿ ಸ್ವಪ್ನಶೋಕಾದೌ ಕೇನಚಿತ್ ಸಂಪ್ರಯೋಗೋಽಸ್ತಿ । ಯೇನ ಪರತ್ರ ಪರಾವಭಾಸಃ ಸ್ಯಾತ್ । ಅತ ಏವ ವಾಸನಾತಿರಿಕ್ತಕಾರಣಾಭಾವಾತ್ ಸ್ಮೃತಿರೇವ, ನ ಸ್ಮೃತಿರೂಪತಾ । ಅತ್ರೋಚ್ಯತೇ । ನ ತಾವತ್ ಸ್ಮೃತಿತ್ವಮಸ್ತಿ। ಅಪರೋಕ್ಷಾರ್ಥಾವಭಾಸನಾತ್ । ನನು ಸ್ಮೃತಿರೂಪತ್ವಮಪಿ ನಾಸ್ತಿ । ಪೂರ್ವಪ್ರಮಾಣಸಂಸ್ಕಾರಮಾತ್ರಜನ್ಯತ್ವಾತ್ । ಅತ್ರೋಚ್ಯತೇ । ಉಕ್ತಮೇತತ್ ಪೂರ್ವಪ್ರಮಾಣವಿಷಯಾವಭಾಸಿತ್ವಮಾತ್ರಂ ಸ್ಮೃತೇಃ ಸ್ವರೂಪಮ್ ಇತಿ । ತದಿಹ ನಿದ್ರಾದಿದೋಷೋಪಪ್ಲುತಂ ಮನಃ, ಅದೃಷ್ಟಾದಿಸಮುದ್ಬೋಧಿತಸಂಸ್ಕಾರವಿಶೇಷಸಹಕಾರ್ಯನುರೂಪಂ ಮಿಥ್ಯಾರ್ಥವಿಷಯಂ ಜ್ಞಾನಮ್ ಉತ್ಪಾದಯತಿ । ತಸ್ಯ ಚ ತದವಚ್ಛಿನ್ನಾಪರೋಕ್ಷಚೈತನ್ಯಸ್ಥಾವಿದ್ಯಾಶಕ್ತಿರಾಲಮ್ಬನತಯಾ ವಿವರ್ತತೇ ॥

(ಅರ್ಥ)

(ಆಕ್ಷೇಪ) :— ಈ (ಅಧ್ಯಾಸ)ಲಕ್ಷಣ ವ್ಯಾಪಕವಲ್ಲವಲ್ಲ ! ಏಕೆಂದರೆ (ಇದು) ಸ್ವಪ್ನಶೋಕಾದಿಗಳಲ್ಲಿ ಸಂಭವಿಸುವಂತಿಲ್ಲ. ಸ್ವಪ್ನಶೋಕವೇ ಮುಂತಾದ ಕಡೆಯಲ್ಲಿ ಯಾವದಕ್ಕೂ (ಇಂದ್ರಿಯ)ಸಂಪ್ರಯೋಗವಿರುವದಿಲ್ಲವಲ್ಲ ! ಹಾಗಿದ್ದರಲ್ಲವೆ, ಒಂದರಲ್ಲಿ ಮತ್ತೊಂದರ ತೋರಿಕೆಯೆಂದಾದೀತು[5] ? ಆದ್ದರಿಂದಲೇ

---

1. 'ಹುಸಿಯಾದ ಬೆಳ್ಳಿಯೇ ತೋರಿತು' ಎಂಬರ್ಥವನ್ನು ಈ ಪ್ರಸ್ಥಾನದಲ್ಲಿ ಮಾಡಿದೆ. ಅಲ್ಲಿ ಬೆಳ್ಳಿಯಿಲ್ಲವೇ ಇಲ್ಲ ಎಂಬ (ಸೂ. ಭಾ. ೪-೧-೫) ಭಾಷ್ಯವಚನಕ್ಕೆ ಇದು ವಿರುದ್ಧ.

2. ನಿಜವಾದ ರೂಪವಿದ್ದರೆ ಎಂದರ್ಥ ; ಏಕೆಂದರೆ ಮಾಯಾಮಯರೂಪವು ಇದೆಯೆಂದೇ ಗ್ರಂಥಕರ್ತರ ಅಭಿಪ್ರಾಯ.

3. ಶುಕ್ತಿಯು ಶುಕ್ತಿಯಲ್ಲ ಎಂಬ ರೀತಿಯಿಂದ ಬಾಧಿತವಾಗುವದಿಲ್ಲ; ಜ್ಞಾನವಾಗಲಿಲ್ಲ ಎಂದು ಜ್ಞಾನವೂ ಬಾಧಿತವಾಗುವದಿಲ್ಲ- ಎಂದರ್ಥ. ಬಾಧವೆಂದರೇನು ? ಎಂಬುದನ್ನು ಪಂ. ವಿ.ದಲ್ಲಿ ವಿಸ್ತಾರವಾಗಿ ಚರ್ಚಿಸಿದೆ.

4. ಎದುರಿಗಿರುವ ಕಪ್ಪೆಚಿಪ್ಪನ್ನಾಗಲಿ, ಅಥವಾ ನಿಜವಾದ ಬೆಳ್ಳಿಯನ್ನಾಗಲಿ ಇಲ್ಲವೆಂದು ಹೇಳುವದು ಹೇಗೆ ಹೊಂದುವದಿಲ್ಲವೋ ಹಾಗೆ ತೋರಿದ ಬೆಳ್ಳಿಗೆ ರೂಪವಿದ್ದಿದ್ದರೆ ಅದಕ್ಕೂ ಬಾಧೆಯಾಗುವದು ಹೊಂದುತ್ತಿರಲಿಲ್ಲ.

5. ಶುಕ್ತಿಯನ್ನು ನೋಡಿ ರಜತವೆಂದು ತಿಳಿದಾಗ ಶುಕ್ತಿಗೆ ಇಂದ್ರಿಯಸಂಯೋಗವಾಗಿರುತ್ತದೆ. ಆದರೆ ಕನಸಿನಲ್ಲಿ ಮತ್ತೆ ಯಾವದನ್ನಾದರೂ ನೋಡಿ ಕನಸಿನ ಭ್ರಾಂತಿಯಾಗಿರುವದಿಲ್ಲವಲ್ಲ, ಆದ್ದರಿಂದ ಲಕ್ಷಣವು ಅವ್ಯಾಪ್ತವಾಯಿತು ; ಲಕ್ಷ್ಯವಾದ ಸ್ವಪ್ನಕ್ಕೆ ಅನ್ವಯಿಸಲಿಲ್ಲ.

ವಾಸನೆಯನ್ನು ಬಿಟ್ಟು ಮತ್ತೆಯಾವ ಕಾರಣವೂ ಇಲ್ಲದ್ದರಿಂದ (ಇದು) ಸ್ಮೃತಿಯೇ, (ಇದಕ್ಕೆ) ಸ್ಮೃತಿರೂಪತ್ವವಿಲ್ಲ.

(ಪರಿಹಾರ) :— ಈ ವಿಷಯದಲ್ಲಿ ಹೇಳುತ್ತೇವೆ. ಮೊದಲನೆಯದಾಗಿ ಇದಕ್ಕೆ ಸ್ಮೃತಿತ್ವ ಎಂಬುದಿಲ್ಲ. ಏಕೆಂದರೆ ಅಪರೋಕ್ಷವಾಗಿಯೇ ಕಾಣಿಸುತ್ತಿರುತ್ತದೆ.

(ಆಕ್ಷೇಪ) :— ಸ್ಮೃತಿರೂಪತ್ವವೂ ಇಲ್ಲವಲ್ಲ! ಏಕೆಂದರೆ (ಇದು) ಹಿಂದಿನ ಪ್ರಮಾಣಸಂಸ್ಕಾರಮಾತ್ರದಿಂದ ಉಂಟಾಗಿದೆಯಲ್ಲವೆ ?[1]

(ಪರಿಹಾರ) :—ಇದಕ್ಕೆ ಹೇಳುತ್ತೇವೆ. ಸ್ಮೃತಿಗೆ ಹಿಂದಿನ ಪ್ರಮಾಣದ ವಿಷಯವನ್ನು ತೋರಿಸುವದೊಂದೇ ರೂಪವು ಎಂದು ಹಿಂದೆ ಹೇಳಿರುತ್ತೇವೆ. ಆದರೆ ಇಲ್ಲಿ ನಿದ್ರೆಯೇ ಮುಂತಾದ ದೋಷದಿಂದ ಹೊಡೆಯಲ್ಪಟ್ಟಿರುವ ಮನಸ್ಸು, ಅದೃಷ್ಟವೇ ಮುಂತಾದವುಗಳು ಎಚ್ಚರಿಸಿದ ಸಂಸ್ಕಾರವಿಶೇಷವೆಂಬ ಸಹಕಾರಿಗೆ ಅನುರೂಪವಾಗಿ ಮಿಥ್ಯಾವಸ್ತುವಿಷಯಕವಾದ ಜ್ಞಾನವನ್ನುಂಟು ಮಾಡುತ್ತದೆ[2] ; ಆ (ಜ್ಞಾನ)ಕ್ಕೆ ಅದರಿಂದ ವಿಚ್ಛಿನ್ನವಾದ[3] ಅಪರೋಕ್ಷಚೈತನ್ಯದಲ್ಲಿರುವ ಅವಿದ್ಯಾಶಕ್ತಿಯು ಆಲಂಬನವಾಗಿ ವಿವರ್ತವಾಗುತ್ತದೆ.[4]

(ಪಂಚಪಾದಿಕಾ)

೧೮. ನನ್ವೇವಂ ಸತಿ, ಅನ್ತರೇವ ಸ್ವಪ್ನಾರ್ಥಪ್ರತಿಭಾಸಃ ಸ್ಯಾತ್। ಕೋ ವಾ ಬ್ರೂತೇ ನಾನ್ತರಿತಿ? ನನು ವಿಚ್ಛಿನ್ನದೇಶೋಽನುಭೂಯತೇ ಸ್ವಪ್ನೇಽಪಿ ಜಾಗರಣೇ ಇವ ; ನ ತದನ್ತರನುಭವಾಶ್ರಯತ್ವೇ ಸ್ವಪ್ನಾರ್ಥಸ್ಯ ಉಪಪದ್ಯತೇ। ನನು ದೇಶೋಽಪಿ ತಾದೃಶ ಏವ ; ಕುತಸ್ತತ್ಸಂಬನ್ಧಾತ್ ವಿಚ್ಛೇದೋಽವಭಾಸತೇ। ಅಯಮಪಿ ತರ್ಹಿ, ಅಪರೋ ದೋಷಃ। ನೈಷ ದೋಷಃ। ಜಾಗರಣೇಽಪಿ ಪ್ರಮಾಣಜ್ಞಾನಾತ್ ಅನ್ತರಪರೋಕ್ಷಾನುಭವಾತ್ ನ ವಿಷಯಸ್ಥಾ ಅಪರೋಕ್ಷತಾ ಭಿದ್ಯತೇ। ಏಕರೂಪಪ್ರಕಾಶನಾತ್। ಅತಃ, ಅನ್ತರಪರೋಕ್ಷಾನು

---

1. ದೋಷಾದಿಕಾರಣತ್ರಿತಯದಿಂದ ಉಂಟಾಗಿದ್ದರಲ್ಲವೆ, ಸ್ಮೃತಿರೂಪವೆನ್ನಬೇಕು ? ಎಚ್ಚರದ ಸಂಸ್ಕಾರವೊಂದೇ ಅಲ್ಲವೆ, ಕನಸುಕಾಣುವದಕ್ಕೆ ಕಾರಣ ?

2. ಕನಸಿನಲ್ಲಿಯೂ ನಿದ್ರಾದೋಷ, ಮನಸ್ಸೆಂಬ ಕರಣವ್ಯಾಪಾರ, ಸಂಸ್ಕಾರ– ಎಂಬ ಮೂರು ಕಾರಣಗಳಿವೆ.

3. ಚೈತನ್ಯವು ಒಂದೇ ಆದರೂ ಅಂತಃಕರಣಾವಚ್ಛಿನ್ನವಾದ ಚೈತನ್ಯದಲ್ಲಿರುವಷ್ಟು ಅವಿದ್ಯೆ ಸ್ವಪ್ನಾರ್ಥವಾಗಿ ವಿವರ್ತವಾಗುತ್ತದೆ, ಎಂದರೆ ಪರಿಣಮಿಸುತ್ತದೆ ಎಂದರ್ಥ. ಚೈತನ್ಯವು ಒಂದೇ ಎಂಬುದನ್ನು ಇಟ್ಟುಕೊಂಡೇ 'ತದವಚ್ಛಿನ್ನಚೈತನ್ಯ' ಎಂಬ ಮಾತನ್ನು ಬಳಸಿದೆ ಎಂಬುದನ್ನು ಲಕ್ಷಿಸಬೇಕು.

4. ಚೈತನ್ಯವೇ ತನ್ನಲ್ಲಿರುವ ಅವಿದ್ಯೆಯಿಂದ ವಿವರ್ತವಾಗುತ್ತದೆ; ಆದ್ದರಿಂದ ಸತ್ಯವಸ್ತುವಿಗೂ ಮಿಥ್ಯಾವಸ್ತುವಿಗೂ ಬೇರೆಯಾಗುವದೆಂಬ ಅಧ್ಯಾಸಲಕ್ಷಣವಿದೆ ಎಂತ ಪಂ. ವಿ.

ಭವಾವಗುಣ್ಠಿತ ಏವ ಜಾಗರಣೇಽಪಿ ಅರ್ಥೋಽನುಭೂಯತೇ। ಅನ್ಯಥಾ ಜಡಸ್ಯ ಪ್ರಕಾಶಾನುಪಪತ್ತೇಃ। ಯಥಾ ತಮಸಾ ಅವಗುಣ್ಠಿತೋ ಘಟಃ, ಪ್ರದೀಪ ಪ್ರಭಾವಗುಣ್ಠನಮನ್ತರೇಣ ನ ಪ್ರಕಾಶೀಭವತಿ, ಏವಮ್। ಯಃ ಪುನರ್ವಿಚ್ಛೇದಾವಭಾಸಃ ಸ ಜಾಗರೇಽಪಿ ಮಾಯಾವಿಜೃಮ್ಭಿತಃ। ಸರ್ವಸ್ಯ ಪ್ರಪಞ್ಚಜಾತಸ್ಯ ಚೈತನ್ಯೈಕಾಶ್ರಯತ್ವಾತ್, ತಸ್ಯ ಚ ನಿರಂಶಸ್ಯ ಪ್ರದೇಶಭೇದಾಭಾವಾತ್। ಪ್ರಪಞ್ಚಭೇದೇನೈವ ಹಿ ತತ್ ಕಲ್ಪಿತಾವಚ್ಛೇದಂ ಸತ್, ಅವಚ್ಛಿನ್ನಮಿವ ಬಹಿರಿವ ಅನ್ತರಿವ ಪ್ರಕಾಶತೇ। ಅಥವಾ ದಿಗಾಕಾಶೌ ಮನೋಮಾತ್ರಗೋಚರೌ ಸರ್ವತ್ರಾಧ್ಯಾಸಾಧಾರೌ ವಿದ್ಯೇತೇ ಇತಿ ನ ಪರತ್ರೇತಿ ವಿರುಧ್ಯತೇ ॥

(ಅರ್ಥ)

(ಆಕ್ಷೇಪ) :— ಹೀಗಾದರೆ ಸ್ವಪ್ನವಿಷಯವು ಕಾಣಿಸುವದು ಒಳಗೇ[1] ಎಂದಾಯಿತಲ್ಲ!

(ಪರಿಹಾರ) :— ಒಳಗಾಗುವದಿಲ್ಲವೆಂದು ಯಾವನುತಾನೆ ಹೇಳುತ್ತಾನೆ?

(ಆಕ್ಷೇಪ) :— ಕನಸಿನಲ್ಲಿಯೂ ಎಚ್ಚರದಲ್ಲಿರುವ ಹಾಗೆ ಬೇರೆಯಾದ ದೇಶವೇ ಅನುಭವಕ್ಕೆ ಬರುತ್ತದೆಯಲ್ಲ! ಒಳಗೇ ಸ್ವಪ್ನವಸ್ತುವಿಗೂ ಅನುಭವವಾಗುತ್ತದೆ ಎಂದರೆ ಅದು ಹೊಂದುವದಿಲ್ಲವಲ್ಲ!

(ಪರಿಹಾರ) : ದೇಶವೂ ಅಂಥದ್ದೇ[2] ಆಗಿರುತ್ತದೆಯಲ್ಲ! ಅದರ ಸಂಬಂಧದಿಂದ ಬೇರೆಯಾಗಿರುವಂತೆ ತೋರುವದೆಂಬುದೆಲ್ಲಿಂದ ಬಂತು?[3]

(ಆಕ್ಷೇಪ) :— ಹಾಗಾದರೂ ಇದೂ ಮತ್ತೊಂದು ತಪ್ಪು ಎಂದಾಯಿತು!

(ಪರಿಹಾರ) :— ಇದೇನೂ ತಪ್ಪಲ್ಲ.[4] ಎಚ್ಚರದಲ್ಲಿಯೂ ಒಳಗೆ ಆಗುವ ಅಪರೋಕ್ಷಾನುಭವರೂಪವಾದ ಪ್ರಮಾಣಜ್ಞಾನಕ್ಕಿಂತ[5] ವಿಷಯದ ಅಪರೋಕ್ಷತ್ವವು ಭಿನ್ನವಾಗಿರುವದಿಲ್ಲ. ಏಕೆಂದರೆ ಒಂದೇ ರೂಪದಿಂದ ತೋರುತ್ತಿರುತ್ತದೆ.[6]

---

1. 'ಒಳಗೇ' ಎಂದರೇನೆಂಬುದನ್ನು ಸ್ಪಷ್ಟಪಡಿಸಿಲ್ಲ ; ದೇಹದೊಳಗೇ ಎಂದು ಅರ್ಥವಿರಬಹುದು. 2. ಅದೂ ಒಳಗೇ ಇದೆ.

3. ಆದ್ದರಿಂದ ಹೊರಗಿನ ದೇಶದಲ್ಲಿರುವದರಿಂದ ಹೊರಗೆ ತೋರುತ್ತದೆ ಎನ್ನುವ ಹಾಗಿಲ್ಲ.

4. ಆತ್ಮನೆಂದರೆ ಅಹಂಕಾರಾವಚ್ಛಿನ್ನಚೈತನ್ಯವೆಂದಿಟ್ಟುಕೊಂಡೇ ಪೂರ್ವಪಕ್ಷಿ ಆಕ್ಷೇಪಿಸಿರುತ್ತಾನೆ; ಚೈತನ್ಯಮಾತ್ರವನ್ನಿಟ್ಟುಕೊಂಡು ಸಿದ್ಧಾಂತಿಯು ಸಮಾಧಾನವನ್ನು ಹೇಳುತ್ತಿದಾನೆ.

5. ಈ ಅನುವಾದಭಾಗದ ವಿಷಯಕ್ಕೆ ವ್ಯಾಖ್ಯಾನಕಾರರ ಮತಭೇದವಿದೆ.

6. ವಿಷಯವು ಬೇರೆಯಾಗಿ ತೋರಿದರೂ ಅದರ ಅಪರೋಕ್ಷತ್ವವು ಬೇರೆಯಲ್ಲ ; ಏಕೆಂದರೆ ಅಪರೋಕ್ಷವಾಗಿರುವ ಚೈತನ್ಯವು ಒಂದೇ.

ಆದ್ದರಿಂದ ಒಳಗಿನ ಅಪರೋಕ್ಷಾನುಭವದಿಂದ ವ್ಯಾಪ್ತವಾಗಿಯೇ ಎಚ್ಚರದಲ್ಲಿಯೂ ವಿಷಯದ ಅನುಭವವಾಗುತ್ತದೆ (ಎನ್ನಬೇಕು). ಏಕೆಂದರೆ ಹಾಗಿಲ್ಲದಿದ್ದರೆ ಜಡವಸ್ತುವಿಗೆ (ತಾನೇ ತೋರುವದೆಂಬ) ಪ್ರಕಾಶವು ಹೊಂದುವದಿಲ್ಲ.[1] ಹೇಗೆ ಕತ್ತಲೆ ಮುಸುಕಿರುವ ಗಡಿಗೆಯು (ತನ್ನನ್ನು) ದೀಪದ ಬೆಳಕು ಮುಸುಕಿಕೊಂಡ ಹೊರತು ತೋರಿಕೊಳ್ಳಲಾರದೋ ಹಾಗೆಯೇ (ಇದು).[2] ಇನ್ನು ಅದು ವಿಚ್ಛಿನ್ನವಾಗಿರುವಂತೆ ತೋರುತ್ತಿರುವದಲ್ಲ, ಅದು ಎಚ್ಚರದಲ್ಲಿಯೂ ಮಾಯಾವಿಲಾಸವೇ ಆಗಿರುತ್ತದೆ.[3] ಏಕೆಂದರೆ ಪ್ರಪಂಚಜಾತವೆಲ್ಲವೂ ಚೈತನ್ಯವೊಂದನ್ನೇ ಆಶ್ರಯಿಸಿಕೊಂಡಿರುತ್ತದೆ. ಆ ಚೈತನ್ಯವು ನಿರಂಶವಾಗಿರುವದರಿಂದ (ಅದಕ್ಕೆ) ಪ್ರದೇಶದ ಭೇದವಿರುವದಿಲ್ಲ.[4] ಪ್ರಪಂಚದ ಭೇದದಿಂದಲೇ ಅಲ್ಲವೆ, ಅದು ಕಲ್ಪಿತವಾದ ಅವಚ್ಛೇದವುಳ್ಳದ್ದಾಗಿ ಅವಚ್ಛಿನ್ನವಾಗಿರುವಂತೆಯೂ ಹೊರಗಿರುವಂತೆಯೂ ಒಳಗಿರುವಂತೆಯೂ ತೋರುತ್ತಿರುತ್ತದೆ?[5]

ಅಥವಾ ಮನೋಮಾತ್ರಗೋಚರವಾಗಿರುವ ದಿಕ್ಕು, ಆಕಾಶ– ಇವುಗಳು ಎಲ್ಲೆಲ್ಲಿಯೂ ಅಧ್ಯಾಸಕ್ಕೆ ಆಧಾರವಾಗಿರುತ್ತದೆಯಾದ್ದರಿಂದ 'ಮತ್ತೊಂದು (ವಸ್ತುವಿನಲ್ಲಿ ತೋರುವದು)' ಎಂದು (ಹೇಳಿದ್ದು) ವಿರುದ್ಧವಲ್ಲ.[6]

---

1. ಜ್ಞಾನದ ಅಪರೋಕ್ಷ್ಯವು ಬೇರೆ, ವಿಷಯದ ಅಪರೋಕ್ಷ್ಯವು ಬೇರೆ ಎನ್ನಬಾರದು. ವಿಷಯದ ಅಪರೋಕ್ಷ್ಯವೆಂದರೆ ಚೈತನ್ಯವೇ ಆಗಿರುತ್ತದೆ ಎಂದಭಿಪ್ರಾಯ.

2. ಜಡವಸ್ತು ಅವಿದ್ಯೆಯಿಂದ ಆವೃತವಾಗಿರುತ್ತದೆ, ಕತ್ತಲೆಯು ಮುಸುಕಿದ ಗಡಿಗೆಯು ಇದಕ್ಕೆ ದೃಷ್ಟಾಂತ. ಪ್ರಮಾಣಜನ್ಯವಾದಂತೆ ತೋರುವ ಅಪರೋಕ್ಷಚೈತನ್ಯಾನುಭವವು ವಿಷಯವನ್ನು ಮುಸುಕಲು ಅದು ತೋರುತ್ತದೆ. ಬೆಳಕು ಆವರಿಸಿಕೊಳ್ಳಲು ಗಡಿಗೆ ತೋರುವದು ಇದಕ್ಕೆ ದೃಷ್ಟಾಂತ.

3. ಎಚ್ಚರದಲ್ಲಿರುವ ಪ್ರಪಂಚವೆಲ್ಲ ಮಾಯೆಯ, ಅಥವಾ ಅವಿದ್ಯಾಶಕ್ತಿಯ ಕಾರ್ಯವೆಂಬುದೇ ಈ ಪ್ರಸ್ಥಾನದ ಸಿದ್ಧಾಂತ. ಅದನ್ನಿಟ್ಟುಕೊಂಡೇ ಇಲ್ಲಿ ಸಮಾಧಾನವನ್ನು ಹೇಳಿದೆ. ಆಗ ಎಚ್ಚರಕನಸುಗಳೆಂಬ ವಿವೇಕವು ಹೇಗೆ? ಎಂಬುದನ್ನು ಇಲ್ಲಿ ವಿವೇಚಿಸಿಲ್ಲ.

4. ಚೈತನ್ಯವು ಸರ್ವಗತವಾಗಿರುತ್ತದೆ; ವಸ್ತುಗಳಿಗೆ ಅಲ್ಲಿ, ಇಲ್ಲಿ– ಎಂಬ ಪ್ರದೇಶವಿರುವಂತೆ ಅದಕ್ಕೆ ಪ್ರದೇಶವಿರುವದಿಲ್ಲ.

5. ಪ್ರಪಂಚದಲ್ಲಿರುವ ಉಪಾಧಿಗಳ ಪರಿಚ್ಛೇದದಿಂದಲೇ ಚೈತನ್ಯಕ್ಕೂ ಪರಿಚ್ಛೇದವಿರುವಂತೆ ಆಗಿರುತ್ತದೆ ಎಂದರ್ಥ. ಇಷ್ಟನ್ನೂ ಒಪ್ಪಿದಮೇಲೆ ಅಧ್ಯಾಸಲಕ್ಷಣದ ಸಮನ್ವಯವು ಏತಕ್ಕೆ ಬೇಕೋ ತಿಳಿಯದು.

6. ಕೇವಲ ಮನಸ್ಸು ಹೊರಗಿನ ವಸ್ತುಗಳನ್ನು ಸ್ವತಂತ್ರವಾಗಿ ತಿಳಿಸುವ ಸಾಧನವಲ್ಲವಾದ್ದರಿಂದ ಈ ಪಕ್ಷಾಂತರವನ್ನು ಹೇಳಿದೆ ಎಂದು ಪಂ. ವಿ. ; ಆದರೆ ದಿಕ್ಕು, ಆಕಾಶಗಳು ಅಧ್ಯಸ್ತವಲ್ಲವೆ? ಎಂದು ಆಕ್ಷೇಪಿಸಿದಾಗ ಪ್ರಥಮಪಕ್ಷಕ್ಕೆ ಶರಣುಹೋಗಬೇಕು.

# ನಾಮಾದಿಗಳಲ್ಲಿ ಬ್ರಹ್ಮದ ಅಧ್ಯಾಸವೆಂಬುದಿಲ್ಲ

(ಪಂಚಪಾದಿಕಾ)

೧೯. ಕಥಂ ತರ್ಹಿ ನಾಮಾದಿಷು ಬ್ರಹ್ಮಾಧ್ಯಾಸಃ ? ಕಿಮತ್ರ ಕಥಮ್? ನ ತತ್ರ ಕಾರಣದೋಷಃ, ನಾಪಿ ಮಿಥ್ಯಾರ್ಥಾವಭಾಸಃ । ಸತ್ಯಮ್ । ಅತ ಏವ ಚೋದನಾವಶಾತ್, ಇಚ್ಛಾತೋ ಅನುಷ್ಠೇಯತ್ವಾತ್ ಮಾನಸೀ ಕ್ರಿಯೈಷಾ, ನ ಜ್ಞಾನಮ್ । ಜ್ಞಾನಸ್ಯ ಹಿ ದುಷ್ಟಕಾರಣಜನ್ಯಸ್ಯ ವಿಷಯೋ ಮಿಥ್ಯಾರ್ಥಃ । ನ ಹಿ ಜ್ಞಾನಮ್ ಇಚ್ಛಾತೋ ಜನಯಿತುಂ ನಿವರ್ತಯಿತುಂ ವಾ ಶಕ್ಯಮ್ । ಕಾರಣೈಕಾಯತ್ತತ್ವಾತ್, ಇಚ್ಛಾನುಪ್ರವೇಶಾನುಪಪತ್ತೇಃ । ನನು ಸ್ಮೃತಿಜ್ಞಾನಮ್ ಆಭೋಗೇನ ಜನ್ಯಮಾನಂ ಮನೋನಿರೋಧೇನ ಚ ನಿರುಧ್ಯಮಾನಂ ದೃಶ್ಯತೇ । ಸತ್ಯಮ್ । ನ ಸ್ಮೃತ್ಯುತ್ಪತ್ತಿನಿರೋಧಯೋಸ್ತಯೋರ್ವ್ಯಾಪಾರಃ, ಕಿಂ ತು ಕಾರಣವ್ಯಾಪಾರೇ ತತ್ಪ್ರತಿಬನ್ಧೇ ಚ, ಚಕ್ಷುಷ ಇವೋನ್ಮೀಲನನಿಮೀಲನೇ । ನ ಪುನರ್ಜ್ಞಾನೋತ್ಪತ್ತೌ ವ್ಯಾಪಾರ ಇಚ್ಛಾಯಾಃ । ತಸ್ಮಾತ್, ಬ್ರಹ್ಮದೃಷ್ಟಿಃ ಕೇವಲಾ ಅಧ್ಯಸ್ಯತೇ ಚೋದನಾವಶಾತ್ ಫಲಾಯೈವ । ಮಾತೃಬುದ್ಧಿರಿವ ರಾಗನಿವೃತ್ತಯೇ ಪರಯೋಷಿತಿ ॥

(ಅರ್ಥ)

(ಆಕ್ಷೇಪ):—ಹಾಗಾದರೆ ನಾಮಾದಿಗಳಲ್ಲಿ ಬ್ರಹ್ಮವನ್ನು ಅಧ್ಯಾಸಮಾಡಿರುವದು ಹೇಗೆ ?[1]

(ಪರಿಹಾರ) :— ಇಲ್ಲಿ 'ಹಾಗಾದರೆ' ಎಂದದ್ದಕ್ಕೇನಭಿಪ್ರಾಯ ?

(ಆಕ್ಷೇಪ):— ಅಲ್ಲಿ ಕಾರಣದೋಷವಿಲ್ಲ, ಮಿಥ್ಯಾವಸ್ತುವಿನ ತೋರಿಕೆಯೂ ಇಲ್ಲವಲ್ಲ[2] !

(ಪರಿಹಾರ):— ನಿಜ. ಆದ್ದರಿಂದಲೇ ಚೋದನೆಯ ವಶದಿಂದ ಇಚ್ಛೆಗನುಗುಣವಾಗಿ ಮಾಡಬಹುದಾದ್ದರಿಂದ ಇದು ಮಾನಸಕ್ರಿಯೆ, ಜ್ಞಾನವಲ್ಲ. ದುಷ್ಟಕಾರಣಜನ್ಯವಾದ ಜ್ಞಾನಕ್ಕಲ್ಲವೆ, ಮಿಥ್ಯಾವಸ್ತುವಿಷಯವಾಗಿರುವದೆಂಬುದು ?[3] ಜ್ಞಾನವು ಇಚ್ಛೆಯಿಂದ ಉಂಟುಮಾಡುವದಕ್ಕಾಗಲಿ ತೊಲಗಿಸುವದಕ್ಕಾಗಲಿ ಆಗಲೇ ಆರದು : ಏಕೆಂದರೆ ಅದು ಕಾರಣವೊಂದಕ್ಕೇ ಅಧೀನವಾಗಿರುತ್ತದೆ ; (ಅದರಲ್ಲಿ) ಇಚ್ಛೆಯು ಒಳಹೊಗುವದಕ್ಕಾಗುವಂತಿರುವದಿಲ್ಲ.

---

1. ಇಲ್ಲಿಯಾದರೂ ಲಕ್ಷಣಕ್ಕೆ ಅವ್ಯಾಪ್ತಿಯಿಲ್ಲವೆ ?– ಎಂದು ಆಕ್ಷೇಪ.

2. ದೋಷವೇ ಮುಂತಾದ ಮೂರು ಕಾರಣದಿಂದುಂಟಾಗಿರಬೇಕು ಜ್ಞಾನ, ಮಿಥ್ಯಾವಸ್ತು ಅದಕ್ಕೆ ವಿಷಯವಾಗಿರಬೇಕು ; ಹೀಗಿದ್ದರೇ ಅದು ಅಧ್ಯಾಸ– ಎಂಬುದು ಈ ಪ್ರಸ್ಥಾನದ ಸಿದ್ಧಾಂತ.

3. ನಾವು ಲಕ್ಷಣವನ್ನು ಹೇಳುವದು ಮಿಥ್ಯಾಜ್ಞಾನಕ್ಕೆ ವಿಷಯವಾದದ್ದು. ನಾವು ಬ್ರಹ್ಮಾಧ್ಯಾಸವೆಂಬುದು ಜ್ಞಾನವಲ್ಲ, ಪುರುಷತಂತ್ರಧ್ಯಾನ– ಎಂದು ಅಭಿಪ್ರಾಯ.

(ಆಕ್ಷೇಪ) :— ಸ್ಮೃತಿಜ್ಞಾನವನ್ನು ಇಚ್ಛೆಯಿಂದ ಉಂಟುಮಾಡಿಕೊಳ್ಳುವದೂ ಮನೋಲಯದಿಂದ (ಅದನ್ನು) ಲಯಗೊಳಿಸುವದೂ ಕಂಡುಬರುತ್ತದೆಯಲ್ಲ[1] !

(ಪರಿಹಾರ) :— ನಿಜ. ಆದರೆ ಸ್ಮೃತಿಯ ಉತ್ಪತ್ತಿಪ್ರಲಯಗಳಲ್ಲಿ ಅವುಗಳ ವ್ಯಾಪಾರವಿರುವದಿಲ್ಲ ; ಮತ್ತೇನೆಂದರೆ ಕಣ್ಣು ತೆರೆಯುವದು, ಮುಚ್ಚುವದು- ಇವುಗಳಂತೆ ಕರಣವ್ಯಾಪಾರ, ಮತ್ತು ಅದಕ್ಕೆ ಅಡ್ಡಿ ಇವುಗಳನ್ನುಂಟುಮಾಡುವದೇ (ಅವುಗಳ ಕೆಲಸ). ಇಷ್ಟೇ ಹೊರತು ಇಚ್ಛೆಗೆ ಜ್ಞಾನವನ್ನುಂಟುಮಾಡುವದರಲ್ಲಿ ವ್ಯಾಪಾರವಿಲ್ಲ. ಆದ್ದರಿಂದ (ಪ್ರಕೃತದಲ್ಲಿ) ಬರಿಯ ಬ್ರಹ್ಮದೃಷ್ಟಿಯನ್ನೇ ಚೋದನಾವಶದಿಂದ ಫಲಕ್ಕಾಗಿಯೋ- ರಾಗವು ತೊಲಗುವದಕ್ಕಾಗಿ ಮತ್ತೊಬ್ಬರ ಸ್ತ್ರೀಯಲ್ಲಿ ಮಾತೃಬುದ್ಧಿಯನ್ನು ಇಟ್ಟುಕೊಳ್ಳುವಂತೆಯೋ- ಇಟ್ಟುಕೊಳ್ಳುತ್ತಾರೆ.[2]

## ಲಕ್ಷಣಭಾಷ್ಯವ್ಯಾಖ್ಯಾನೋಪಸಂಹಾರ

(ಪಂಚಪಾದಿಕಾ)

೨೦. ತದೇವಮ್ ಅನವದ್ಯಮ್ ಅಧ್ಯಾಸಸ್ಯ ಲಕ್ಷಣಂ 'ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ' ಇತಿ ॥

(ಅರ್ಥ)

ಅಂತೂ ಸ್ಮೃತಿರೂಪವಾಗಿದ್ದ ಮತ್ತೊಂದು ಕಡೆಯಲ್ಲಿ ಹಿಂದೆ ಕಂಡದ್ದರ ತೋರುವಿಕೆಯು (ಅಧ್ಯಾಸವು) ಎಂಬ ಅಧ್ಯಾಸಲಕ್ಷಣವು ನಿರ್ದುಷ್ಟವಾಗಿರುತ್ತದೆ.

## ೪. ಭಾಷ್ಯ : ಅಧ್ಯಾಸದ ವಿಷಯಕ್ಕೆ ಮತಾಂತರಗಳು

**ತಂ ಕೇಚಿತ್ ಅನ್ಯತ್ರ ಅನ್ಯಧರ್ಮಾಧ್ಯಾಸ ಇತಿ ವದನ್ತಿ । ಕೇಚಿತ್ತು ಯತ್ರ ಯದಧ್ಯಾಸಃ ತದ್ವಿವೇಕಾಗ್ರಹನಿಬನ್ಧನೋ ಭ್ರಮ ಇತಿ । ಅನ್ಯೇ ತು ಯತ್ರ ಯದಧ್ಯಾಸಃ, ತಸ್ಯೈವ ವಿಪರೀತಧರ್ಮತ್ವಕಲ್ಪನಾಮ್ ಆಚಕ್ಷತ ಇತಿ। ಸರ್ವಥಾಪಿ ತು ಅನ್ಯಸ್ಯ ಅನ್ಯಧರ್ಮಾವಭಾಸತಾಂ ನ ವ್ಯಭಿಚರತಿ ॥**

---

1. ಪ್ರಯತ್ನಪಟ್ಟು ನೆನಪುಮಾಡಿಕೊಳ್ಳುವದುಂಟಲ್ಲ ! ನೆನಪಿಗೆ ಬಂದದ್ದನ್ನು ಮರೆಯುವದಕ್ಕೂ ಪ್ರಯತ್ನಿಸುವದುಂಟಲ್ಲ !- ಎಂದು ಆಕ್ಷೇಪ.

2. ಪ್ರಯತ್ನಪೂರ್ವಕವಾಗಿ ಮತ್ತೊಬ್ಬ ಸ್ತ್ರೀಯನ್ನು ತಾಯಿಯೆಂದು ಭಾವಿಸಿಕೊಳ್ಳುವಂತೆ 'ನಾಮವೇ ಬ್ರಹ್ಮವು' ಎಂದು ಶಾಸ್ತ್ರದಲ್ಲಿ ಹೇಳಿರುವಂತೆ ಭಾವಿಸಿಕೊಳ್ಳುತ್ತಾರೆ. ನಾಮವನ್ನು ಬ್ರಹ್ಮವೆಂದು ತಪ್ಪಾಗಿ ತಿಳಿದುಕೊಳ್ಳುವದಿಲ್ಲ.

# ಮತಾಂತರಗಳ ವಿವರಣೆ

(ಪಂಚಪಾದಿಕಾ)

೨೧. **'ತಂ ಕೇಚಿತ್'** ಇತ್ಯಾದಿನಾ ಅಧ್ಯಾಸಸ್ವರೂಪೇ ಮತಾನ್ತರಮ್ ಉಪನ್ಯಸ್ಯತಿ ಸ್ವಮತಪರಿಶುದ್ಧಯೇ । ಕಥಮ್ ? ಅನ್ಯತ್ರ ಶುಕ್ತಿಕಾದೌ ಅನ್ಯಧರ್ಮಸ್ಯ ಅರ್ಥಾನ್ತರಸ್ಯ ರಜತಾದೇಃ, ಜ್ಞಾನಾಕಾರಸ್ಯ ಬಹಿಷ್ಠಸ್ಯೈವ ವಾ ಅಧ್ಯಾಸ ಇತಿ ವದನ್ತಿ। **ಕೇಚಿತ್ತು ಯತ್ರ ಯದಧ್ಯಾಸಃ ತದ್ವಿವೇಕಾಗ್ರಹಣನಿಬನ್ಧನೋ[1] ಭ್ರಮ ಇತಿ** । ಯತ್ರ ಯಸ್ಯ ಅಧ್ಯಾಸಃ, ತಯೋರ್ವಿವೇಕಸ್ಯ ಅಗ್ರಹಣಾತ್ ತನ್ನಿಬನ್ಧನೋಽಯಮ್ ಏಕತ್ವಭ್ರಮಃ- ಇತಿ 'ವದನ್ತಿ' ಇತ್ಯನುಷಙ್ಗಃ । **ಅನ್ಯೇ ತು ಯತ್ರ ಯದಧ್ಯಾಸಃ, ತಸ್ಯೈವ ವಿಪರೀತಧರ್ಮತ್ವಕಲ್ಪನಾಮ್ ಆಚಕ್ಷತೇ**- ಇತಿ। ಯತ್ರ ಶುಕ್ತಿಕಾದೌ ಯಸ್ಯ ರಜತಾದೇಃ, ಅಧ್ಯಾಸಃ, ತಸ್ಯೈವ ಶುಕ್ತಿಶಕಲಾದೇಃ । ವಿಪರೀತಧರ್ಮತ್ವಸ್ಯ ರಜತಾದಿರೂಪತ್ವಸ್ಯ ಕಲ್ಪನಾಮ್ ಅವಿದ್ಯಮಾನಸ್ಯೈವ ಅವಭಾಸಮಾನತಾಮ್ ಆಚಕ್ಷತೇ॥

(ಅರ್ಥ)

**'ತಂ ಕೇಚಿತ್'** (ಅದನ್ನು ಕೆಲವರು) ಮುಂತಾದ (ಭಾಷ್ಯ)ದಿಂದ ಅಧ್ಯಾಸಸ್ವರೂಪ(ದ ವಿಷಯ)ದಲ್ಲಿ ಬೇರೆಯ ಮತಗಳನ್ನು- ತಮ್ಮ ಮತವು ಸರಿಯೆಂದು (ತೋರಿಸಿಕೊಡುವದ)ಕ್ಕಾಗಿ ಉದಾಹರಿಸಿರುತ್ತಾರೆ.

ಹೇಗೆಂದರೆ, (೧) **ಒಂದೆರಲ್ಲಿ** ಎಂದರೆ ಕಪ್ಪೆಯಚಿಪ್ಪೇ ಮುಂತಾದದ್ದರಲ್ಲಿ **ಮತ್ತೊಂದು ಧರ್ಮವನ್ನು** ಎಂದರೆ ಮತ್ತೊಂದು ವಸ್ತುವನ್ನು- ಜ್ಞಾನಾಕಾರವಾದ ಅಥವಾ ಹೊರಗೇ ಇರುವ- ಬೆಳ್ಳಿಯೇ ಮುಂತಾದದ್ದನ್ನು, ಹುಟ್ಟುಗಟ್ಟುವದು ಎಂದು ಹೇಳುತ್ತಾರೆ.[2] (೨) **'ಕೇಚಿತ್ತು ಯತ್ರ ಯದಧ್ಯಾಸಃ ತದ್ವಿವೇಕಾಗ್ರಹಣನಿಬನ್ಧನೋ ಭ್ರಮ ಇತಿ'** (ಕೆಲವರಾದರೋ ಯಾವದರಲ್ಲಿ ಯಾವದರ ಅಧ್ಯಾಸವಾಗುತ್ತದೆಯೋ, ಅವುಗಳ ವಿವೇಕವನ್ನು ಗ್ರಹಿಸದೆ ಇರುವದೆಂಬ ನಿಮಿತ್ತದಿಂದುಂಟಾದ ಭ್ರಮೆ ಎನ್ನುವರು).[3] (ಇದರ ವಿವರ) : ಯಾವದರಲ್ಲಿ ಯಾವದನ್ನು ಅಧ್ಯಾಸಮಾಡಲಾಗಿದೆಯೋ, ಅವುಗಳು ವಿಂಗಡವಾಗಿರುವದನ್ನು ಗ್ರಹಿಸದೆ ಇರುವದರಿಂದ ಆ ನಿಮಿತ್ತದಿಂದ (ಅವುಗಳೆರಡೂ) ಒಂದೇ (ವಸ್ತು) ಎಂಬೀ ಭ್ರಮೆಯಾಗಿರುವದು 'ಎಂದು ಹೇಳುತ್ತಾರೆ', ಎಂಬ ಮಾತು

1. ಮೂಲದಲ್ಲಿ 'ಅಗ್ರಹ'ವೆಂದೇ ಇದೆ; ಆದರೆ ಈ ಟೀಕಾಕಾರರ ಮತದಲ್ಲಿ 'ವಿವೇಕಾಗ್ರಹಣ' ಎಂದು ಪಾಠ.

2. ಇದು ವಿಜ್ಞಾನವಾದಿಗಳ ಮತ್ತು ನೈಯಾಯಿಕರ ಮತ.

3. ಇದು ಆಗಲೆ ತಿಳಿಸಿರುವ ಅಖ್ಯಾತಿವಾದಿಗಳ ಮತ.

ಗಳನ್ನು ಹಿಂದಿನ ವಾಕ್ಯದಿಂದ ಸೇರಿಸಿಕೊಳ್ಳಬೇಕು. (೩) **'ಅನ್ಯೇ ತು ಯತ್ರ ಯದಧ್ಯಾಸಃ ತಸ್ಯೈವ ವಿಪರೀತಧರ್ಮತ್ವಕಲ್ಪನಾಮ್ ಆಚಕ್ಷತೇ'** (ಮತ್ತೆ ಕೆಲವರಾದರೋ ಯಾವದರಲ್ಲಿ ಯಾವದರ ಅಧ್ಯಾಸವಾಗಿರುವದೋ ಅದಕ್ಕೇ ವಿಪರೀತಧರ್ಮತ್ವವನ್ನು ಕಲ್ಪಿಸುತ್ತಾರೆ.)[1] ಯಾವದರಲ್ಲಿ, ಕಪ್ಪೆಯಚಿಪ್ಪು ಮುಂತಾದದ್ದರಲ್ಲಿ, ಯಾವದರ ಬೆಳ್ಳಿ ಮುಂತಾದ ಯಾವದರ ಅಧ್ಯಾಸವಾಗಿರುವದೋ, ಅದಕ್ಕೇ ವಿಪರೀತಧರ್ಮತ್ವವನ್ನು ಎಂದರೆ ಬೆಳ್ಳಿ ಮುಂತಾದದ್ದಕ್ಕೆ ವಿಪರೀತಧರ್ಮತ್ವವನ್ನು ಎಂದರೆ, ಬೆಳ್ಳಿ ಮುಂತಾದ ರೂಪವುಳ್ಳದ್ದೆಂಬ ಕಲ್ಪನೆಯನ್ನು, ಇಲ್ಲದ್ದೇ ಹಾಗೆ ತೋರುವದೆಂಬುದನ್ನು (ಅಧ್ಯಾಸ) ಎನ್ನುತ್ತಾರೆ.

## ಸ್ವಮತಕ್ಕೆ ಎಲ್ಲರ ಅನುಮತಿ

(ಪಂಚಪಾದಿಕಾ)

೨೨. 'ಸರ್ವಥಾಪಿ ತು' ಇತಿ ಸ್ವಮತಾನುಸಾರಿತ್ವಂ ಸರ್ವೇಷಾಂ ಕಲ್ಪನಾಪ್ರಕಾರಾಣಾಂ ದರ್ಶಯತಿ । ಅನ್ಯಸ್ಯ ಅನ್ಯಧರ್ಮಾವಭಾಸಿತ್ವಂ ನಾಮ ಲಕ್ಷಣಮ್ 'ಪರತ್ರ' ಇತ್ಯುಕ್ತೇ ಅರ್ಥಾತ್ ಪರಾವಭಾಸಃ ಸಿದ್ಧಃ ಇತಿ ಯದವಾದಿಷ್ಮ, ತನ್ನ ವ್ಯಭಿಚರತಿ । ಕಥಮ್ ? ಪೂರ್ವಸ್ಮಿನ್ ಕಲ್ಪೇ ಜ್ಞಾನಾಕಾರಸ್ಯ ಬಹಿಷ್ಠಸ್ಯ ವಾ ಶುಕ್ತಿಧರ್ಮತ್ವಾವಭಾಸನಾತ್. ನ ವ್ಯಭಿಚರತಿ[2] । ದ್ವಿತೀಯೇಽಪಿ ಶುಕ್ತಿರಜತಯೋಃ ಪೃಥಕ್ಸತೋಃ ಅಪೃಥಗವಭಾಸೋಽಭಿಮಾನಾತ್ । ತೃತೀಯೇಽಪಿ ಶುಕಿಶಕಲಸ್ಯ ರಜತರೂಪಪ್ರತಿಭಾಸನಾತ್ । ಪೂರ್ವದೃಷ್ಟತ್ವಸ್ಮೃತಿರೂಪತ್ವಯೋಃ ಸರ್ವತ್ರ ಅವ್ಯಭಿಚಾರಾತ್, ನ ವಿವಾದ ಇತ್ಯಭಿಪ್ರಾಯಃ ॥

(ಅರ್ಥ)

**'ಸರ್ವಥಾಪಿ ತು'** (ಹೇಗೇ ಆಗಲಿ) ಎಂಬುದು ಎಲ್ಲಾ ಕಲ್ಪನಾಪ್ರಕಾರಗಳೂ ತಮ್ಮ ಮತವನ್ನೇ ಅನುಸರಿಸಿವೆ ಎಂದು ತಿಳಿಸುತ್ತದೆ. (ಈ ವಾಕ್ಯದ ಅಭಿಪ್ರಾಯವೇನೆಂದರೆ) : ಒಂದು ಮತ್ತೊಂದರ ಧರ್ಮವುಳ್ಳದ್ದರಂತೆ ತೋರುವದು (ಅಧ್ಯಾಸವು) ಎಂದು ಲಕ್ಷಣವು. ಒಂದು ಕಡೆಯಲ್ಲಿ ಎಂದರೆ ಅರ್ಥವಶದಿಂದ ಮತ್ತೊಂದರ ತೋರಿಕೆ ಎಂದು (ತಾನೇ) ಸಿದ್ಧವಾಗುತ್ತದೆ ಎಂದು ಹೇಳಿದ್ದೆವಷ್ಟೆ ? ಅದು (ಹೇಗೂ ಇಲ್ಲಿ) ತಪ್ಪುವದಿಲ್ಲ. ಹೇಗೆಂದರೆ, ಮೊದಲನೆಯ ಕಲ್ಪದಲ್ಲಿ ಜ್ಞಾನಾಕಾರವಾದ ಅಥವಾ ಹೊರಗೇ ಇರುವ (ಬೆಳ್ಳಿಯು) ಕಪ್ಪೆಚಿಪ್ಪಿನ ಧರ್ಮವಾಗಿ ತೋರುವದರಿಂದ (ಲಕ್ಷಣವು) ತಪ್ಪಲಿಲ್ಲ. ಎರಡನೆಯ ಕಲ್ಪದಲ್ಲಿ)ಯೂ ಕಪ್ಪೆಯು ಚಿಪ್ಪು, ಬೆಳ್ಳಿ – ಇವುಗಳು ಬೇರೆಬೇರೆಯಾಗಿದ್ದುಕೊಂಡಿದ್ದೇ ಬೇರೆಯಲ್ಲವೆಂಬಂತೆ

1. ಇದು ಅಸತ್ಖ್ಯಾತಿವಾದಿಗಳಾದ ಶೂನ್ಯವಾದಿಗಳ ಮತವೆನ್ನಬಹುದು.
2. 'ನ ವ್ಯಭಿಚಾರಃ' ಎಂಬುದು ಮೂಲಕ್ಕೆ ಹೊಂದುಗೆಯಾದ ಪಾಠವಲ್ಲ.

(ಏಕತ್ವದ) ಅಭಿಮಾನದಿಂದ ತೋರುತ್ತದೆ. ಮೂರನೆಯ (ಕಲ್ಪ)ದಲ್ಲಿಯೂ ಕಪ್ಪೆಯಚಿಪ್ಪಿನ ತುಂಡು ಬೆಳ್ಳಿಯ ರೂಪದಿಂದ ತೋರುವದರಿಂದ (ಲಕ್ಷಣವು) ತಪ್ಪಲಿಲ್ಲ. (ಹೀಗೆ) ಹಿಂದೆ ಕಂಡದ್ದಾಗಿರುವದು, ಸ್ಮೃತಿರೂಪವಾಗಿರುವದು (ಇವು) ಎಲ್ಲಿಯೂ ತಪ್ಪದೆ ಇರುವದರಿಂದ (ಈ ಲಕ್ಷಣದ ವಿಷಯಕ್ಕೆ) ವಿವಾದವಿಲ್ಲ ಎಂದು ಅಭಿಪ್ರಾಯ.[1]

## ಅಧ್ಯಾಸಲಕ್ಷಣವಾಕ್ಯದಲ್ಲಿ ಪದಕೃತ್ಯ
## 'ಪರತ್ರ' ಎಂಬ ಪದದ ಪ್ರಯೋಜನ

(ಪಂಚಪಾದಿಕಾ)

೨೩. 'ತತ್ರ ಸ್ಮೃತಿರೂಪಃ ಪೂರ್ವದೃಷ್ಟಾವಭಾಸಃ' ಇತ್ಯೇತಾವತಿ ಲಕ್ಷಣೇ ನಿರಧಿಷ್ಠಾನಾಧ್ಯಾಸವಾದಿಪಕ್ಷೇಽಪಿ ನಿರುಪಪತ್ತಿಕೇ ಲಕ್ಷಣವ್ಯಾಪ್ತಿಃ ಸ್ಯಾತ್ ಇತಿ ತನ್ನಿವೃತ್ತಯೇ 'ಪರತ್ರ' ಇತ್ಯುಚ್ಯತೇ ॥

(ಅರ್ಥ)

'ಇಲ್ಲಿ ಸ್ಮೃತಿರೂಪವಾದ ಪೂರ್ವದೃಷ್ಟದ ಅವಭಾಸವು' ಎಂದಿಷ್ಟೇ (ಅಧ್ಯಾಸದ) ಲಕ್ಷಣ ಎಂದರೆ ನಿರುಪಪತ್ತಿಕವಾದ ನಿರಧಿಷ್ಠಾನಾಧ್ಯಾಸವಾದಿಯ[2] ಪಕ್ಷದಲ್ಲಿಯೂ ಲಕ್ಷಣವು ಹೊಂದಿಕೊಂಡಿತು. ಅದನ್ನು ತಪ್ಪಿಸಿಕೊಳ್ಳುವದಕ್ಕಾಗಿ 'ಪರತ್ರ' (ಮತ್ತೊಂದು ಕಡೆಯಲ್ಲಿ)[3] ಎಂದು ಹೇಳಿರುತ್ತದೆ.

## ನಿರಧಿಷ್ಠಾನವಾದವು ಅಯುಕ್ತ

(ಪಂಚಪಾದಿಕಾ)

೨೪. ಕಥಂ ನಿರುಪಪತ್ತಿಕೋಽಯಂ ಪಕ್ಷಃ? ನ ಹಿ ನಿರಧಿಷ್ಠಾನೋಽಧ್ಯಾಸೋ ದೃಷ್ಟಪೂರ್ವಃ, ಸಂಭವೀ ವಾ। ನನು ಕೇಶೋಣ್ಡ್ರುಕಾದ್ಯವಭಾಸೋ ನಿರಧಿಷ್ಠಾನೋ ದೃಷ್ಟಃ। ನ। ತಸ್ಯಾಪಿ ತೇಜೋಽವಯವಾಧಿಷ್ಠಾನತ್ವಾತ್। ನನು ರಜತೇ ಸಂವಿತ್, ಸಂವಿದಿ ರಜತಮ್ ಇತಿ ಪರಸ್ಪರಾಧಿಷ್ಠಾನೋ ಭವಿಷ್ಯತಿ ಬೀಜಾಙ್ಕುರಾದಿವತ್। ನೈತತ್ ಸಾರಮ್। ನ ತತ್ರ ಯತೋ ಬೀಜಾದ್

---

1. ಆದ್ದರಿಂದ ಒಂದು ಮತ್ತೊಂದಾಗಿ ಕಾಣುವದೇ ಅಧ್ಯಾಸವು ಎಂಬ ಲಕ್ಷಣವನ್ನು ಎಲ್ಲರೂ ಒಪ್ಪಿದಂತೆಯೇ ಆಯಿತು ಎಂದು ಭಾವ.

2. ಯಾವದು ಹುಸಿಯಾಗಿ ತೋರುವದೋ, ಆ ತೋರಿಕೆಗೆ ಆಧಾರವಾಗಿ ಯಾವದೂ ಇರುವದೇ ಇಲ್ಲ- ಎಂಬ ಶೂನ್ಯವಾದಿಯ ಪಕ್ಷವು ನಿರಧಿಷ್ಠಾನವಾದ; ಅದಕ್ಕೆ ಯಾವ ಯುಕ್ತಿಯೂ ಇಲ್ಲವಾದ್ದರಿಂದ ಅದನ್ನು 'ನಿರುಪಪತ್ತಿಕ'ವೆಂದಿದೆ.

3. ಪರತ್ರ ಎಂದರೆ ಬೇರೊಂದು ವಸ್ತುವಾದ ಅಧಿಷ್ಠಾನದಲ್ಲಿ ಎಂದರ್ಥ- ಎಂದು ಭಾವ.

ಯೋಽಙ್ಕುರಃ, ತತ ಏವ ತದ್ಬೀಜಮ್, ಅಪಿ ತು ಅಙ್ಕುರಾನ್ತರಾತ್ । ಇಹ ಪುನಃ, ಯಸ್ಯಾಂ ಸಂವಿದಿ ಯದ್ ರಜತಮ್ ಅವಭಾಸತೇ, ತಯೋರೇವ ಇತರೇತರಾಧ್ಯಾಸಃ। ತತೋ ದುರ್ಘಟಮೇತತ್। ಬೀಜಾಙ್ಕುರಾದಿಷ್ವಪಿ ನ ಬೀಜಾಙ್ಕುರಾನ್ತರಪರಂಪರಾಮಾತ್ರೇಣ ಅಭಿಮತವಸ್ತುಸಿದ್ಧಿಃ। ಪ್ರತೀತಿತೋ ವಸ್ತುತಶ್ಚ ಅನಿವೃತ್ತಾಕಾಙ್ಕ್ಷತ್ವಾತ್। ತಥಾ ಚ ಕುತ ಇದಮೇವಮ್? -ಇತಿ ಪರ್ಯನುಯೋಗೇ 'ದೃಷ್ಟತ್ವಾತ್ ಏವಮ್' ಇತಿ ತತ್ರ ಚ ದೂರಂ ವಾ ಪರಿಧಾವ್ಯ ಸ್ಥಾತವ್ಯಮ್ । ಅನ್ಯಥಾ ಹೇತುಪರಂಪರಾಮೇವ ಅವಲಮ್ಬ್ಯ ಕ್ವಚಿದಪಿ ಅನವತಿಷ್ಠಮಾನಃ, ನಾನವಸ್ಥಾದೋಷಮ್ ಅತಿವರ್ತೇತ। ಅಪಿ ಚ ನ ಕ್ವಚಿತ್ ನಿರವಧಿಕೋ ನ ಇತ್ಯೇವ ಬಾಧಾವಗಮೋ ದೃಷ್ಟಃ। ಯತ್ರಾಪಿ ಅನುಮಾನಾದ್ ಆಪ್ತವಚನಾದ್ವಾ ನ ಸರ್ಪಃ ಇತ್ಯೇವಾವಗಮಃ, ತತ್ರಾಪಿ ಕಿಂ ಪುನರಿದಮ್ ಇತ್ಯಪೇಕ್ಷಾದರ್ಶನಾತ್ ಪುರೋಽವಸ್ಥಿತಂ ವಸ್ತುಮಾತ್ರಮ್ ಅವಧಿಃ, ವಿದ್ಯತೇ। ಪ್ರಧಾನಾದಿಷ್ವಪಿ ಜಗತ್ಕಾರಣೇ ತ್ರಿಗುಣತ್ವಾದಿಬಾಧಃ ಅಧಿಗತಾವಧಿ ರೇವ। ಅಥವಾ ಸರ್ವಲೋಕಸಾಕ್ಷಿಕಮೇತತ್, ಕೇಶೋಣ್ಡ್ರಕಾದಾವಪಿ ತದ್ಬಾಧೇ ತದನುಷಙ್ಗ ಏವ ಬೋಧೇ ಬಾಧ್ಯತೇ, ನ ಬೋಧಃ। ಅತಃ, ತದವಧಿಃ ಸರ್ವಸ್ಯ ಬಾಧಃ। ತೇನ ತನ್ಮಾತ್ರಸ್ಯ ಬಾಧಾಭಾವಾತ್, ಸ್ವತಶ್ಚ ವಿಶೇಷಾನುಪಲಬ್ಧೇಃ, ಕೂಟಸ್ಥಪರೋಕ್ಷೈಕರಸಚೈತನ್ಯಾವಧಿ ಸರ್ವಸ್ಯ ಬಾಧಃ ॥

(ಅರ್ಥ)

(ಆಕ್ಷೇಪ) :- ಈ ಪಕ್ಷವು ನಿರುಪಪತ್ತಿಕವೆಂಬುದು ಹೇಗೆ ?

(ಪರಿಹಾರ) :- ಏಕೆಂದರೆ ನಿರಧಿಷ್ಠಾನವಾದ[1] ಅಧ್ಯಾಸವು ಕಂಡೂ ಬಂದಿಲ್ಲ, ಸಂಭವಿಸುವದೂ ಇಲ್ಲ.

(ಆಕ್ಷೇಪ) :- ಕೇಶೋಂಡ್ರಕವೇ[2] ಮುಂತಾದದ್ದರ ತೋರಿಕೆಯು ಅಧಿಷ್ಠಾನವಿಲ್ಲದೆ ಇರುವದು ಕಂಡುಬರುತ್ತದೆಯಲ್ಲ !

(ಪರಿಹಾರ) :- ಹಾಗಲ್ಲ. ಏಕೆಂದರೆ ಅದಕ್ಕೂ ಬಿಸಿಲಿನ ಅವಯುವವು ಅಧಿಷ್ಠಾನವಾಗಿರುತ್ತದೆ.

(ಆಕ್ಷೇಪ) :- ಬೆಳ್ಳಿಯಲ್ಲಿ ಜ್ಞಾನ, ಜ್ಞಾನದಲ್ಲಿ ಬೆಳ್ಳಿ- ಹೀಗೆ ಒಂದ ಕ್ಕೊಂದು ಬೀಜಾಂಕುರಾದಿಗಳಂತೆ ಅಧಿಷ್ಠಾನವಾಗಬಹುದಲ್ಲ !

---

1. 'ಅಧಿಷ್ಠಾನ' ಎಂಬ ಮಾತನ್ನು ಈ ಅರ್ಥದಲ್ಲಿ ಭಾಷ್ಯದಲ್ಲಿ ಉಪಯೋಗಿಸಿಲ್ಲ ; ಈ ಗ್ರಂಥದಲ್ಲಿಯೇ ಮೊದಲು ಇದು ಕಂಡುಬರುತ್ತದೆ.

2. ಬಿಸಿಲಿನಲ್ಲಿ ಕೂದಲಿನ ಸುರುಳಿಯಂತೆ ಗುಂಡಾಗಿ ಕಾಣುವ ದೃಶ್ಯಕ್ಕೆ ಈ ಹೆಸರು. 'ಕೇಶೋಂಡ್ರಕ' ಎಂದೂ ಇದನ್ನು ಕರೆಯುತ್ತಾರೆ ಇದನ್ನು ಬಟರಕವೆಂದೂ ಕರೆಯುವರಂತೆ.

(ಪರಿಹಾರ) :- ಇದು ಸಾರವಾದ (ಮಾತಲ್ಲ). ಅಲ್ಲಿ ಯಾವ ಬೀಜದಿಂದ ಯಾವ ಮೊಳಕೆಯೋ, ಅದರಿಂದಲೇ ಆ ಬೀಜವೂ (ಆಗು)ವದಿಲ್ಲ ; ಮತ್ತೇನೆಂದರೆ-ಮತ್ತೊಂದು ಮೊಳಕೆಯಿಂದ (ಆಗುತ್ತದೆ). ಇಲ್ಲಿಯಾದರೋ, ಯಾವ ಜ್ಞಾನದಲ್ಲಿ ಯಾವ ಬೆಳ್ಳಿಯು ತೋರುತ್ತದೆಯೋ ಆ (ಜ್ಞಾನ, ಬೆಳ್ಳಿ) ಎರಡಕ್ಕೇ ಇತರೇತರಾಧ್ಯಾಸ(ವೆನ್ನುತ್ತಿರುವಿರಿ). ಆದ್ದರಿಂದ ಇದನ್ನು ಹೊಂದಿಸಲಾಗುವಂತಿಲ್ಲ. ಬೀಜಾಂಕುರಾದಿಗಳಲ್ಲಿಯೂ ಬೇರೆಯ ಬೀಜಾಂಕುರಗಳ ಪರಂಪರೆ ಇದ್ದಮಾತ್ರದಿಂದ ಇಷ್ಟವಾದ ವಸ್ತುವಿನ ಸಿದ್ಧಿಯಾಗುವದಿಲ್ಲ[1] ; ಏಕೆಂದರೆ ಪ್ರತೀತಿಯಿಂದಲೂ ವಸ್ತು(ಸ್ಥಿತಿ)ಯಿಂದಲೂ ಆಕಾಂಕ್ಷೆಯು ತೊಲಗುವದೇ ಇಲ್ಲ.[2] ಆದ್ದರಿಂದ 'ಇದು ಹೀಗಿರುವದೇಕೆ ?' ಎಂಬ ಪ್ರಶ್ನೆಗೆ 'ಕಂಡಿರುವದರಿಂದ ಹೀಗೆ' ಎಂದು ದೂರವಾಗಿಯಾದರೂ ಓಡಿ ನಿಲ್ಲಬೇಕು, ಹಾಗಲ್ಲದೆ ಇದ್ದರೆ ಹೇತುಪರಂಪರೆಯನ್ನು ಆಶ್ರಯಿಸಿಕೊಂಡು ಎಲ್ಲಿಯೂ ನಿಲ್ಲದಿರುವವನಿಗೆ ಅನವಸ್ಥಾದೋಷವನ್ನು ಮೀರುವದಕ್ಕೆ ಆಗದೆಹೋದೀತು.[4]

? ಇದೂ ಅಲ್ಲದೆ ಯಾವ ಅವಧಿಯೂ ಇಲ್ಲದೆ 'ಅಲ್ಲ' ಎಂದಿಷ್ಟೇ ಬಾಧವಾಗುವದು ಎಲ್ಲಿಯೂ ಕಂಡಿಲ್ಲ. ಎಲ್ಲಿ ಅನುಮಾನದಿಂದಲೋ ಆಪ್ತವಚನದಿಂದಲೋ 'ಹಾವಲ್ಲ' ಎಂದೇ ಅರಿವಾಗುವದೋ 'ಹಾಗಾದರೆ ಮತ್ತೇನಿದು ?' ಎಂಬ ಅಪೇಕ್ಷೆಯು ಕಂಡುಬರುವದರಿಂದ ಎದುರುಗಿರುವ ವಸ್ತುಮಾತ್ರವೇ ಅವಧಿಯಾಗಿರುತ್ತದೆ.[5] ಪ್ರಧಾನಾದಿಗಳಲ್ಲಿಯೂ ಜಗತ್ಕಾರಣದಲ್ಲಿ ತ್ರಿಗುಣತ್ವವೇ ಮುಂತಾದದ್ದರ ಬಾಧವು ತಿಳಿದುಕೊಂಡದ್ದನ್ನು ಅವಧಿಯಾಗಿ ಮಾಡಿಕೊಂಡೇ ಆಗುತ್ತದೆ.[6] ಅಥವಾ ಕೇಶೋಂಡ್ರಕವೇ- ಮುಂತಾದವುಗಳ (ವಿಷಯದ)ಲ್ಲಿಯೂ ಅವುಗಳ ಬಾಧವಾಗುವಾಗ ಜ್ಞಾನಕ್ಕೆ ಅವುಗಳ ಸೋಂಕು ಬಾಧಿತವಾಗು

---

1. ಇನ್ನು ಹೀಗೆಯೇ ಬೀಜದಿಂದ ಮೊಳಕೆ ಮೊಳಕೆಯಿಂದ ಬೀಜವಾಗುತ್ತದೆ ಎಂದು ಗೊತ್ತಾಗಬೇಕು, ಹಿಂದುಹಿಂದಕ್ಕೆ ಬೀಜಾಂಕುರಗಳು ಇವೆ ಎಂದು ಗೊತ್ತಾದರೆ ಸಾಲದು.

2. ಸುಮ್ಮನೆ ಬೀಜಾಂಕುರಗಳ ಸಾಲನ್ನು ಕಂಡದ್ದರಿಂದ ಮನಸ್ಸಿಗೆ ಸಮಾಧಾನವಾಗದು.

3. ಅನಾದಿಯಾಗಿ ಕಾರ್ಯಕಾರಣಭಾವವಿರುವದೇ ವಸ್ತುಸ್ವಭಾವವೆಂಬ ಅರಿವಾಗಿ ಸುಮ್ಮನಾಗಬೇಕು.

4. ಕೊನೆಗೆ ಏನೊಂದೂ ನಿರ್ಣಯವಾಗದೆ ವಿಚಾರಕ್ಕೆ ನಿಲುಗಡೆಯಿಲ್ಲದೆಹೋಗುತ್ತದೆ.

5. ಇದಲ್ಲದಿದ್ದರೆ ಮತ್ತೇನು ?-ಎಂಬ ಆಕಾಂಕ್ಷೆ ಹೋಗಬೇಕಾದರೆ ಇದು ಹಾವಲ್ಲ, ಹಗ್ಗವೇ ಎಂದು ಎದುರಿಗಿರುವ ವಸ್ತುವಿನ ನಿರ್ಣಯವಾಗಬೇಕು. ಹಾವಲ್ಲ- ಎಂದಿಷ್ಟೇ ತಿಳಿದರೆ ಸಾಲದು.

6. ಕಾರ್ಯದಲ್ಲಿ ಮೂರು ಗುಣವಿಲ್ಲವಾದ್ದರಿಂದ ಪ್ರಧಾನವು ಕಾರಣವಲ್ಲವೆಂಬ ಬಾಧವಾಗುತ್ತದೆ.

ತ್ತದೆಯೇ ಹೊರತು ಜ್ಞಾನವೇ (ಬಾಧಿತ)ವಾಗುವದಿಲ್ಲ. ಜನರಿಗೆಲ್ಲ ಇದು ಅನುಭವದಲ್ಲಿರುತ್ತದೆ.[1] ಆದ್ದರಿಂದ ಎಲ್ಲಾ ಬಾಧವೂ ಆ (ಜ್ಞಾನವೆಂಬ) ಅವಧಿಯುಳ್ಳದ್ದು.[2] ಆದ್ದರಿಂದ ಆ (ಜ್ಞಾನ)ಸಾಮಾನ್ಯವು ಬಾಧಿತವಾಗದೆ ಇರುವದರಿಂದ ಸ್ವತಃ[3] ಯಾವ ವಿಶೇಷವೂ (ಅದರಲ್ಲಿ) ಕಾಣದೆಇರುವದರಿಂದಲೂ ಯಾವದರ ಬಾಧವಾದರೂ ಕೂಟಸ್ಥವೂ ಅಪರೋಕ್ಷವೂ ಏಕರಸವೂ ಆದ ಚೈತನ್ಯವೆಂಬ ಅವಧಿಯುಳ್ಳದ್ದು (ಎಂದಾಯಿತು).

(ಪಂಚಪಾದಿಕಾ)

೨೫ ನಾಪಿ ಅಧ್ಯಸ್ತಮಪಿ ಅಸದೇವ । ತಥಾತ್ವೇ ಪ್ರತಿಭಾಸಾಯೋಗಾತ್ । ನನು ಸರ್ವಮೇವೇದಮ್ ಅಸತ್ ಇತಿ ಭವತೋ ಮತಮ್ । ಕ ಏವಮಾಹ ? ಅನಿರ್ವಚನೀಯಾನಾದ್ಯವಿದ್ಯಾತ್ಮಕಮ್- ಇತ್ಯುದ್ಘೋಷಿತಮಸ್ಮಾಭಿಃ । ಅಥ ಪುನಃ ವಿದ್ಯೋದಯೇ ಅವಿದ್ಯಾಯಾ ನಿರುಪಾಖ್ಯತಾಮ್ ಅಙ್ಗೀಕೃತ್ಯ ಅಸತ್ತ್ವಮ್ ಉಚ್ಯೇತ, ಕಾಮಮ್ ಅಭಿಧೀಯತಾಮ್, ತಥಾ ಚ ಬಾಧಕ ಜ್ಞಾನಮ್ 'ನೇದಂ ರಜತಮ್' ಇತಿ ವಿಶಿಷ್ಟದೇಶಕಾಲಸಂಬದ್ಧಂ ರಜತಂ ವಿಲೋಪಯದೇವ ಉದೇತಿ, ನ ದೇಶಾನ್ತರಸಂಬನ್ಧಮ್ ಆಪಾದಯತಿ । ತಥಾ ಅನವಗಮಾತ್ । ತಥಾ ಚ ದೂರವರ್ತಿನೀಂ ರಜ್ಜುಂ ಸರ್ಪಂ ಮನ್ಯಮಾನಃ, ತನ್ನಿಕಟವರ್ತಿನಾ ಆಪ್ತೇನ 'ನಾಯಂ ಸರ್ಪಃ' ಇತ್ಯುಕ್ತೇ ಸರ್ಪಾಭಾವಮಾತ್ರಂ ಪ್ರತಿಪದ್ಯತೇ, ನ ತಸ್ಯ ದೇಶಾನ್ತರವರ್ತಿತ್ವಮ್ ತತ್ಪ್ರತಿಪತ್ತೌ ಅಸಾಮರ್ಥ್ಯಾದ್ ವಾಕ್ಯಸ್ಯ । ನಾರ್ಥಾಪತ್ತ್ಯಾ । ಇಹ ಭಗ್ನಘಟಾಭಾವವತ್, ತಾವನ್ಮಾತ್ರೇಣಾಪಿ ತತ್ಸಿದ್ಧೇಃ । ಯತ್ರಾಪಿ ಸರ್ಪಬಾಧಪೂರ್ವಕೋ ರಜ್ಜುವಿಧಿಃ ಅಕ್ಷಜನ್ಯಃ, ತಾದೃಶ ವಾಕ್ಯಜನ್ಯೋ ವಾ, ತತ್ರಾಪಿ ಸ ಏವ ನ್ಯಾಯಃ । ತಥಾ ಅನವಗಮಾತ್ । ತದೇವಂ ನ ಕ್ವಚಿತ್ ನಿರಧಿಷ್ಠಾನೋಽಧ್ಯಾಸಃ । ತಸ್ಮಾತ್ ಸಾಧೂಕ್ತಂ 'ಪರತ್ರ' ಇತಿ ॥

(ಅರ್ಥ)

ಅಧ್ಯಸ್ತವಾದದ್ದು (ಬರಿಯ) ಅಸತ್ತೇ ಆಗಿರುವದಿಲ್ಲ.[5] ಏಕೆಂದರೆ ಹಾಗಿದ್ದರೆ ಅದು ತೋರಿಕೊಳ್ಳಬಾರದಾಗುವದು.[6]

---

1. ಆದ್ದರಿಂದ ಜ್ಞಾನಾವಧಿಕವಾಗಿಯೇ ಬಾಧವಾಗುತ್ತದೆ.

2. ತೋರಿಕೆಯ ವಸ್ತು ಬಾಧಿತವಾದರೂ ಜ್ಞಾನವು ಬಾಧಿತವಾಗುವದಿಲ್ಲ.

3. ವಿಷಯಸಂಬಂಧದಿಂದಲೇ ಘಟಜ್ಞಾನ, ಪಟಜ್ಞಾನ- ಎಂದು ಮುಂತಾದ ಭೇದವಾಗಿರುತ್ತದೆಯೇ ಹೊರತು ಜ್ಞಾನಸ್ವರೂಪದಲ್ಲಿ ಯಾವ ಹೆಚ್ಚುಕಡಿಮೆಯೂ ಆಗಿರುವದಿಲ್ಲ.

4. ವೃತ್ತಿಜ್ಞಾನವೂ ನಾಶವಾಗಬಹುದಾದರೂ ಅದರಲ್ಲಿರುವ ಜ್ಞಾನದ ತಿರುಳಾದ ಸಾಕ್ಷಿಚೈತನ್ಯವೆಂಬ ಅವಧಿ ಇದ್ದುಕೊಂಡೇ ಇರುತ್ತದೆ.

5. ಅಧಿಷ್ಠಾನವು ಸತ್ತೇ ಆಗಿರಬೇಕು ಎಂದದ್ದರಿಂದ ಅಧ್ಯಸ್ತವು ಸೊನ್ನೆ ಎಂತ ತಿಳಿಯಬಾರದು.

6. ಇಲ್ಲದ್ದು ತೋರಿಕೊಳ್ಳಲಾರದು.

(ಆಕ್ಷೇಪ) :- ಇದೆಲ್ಲವೂ ಅಸತ್ತೇ ಎಂಬುದು ನಿಮ್ಮ ಮತವಲ್ಲವೆ ?

(ಪರಿಹಾರ) :- ಯಾರು ಹೀಗೆಂದು ಹೇಳುತ್ತಾರೆ? **ಅನಿರ್ವಚನೀಯ ವಾದ ಅನಾದಿಯಾದ ಅವಿದ್ಯಾಸ್ವರೂಪವಾದದ್ದೆಂದು ನಾವು ಸಾರಿರುತ್ತೇವೆ.**[1] ಆದರೆ ವಿದ್ಯೆಯು ಉಂಟಾದಾಗ ಅವಿದ್ಯೆಯು ನಿರುಪಾಖ್ಯವಾಗುವದೆಂಬುದನ್ನು ಒಪ್ಪಿ (ಅದನ್ನು) ಅಸತ್ತೆನ್ನುವದಾದರೆ ಅವಶ್ಯವಾಗಿ (ಹಾಗೆ)ನ್ನಬಹುದು. ಆದ್ದರಿಂದಲೇ ಬಾಧಕಜ್ಞಾನವು 'ಇದು ಬೆಳ್ಳಿಯಲ್ಲ' ಎಂದು ಆ (ಗೊತ್ತಾದ) ದೇಶಕಾಲಗಳಿಗೆ ಸಂಬಂಧಪಟ್ಟಿರುವ ಬೆಳ್ಳಿಯನ್ನು ಇಲ್ಲವಾಗಿಸಿಯೇ ಹುಟ್ಟುತ್ತದೆ. ಬೇರೆಯ ದೇಶಕಾಲಗಳಿಗೆ ಸಂಬಂಧ(ಪಟ್ಟಿದೆಯೆಂದೇನೂ) ಮಾಡುವದಿಲ್ಲ; ಏಕೆಂದರೆ ಹಾಗೇನೂ (ಅಗ) ನಿಶ್ಚಯವಾಗುವದಿಲ್ಲ.[2] ಆದ್ದರಿಂದಲೇ ದೂರದಲ್ಲಿರುವ ಹಗ್ಗವನ್ನು ಹಾವೆಂದು ಬಗೆದವನಿಗೆ ಅದರ ಹತ್ತಿರವಿರುವ ಆಪ್ತನು[3] 'ಇದು ಹಾವಲ್ಲ' ಎಂದರೆ ಹಾವಿಲ್ಲವೆಂದು ಮಾತ್ರ ತಿಳಿದುಕೊಳ್ಳುತ್ತಾನೆಯೇ ಹೊರತು, ಆ (ಹಾವು) ಮತ್ತೊಂದು ಕಡೆ ಇದೆ (ಎಂದೇನೂ ತಿಳಿದು) ಕೊಳ್ಳುವದಿಲ್ಲ. ಏಕೆಂದರೆ (ಆಪ್ತನ) ವಾಕ್ಯಕ್ಕೆ ಆ ಜ್ಞಾನವನ್ನುಂಟುಮಾಡುವ ಸಾಮರ್ಥ್ಯವಿರುವಿರುವದಿಲ್ಲ.[4] ಅರ್ಥಾಪತ್ತಿಯಿಂದಲೂ (ಹಾಗೆಂದು ಗೊತ್ತಾಗು) ವದಿಲ್ಲ.[5] ಏಕೆಂದರೆ ಇಲ್ಲಿ ಒಡೆದುಹೋಗಿರುವ ಗಡಿಗೆ ಇಲ್ಲ ಎನ್ನುವಂತೆ ಅಷ್ಟುಮಾತ್ರದಿಂದಲೇ ಅದು ಸಿದ್ಧವಾಗುತ್ತದೆ.[6] (ಇನ್ನು) ಎಲ್ಲಿ ಹಾವಲ್ಲವೆಂಬ ಬಾಧಪೂರ್ವಕವಾಗಿ ಹಗ್ಗವೆಂಬ (ಜ್ಞಾನವು) ಪ್ರತ್ಯಕ್ಷದಿಂದ ಉಂಟಾಗುತ್ತದೆಯೋ, ಅಥವಾ ಅಂಥ (ಆಪ್ತ)ವಾಕ್ಯದಿಂದ ಉಂಟಾಗುತ್ತದೆಯೋ ಅಲ್ಲಿಯೂ ಅದೇ ನ್ಯಾಯವು. ಏಕೆಂದರೆ ಹಾಗೆಂದು ಗೊತ್ತಾಗಿರುವದಿಲ್ಲ.[7]

---

1. ಇದೇ ಅನಿರ್ವಚನೀಯಖ್ಯಾತಿಯ ತಿರುಳು. ತೋರುವದು ಸತ್ತೂ ಅಲ್ಲ, ಅಸತ್ತೂ ಅಲ್ಲ ; ಅವೆರಡಕ್ಕಿಂತ ಬೇರೆಯ ವರ್ಗಕ್ಕೆ ಸೇರಿದ್ದು.

2. ಬೆಳ್ಳಿಯು ಇಲ್ಲಿಲ್ಲ, ಮತ್ತೊಂದು ಕಡೆಯಲ್ಲಿದೆ ಎಂದೇನೂ ನಿಶ್ಚಯವಾಗುವದಿಲ್ಲ.

3. ವಿಷಯವನ್ನು ತಿಳಿದು ನಂಬುವದಕ್ಕೆ ಅರ್ಹನಾದವನು.

4. ಹಾವಿಲ್ಲವೆಂದು ತಿಳಿಸುವದಲ್ಲದೆ, ಮತ್ತೊಂದು ಕಡೆಯಲ್ಲಿದೆ ಎಂದೂ ತಿಳಿಸುವದಕ್ಕೆ ಅದಕ್ಕೆ ಸಾಮರ್ಥ್ಯವಿರುವದಿಲ್ಲ.

5. 'ಅರ್ಥಾಪತ್ತಿ' ಎಂದರೆ ಇಲ್ಲಿಲ್ಲವೆಂದಮೇಲೆ ಮತ್ತೆಲ್ಲಿಯೋ ಇದೆ ಎಂದಾಯಿತು ಎಂದು ತಾನೇ ಸಿದ್ಧವಾಗುವವೆಂಬ ಜ್ಞಾನ. ಈ ಸಂದರ್ಭದಲ್ಲಿ ಹಾಗೇನೂ ಆಗುವದಿಲ್ಲ.

6. ಗಡಿಗೆ ಒಡೆದರೆ ಇಲ್ಲಿಲ್ಲ ಎಂಬಿಷ್ಟರಿಂದಲೇ ವಿಚಾರಕನಿಗೆ ತೃಪ್ತಿಯಾಗುವಂತೆ, ಇದು ಹಾವಲ್ಲವೆಂದರೆ ಅಷ್ಟರಿಂದಲೇ ತೃಪ್ತಿಯಾಗುತ್ತದೆ: ಮತ್ತೆಲ್ಲಿಯೋ ಇರಬೇಕು ಎಂದು ಅವನು ತರ್ಕಿಸುವದಕ್ಕೆ ಹೋಗುವದಿಲ್ಲ.

7. ಹಗ್ಗವೇ ಎಂಬ ಜ್ಞಾನವಾದಾಗಲೂ ಬೇರೆ ಕಡೆಯಲ್ಲಿ ಆ ತೋರಿದ ಹಾವಿರಬೇಕು ಎನ್ನಿಸುವದಿಲ್ಲ. 'ತಥಾವಗಮಾತ್' ಎಂಬ ಪಾಠವಿದ್ದರೆ ಇಲ್ಲಿದೆ ಎಂದಿಷ್ಟೇ ಗೊತ್ತಾಗುತ್ತದೆ ಎಂದು ಅಭಿಪ್ರಾಯ. ಅಂತೂ ಬಾಧಿತವಾದದ್ದು ಎಲ್ಲಿಯೂ ಇಲ್ಲವೆಂದೇ ಗೊತ್ತಾಗುವದರಿಂದ ಆ ಅರ್ಥದಲ್ಲಿ ಅದನ್ನು ಅಸತ್ತು ಎಂದು ಬೇಕಾದರೆ ಅನ್ನಬಹುದು ಎಂದು ಅಭಿಪ್ರಾಯ.

ಅಂತೂ ಹೀಗೆ ಎಲ್ಲಿಯೂ ಅಧಿಷ್ಠಾನವಿಲ್ಲದ ಅಧ್ಯಾಸವಿರುವದಿಲ್ಲ. ಆದ್ದರಿಂದ 'ಪರತ್ರ' (ಮತ್ತೊಂದು ಕಡೆಯಲ್ಲಿ) ಎಂದು (ಲಕ್ಷಣದಲ್ಲಿ ವಿಶೇಷಣವನ್ನು ಕೊಟ್ಟು ಹೇಳಿದ್ದು)[1] ಸರಿಯಾಗಿದೆ.

## 'ಸ್ಮೃತಿರೂಪ', 'ಪೂರ್ವದೃಷ್ಟ' ಎಂಬ ವಿಶೇಷಣಗಳ ಪ್ರಯೋಜನ

(ಪಂಚಪಾದಿಕಾ)

೨೬. ಯದ್ಯೇವಮ್, 'ಪರತ್ರ ಪೂರ್ವದೃಷ್ಟಾವಭಾಸಃ' ಇತ್ಯೇತಾವದಸ್ತು ಲಕ್ಷಣಮ್ । ತಥಾವಿಧಸ್ಯ ಸ್ಮೃತಿರೂಪತ್ವಾವ್ಯಭಿಚಾರಾತ್ । ಸತ್ಯಮ್ । ಅರ್ಥಲಭ್ಯಸ್ಯ ಸ್ಮೃತಿತ್ವಮೇವ ಸ್ಯಾತ್, ನ ಸ್ಮೃತಿರೂಪತ್ವಮ್ । ನ ಚ ಸ್ಮೃತಿವಿಷಯಸ್ಯ ಅಧ್ಯಾಸತ್ವಮ್ ಇತ್ಯುಕ್ತಮ್ । ಯದ್ಯೇವಮ್, ಏತಾವದಸ್ತು ಲಕ್ಷಣಮ್, 'ಪರತ್ರ ಸ್ಮೃತಿರೂಪಾವಭಾಸಃ' ಇತಿ । ತತ್ರ 'ಪರತ್ರ' ಇತ್ಯುಕ್ತೇ ಅರ್ಥಲಭ್ಯಸ್ಯ ಪರಾವಭಾಸಸ್ಯ ಸ್ಮೃತಿರೂಪತ್ವಂ ವಿಶೇಷಣಮ್ । ನ ಹಿ ಪರಸ್ಯ । ಅಸಂಪ್ರಯುಕ್ತಸ್ಯ ಪೂರ್ವದೃಷ್ಟತ್ವಾಭಾವೇ ಸ್ಮೃತಿರೂಪತ್ವಸಂಭವಃ । ಸತ್ಯಮ್ ವಿಸ್ಪಷ್ಟಾರ್ಥಂ ಪೂರ್ವದೃಷ್ಟಗ್ರಹಣಮ್ ಇತಿ ಯಥಾನ್ಯಾಸಮೇವ ಲಕ್ಷಣಮ್ ಅಸ್ತು ॥

(ಅರ್ಥ)

(ಆಕ್ಷೇಪ):- ಹೀಗಾದರೆ 'ಪರತ್ರ ಪೂರ್ವದೃಷ್ಟಾವಭಾಸಃ' (ಮತ್ತೊಂದು ಕಡೆಯಲ್ಲಿ ಹಿಂದೆ ನೋಡಿದ್ದರ ತೋರುವಿಕೆ) ಎಂದಿಷ್ಟೇ ಲಕ್ಷಣ(ವಾಕ್ಯ)ವಿರಲಿ. ಏಕೆಂದರೆ ಅಂಥದ್ದು ಸ್ಮೃತಿರೂಪವಾಗುವದು ತಪ್ಪಿದ್ದಲ್ಲ.[2]

(ಪರಿಹಾರ):- ನಿಜ. (ಆದರೆ) ಅರ್ಥವಶದಿಂದ ಗೊತ್ತಾದದ್ದು ಸ್ಮೃತಿಯೆಂದೇ ಆಗುತ್ತದೆ, ಸ್ಮೃತಿರೂಪವಾಗಲಾರದು.[3] ಆದರೆ ಸ್ಮೃತಿಗೆ ವಿಷಯವಾದದ್ದು ಅಧ್ಯಾಸವಲ್ಲ ಎಂದು ಹಿಂದೆ (ಪುಟ ೨೫) ಹೇಳಿದ್ದಾಗಿದೆ.

(ಆಕ್ಷೇಪ):- ಹೀಗಾದರೆ 'ಪರತ್ರ ಸ್ಮೃತಿರೂಪಾವಭಾಸಃ' (ಮತ್ತೊಂದು ಕಡೆಯಲ್ಲಿ ಸ್ಮೃತಿರೂಪವಾದದ್ದರ ತೋರುವಿಕೆ) ಎಂದಿಷ್ಟೇ ಲಕ್ಷಣ(ವಾಕ್ಯ)ವಿರಲಿ. ಆಗ 'ಪರತ್ರ' (ಮತ್ತೊಂದು ಕಡೆಯಲ್ಲಿ) ಎಂದರೆ ಅರ್ಥದ ವಶದಿಂದಲೇ ಮತ್ತೊಂದರ ಅವಭಾಸವು ದೊರೆಯುವದರಿಂದ (ಅದಕ್ಕೆ) ಸ್ಮೃತಿರೂಪವಾಗಿರು

---

1. ಒಂದು ಮತ್ತೊಂದು ಕಡೆಯಲ್ಲಿ ತೋರುವದು ಅಧ್ಯಾಸ ಎಂದದ್ದು.
2. ಹಿಂದೆ ನೋಡಿದ್ದರೆ, ಅದರ ನೆನಪಿದ್ದೇ ಅಲ್ಲವೆ, ಈಗ ಅದು ಕಾಣುವದು ?
3. ಅಧ್ಯಸ್ತವಾದದ್ದು ಸ್ಮೃತಿಯಾಗಿರಕೂಡದು, ಸ್ಮೃತಿಯ ರೂಪವುಳ್ಳದ್ದಾಗಿರಬೇಕು.

ದೆಂಬುದು ವಿಶೇಷಣವಾಗಿರುತ್ತದೆ(ಯಲ್ಲ)! ಏಕೆಂದರೆ ಆ ಮತ್ತೊಂದು ಸಂಪ್ರಯುಕ್ತ ವಲ್ಲದ್ದರಿಂದ ಹಿಂದೆ ನೋಡಿದ್ದಲ್ಲವೆಂದಾಗಿ ಸ್ಮೃತಿರೂಪವಾಗಿರುವ ಸಂಭವವಿರುವದಿಲ್ಲ.[1]

(ಪರಿಹಾರ) :- ನಿಜ. (ಆದರೂ) ವಿಸ್ಪಷ್ಟವಾಗಿರಲೆಂದು[2] 'ಪೂರ್ವದೃಷ್ಟ' ಎಂಬ ಮಾತನ್ನು ಹೇಳಿದೆ. ಆದ್ದರಿಂದ (ಭಾಷ್ಯಕಾರರು) ಇಟ್ಟಿರುವಂತೆಯೇ ಲಕ್ಷಣ(ವಾಕ್ಯ)ವಾಗಲಿ.[3]

## ೪. ಅಧ್ಯಾಸಕ್ಕೆ ದೃಷ್ಟಾಂತಗಳು

**ತಥಾ ಚ ಲೋಕೇ ಅನುಭವಃ-'ಶುಕ್ತಿಕಾ ಹಿ ರಜತವದವಭಾಸತೇ', ಏಕಶ್ಚನ್ದ್ರಃ ಸದ್ವಿತೀಯವತ್'- ಇತಿ ॥**

### ಎರಡು ದೃಷ್ಟಾಂತಗಳ ಉದ್ದೇಶ

(ಪಂಚಪಾದಿಕಾ)

೨೭. **'ತಥಾ ಚ ಲೋಕೇ ಅನುಭವಃ'** ಇತ್ಯುದಾಹರಣದ್ವಯೇನ ಲೌಕಿಕಸಿದ್ಧಮೇವೇದಮ್ ಅಧ್ಯಾಸಸ್ಯ ಸ್ವರೂಪಂ ಲಕ್ಷಿತಮ್, ಕಿಮತ್ರ ಯುಕ್ತ್ಯಾ? –ಇತಿ ಕಥಯತಿ ॥

**'ಶುಕ್ತಿಕಾ ಹಿ ರಜತವದವಭಾಸತೇ'** ಇತಿ। ನನು ನ ಶುಕ್ತಿಕಾ ಪ್ರತಿಭಾಸತೇ, ರಜತಮೇವ ಪ್ರತಿಭಾಸತೇ। ತೇನ 'ಶುಕ್ತಿಕಾ' ಇತಿ 'ರಜತವತ್' ಇತಿ ಚ ಉಭಯಂ ನೋಪಪದ್ಯತೇ। ಉಚ್ಯತೇ। ಶುಕ್ತಿಕಾಗ್ರಹಣಮ್ ಉಪರಿತನಸಮ್ಯಗ್ಜ್ಞಾನಸಿದ್ಧಂ ಪರಮಾರ್ಥತಃ ಶುಕ್ತಿಕಾತ್ವಮ್ ಅಪೇಕ್ಷ್ಯ ; ವತಿಗ್ರಹಣಂ ತು ಸಂಪ್ರಯುಕ್ತಸ್ಯ ಅರಜತಸ್ವರೂಪಸ್ಯ ಮಿಥ್ಯಾರಜತಸಂಭೇದ ಇವಾವಭಾಸನಮ್ ಅಙ್ಗೀಕೃತ್ಯ। ಮಿಥ್ಯಾತ್ವಮಪಿ ರಜತಸ್ಯ ಆಗನ್ತುಕದೋಷನಿಮಿತ್ತತ್ವಾತ್, ಅನನ್ತರಬಾಧದರ್ಶನಾಚ್ಚ ಕಥ್ಯತೇ। ನ ಪುನಃ ಪರಮಾರ್ಥಾಭಿಮತಾದ್ ರಜತಾತ್ ಅನ್ಯತ್ವಮಾಶ್ರಿತ್ಯ। ತತ್ರ ಅಸಂಪ್ರಯುಕ್ತತ್ವಾತ್ ರಜತಸ್ಯ ನೇದನ್ತಾವಭಾಸಸ್ತದ್ಗತಃ, ಕಿಂ ತು ಸಂಪ್ರಯುಕ್ತಗತ ಏವ। ಅಪರೋಕ್ಷಾವಭಾಸಸ್ತು ಸಂಸ್ಕಾರ

---

1. ಇಂದ್ರಿಯಕ್ಕೆ ಗೋಚರವಾಗಿ ಅನುಭವಕ್ಕೆ ಬಾರದೆ ಇದ್ದಿದ್ದರೆ ಅದರ ನೆನಪಿನಂತೆ ಇರುವ ಮತ್ತೊಂದು ಅರಿವು ಉಂಟಾಗಲೇ ಆರದು.

2. ಹಿಂದೆ ಕಂಡದ್ದೆಂದು ಗೊತ್ತಾಗುವಂತಿದ್ದರೂ ಆ ತಪ್ಪು ಅಭಿಪ್ರಾಯವನ್ನು ಬಾಯಿಬಿಟ್ಟು ಹೇಳುವದಕ್ಕಾಗಿ.

3. ಈ ಮಾತನ್ನು ಬಿಟ್ಟರೂ ಆಗಬಹುದಾದರೂ, ಇಟ್ಟುಕೊಂಡರೆ ದೋಷವೇನೂ ಇಲ್ಲದ್ದರಿಂದ ಭಾಷ್ಯಕಾರರು ಬರೆದುಕೊಂಡಿರುವಂತೆಯೇ ಇದ್ದರೂ ಆಗುತ್ತದೆ.

ಜನ್ಮನೋಽಪಿ ರಜತೋಲ್ಲೇಖಸ್ಯ ದೋಷಬಲಾತ್, ಇನ್ದ್ರಿಯಜಜ್ಞಾನಾನ್ತರ್ಭಾವಾಚ್ಚ ಇತಿ ದ್ರಷ್ಟವ್ಯಮ್ ॥

ತತ್ರ ಶುಕ್ತಿಕೋದಾಹರಣೇನ ಸಂಪ್ರಯುಕ್ತಸ್ಯ ಅನಾತ್ಮಾ ರಜತಮ್ ಇತಿ ದರ್ಶಿತಮ್, ನಿರಞ್ಜನಸ್ಯ ಚೈತನ್ಯಸ್ಯ ಅಸ್ಮದರ್ಥೇಽನಿದಮಂಶಸ್ಯ ಅನಾತ್ಮಾ ತದವಭಾಸ್ಯತ್ವೇನ ಯುಷ್ಮದರ್ಥಲಕ್ಷಣಾಪನ್ನೋಽಹಙ್ಕಾರಃ, ಅಧ್ಯಸ್ತ ಇತಿ ಪ್ರದರ್ಶನಾರ್ಥಮ್ । ದ್ವಿಚನ್ದ್ರೋದಾಹರಣೇನ ಜೀವೇಶ್ವರಯೋರ್ಜೀವಾನಾಂ ಚ ಅನಾತ್ಮರೂಪೋ ಭೇದಾವಭಾಸಃ ಇತಿ ದರ್ಶಿತಮ್ ॥

(ಅರ್ಥ)

'ತಥಾ ಚ ಲೋಕೇಽನುಭವಃ' (ಆದ್ದರಿಂದಲೇ ಲೋಕದಲ್ಲಿ ಹೀಗೆ ಅನುಭವವಿರುತ್ತದೆ) ಎಂದು ಎರಡು ಉದಾಹರಣೆಗಳನ್ನು ಕೊಟ್ಟು ಲೋಕಸಿದ್ಧವಾಗಿರುವ ಈ ಅಧ್ಯಾಸದ ಸ್ವರೂಪಕ್ಕೆ (ನಾವು) ಲಕ್ಷಣವನ್ನು ಹೇಳಿರುತ್ತೇವೆ. ಇಲ್ಲಿ ಯುಕ್ತಿಯಿಂದಾಗಬೇಕಾದದ್ದೇನು ? –ಎಂದು ಹೇಳಿರುತ್ತದೆ.

'ಶುಕ್ತಿಕಾ ಹಿ ರಜತವದವಭಾಸತೇ' (ಕಪ್ಪೆಯಚಿಪ್ಪೇ ಬೆಳ್ಳಿಯಂತೆ ಕಾಣುತ್ತದೆ) ಎಂದು (ಭಾಷ್ಯ).[1]

(ಆಕ್ಷೇಪ) :- ಕಪ್ಪೆಯಚಿಪ್ಪು ಕಾಣಿಸುವದಿಲ್ಲ, ಬೆಳ್ಳಿಯೇ ಕಾಣಿಸುತ್ತಿರುತ್ತದೆ ಅಲ್ಲವೆ ? ಆದ್ದರಿಂದ 'ಕಪ್ಪೆಯಚಿಪ್ಪು' ಎಂದು (ಹೇಳಿದ್ದು), 'ಬೆಳ್ಳಿಯಂತೆ' ಎಂದೂ (ಹೇಳಿದ್ದು) ಎರಡೂ ಹೊಂದುವದಿಲ್ಲವಲ್ಲ !

(ಪರಿಹಾರ) :- ಹೇಳುತ್ತೇವೆ. 'ಕಪ್ಪೆಯಚಿಪ್ಪು' ಎಂದಿರುವದು ಆ ಮೇಲಿನ ಸರಿಯಾದ ತಿಳಿವಳಿಕೆಯಿಂದ ಸಿದ್ಧವಾದ ನಿಜವಾದ ಶುಕ್ತಿಕಾತ್ವವನ್ನಿಟ್ಟುಕೊಂಡು. (ಬೆಳ್ಳಿಯಂತೆ ಎಂದು ಅಂತೆ ಎಂಬರ್ಥದ) ವತ್ (ಪ್ರತ್ಯಯವನ್ನು) ಪ್ರಯೋಗಿಸಿರುವದಾದರೋ ಸಂಪ್ರಯುಕ್ತವಾದ ಅರಜತಸ್ವರೂಪಕ್ಕೆ ಮಿಥ್ಯಾರಜತದ ಮಿಶ್ರಣವಾದಂತೆ ತೋರುವದನ್ನಿಟ್ಟುಕೊಂಡು. ರಜತವು ಮಿಥ್ಯೆ ಎನ್ನುವದಾದರೂ ನಡುವೆ ಬಂದ ದೋಷದ ನಿಮಿತ್ತವಾಗಿ ಆಗುವದರಿಂದಲೂ ಆಮೇಲೆ ಬಾಧವಾಗುವದರಿಂದಲೂ ಹೇಳಿರುವದೇ ಹೊರತು ಸತ್ಯವೆಂದು (ನಾವು) ಒಪ್ಪಿರುವ ರಜತಕ್ಕಿಂತ ಬೇರೆಯೆಂದಿಟ್ಟುಕೊಂಡಲ್ಲ.[2] ಇಲ್ಲಿ ರಜತವು ಸಂಪ್ರಯುಕ್ತವಾಗಿಲ್ಲ[3]ದ್ದರಿಂದ ಇದು ಎಂಬ ತೋರಿಕೆಯು ಅದಕ್ಕೆ ಸೇರಿದ್ದಲ್ಲ, ಮತ್ತೇನೆಂದರೆ ಸಂಪ್ರ

1. ಇದರ ವಿಷಯದ ಚರ್ಚೆ ಪ್ರಾರಂಭವಾಗಿದೆ ಎಂದರ್ಥ.

2. 'ಮಿಥ್ಯಾ' ಎಂಬ ವಿಶೇಷಣವು ರಜತದ ಸ್ವರೂಪವನ್ನು ತಿಳಿಸುತ್ತದೆ; ಮತ್ತೊಂದೆಂದು ತಿಳಿಸುವದಿಲ್ಲ. ಪಂ. ವಿ.

3. ಇಂದ್ರಿಯಕ್ಕೂ ಮಿಥ್ಯಾರಜತಕ್ಕೂ ಸಂಯೋಗವಾಗಿಲ್ಲ.

ಯುಕ್ತವಾದ (ವಸ್ತುವಿಗೇ) ಸೇರಿದ್ದು.[1] ಅಪರೋಕ್ಷವಾದ ಅವಭಾಸವೋ ಬೆಳ್ಳಿಯ ತೋರಿಕೆಯು ಸಂಸ್ಕಾರದಿಂದ ಉಂಟಾಗಿದ್ದರೂ ದೋಷಬಲದಿಂದಲೂ ಇಂದ್ರಿಯದಿಂದುಂಟಾದ ಜ್ಞಾನದೊಳಗೆ ಅಡಕವಾಗಿರುವದರಿಂದಲೂ (ಆದದ್ದು)[2] –ಎಂದು ತಿಳಿಯಬೇಕು.

ಇಲ್ಲಿ ಕಪ್ಪೆಯಚಿಪ್ಪಿನ ಉದಾಹರಣೆಯಿಂದ ಸಂಪ್ರಯುಕ್ತವಾದ (ಕಪ್ಪೆಯ ಚಿಪ್ಪಿಗೆ) ಬೆಳ್ಳಿಯು ಸ್ವರೂಪವಲ್ಲ[3]– ಎಂದು ತಿಳಿಸಿರುವದು, ನಾನು ಎಂಬ ಪದಾರ್ಥದಲ್ಲಿರುವ ಅನಿದಮಂಶವಾದ ನಿರಂಜನವಾಗಿರುವ ಚೈತನ್ಯಕ್ಕೆ ಸ್ವರೂಪ ವಲ್ಲದ, ಅದರಿಂದ ತೋರಿಕೊಳ್ಳುತ್ತಿರುವದರಿಂದ ಯುಷ್ಮದರ್ಥದ ರೂಪವನ್ನು ಹೊಂದಿರುವ ಅಹಂಕಾರವು ಅಧ್ಯಸ್ತವಾಗಿದೆ– ಎಂದು ತಿಳಿಸಿಕೊಡುವದಕ್ಕಾಗಿ.[4] ಇಬ್ಬರು ಚಂದ್ರರ ಉದಾಹರಣೆಯಿಂದ ಜೀವೇಶ್ವರರಿಗೂ ಜೀವರುಗಳಿಗೂ ತೋರುವ ಭೇದವು (ಅವುಗಳ) ಸ್ವರೂಪವಲ್ಲ ಎಂದು ತಿಳಿಸಿರುತ್ತದೆ.[5]

## ಪ್ರಕೃತಾಧ್ಯಾಸದಲ್ಲಿ ದೋಷಜನ್ಯತ್ವವಿದೆ

### (ಪಂಚಪಾದಿಕಾ)

೨೭. ನನು ಬಹಿರರ್ಥೇ ಕಾರಣದೋಷಃ, ಅರ್ಥಗತಃ ಸಾದೃಶ್ಯಾದಿಃ, ಇನ್ದ್ರಿಯಗತಶ್ಚ ತಿಮಿರಾದಿಃ ಉಪಲಭ್ಯತೇ। ತನ್ನಿಮಿತ್ತಶ್ಚ ಅರ್ಥಸ್ಯ ಸಾಂಶತ್ವಾತ್ ಅಂಶಾನ್ತರಾವಗ್ರಹೇಽಪಿ ಅಂಶಾನ್ತರಪ್ರತಿಬನ್ಧಃ ಯುಜ್ಯತೇ[6]। ನ ತ್ವಿಹ ಕಾರಣಾನ್ತರಾಯತ್ತಾ ಸಿದ್ಧಿಃ, ಯೇನ ತದ್ದೋಷಾತ್ ಅನವಭಾಸೋಽಪಿ ಸ್ಯಾತ್।

---

1. ಇದು ಎಂಬಿದು ಸಂಪ್ರಯುಕ್ತವಾದ ಶುಕ್ತಿಯನ್ನೇ ತಿಳಿಸುವ ಜ್ಞಾನ; ಆದ್ದರಿಂದ ಇದು ನಿರಧಿಷ್ಠಾನಭ್ರಾಂತಿಯಲ್ಲ.

2. 'ಇದು ಬೆಳ್ಳಿ' ಎಂದು ಎದುರಿಗೇ ಇರುವಂತೆ ತೋರುವದೇಕೆ? ಎಂದರೆ, ಅದು– ಹಿಂದೆ ನೋಡಿದ ಬೆಳ್ಳಿಯ ಸಂಸ್ಕಾರದಿಂದಾಗಿರುವದರಿಂದ ಪರೋಕ್ಷವಾಗಿರಬೇಕಾಗಿತ್ತಾದರೂ– ದೋಷದಿಂದಲೂ ಇಂದ್ರಿಯಕ್ಕೆ ವಿಷಯವಾದ ಶುಕ್ತಿಯ ಜ್ಞಾನದಲ್ಲಿಯೇ ಅದೂ ಸೇರಿರುವದರಿಂದಲೂ ಎದುರಿಗಿರುವಂತೆ ತೋರುತ್ತದೆ ಎಂದು ಸಮಾಧಾನ.

3. ಅದಕ್ಕೆ ಸೇರಿದ ರೂಪವಲ್ಲ.

4. ನಾನು ಎಂಬಿದರಲ್ಲಿ ಸಾಕ್ಷಿಚೈತನ್ಯವೊಂದು ಅಹಂಕಾರವೊಂದು –ಹೀಗೆ ಎರಡು ಸೇರಿವೆ ಚೈತನ್ಯವು ಅನಿದಮಂಶ ; ಅಹಂಕಾರವು ಇದಮಂಶ ; ವಿಷಯ. ಈ ವಿಷಯಾಂಶವು ಚೈತನ್ಯದಲ್ಲಿ ಅಧ್ಯಸ್ತವಾಗಿವೆ ಎಂಬುವಕ್ಕೆ ಬೆಳ್ಳಿಯ ಉದಾಹರಣೆ ಬಂದಿದೆ.

5. ನಿಜವಾಗಿ ಇರುವವನು ಒಬ್ಬನೇ ಆತ್ಮನೇ ಆದರೂ ಜೀವನೆಂದೂ ಈಶ್ವರನೆಂದೂ ಭೇದವು ತೋರುವದೂ ಅನೇಕರು ಜೀವರುಗಳೆಂದು ತೋರುವದೂ ಅಧ್ಯಾಸದಿಂದ ಎಂದು ತಿಳಿಸುವದಕ್ಕೆ ದ್ವಿಚಂದ್ರೋದಾಹರಣೆ ಎಂದಭಿಪ್ರಾಯ.

6. 'ಯುಜ್ಯೇತ' ಎಂದು ಪಾ॥

ನಿರಂಶಸ್ಯ ಚೈತನ್ಯಸ್ಯ ಸ್ವಯಂಜ್ಯೋತಿಷಃ ತದಯೋಗಾತ್। ನನು ಬ್ರಹ್ಮಸ್ವರೂಪ
ಮ್ ಅನವಭಾಸಮಾನಮ್ ಅಸ್ತ್ಯೇವ। ನ ತದನವಭಾಸನಾತ್ ಜೀವೇ ಅನವ
ಭಾಸವಿಪರ್ಯಾಸೌ ಭವತಃ। ನ ಹಿ ಶುಕ್ತೇರಗ್ರಹಣಾತ್ ಸ್ಥಾಣೌ ಅಗ್ರಹಣಮ್,
ವಿಪರ್ಯಾಸೋ ವಾ। ನನು ನ ಬ್ರಹ್ಮಣೋಽನ್ಯೋ ಜೀವಃ। 'ಅನೇನ ಜೀವೇ
ನಾತ್ಮನಾ' (ಛಾಂ. ೬-೩-೨) ಇತಿ ಶ್ರುತೇಃ। ಅತಃ ತದಗ್ರಹಣಮ್ ಆತ್ಮನ
ಏವ ತತ್। ಏವಂ ತರ್ಹಿ ಸುತರಾಮ್ ಅವಿದ್ಯಾಯಾಸ್ತತ್ರ ಅಸಂಭವಃ। ತಸ್ಯ
ವಿದ್ಯಾತ್ಮಕತ್ವಾತ್ 'ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಮುಂ. ೨-೨-೧೧)
ಇತಿ ತಚ್ಚೈತನ್ಯೇನೈವ ಸರ್ವಸ್ಯ ಭಾಸಮಾನತ್ವಾತ್ ॥

ಉಚ್ಯತೇ। ವಿದ್ಯತ ಏವ, ಅತ್ರಾಪಿ ಅಗ್ರಹಣಾವಿದ್ಯಾತ್ಮಕೋ ದೋಷಃ।
ಪ್ರಕಾಶಸ್ಯ ಆಚ್ಛಾದಕಃ। ಕಥಂ ಗಮ್ಯತೇ? ಶ್ರುತೇಃ, ತದರ್ಥಾಪತ್ತೇಶ್ಚ।
ಶ್ರುತಿಸ್ತಾವತ್ 'ಅನೃತೇನ ಹಿ ಪ್ರತ್ಯೂಢಾಃ' (ಛಾಂ. ೮-೩-೨), 'ಅನೀಶಯಾ
ಶೋಚತಿ ಮುಹ್ಯಮಾನಃ' (ಮುಂ. ೩-೧-೨) ಇತ್ಯೇವಮಾದ್ಯಾ। ತದರ್ಥಾಪತ್ತಿ
ರಪಿ- ವಿದ್ಯೈವ ಸರ್ವತ್ರ ಶ್ರುತಿಷು ಬ್ರಹ್ಮವಿಷಯಾ ಮೋಕ್ಷಾಯ ನಿವೇದ್ಯತೇ।
ತೇನ ಅರ್ಥಾತ್, ಇದಮವಗಮ್ಯತೇ ಜೀವಸ್ಯ ಬ್ರಹ್ಮಸ್ವರೂಪತಾನವಗಮಃ
ಅವಿದ್ಯಾತ್ಮಕೋ ಬನ್ಧಃ ನಿಸರ್ಗತ ಏವಾಸ್ತೀತಿ। ನನು ನ ಜೀವೋ ಬ್ರಹ್ಮಣೋಽನ್ಯ
ಇತ್ಯುಕ್ತಮ್ ಬಾಧಮ್। ಅತ ಏವ ಅರ್ಥಾತ್ ಜೀವೇ ಬ್ರಹ್ಮಸ್ವರೂಪಪ್ರಕಾಶಾ
ಚ್ಛಾದಿಕಾ ಅವಿದ್ಯಾ ಕಲ್ಪ್ಯತೇ। ಅನ್ಯಥಾ ಪರಮಾರ್ಥತಸ್ತತ್ಸ್ವರೂಪತ್ವೇ, ತದವ
ಬೋಧೋಽಪಿ ಯದಿ ನಿತ್ಯಸಿದ್ಧಃ ಸ್ಯಾತ್, ತದಾ ತಾದಾತ್ಮ್ಯೋಪದೇಶೋ
ವ್ಯರ್ಥಃ ಸ್ಯಾತ್। ಅತಃ, ಅನಾದಿಸಿದ್ಧಾವಿದ್ಯಾವಚ್ಛಿನ್ನಾನನ್ತಜೀವನಿರ್ಭಾಸಾ
ಸ್ಪದಮ್ ಏಕರಸಂ ಬ್ರಹ್ಮ ಇತಿ ಶ್ರುತಿಸ್ಮೃತಿನ್ಯಾಯಕೋವಿದೈಃ ಅಭ್ಯುಪಗನ್ತ
ವ್ಯಮ್। ತಥಾ ಚ ಸ್ಮೃತಿಃ- 'ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾ
ವಪಿ।' (ಗೀ. ೧೩-೧೯) ಇತಿ ಕ್ಷೇತ್ರಕ್ಷೇತ್ರಜ್ಞತ್ವನಿಮಿತ್ತಾಮ್ ಅನಾದಿ
ಸಿದ್ಧಾಮ್ ಅವಿದ್ಯಾಂ ಪ್ರಕೃತಿಶಬ್ದೇನಾಹ। 'ಮಾಯಾಂ ತು ಪ್ರಕೃತಿಂ
ವಿದ್ಯಾತ್' (ಶ್ವೇ. ೪-೧೦) ಇತಿ ಶ್ರುತೇಃ। ಅತೋ ಮಾಯಾವಚ್ಛಿನ್ನರೂಪ
ತ್ವಾತ್, ಅನನ್ಯದಪಿ ಬ್ರಹ್ಮರೂಪಮ್.ಆತ್ಮನೋ ನ ವೇತ್ತಿ। ತಥಾ ಚೋಕ್ತಮ್-
'ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ। ಅಜಮನಿದ್ರ
ಮಸ್ವಪ್ನಮದ್ವೈತಂ ಬುಧ್ಯತೇ ತದಾ' (ಗೌ. ಕಾ. ೧-೧೬) ಇತಿ ॥

(ಅರ್ಥ)

(ಆಕ್ಷೇಪ) :- ಹೊರಗಿನ ವಸ್ತುವಿನ ವಿಷಯದಲ್ಲಿ ಕಾರಣದೋಷವು-
ಇಂದ್ರಿಯದಲ್ಲಿ ಪೊರೆಯೋ ಮುಂತಾದದ್ದು ವಸ್ತುವಿನಲ್ಲಿ ಸಾದೃಶ್ಯವೇ
ಮುಂತಾದದ್ದಿರುವದೂ- ಕಾಣಬರುತ್ತದೆ. ಅದರ ನಿಮಿತ್ತದಿಂದ- (ಅರ್ಥವು)

ಸಾಂಶವಾಗಿರುವದರಿಂದ ಒಂದಂಶವನ್ನು ಗ್ರಹಿಸಿದರೂ ಮತ್ತೊಂದಂಶ(ವನ್ನು ಗ್ರಹಿಸದಂತೆ) ಅಡ್ಡಿಯಾಗಿರುವದು ಯುಕ್ತ.[1] ಆದರೆ ಇಲ್ಲಿ (ಆತ್ಮ)ಸಿದ್ಧಿಯು ಮತ್ತೊಂದು ಕಾರಣಕ್ಕೆ ಅಧೀನವಾಗಿರುವದಿಲ್ಲ; ಹಾಗಿದ್ದರಲ್ಲವೆ, ಅದರ ದೋಷದಿಂದ ತೋರದೆ ಇರುವದೂ ಆಗಬಹುದಿತ್ತು ? ಏಕೆಂದರೆ ನಿರಂಶವಾಗಿರುವ ಚೈತನ್ಯವು ಸ್ವಯಂಜ್ಯೋತಿಯಾಗಿರುವದರಿಂದ ಅದು ಹೊಂದುವಂತಿಲ್ಲ.[2]

(ಸಿದ್ಧಾಂತಿ) :- ತೋರದೆ ಇರುವ ಬ್ರಹ್ಮಸ್ವರೂಪವು (ಇಲ್ಲಿಯೂ) ಇದೆಯಲ್ಲ !

(ಆಕ್ಷೇಪ) :- ಅದು ತೋರದೆ ಇದ್ದ(ಮಾತ್ರ)ದಿಂದ ಜೀವನು ತೋರದೆ ಇರುವದೂ ತಪ್ಪಾಗಿ ತೋರಿಬರುವದೂ ಆಗಲಾರದು. ಕಪ್ಪೆಯಚಿಪ್ಪನ್ನು ತಿಳಿದುಕೊಳ್ಳದೆ ಇದ್ದ(ಮಾತ್ರ)ದಿಂದ ಮೋಟುಮರವು ತೋರದೆ ಇರುವದಾಗಲಿ, ತಪ್ಪಾಗಿ ಕಾಣಬರುವದಾಗಲಿ (ಉಂಟಾಗಲಾರದಷ್ಟೆ) ?

(ಸಿದ್ಧಾಂತಿ) :- ಜೀವನು ಬ್ರಹ್ಮಕ್ಕಿಂತ ಬೇರೆಯಲ್ಲವಲ್ಲ ! ಏಕೆಂದರೆ 'ಈ ಜೀವರೂಪದಿಂದ (ಒಳಹೊಕ್ಕು ನಾಮರೂಪಗಳನ್ನು ವಿಂಗಡಿಸುವೆನು') (ಛಾಂ. ೬-೩-೩) ಎಂದು ಶ್ರುತಿಯಿದೆ. ಆದ್ದರಿಂದ ಆ (ಬ್ರಹ್ಮ)ವನ್ನು ತಿಳಿಯದೆ ಇರುವದೆಂಬುದು ತನ್ನನ್ನೇ (ತಿಳಿಯದೆ) ಇದ್ದಂತೆ.

(ಆಕ್ಷೇಪ) :- ಹೀಗಾದರೆ, ಅವಿದ್ಯೆಯು ಆ (ಬ್ರಹ್ಮದಲ್ಲಿರುವದು) ಇನ್ನೂ ಅಸಂಭವ(ವಾಯಿತು) ; ಏಕೆಂದರೆ ಅದು ವಿದ್ಯಾಸ್ವರೂಪವಾಗಿರುತ್ತದೆ.[3] 'ಅದರ ಬೆಳಕಿನಿಂದ ಇದೆಲ್ಲವೂ ಬೆಳಗುತ್ತಿದೆ' (ಮುಂ. ೨-೨-೧೧) ಎಂಬ (ಶ್ರುತಿಯಿಂದ) ಅದರ ಅರಿವಿನಿಂದಲೇ ಎಲ್ಲವೂ ಕಾಣಿಸುತ್ತಿರುತ್ತದೆ.

(ಸಿದ್ಧಾಂತಿ) :- ಹೇಳುತ್ತೇವೆ.[4] ಇಲ್ಲಿಯೂ ಅಗ್ರಹಣಾವಿದ್ಯಾಸ್ವರೂಪವಾದ[5] (ಬ್ರಹ್ಮರೂಪದ) ಬೆಳಕನ್ನು ಮುಚ್ಚುವ ದೋಷವು ಇದ್ದೇ ಇದೆ.

---

1. ಆದ್ದರಿಂದ ಭ್ರಾಂತಿಯಾಗಬಹುದು.

2. ಆ ಜೀವನ ಚೈತನ್ಯವು ಸ್ವಯಂಜ್ಯೋತಿ, ಮತ್ತು ನಿರಂಶ, ಆದ್ದರಿಂದ ಅದರಲ್ಲಿ ಒಂದಂಶವನ್ನು ತಿಳಿಯಲಿಲ್ಲ _ಎಂಬುದು ಹೊಂದುವದಿಲ್ಲ.

3. ಬ್ರಹ್ಮವು ಜ್ಞಾನಸ್ವರೂಪವಾಗಿರುತ್ತದೆ ; ಅದರಲ್ಲಿ ಅಜ್ಞಾನವು ಹೇಗೆ ಬಂತು ?_ ಎಂದು ಆಕ್ಷೇಪ. ಇದೇ ಆಕ್ಷೇಪವನ್ನು ಬ್ರಹ್ಮಸಿದ್ಧಿಯಲ್ಲಿಯೂ ಒಡ್ಡಿದೆ. 'ನ ತಾವದ್ಬ್ರಹ್ಮಣಃ, ತಸ್ಯ ವಿದ್ಯಾತ್ಮನಃ ಕಲ್ಪನಾಶೂನ್ಯತ್ವಾತ್' ಎಂಬ ಬ್ರ. ಸಿ. ಪುಟ 10ರಲ್ಲಿರುವ ವಾಕ್ಯವನ್ನು ನೋಡಿರಿ.

4. ಇಲ್ಲಿಯವರೆಗೆ ಅಧ್ಯಾಸಕ್ಕೆ ಕಾರಣದೋಷವು ಇಲ್ಲ ಎಂಬ ಆಕ್ಷೇಪವನ್ನು ವಿವರಿಸಿದ್ದಾಯಿತು. ಈಗ ಸಿದ್ಧಾಂತವನ್ನು ಹೇಳುತ್ತಾರೆ.

5. ಇದೇ ಹಿಂದೆ ಹೇಳಿದ ಮೂಲಾವಿದ್ಯೆ. ಇದೇ ಬ್ರಹ್ಮದಲ್ಲಿ ಆಗಿರುವ ಅಧ್ಯಾಸಕ್ಕೆ ಕಾರಣವಾಗಿರುವ ಅರ್ಥಗತದೋಷವೆಂದಂತೆ ಆಯಿತು.

(ಆಕ್ಷೇಪಕ) :- ಅದು ಹೇಗೆ ಗೊತ್ತು ?

(ಸಿದ್ಧಾಂತಿ) :- ಶ್ರುತಿಯಿಂದಲೂ ಅದರ ಅರ್ಥಾಪತ್ತಿಯಿಂದಲೂ[1] (ಗೊತ್ತಾಗುತ್ತದೆ). ಮೊದಲನೆಯದಾಗಿ ಶ್ರುತಿ (ಯಾವದೆಂದರೆ) 'ಅನೃತದಿಂದ ಹೊರದೂಡಲ್ಪಟ್ಟವರಾಗಿ' (ಛಾಂ. ೮-೩-೨), 'ಅಶಕ್ತಿಯಿಂದ ಮೋಹಿತನಾಗಿ (ಶೋಕಿಸುತ್ತಾನೆ)[2]- ಎಂಬಿದೇ ಮುಂತಾದದ್ದು. ಅದರ ಅರ್ಥಾಪತ್ತಿಯೂ (ಇದೆ); ಹೇಗೆಂದರೆ, ಶ್ರುತಿಗಳೆಲ್ಲ ಬ್ರಹ್ಮವಿಷಯವಾದ ವಿದ್ಯೆಯನ್ನೇ ತಿಳಿಸಿಕೊಟ್ಟಿದೆ. ಇದರಿಂದ ಅರ್ಥವಶದಿಂದ ಜೀವನಿಗೆ[3] ತಾನು ಬ್ರಹ್ಮಸ್ವರೂಪನೆಂಬುದನ್ನು ಅರಿಯದಿರುವದೆಂಬ ಅವಿದ್ಯಾತ್ಮಕಬಂಧವು ನಿಸರ್ಗದಿಂದಲೇ ಇದೆಯೆಂದು ನಿಶ್ಚಯವಾಗುತ್ತದೆ.

(ಆಕ್ಷೇಪಕ) :- ಜೀವನು ಬ್ರಹ್ಮನಿಗಿಂತ ಬೇರೆಯಲ್ಲ ಎಂದಿರಲ್ಲ !

(ಸಿದ್ಧಾಂತಿ) :- ನಿಜ. ಆದ್ದರಿಂದಲೇ ಅರ್ಥವಶದಿಂದ[4] ಜೀವನಲ್ಲಿ ಬ್ರಹ್ಮಸ್ವರೂಪವನ್ನು ಮುಸುಕಿಕೊಂಡಿರುವ ಅವಿದ್ಯೆಯನ್ನು ಕಲ್ಪಿಸಬೇಕಾಗಿದೆ.[5] ಹೀಗಲ್ಲದೆ ಇದ್ದರೆ ನಿಜವಾಗಿಯೇ ಆ (ಬ್ರಹ್ಮ)ಸ್ವರೂಪವಾಗಿರುವಲ್ಲಿ ಅದರ ಜ್ಞಾನವೂ ನಿತ್ಯಸಿದ್ಧವಾಗಿದ್ದರೆ, ಆಗ ಅದೇ ನಿನ್ನ ಆತ್ಮನೆಂಬ ಉಪದೇಶವು ವ್ಯರ್ಥವಾಗುತ್ತಿತ್ತು. ಆದ್ದರಿಂದ ಅನಾದಿಸಿದ್ಧವಾದ ಅವಿದ್ಯೆಯಿಂದ ಅವಚ್ಛಿನ್ನವಾಗಿರುವ[6] ಅನಂತಜೀವರುಗಳ ತೋರಿಕೆಗೆ ಆಸ್ಪದವಾಗಿದೆ,

---

1. ಶ್ರುತಿಯಲ್ಲಿ ಹೇಳಿರುವದು ಹೊಂದುವದಕ್ಕಾಗಿ ಕಲ್ಪಿಸಬೇಕೆಂದು ಹೇಳುವ ಪ್ರಮಾಣವು ಶ್ರುತ್ಯರ್ಥಾಪತ್ತಿ. ಪ್ರಮಾಣದಿಂದ ಅವಿದ್ಯೆ ಸಿದ್ಧವಾಗುತ್ತದೆ ಎಂದೂ ಹೇಳುವದು, ಪ್ರಮಾಣವು ಅವಿದ್ಯಾಪುರಃಸರವೇ ಎಂದೂ ತಿಳಿಯುವದು- ಇದು ಅನ್ಯೋನ್ಯಾಶ್ರಯದೋಷವೆಂಬುದನ್ನು ಇಲ್ಲಿ ವಿಮರ್ಶೆಮಾಡಿಲ್ಲ.

2. ಇಲ್ಲಿ ಅನೃತ, ಮೋಹ- ಎಂಬ ಮಾತುಗಳು ಅವಿದ್ಯೆಯನ್ನು ಹೇಳುತ್ತವೆಯೆಂಬುದು ಗ್ರಂಥಕರ್ತರ ಅಭಿಪ್ರಾಯ. ಆದರೆ ಛಾಂದೋಗ್ಯಭಾಷ್ಯದಲ್ಲಿ ಅನೃತವೆಂದರೆ ತೃಷ್ಣೆ (ಆಶೆ) ಎಂದು ಬರೆದಿದೆ.

3. ನಾನು ಬ್ರಹ್ಮವೆಂದು ತಿಳಿಯದೆ ಇರುವವನಿಗೇ ಉಪದೇಶವು ಹೊಂದುತ್ತದೆ; ಶ್ರುತಿಯಲ್ಲಿ 'ನೀನು ಬ್ರಹ್ಮ' ಎಂದು ಉಪದೇಶಿಸಿದುವವರಿಂದ ಅವಿದ್ಯೆ ಜೀವನಿಗಿದೆ ಎಂದಾಯಿತು ಎಂದರ್ಥ.

4. ಶ್ರುತ್ಯರ್ಥಾಪತ್ತಿಯಲ್ಲದೆ ದೃಷ್ಟಾರ್ಥಾಪತ್ತಿಯೂ- ಕಾಣಬರುವದು ಹೊಂದುವದಕ್ಕೆ ಕಲ್ಪಿಸಬೇಕೆನ್ನುವ ಪ್ರಮಾಣವೂ- ಇದೆ.

5. ಅಂತೂ ಅವಿದ್ಯೆಯು ಪ್ರಮಾಣಸಿದ್ಧವೆಂದೇ ಆಯಿತು; ಆಚಾರ್ಯರು ಅನುಭವಸಿದ್ಧವೆಂದು ಹೇಳಿರುವದನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

6. ಜೀವರ ಅವಚ್ಛೇದಕ್ಕೆ ಅವಿದ್ಯೆಯೇ ಉಪಾದಾನ; ಅಂತಃಕರಣವು ಜೀವರಿಗೆ ಅವಚ್ಛೇದಕವಲ್ಲವೆಂದು ಪಂ. ವಿ.

(ಆ) ಏಕರಸವಾದ ಬ್ರಹ್ಮವು ಎಂದು ಶ್ರುತಿಸ್ಮೃತಿನ್ಯಾಯಗಳಲ್ಲಿ ಕುಶಲರಾದವರು ಒಪ್ಪಬೇಕು. ಆದ್ದರಿಂದಲೇ ಸ್ಮೃತಿಯು "ಪ್ರಕೃತಿಯನ್ನೂ ಪುರುಷನನ್ನೂ- ಇಬ್ಬರನ್ನೂ ಅನಾದಿಯಾಗಿರುವವರೆಂದು ತಿಳಿ" (ಗೀ. ೧೩-೧೯) ಎಂದು ಕ್ಷೇತ್ರಕ್ಷೇತ್ರಜ್ಞತ್ವಕ್ಕೆ ನಿಮಿತ್ತವಾದ[1] ಅನಾದಿಸಿದ್ಧವಾದ ಅವಿದ್ಯೆಯನ್ನು ಪ್ರಕೃತಿಶಬ್ದದಿಂದ ಕರೆದಿರುತ್ತದೆ. 'ಮಾಯೆಯನ್ನು ಪ್ರಕೃತಿಯೆಂದು ತಿಳಿಯಬೇಕು' (ಶ್ವೇ. ೪-೧೦) ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು)[2]. ಆದ್ದರಿಂದ (ಜೀವನು) ಮಾಯಾವಚ್ಛಿನ್ನರೂಪನಾಗಿರುವದರಿಂದ (ತನ್ನ) ಬ್ರಹ್ಮರೂಪವು (ತನಗಿಂತ) ಬೇರೆಯಲ್ಲದಿದ್ದರೂ (ಅದನ್ನು) ಅರಿಯದೆ ಇರುತ್ತಾನೆ. ಆದ್ದರಿಂದಲೇ (ಬಲ್ಲವರಿಂದ ಹೀಗೆಂದು) ಉಕ್ತವಾಗಿರುತ್ತದೆ. "ಅನಾದಿಮಾಯೆಯಿಂದ ಸುಪ್ತನಾಗಿರುವ ಜೀವನು ಯಾವಾಗ ಎಚ್ಚರುತ್ತಾನೋ ಆಗ ಅಜವೂ ಅನಿದ್ರವೂ ಅಸ್ವಪ್ನವೂ ಆಗಿರುವ ಅದ್ವೈತ(ತತ್ತ್ವ)ವನ್ನು ಅರಿತುಕೊಳ್ಳುತ್ತಾನೆ" (ಗೌ. ಕಾ. ೧-೧೬).[3]

## ಸ್ವಯಂಜ್ಯೋತಿಯಾದ ಆತ್ಮನಲ್ಲಿಯೂ ಅಧ್ಯಾಸವಾಗಬಹುದು

(ಪಂಚಪಾದಿಕಾ)

೩೮. ನನು ಪ್ರಮಾಣಾನ್ತರವಿರೋಧೇ ಸತಿ ಶ್ರುತಿಃ, ತದರ್ಥಾಪತ್ತಿರ್ವಾ ನಾವಿದ್ಯಾಂ ನಿವೇದಯಿತುಮಲಮ್। ಕಿಂ ತತ್ ಪ್ರಮಾಣಂ ಯೇನ ಸಹ ವಿರೋಧಃ ? ನಿರಂಶಸ್ಯ ಸ್ವಯಂಜ್ಯೋತಿಷಃ ಸ್ವರೂಪಾನವಭಾಸಾನುಪಪತ್ತಿಃ। ನನು ಭೋಕ್ತುಃ ಕಾರ್ಯಕರಣಸಂಘಾತಾದ್ ವ್ಯಾವೃತ್ತತ್ವಾತ್ ಸ್ವಯಂಜ್ಯೋತಿಷೋಽಪಿ ನ ಪ್ರಕಾಶತೇ। ನನು ನ ಭೋಕ್ತಾ ಸ್ವಯಂಜ್ಯೋತಿಃ, ಕಿಂ ತು ಅಹಂಪ್ರತ್ಯಯೇನ ಅವಭಾಸ್ಯತೇ। ಯಥಾ ಸ್ವಯಂಪ್ರಕಾಶಮಾನತಾ, ಅಹಙ್ಕಾರೋ ನ ಪ್ರತ್ಯಯಃ, ತಥಾ ವಕ್ಷ್ಯತೇ। ಕಥಂ ಪುನರ್ಭೋಕ್ತಾ ಸ್ವಯಂಜ್ಯೋತಿಃ ಕಾರ್ಯಕರಣಸಂಘಾತಾದ್ ವ್ಯಾವೃತ್ತೋ ನ ಪ್ರಕಾಶತೇ? 'ಮನುಷ್ಯೋಽಹಮ್' ಇತಿ ಮಿಥ್ಯೈವ ಏಕತಾಭಿಮಾನಾತ್। ನನು ಗೌಣೋಽಯಂ ನ ಮಿಥ್ಯಾ। ಯಥಾ ನ ಗೌಣಃ, ತಥಾ ಭಾಷ್ಯಕಾರ ಏವ ವಕ್ಷ್ಯತಿ॥

---

1. ಕ್ಷೇತ್ರಕ್ಷೇತ್ರಜ್ಞತ್ವವಿಭಾಗಕ್ಕೆ ಉಪಾದಾನವಾದ ಎಂದರ್ಥ; ಪ್ರಕೃತಿಯೇ ಅವಿದ್ಯೆಯೆಂದು ಮುಂದೆ ಅವಿದ್ಯಾವರ್ಣನೆಯಲ್ಲಿ ಮತ್ತೆ ಹೇಳಲಾಗುತ್ತದೆ.

2. ಈ ಪ್ರಸ್ಥಾನದಲ್ಲಿ ಅವಿದ್ಯಾಮಾಯೆಗಳಿಗೆ ಭೇದವಿಲ್ಲ; ಹಿಂದೆ ಮಾಯೆ ಎಂಬ ಹೆಸರಿನಿಂದಲೂ ಮೂಲಾವಿದ್ಯೆಯನ್ನು ಕರೆದಿದೆ.

3. ಈ ಕಾರಿಕೆಗೆ ಮಾಯಾರೂಪವಾದ ಅವಿದ್ಯೆಯಿಂದ ಸಂಸಾರನಿದ್ರೆಯುಂಟಾಗಿದೆ ಎಂಬರ್ಥವನ್ನು ಇಲ್ಲಿ ತೆಗೆದಿದೆ. ಆದರೆ ಈ ಕಾರಿಕೆಯ ಭಾಷ್ಯವನ್ನು ನೋಡಿ.

(ಅರ್ಥ)

ಬೇರೊಂದು ಪ್ರಮಾಣಕ್ಕೆ ವಿರುದ್ಧವಾದರೆ ಶ್ರುತಿಯಾಗಲಿ ಅದರ ಅರ್ಥಾಪತ್ತಿಯಾಗಲಿ ಅವಿದ್ಯೆಯನ್ನು ತಿಳಿಸಿಕೊಡಲಾರವಲ್ಲ[1] !

(ಸಿದ್ಧಾಂತಿಯ ಪ್ರಶ್ನೆ) :- ಯಾವ (ಪ್ರಮಾಣಕ್ಕೆ) ವಿರುದ್ಧವೆಂದಿರೋ ಆ ಪ್ರಮಾಣವು ಯಾವದು ?

(ಆಕ್ಷೇಪಕ) :- ನಿರಂಶನಾದ ಸ್ವಯಂಜ್ಯೋತಿಯ ಸ್ವರೂಪವು ತೋರುವದಿಲ್ಲ ಎಂಬುದು ಹೊಂದುವದಿಲ್ಲ ಎಂಬುದು.[2]

(ಸಿದ್ಧಾಂತಿಯ ಪ್ರಶ್ನೆ) :- ಭೋಕ್ತೃವಾದವನು ಸ್ವಯಂಜ್ಯೋತಿಯಾದರೂ ಕಾರ್ಯಕರಣಸಂಘಾತಕ್ಕಿಂತ ಬೇರೆಯಾಗಿರುವದು ಕಾಣಬರುವದಿಲ್ಲವಲ್ಲ[3] !

(ಆಕ್ಷೇಪಕ) :- ಭೋಕ್ತೃವು ಸ್ವಯಂಜ್ಯೋತಿಯಲ್ಲ, ಅಹಂಪ್ರತ್ಯಯದಿಂದ ಕಾಣುತ್ತಾನೆ, (ಅಲ್ಲವೆ) ?

(ಸಿದ್ಧಾಂತಿ) :- (ಅವನು) ಸ್ವಯಂಪ್ರಕಾಶನೆಂಬುದೂ ಅಹಂಕಾರವು ಪ್ರತ್ಯಯವಲ್ಲ[4]ವೆಂಬುದೂ ಹೇಗೆಂಬುದನ್ನು ಮುಂದೆ ಹೇಳಲಾಗುವದು.

(ಪ್ರಶ್ನೆ) :- ಭೋಕ್ತೃವು ಸ್ವಯಂಜ್ಯೋತಿಯಾದರೂ ಕಾರ್ಯಕರಣಸಂಘಾತಕ್ಕಿಂತ ಬೇರೆಯಾಗಿ ತೋರುವದಿಲ್ಲವೆಂಬುದು ಹೇಗೆ ?

(ಸಿದ್ಧಾಂತಿಯ ಉತ್ತರ) :- 'ನಾನು ಮನುಷ್ಯನು' ಎಂದು ಮಿಥ್ಯೆಯಾಗಿಯೇ ಏಕತ್ವಾಭಿಮಾನವಿರುವದರಿಂದ.

(ಆಕ್ಷೇಪಕ) :- ಇದು ಗೌಣವು, ಮಿಥ್ಯಾಭಿಮಾನವಲ್ಲವಲ್ಲ !

(ಸಿದ್ಧಾಂತಿ) :- (ಇದು) ಗೌಣವಲ್ಲವೆಂಬುದು ಹೇಗೆಂಬುದನ್ನು ಭಾಷ್ಯಕಾರರೇ ಮುಂದೆ ಹೇಳುತ್ತಾರೆ.[5]

---

1. ಶ್ರುತಿಯೂ ಅದರ ಅರ್ಥಾಪತ್ತಿಯೂ ತಿಳಿಸಿಕೊಡಲಾರದ್ದರಿಂದ ಶ್ರುತಿಗೆ ಬೇರೆಯ ಅರ್ಥವನ್ನು ಹೇಳಬೇಕೆಂದು ಭಾವ.

2. ಇದನ್ನು ಪೂರ್ವಪಕ್ಷಿಯು ಶ್ರುತಿಯ ಆಧಾರದಿಂದ ಹೇಳಿರಬೇಕು. ಹಿಂದೆ ಅವಿದ್ಯೆಗೆ ಆತ್ಮನು ಆಶ್ರಯನು ಹೇಗೆ?- ಎಂದು ಆಕ್ಷೇಪಿಸಿತ್ತು ; ಈಗ ಅವನು ಅವಿದ್ಯೆಗೆ ವಿಷಯನೆಂಬುದು ಹೇಗೆ?- ಎಂದು ಆಕ್ಷೇಪಿಸಿದೆ.

3. ದೇಹಕ್ಕಿಂತ ಬೇರೆಯಾಗಿ ಭೋಕ್ತೃವಿರುವದು ತಿಳಿಯದಂತೆಯೇ ಅಹಂಕಾರಕ್ಕಿಂತ ಬೇರೆಯಾಗಿ ಆತ್ಮನು ಇರುತ್ತಾನೆಂಬುದೂ ತಿಳಿಯದೆ ಇರಬಹುದಲ್ಲವೆ?-ಎಂದು ಪ್ರಶ್ನೆ.

4. ಇದು ಮುಂದೆ ಚರ್ಚೆಯಿಂದ ಸಿದ್ಧವಾಗಲಿರುವದು.

5. ನಾಲ್ಕನೆಯ ಸೂತ್ರದ ಭಾಷ್ಯದಲ್ಲಿ ಇದನ್ನು ಹೇಳಿದೆ.

## (ಅ) ದೇಹಾದಿಗಳಲ್ಲಿ ಅಹಂಪ್ರತ್ಯಯವು ಮುಖ್ಯವೆ?

(ಪಂಚಪಾದಿಕಾ)

೨೮. ನನು ಅಹಮಿತಿ ಯದಿ ದೇಹಸಮಾನಾಧಿಕರಣಃ ಪ್ರತ್ಯಯಃ, ನ ತರ್ಹಿ ತದ್ವ್ಯತಿರಿಕ್ತ ಆತ್ಮಾ ಸಿಧ್ಯತಿ। ಅನ್ಯಸ್ಯ ತಥಾಗ್ರಾಹಿಣಃ ಪ್ರತ್ಯಯಸ್ಯ ಅಭಾವಾತ್। ಆಗಮಾನುಮಾನಯೋರಪಿ ತದ್ವಿರೋಧೇ ಪ್ರಮಾಣತ್ವಾಯೋಗಾತ್। ಮಿಥ್ಯಾತ್ವಾತ್ ತಸ್ಯ ನ ವಿರೋಧಃ ಇತಿ ಚೇತ್? ಕುತಸ್ತರ್ಹಿ ಮಿಥ್ಯಾತ್ವಮ್? ಆಗಮಾದನುಮಾನಾದ್ವಾ ಅನ್ಯಥಾವಗಮಾದಿತಿ ಚೇತ್। ನೈತತ್। ಅನ್ಯೋನ್ಯಾಶ್ರಯತಾ ತಥಾ ಸ್ಯಾತ್, ಆಗಮಾನುಮಾನಯೋಃ ಪ್ರವೃತ್ತೌ ತನ್ಮಿಥ್ಯಾತ್ವಮ್, ತನ್ಮಿಥ್ಯಾತ್ವೇ ತಯೋಃ ಪ್ರವೃತ್ತಿಃ ಇತಿ। ತಸ್ಮಾತ್ ದೇಹಾದಿವ್ಯತಿರಿಕ್ತವಿಷಯ ಏವಾಯಮ್ ಅಹಙ್ಕಾರಃ ಇತಿ ಆತ್ಮವಾದಿಭಿರಭ್ಯುಪೇಯಮ್। ಅನ್ಯಥಾ ಆತ್ಮಸಿದ್ಧಿರಪ್ರಮಾಣಿಕೀ ಸ್ಯಾತ್। ಅತೋ ಗೌಣೋ ಮನುಷ್ಯತ್ವಾಭಿಮಾನಃ ॥

ಉಚ್ಯತೇ। ಯದ್ಯಪಿ ದೇಹಾದಿವ್ಯತಿರಿಕ್ತಭೋಕ್ತೃವಿಷಯ ಏವಾಯಮ್ ಅಹಙ್ಕಾರಃ, ತಥಾಪಿ ತಥಾ ಅನಧ್ಯವಸಾಯಾತ್ ತದ್ಧರ್ಮಾನ್ ಆತ್ಮನಿ ಅಧ್ಯಸ್ಯತಿ। ದೃಶ್ಯತೇ ಚ[1] ಸ್ವರೂಪೇಣ ಅವಭಾಸಮಾನೇಽಪಿ ವಸ್ತ್ವನ್ತರಭೇದಾನಧ್ಯವಸಾಯಾತ್ ತತ್ಸಂಭೇದೇನಾವಭಾಸಃ। ಯಥಾ, ಏಕಸ್ಮಿನ್ನಪಿ ಅಕಾರೇ ಹ್ರಸ್ವಾದಿಸಂಭೇದಃ। ಅಥ ಪುನರೇಕಾನ್ತತೋ ಭಿನ್ನ ಏವ ದೇಹಾದೇರಹಙ್ಕಾರಾತ್, ಅವಭಾಸೇತ ರಸಾದಿವ ಗನ್ಧಃ, ತತಸ್ತತ್ಸದ್ಭಾವೇ ನ ವಿಪ್ರತಿಪತ್ತಿರಿತಿ ತತ್ಸಿದ್ಧಯೇ ಜಿಜ್ಞಾಸಾ ನಾವಕಲ್ಪೇತ। ಜಿಜ್ಞಾಸೋತ್ತರಕಾಲಂ ತರ್ಹಿ ಗೌಣ ಏವ ಯುಕ್ತಃ। ಕಥಮ್? ಜಿಜ್ಞಾಸಾ ನಾಮ ಯುಕ್ತ್ಯನುಸಂಧಾನಮ್ ನ ಹಿ ಯುಕ್ತಿಃ ಪೃಥಗ್ ಜ್ಞಾನಾನ್ತರಜನನೀ, ಕಿಂ ತು ಸಿದ್ಧಸ್ಯೈವ ಅಹಂಪ್ರತ್ಯಯಸ್ಯ ವಿಷಯವಿವೇಚನೀ। ತಸ್ಮಾತ್, ವಿವಿಕ್ತವಿಷಯತ್ವಾತ್ ವ್ಯತಿರಿಕ್ತಾತ್ಮಾನುಭವಪರ್ಯನ್ತ ಏವ ಅಹಙ್ಕಾರೋ ಜಿಜ್ಞಾಸೋತ್ತರಕಾಲಂ ಯುಕ್ತಃ। ನ ಯುಕ್ತಃ। ಅಕಾರ ಇವ ಹ್ರಸ್ವತ್ವಾಭಿಮಾನಃ। ನನು ತತ್ರಾಪಿ ಕಥಮ್? ಅನುಭವ ಏವ। ಏವಮ್ ಅಹಙ್ಕಾರೇಽಪಿ ಸಮಾನಶ್ಚರ್ಚಃ। ನನ್ವನುಭವಃ, ತರ್ಕಬಲಾತ್ ಯಥಾವಭಾಸಿನಿ ಅಕಾರೇ ಸಂಭವತಿ। ಹ್ರಸ್ವಾದೇಃ ಪೃಥಕ್ಸತಃ ತಥಾನವಗಮಾತ್। ತನ್ನ। ಏಕಸ್ಯ ಪೃಥಕ್ತ್ವೇಽಪಿ ಅರ್ಥಾತ್ ಇತರಸ್ಯಾಪಿ ಪೃಥಕ್ತ್ವಾತ್ ॥

---

1. 'ಹಿ' ಎಂದು ಪಾ॥

(ಅರ್ಥ)

(ಆಕ್ಷೇಪ) :– 'ನಾನು' ಎಂಬುದು ದೇಹಸಮಾನಾಧಿಕರಣವಾದ ಪ್ರತ್ಯಯವೆಂದರೆ,[1] ಅದಕ್ಕಿಂತ ವ್ಯತಿರಿಕ್ತನಾದ ಆತ್ಮನು ಸಿದ್ಧನಾಗುವದಿಲ್ಲ. ಏಕೆಂದರೆ ಹಾಗೆಂಬುದನ್ನು ತಿಳಿಸುವ ಮತ್ತೊಂದು ಪ್ರತ್ಯಯವು ಇರುವದಿಲ್ಲ; ಆಗಮ, ಅನುಮಾನ– ಇವುಗಳೂ ಅದಕ್ಕೆ ವಿರುದ್ಧವಾದರೆ ಪ್ರಮಾಣವಾಗಲಾರವು.[2]

(ಸಿದ್ಧಾಂತಿ) :– ಅದು ಮಿಥ್ಯೆಯಾಗಿರುವದರಿಂದ ವಿರೋಧವಿಲ್ಲ.

(ಆಕ್ಷೇಪಕ) :– ಹಾಗಾದರೆ (ಅದು) ಮಿಥ್ಯೆ ಎಂಬುದು ಹೇಗೆ ?

(ಸಿದ್ಧಾಂತಿ) :– ಆಗಮದಿಂದ, ಅಥವಾ ಅನುಮಾನದಿಂದ ಬೇರೆಯಾಗಿ ನಿಶ್ಚಯವಾಗುವದರಿಂದ.

(ಆಕ್ಷೇಪಕ) :– ಹಾಗಲ್ಲ. ಏಕೆಂದರೆ ಆಗ– ಆಗಮಾನುಮಾನಗಳು ಪ್ರವೃತ್ತವಾದರೆ ಅದು ಮಿಥ್ಯೆ, ಅದು ಮಿಥ್ಯೆಯಾದರೆ ಅವೆರಡೂ ಪ್ರವರ್ತಿಸುವವು –ಎಂದು ಅನ್ಯೋನ್ಯಾಶ್ರಯ(ದೋಷ)ವುಂಟಾಗುವದು. ಆದ್ದರಿಂದ ದೇಹವೇ ಮುಂತಾದವುಗಳಿಗಿಂತ ವ್ಯತಿರಿಕ್ತ(ವಾದ ವಸ್ತುವಿನ) ವಿಷಯವೇ ಈ ಅಹಂಕಾರವು ಎಂದು ಆತ್ಮವಾದಿಗಳು ಒಪ್ಪಬೇಕು; ಹೀಗಲ್ಲದಿದ್ದರೆ ಆತ್ಮಸಿದ್ಧಿಗೆ ಪ್ರಮಾಣವಿಲ್ಲದೆಹೋಗುವದು. ಆದ್ದರಿಂದ (ನಾನು) ಮನುಷ್ಯನೆಂಬ ಅಭಿಮಾನವು ಗೌಣವು.

(ಸಿದ್ಧಾಂತಿ) :– ಹೇಳುತ್ತೇವೆ. ಈ ಅಹಂಕಾರವು ದೇಹಾದಿವ್ಯತಿರಿಕ್ತ ಭೋಕ್ತೃ(ವಸ್ತು)ವಿನ ವಿಷಯವೇ ಆದರೂ ಹಾಗೆಂದು ನಿಶ್ಚಯಿಸದೆ ಇರುವದರಿಂದ ಅದರ ಧರ್ಮಗಳನ್ನು ಆತ್ಮನಲ್ಲಿ ಅಧ್ಯಾಸಮಾಡುತ್ತಾರೆ. ಸ್ವರೂಪದಿಂದ ತೋರುತ್ತಿದ್ದರೂ ವಸ್ತ್ವಂತರಕ್ಕಿಂತ ಬೇರೆ ಎಂದು ನಿಶ್ಚಯಿಸಿಕೊಳ್ಳದೆ ಇರುವದರಿಂದ ಅದರೊಡನೆ (ಇದೂ) ಬೆರೆತಿರುವದೆಂದು ತೋರುವದು ಕಂಡೂ ಇದೆ. ಉದಾಹರಣೆಗೆ ಒಂದೇ ಅಕಾರದಲ್ಲಿ ಹ್ರಸ್ವಾದಿಗಳ ಬೆರಕೆ (ಅಂಥದ್ದು)[3] : ಹೀಗಲ್ಲದೆ ಸವಿಗಿಂತ ವಾಸನೆಯು (ಬೇರೆಯೇ) ಎಂದು ತೋರುವಂತೆ ಗೊತ್ತಾಗಿ ದೇಹಾದಿಗಳಿಗಿಂತ ಬೇರೆಯಾಗಿಯೇ ಅಹಂಕರ್ತೃವು ತೋರುತ್ತಿದ್ದರೆ ಆಗ ಅವನು ಇದಾ

1. ದೇಹಾದಿಗಳನ್ನು ತಿಳಿಸಿರುವ ಪ್ರತ್ಯಯವೇ ಎಂದರೆ.

2. ಪ್ರಮಾಣಗಳಿಗೆ ಪರಸ್ಪರವಿರೋಧವೇ ಇರಲಾರದೆಂಬುದು ಭಾಷ್ಯಕಾರರ ಮತ. ಇಲ್ಲಿ ಶ್ರುತಿಗಳು ಎರಡು ಪಕ್ಷಕ್ಕೂ ಇರುವದರಿಂದ ಈ ವಿರೋಧವನ್ನು ಪರಿಹರಿಸುವದು ಅವಶ್ಯವೆಂದು ಅಭಿಪ್ರಾಯವಿರಬಹುದು.

3. ಅಕಾರವು ಬೇರೆ, ಹ್ರಸ್ವಾದಿಗಳು ಬೇರೆ ಎಂದು ಗೊತ್ತಿದೆ; ಆದರೂ ಅಧ್ಯಾಸ ಮಾಡುತ್ತಾರೆ. ಇದರಂತೆ ದೇಹಾದಿಗಳಲ್ಲಿ ಅಹಂಪ್ರತ್ಯಯವಿಲ್ಲ, ಆತ್ಮನಲ್ಲಿದೆ ಎಂದು ತೋರಿದರೂ ಅಧ್ಯಾಸಮಾಡಬಹುದು. ಅಧ್ಯಾಸವಿರುವದರಿಂದಲೇ ದೇಹಾದಿಗಳಿಗಿಂತ ಬೇರೆಯಾದ ಆತ್ಮನು ಇದಾನೊ, ಇಲ್ಲವೊ ? –ಎಂಬ ಜಿಜ್ಞಾಸೆಯುಂಟಾಗುತ್ತದೆ.

ನೆಂಬ ವಿಷಯದಲ್ಲಿ ವಿರುದ್ಧಾಭಿಪ್ರಾಯವೇ ಇಲ್ಲದ್ದರಿಂದ ಅವನ ಸಿದ್ಧಿಗಾಗಿ ಜಿಜ್ಞಾಸೆಯನ್ನು (ಮಾಡುವದೇ) ಹೊಂದುತ್ತಿರಲಿಲ್ಲ.[1]

(ಆಕ್ಷೇಪಕ) :– ಹಾಗಾದರೆ ಜಿಜ್ಞಾಸೆಯಾದ ಬಳಿಕ ಗೌಣವೆಂಬುದೇ ಸರಿಯಾದದ್ದು ಹೇಗೆಂದರೆ, ಜಿಜ್ಞಾಸೆ ಎಂದರೆ ಯುಕ್ತಿಯನ್ನು ಅನುಸಂಧಾನ ಮಾಡುವದು. ಯುಕ್ತಿಯು ಬೇರೊಂದು ಜ್ಞಾನವನ್ನೇ ಬೇರೆಯಾಗಿ ಹುಟ್ಟಿಸುವದಿಲ್ಲ; ಸಿದ್ಧವಾಗಿರುವ ಅಹಂಪ್ರತ್ಯಯದ ವಿಷಯವನ್ನು ವಿವೇಚನೆಮಾಡುತ್ತದೆ. ಆದ್ದರಿಂದ ವಿವಿಕ್ತವಿಷಯವುಳ್ಳದ್ದಾಗಿರುವದರಿಂದ, ಅಹಂಕಾರವು ಜಿಜ್ಞಾಸಾಕಾಲವಾದ ಬಳಿಕ ವ್ಯತಿರಿಕ್ತನಾದ ಆತ್ಮನ ಅನುಭವಪರ್ಯಂತವಾಗಿಯೇ ಇರುತ್ತದೆ ಎಂಬುದು ಯುಕ್ತ.[2]

(ಪರಿಹಾರ) :– ಯುಕ್ತವಲ್ಲ. ಆಕಾರದಲ್ಲಿ ಹ್ರಸ್ವತ್ವಾಭಿಮಾನದಂತೆಯೇ (ಇದು).[3]

(ಆಕ್ಷೇಪಕ) :– ಅಲ್ಲಿಯಾದರೂ ಹೇಗೆ[4] ?

(ಸಿದ್ಧಾಂತಿ) :– ಅನುಭವವೇ.[5] ಅಹಂಕಾರದಲ್ಲಿಯೂ ಚರ್ಚೆಯು (ಇದಕ್ಕೆ) ಸಮಾನವಾಗಿರುತ್ತದೆ.

---

1. ನಾನು ಎಂಬುದು ದೇಹಾದಿಗಳೊ, ಅವುಗಳಿಗಿಂತ ಬೇರೆಯೊ?– ಎಂದು ವಿಚಾರಿಸಿ ತಿಳಿದುಕೊಳ್ಳಬೇಕಾಗಿರುತ್ತದೆ; ಏಕೆಂದರೆ ದೇಹಾದಿಗಳಲ್ಲಿ ಒಂದೊಂದನ್ನೂ ‹ನಾನು› ಎಂದೇ ಜನರು ವ್ಯವಹರಿಸುತ್ತಿರುತ್ತಾರೆ.

2. ಸಾಮಾನ್ಯವಾಗಿ ತಿಳಿದಿದ್ದು ವಿಶೇಷರೂಪದಿಂದ ತಿಳಿಯದೆ ಇದ್ದರೆ ಮತ್ತೊಂದರ ಸಂಬಂಧದ ಅಧ್ಯಾಸವಾಗುತ್ತದೆ. ಆತ್ಮನೇ ಅಹಂಪ್ರತ್ಯಯಾರ್ಹನೆಂದು ಅರ್ಥವಶದಿಂದ ಗೊತ್ತಾದ ಬಳಿಯಲ್ಲಿ ಅಧ್ಯಾಸ ಹೇಗೆ? –ಎಂಬ ಆಕ್ಷೇಪಕ್ಕೆ ಆಕಾರದೃಷ್ಟಾಂತವನ್ನು ಕೊಟ್ಟು ಪರಿಹಾರವನ್ನು ಹೇಳಿದ್ದಾಯಿತು. ಅರ್ಥವಶದಿಂದ ಮಾತ್ರವಲ್ಲ, ನಿಜವಾಗಿ ಬಿಂಗಡವಾಗಿಯೇ ಅಹಂಕರ್ತೃವಾದ ಆತ್ಮನ ಅರಿವಾಗುತ್ತದೆ ಎಂದರೆ ಆ ವಿಷಯಕ್ಕೆ ಜಿಜ್ಞಾಸೆಯುಂಟಾಗುವದಕ್ಕೆ ಅವಕಾಶವಿರುತ್ತಿರಲಿಲ್ಲ– ಎಂಬ ಪರಿಹಾರವನ್ನು ಹೇಳಿದ್ದಾಯಿತು. ಈಗ ‹ಯುಕ್ತಿಯಿಂದ ನೋಡಿದರೆ ಆತ್ಮನಲ್ಲಿ ಯಾವಾಗಲೂ ಅಹಂಪ್ರತ್ಯಯವು ಗೌಣವೇ ಎಂದಾಯಿತಲ್ಲ!› –ಎಂದು ಶಂಕೆ.

3. ಯುಕ್ತಿಯಿಂದ ಅಹಂಪ್ರತ್ಯಯವು ಆತ್ಮನ ವಿಷಯವೆಂದೇನೂ ಸಿದ್ಧವಾಗಲಿಲ್ಲ; ಯಾವಾಗಲೂ ಅಹಂಪ್ರತ್ಯಯಕ್ಕೆ ಸ್ವರೂಪಮಾತ್ರವೇ ವಿಷಯವು ಎಂದಿಷ್ಟೇ ಗೊತ್ತಾಗಿದೆ. ಯುಕ್ತಿಯ ಅನುಸಂಧಾನವಿಲ್ಲದಾಗ ಮೊದಲಿನಂತೆ ಅಧ್ಯಾಸವಿದ್ದೇ ಇರುತ್ತದೆ. ಆಕಾರದಲ್ಲಿ ಹ್ರಸ್ವತ್ವಾಧ್ಯಾಸವಿರುವಂತೆ ಎಂದು ಪರಿಹಾರ.

4. ಆಕಾರದಲ್ಲಾದರೂ ಅಧ್ಯಾಸವೆಲ್ಲಿದೆ ?

5. ಅನುಭವದಲ್ಲಿರುವದರಿಂದ ಈ ಆಕ್ಷೇಪವು ಸರಿಯಲ್ಲ.

(ಆಕ್ಷೇಪಕ) :- ತರ್ಕಬಲದಿಂದ ಆಕಾರವು ಇದ್ದಂತೆ ತೋರಿದರೂ (ಅಧ್ಯಾಸದ) ಅನುಭವವು ಸಂಭವಿಸುತ್ತದೆ. ಏಕೆಂದರೆ ಬೇರೆಯಾಗಿರುವ ಹ್ರಸ್ವಾದಿಗಳು ಹಾಗೆಂದು ನಿಶ್ಚಯವಾಗುವದಿಲ್ಲ.[1]

(ಪರಿಹಾರ) :- ಅದು ಸರಿಯಲ್ಲ. ಒಂದು ವಿಂಗಡವಾಗಿದ್ದರೆ ಇನ್ನೊಂದೂ ಅರ್ಥವಶದಿಂದ ವಿಂಗಡವಾಗಿಯೇ ಇರಬೇಕು.[2]

## (ಇ) ಅಹಂಪ್ರತ್ಯಯವು ದೇಹಾದಿಗಳಲ್ಲಿಯೂ ಇರುವದು ವಿರುದ್ಧವಲ್ಲ

### (ಪಂಚಪಾದಿಕಾ)

೨೯. ನನು ಮಹದೇತದಿನ್ದ್ರಜಾಲವಮ್, ಯತ್ ತರ್ಕಾನುಗೃಹೀತಾತ್ ಪ್ರಮಾಣಾತ್ ಯಥಾಯಥಮ್ ಅಸಾಧಾರಣರೂಪಯೋರೇವ ಅವಭಾಸಮಾನಯೋಃ ಏಕತ್ವಾವಗಮೋ ನ ಗೌಣ ಇತಿ। ಬಾಢಮ್, ಇನ್ದ್ರಜಾಲಮೇವೈತತ್। ಅವಿದ್ಯಾಕೃತತ್ವಾತ್। ತಥಾ ಹಿ। ಅಹಂಪ್ರತ್ಯಯಸ್ಯ ಸ್ವವಿಷಯಪ್ರತಿಷ್ಠಿತಸ್ಯೈವ ಸತಃ, ತದೇಕಪ್ರತಿಷ್ಠಿತಾಪ್ರತಿಬನ್ಧಕೃದನಾದ್ಯವಿದ್ಯಾಕೃತಂ ದೇಹಾದಿಪ್ರತಿಷ್ಠತ್ವಮಪಿ ದೃಷ್ಟಮ್। ಅತೋ ದೇಹಾದಿವಿಷಯತ್ವಾವಿರೋಧಿ ಸ್ವವಿಷಯಪ್ರತಿಷ್ಠತ್ವಮ್ ಅಹಂಪ್ರತ್ಯಯಸ್ಯ। ಅತೋ ಯುಕ್ತ್ಯಾ ವಿಷಯವಿವೇಚನೇಽಪಿ ಸ್ವವಿಷಯೋಪದರ್ಶನೇನ ತತ್ಪ್ರತಿಷ್ಠತ್ವಮಾತ್ರಂ ಕೃತಮ್, ನಾಧಿಕಮ್ ಆದರ್ಶಿತಮ್। ಸ್ವವಿಷಯಪ್ರತಿಷ್ಠತ್ವಂ ಚ ದೇಹಾದಿಷು ಅಹಂಮಮಾಭಿಮಾನೇನ ನ ವಿರುಧ್ಯತೇ ಇತ್ಯುಕ್ತಮ್। ಅತೋ ನ್ಯಾಯತೋ ವಿಷಯವಿವೇಚನಾದೂರ್ಧ್ವಮಪಿ ನ ಪ್ರಾಗವಸ್ಥಾತೋ ವಿಶಿಷ್ಯತೇ ಅಹಂಪ್ರತ್ಯಯಃ। ತೇನ ನ ಕದಾಚಿದಪಿ ಮನುಷ್ಯೋಽಹಮ್' ಇತಿ ಪ್ರತ್ಯಯೋ ಗೌಣಃ।

ತದೇವಂ ಸ್ವಯಂಜ್ಯೋತಿಷ ಏವ ಸತೋ ಜೀವಸ್ಯ ಕಾರ್ಯಕರಣಸಂಘಾತವ್ಯತಿರಿಕ್ತತಾಯಾಃ, ತಥಾನವಭಾಸದರ್ಶನಾತ್, 'ಮನುಷ್ಯೋಽಹಮ್' ಇತಿ ಚಾಧ್ಯಾಸೋಪಲಬ್ಧೇಃ, ಬ್ರಹ್ಮಾತ್ಮೈಕತ್ವಸ್ಯಾಪಿ ತತ್ಸ್ವರೂಪಸ್ಯ ಅವಭಾಸನಂ ಪೂರ್ವಕಾಲಕೋಟಿರಹಿತಪ್ರಕಾಶಾಚ್ಛಾದಿತಮೋನಿಮಿತ್ತಂ ಶ್ರುತಿತದರ್ಥಾಪತ್ತಿಸಮರ್ಪಿತಂ ತನ್ನಿಮಿತ್ತಾಹಙ್ಕಾರಾಧ್ಯಾಸಸ್ಯ ಸಂಭಾವ್ಯತೇ। ಅನಾದಿತ್ವಾಚ್ಚ

---

1. ಆಕಾರವು ಬೇರೆಯೆಂದು ತಿಳಿದರೆ ಹ್ರಸ್ವಾದಿಗಳು ಬೇರೆಯೆಂದು ತಿಳಿದಿರುವದಿಲ್ಲವಾದ್ದರಿಂದ ಅಲ್ಲಿ ಅಧ್ಯಾಸವಾಗಬಹುದು.

2. ಆಕಾರವು ಬೇರೆಯೆಂದು ತಿಳಿದರೆ ಹ್ರಸ್ವಾದಿಗಳು ಬೇರೆಯೆಂದು ತಿಳಿದಂತೆಯೇ ಆಯಿತು -ಎಂದರ್ಥ. ಇಲ್ಲಿಯವರೆಗಿನ ಟಿಪ್ಪಣಿಗಳನ್ನು ಪಂ. ವಿ.ಯ ಆಧಾರದಿಂದ ಬರೆದಿರುತ್ತೇವೆ.

ಪೂರ್ವದೃಷ್ಟತ್ವಂ ಸ್ಮೃತಿರೂಪತ್ವಂ ಚ। ಪೃಥಗ್ ಭೋಕ್ತೃವಿಷಯಾನುಭವಫಲಾಭಾವಾತ್, ಭೋಕ್ತೃಚೈತನ್ಯಸಂವಲಿತೈಕಾನುಭವಫಲತ್ವಾಚ್ಚ ಪರತ್ರ ಪರಾವಭಾಸಸ್ಯ ಅನ್ಯೋನ್ಯಸಂಭೇದಸ್ಯ ವಿದ್ಯಮಾನತ್ವಾತ್, ಅಧ್ಯಾಸಲಕ್ಷಣವ್ಯಾಪ್ತಿರಿಹಾಪ್ಯುಪಪದ್ಯತೇ ॥

(ಅರ್ಥ)

(ಆಕ್ಷೇಪಕ) :- ತರ್ಕದ ಬೆಂಬಲವುಳ್ಳ ಪ್ರಮಾಣದಿಂದ ತಮ್ಮತಮ್ಮ ಅಸಾಧಾರಣರೂಪದಿಂದಲೇ ತೋರುತ್ತಿರುವ (ಎರಡು ಪದಾರ್ಥಗಳು) ಒಂದೆಂಬ ಅರಿವು ಗೌಣವಲ್ಲ- ಎಂಬುದಿದು ದೊಡ್ಡ ಇಂದ್ರಜಾಲವಲ್ಲವೆ[1] ?

(ಸಿದ್ಧಾಂತಿ) :- ನಿಜ, ಇದು ಇಂದ್ರಜಾಲವೇ ; ಏಕೆಂದರೆ ಅವಿದ್ಯಾಕೃತವಾಗಿರುತ್ತದೆ.[2] ಹೇಗೆಂದರೆ, ಅಹಂಪ್ರತ್ಯಯವು ತನ್ನ ವಿಷಯದಲ್ಲಿಯೇ ನಿಂತಿದ್ದರೂ ಅದೊಂದರಲ್ಲಿಯೇ ನಿಂತಿರುವದಕ್ಕೆ ಯಾವ ಅಡ್ಡಿಯನ್ನೂ ಮಾಡದ ಅನಾದ್ಯವಿದ್ಯೆಯಿಂದಾಗಿ ದೇಹಾದಿಗಳಲ್ಲಿಯೂ (ಆ ಪ್ರತ್ಯಯವು) ನಿಂತಿರುವದು ಕಂಡುಬರುತ್ತದೆ.[3] ಆದ್ದರಿಂದ ದೇಹಾದಿಗಳನ್ನು ವಿಷಯಾಕರಿಸುವದಕ್ಕೆ ಅಡ್ಡಿಯಿಲ್ಲದೆ ತನ್ನ ವಿಷಯ(ನಾದ ಭೋಕ್ತೃ)ವಿನಲ್ಲಿ ಅಹಂಪ್ರತ್ಯಯವು ನಿಂತಿರುತ್ತದೆ. ಆದ್ದರಿಂದ ಯುಕ್ತಿಯಿಂದ ವಿಷಯವಿವೇಚನೆಯನ್ನು ಮಾಡಿದರೂ ತನ್ನ ವಿಷಯವನ್ನು ತೋರಿಸಿ ಅದರಲ್ಲಿ ನಿಲ್ಲಿಸುವದನ್ನು ಮಾತ್ರ ಮಾಡಿದಂತಾಯಿತೇ ಹೊರತು ಹೆಚ್ಚಿನದೇನನ್ನೂ ತೋರಿಸಿದಂತೆ ಆಗಲಿಲ್ಲ.[4] ತನ್ನ ವಿಷಯದಲ್ಲಿ ನಿಂತಿರುವದೆಂಬುದು ದೇಹಾದಿಗಳಲ್ಲಿ 'ನಾನು', 'ನನ್ನದು' ಎಂಬ ಅಭಿಮಾನವಿರುವದಕ್ಕೆ ವಿರುದ್ಧವಲ್ಲ ಎಂದು (ಆಗಲೆ) ಹೇಳಿರುತ್ತೇವೆ. ಆದ್ದರಿಂದ ಯುಕ್ತಿಯಿಂದ ವಿಷಯವನ್ನು ವಿವೇಚನೆಮಾಡಿಕೊಂಡಮೇಲೂ ಅಹಂಪ್ರತ್ಯಯದಲ್ಲಿ ಹಿಂದಿನ ಅವಸ್ಥೆಗಿಂತ ವಿಶೇಷವೇನೂ ಆಗಿರುವದಿಲ್ಲ. ಆದ್ದರಿಂದ 'ನಾನು ಮನುಷ್ಯನು' ಎಂಬ ಪ್ರತ್ಯಯವು ಎಂದಿಗೂ ಗೌಣವಲ್ಲ.[5]

---

1. ಯುಕ್ತಿಯಿಂದೊಡಗೂಡಿದ ಅನುಭವದಿಂದ ಬೇರೆಬೇರೆಯೆಂದು ತೋರಿದಮೇಲೂ ಭೋಕ್ತೃ ಮತ್ತು ಅಹಂಕಾರ- ಇವೆರಡಕ್ಕೂ ಅಧ್ಯಾಸವೆಂಬುದು ಆಶ್ಚರ್ಯವಾಗಿದೆ -ಎಂದು ಆಕ್ಷೇಪ.

2. ಅಧ್ಯಾಸವು ಯುಕ್ತಿಗೆ ಹೊಂದದೆ ಇರುವದನ್ನು ತೋರಿಸುವದೇ ಆಗಿದೆಯಾದ್ದರಿಂದ ಇದನ್ನು ಇಂದ್ರಜಾಲವೆಂದರೆ ತಪ್ಪೇನೂ ಇಲ್ಲ.

3. ಆತ್ಮನಂತೆ ದೇಹಾದಿಗಳಲ್ಲಿಯೂ ನಾನು ಎಂಬ ಪ್ರತ್ಯಯವಿದ್ದೇ ಇರುತ್ತದೆ.

4. ಯುಕ್ತಿಯು ಆತ್ಮನಿಗೆ ಅಹಂಪ್ರತ್ಯಯವು ಸಲ್ಲತಕ್ಕದ್ದೆಂದು ತೋರಿಸಿಕೊಟ್ಟಿತೇ ಹೊರತು ದೇಹಾದಿಗಳಲ್ಲಿ ಆ ಪ್ರತ್ಯಯವಿಲ್ಲವೆಂದೇನೂ ತೋರಿಸಿಕೊಡಲಿಲ್ಲ.

5. ನಾನು ಎಂಬುದು ಭೋಕ್ತೃವಾದ ಆತ್ಮನ ವಿಷಯವೂ ಆಗಿ, ದೇಹಾದಿಗಳ ಅಧ್ಯಾಸದಿಂದ 'ನಾನು ಮನುಷ್ಯನು' ಎಂಬ ಅರಿವೂ ಹಾಗೇ ಉಳಿದುಕೊಂಡಿದೆ. ಗೌಣವಾಗಿದ್ದದ್ದರೆ ದೇಹಾದಿಗಳನ್ನು ವಿಂಗಡಿಸಿ, ಅವಕ್ಕೆ ಬರಿಯ ಉಪಚಾರದಿಂದ ಈ ಪ್ರತ್ಯಯವು ಹತ್ತಿಕೊಂಡಿದೆ ಎಂದು ತಿಳಿಯಬೇಕಾಗಿತ್ತು -ಎಂದರ್ಥ.

ಅಂತೂ ಹೀಗೆ ಸ್ವಯಂಜ್ಯೋತಿಯೇ ಆಗಿರುವ ಜೀವನು ಕಾರ್ಯಕರಣ ಸಂಘಾತಕ್ಕಿಂತ ವ್ಯತಿರಿಕ್ತನಾಗಿರುವದೆಂಬುದು ಹಾಗೆಂದು (ಸ್ಫುಟವಾಗಿ) ತೋರದೆ ಇರುವದರಿಂದ 'ನಾನು ಮನುಷ್ಯನು' ಎಂಬ ಅಧ್ಯಾಸವು ಕಾಣಬರುತ್ತಿರುವದರಿಂದ ಬ್ರಹ್ಮಾತ್ಮೈಕತ್ವವೂ ಆ ಸ್ವರೂಪವು ತೋರದೆ ಇರುವದಕ್ಕೆ ಹಿಂದಿನ ಕಾಲವೆಂಬ ಕೋಟಿಯಿಲ್ಲದ[1] ಪ್ರಕಾಶವನ್ನು ಮುಚ್ಚುವ ತಮಸ್ಸಿನ ನಿಮಿತ್ತದಿಂದಾಗಿದೆ ಎಂದು ಶ್ರುತಿ ಮತ್ತು ಅದರ ಅರ್ಥಾಪತ್ತಿಗಳಿಂದ ಸಮರ್ಪಿತವಾಗಿರುವದೂ ಆ ನಿಮಿತ್ತದಿಂದ ಅಹಂಕಾರಾಧ್ಯಾಸವಾಗಿರುವದೂ ಸಂಭಾವಿತವಾಗಿರುತ್ತವೆ.[2] (ಇದು) ಅನಾದಿಯಾಗಿರುವದರಿಂದ[3] ಪೂರ್ವದೃಷ್ಟವೂ ಸ್ಮೃತಿರೂಪವೂ ಆಗಿರಬಹುದಾಗಿದೆ. ಭೋಕ್ತೃವಿಷಯವಾದ ಅನುಭವಫಲವು ಬೇರೆಯಾಗಿಲ್ಲವಾದ್ದರಿಂದಲೂ ಭೋಕ್ತೃಚೈತನ್ಯಯುಕ್ತವಾದ ಒಂದೇ ಅನುಭವರೂಪಫಲವಿರುವದರಿಂದಲೂ ಪರತ್ರಪರಾವಭಾಸ (ಒಂದರಲ್ಲಿ ಇನ್ನೊಂದು ಕಾಣುವ) ಅನ್ಯೋನ್ಯಮಿಶ್ರಣವು ಇರುವದರಿಂದ ಅಧ್ಯಾಸಲಕ್ಷಣದ ವ್ಯಾಪ್ತಿಯು ಇಲ್ಲಿಯೂ ಹೊಂದುತ್ತದೆ.[4]

## ೬. ಭಾಷ್ಯ : ಪ್ರಕೃತಾಧ್ಯಾಸವಿಷಯಕ್ಕೆ ಅಸಂಭಾವನಾಪರಿಹಾರ

**ಕಥಂ ಪುನಃ ಪ್ರತ್ಯಗಾತ್ಮನಿ ಅವಿಷಯೇ ಅಧ್ಯಾಸೋ ವಿಷಯತದ್ಧರ್ಮಾಣಾಮ್? ಸರ್ವೋ ಹಿ ಪುರೋಽವಸ್ಥಿತೇ ವಿಷಯೇ ವಿಷಯಾನ್ತರಮಧ್ಯಸ್ಯತಿ; ಯುಷ್ಮತ್ಪ್ರತ್ಯಯಾಪೇತಸ್ಯ ಚ ಪ್ರತ್ಯಗಾತ್ಮನಃ ಅವಿಷಯತ್ವಂ ಬ್ರವೀಷಿ । ಉಚ್ಯತೇ । ನ ತಾವದಯಮ್ ಏಕಾನ್ತೇನ ಅವಿಷಯಃ । ಅಸ್ಮತ್ಪ್ರತ್ಯಯವಿಷಯತ್ವಾತ್, ಅಪರೋಕ್ಷ**

---

1. ಅನಾದಿಯಾದ.

2. ಸ್ವಯಂಜ್ಯೋತಿಯಾದ ಭೋಕ್ತೃವು ದೇಹೇಂದ್ರಿಯಾದಿಗಳಿಗಿಂತ ವ್ಯತಿರಿಕ್ತನೆಂದು ತಿಳಿಯಬರದೆ ಇರುವಾತೆಯೇ ಜೀವನಿಗೆ ನಾನು ಬ್ರಹ್ಮವು ಎಂದೂ ತಿಳಿಯದೆ ಇರಬಹುದು. ಈ ಅಹಂಕಾರಾಧ್ಯಾಸಕ್ಕೆ ಅನಾದ್ಯವಿದ್ಯೆಯೇ ನಿಮಿತ್ತ; ಹೀಗೆನ್ನುವದಕ್ಕೆ ಶ್ರುತಿಶ್ರುತ್ಯರ್ಥಾಪತ್ತಿಗಳೇ ಪ್ರಮಾಣ.

3. ಅಧ್ಯಾಸಕ್ಕೆ ದೋಷವಿದೆ ಎನ್ನುವದಕ್ಕಾಗಿ ಅವಿದ್ಯೆ ಎಂಬ ದೋಷವಿದೆ ಎಂದು ಹಿಂದೆ ಹೇಳಿತ್ತು; ಸಂಸ್ಕಾರವೂ ಬೇಕಲ್ಲ! ಎಂಬಲ್ಲಿ ಅದಕ್ಕಾಗಿ 'ಅನಾದಿಯಾಗಿವೆ' ಎಂದು ಹೇಳಿದೆ.

4. ಆತ್ಮಜ್ಞಾನವೂ ಭೋಕ್ತೃಜ್ಞಾನವೂ ಬೇರೆಬೇರೆಯಾಗಿ ಆಗುವದಿಲ್ಲ; ಕಪ್ಪೆಯ ಚಿಪ್ಪನ್ನೇ ಬೆಳ್ಳಿ ಎನ್ನುವಂತೆ 'ನಾನು' ಎಂದೇ ಆತ್ಮನನ್ನು ತಿಳಿಯುತ್ತಾರೆ. ಆದ್ದರಿಂದ ಆತ್ಮನಲ್ಲಿ ಅಹಂಕಾರದ ಮಿಶ್ರಣರೂಪವಾದ ಅಧ್ಯಾಸವಾದಂತಾಯಿತು.

ತ್ವಾಚ್ಚ ಪ್ರತ್ಯಗಾತ್ಮಪ್ರಸಿದ್ಧೇಃ । ನ ಚ ಅಯಮಸ್ತಿ ನಿಯಮಃ ಪುರೋಽವಸ್ಥಿತ ಏವ ವಿಷಯೇ ವಿಷಯಾನ್ತರಮ್ ಅಧ್ಯಸಿತವ್ಯಮ್ ಇತಿ। ಅಪ್ರತ್ಯಕ್ಷೇಽಪಿ ಹಿ ಆಕಾಶೇ ಬಾಲಾಃ, ತಲಮಲಿನತಾದಿ ಅಧ್ಯಸ್ಯನ್ತಿ । ಏವಮ್ ಅವಿರುದ್ಧಃ ಪ್ರತ್ಯಗಾತ್ಮನ್ಯಪಿ ಅನಾತ್ಮಾಧ್ಯಾಸಃ ॥

## ಪ್ರಕೃತಾಧ್ಯಾಸದ ವಿಷಯಕ್ಕೆ ಆಕ್ಷೇಪ : ಆತ್ಮನು ವಿಷಯನಲ್ಲ

(ಪಂಚಪಾದಿಕಾ)

೩೦. 'ಕೋಽಯಮಧ್ಯಾಸೋ ನಾಮ ? ಇತಿ । ಕಿಂ ವೃತ್ತಸ್ಯ ಪ್ರಶ್ನೇ ಕ್ಷೇಪೇ ಚ। ಸಮಾನವರ್ತಿನೋ ವಿಶೇಷಾನುಪಲಬ್ಧೇಃ ಪೃಷ್ಟವಾನ್ ಅನೇನ ಇತಿ ಮತ್ವಾ ಅಧ್ಯಾಸಸ್ವರೂಪೇ ಅಭಿಹಿತೇ, ಪುನಃ 'ಆಕ್ಷಿಪ್ತಂ ಮಯಾ' ಇತ್ಯಭಿಪ್ರಾಯಂ ವಿವೃಣೋತಿ- **'ಕಥಂ ಪುನಃ ಪ್ರತ್ಯಗಾತ್ಮನಿ ಅವಿಷಯೇ ಅಧ್ಯಾಸೋ ವಿಷಯತದ್ಧರ್ಮಾಣಾಮ್'** ಇತಿ। ಬಾಢಮ್, ಏವಂಲಕ್ಷಣೋಽಧ್ಯಾಸಃ ; ಸ ಚ ಇಹ ನ ಸಂಭವತಿ । ಕಥಮ್ ? ಯತಃ **ಸರ್ವೋ ಹಿ ಪುರೋಽವಸ್ಥಿತೇ ವಿಷಯೇ ವಿಷಯಾನ್ತರಮ್ ಅಧ್ಯಸ್ಯತಿ ; ಯುಷ್ಮತ್ಪ್ರತ್ಯಯಾಪೇತಸ್ಯ ಚ ಪ್ರತ್ಯಗಾತ್ಮನ ಅವಿಷಯತ್ವಂ ಬ್ರವೀಷಿ । ನ ಹಿ** ಅವಿಷಯೇ ಅಧ್ಯಾಸಃ ದೃಷ್ಟಪೂರ್ವಃ, ಸಂಭವೀ ವಾ ॥

(ಅರ್ಥ)

'ಈ ಅಧ್ಯಾಸವೆಂಬುದು ಯಾವದು ?' (ಎಂಬಲ್ಲಿ) ಯಾವದು?- ಎಂಬುದು ಹಿಂದೆ ಆಗಿರುವದನ್ನು ಕೇಳುವದಕ್ಕೂ ಆಕ್ಷೇಪಕ್ಕೂ ಪ್ರಯುಕ್ತವಾಗುತ್ತದೆ. (ಎರಡಕ್ಕೂ) ಸಮಾನವಾಗಿಯೇ ವೃತ್ತಿಯುಳ್ಳ (ಕಿಂಶಬ್ದಕ್ಕೆ ಇಂಥದ್ದೆಂಬ) ವಿಶೇಷವು ಕಾಣದೆ ಇರುವದರಿಂದ ಇವನು ಕೇಳಿದನು- ಎಂದು ತಿಳಿದುಕೊಂಡು ಅಧ್ಯಾಸದ ಸ್ವರೂಪವನ್ನು (ಸಿದ್ಧಾಂತಿ) ಹೇಳಲು (ಪೂರ್ವಪಕ್ಷಿಯು) ನಾನು ಆಕ್ಷೇಪಿಸಿದೆನು ಎಂದು (ತನ್ನ) ಅಭಿಪ್ರಾಯವನ್ನು ವಿವರಿಸುತ್ತಿದ್ದಾನೆ.

**'ಕಥಂ ಪುನಃ ಪ್ರತ್ಯಗಾತ್ಮನಿ ಅವಿಷಯೇ ಅಧ್ಯಾಸಃ ವಿಷಯತದ್ಧರ್ಮಾಣಾಮ್ ?'** ಆದರೆ ಅವಿಷಯನಾದ ಪ್ರತ್ಯಗಾತ್ಮನಲ್ಲಿ ವಿಷಯ ಮತ್ತು ಅದರ ಧರ್ಮಗಳ ಅಧ್ಯಾಸವು ಆಗುವದಾದರೂ ಹೇಗೆ ? ಎಂದು ಆಕ್ಷೇಪ. ಇದರ ವಿವರ : ಅಧ್ಯಾಸವು ಇಂಥ ಲಕ್ಷಣವುಳ್ಳದ್ದು ನಿಜ. ಆದರೆ ಇದು ಇಲ್ಲಿ ಸಂಭವಿಸುವದಿಲ್ಲ. ಅದು ಹೇಗೆ ? ಏಕೆಂದರೆ ಪ್ರತಿಯೊಬ್ಬನೂ ಎದುರಿಗಿರುವ 'ವಿಷಯದಲ್ಲಿ' ಮತ್ತೊಂದು ವಿಷಯವನ್ನು ಅಧ್ಯಾಸಮಾಡುತ್ತಾನೆ. **ಯುಷ್ಮ**

ಪ್ರತ್ಯಯಕ್ಕೆ (ನೀನೆಂಬ ಅರಿವಿಗೆ, ಇದು ಎಂದು ತಿಳಿಯುವದಕ್ಕೆ) ಹೊಂದದವನಾದ್ದರಿಂದ ಪ್ರತ್ಯಗಾತ್ಮನು, ಅವಿಷಯನು ಎಂದು ನೀನು ಹೇಳುತ್ತಿರುವೆ. ವಿಷಯವಲ್ಲದ್ದರಲ್ಲಿ ಅಧ್ಯಾಸವಾದದ್ದು ಹಿಂದೆ ಕಂಡುಬಂದಿಲ್ಲ, (ಅದು) ಸಂಭವಿಸುವದೂ ಇಲ್ಲವಲ್ಲ !

## ಸಮಾಧಾನ : ಆತ್ಮನು ಅಸ್ಮತ್ಪ್ರತ್ಯಯವಿಷಯನು

(ಪಂಚಪಾದಿಕಾ)

೩೧. **ಉಚ್ಯತೇ । ನ ತಾವತ್ ಅಯಮೇಕಾನ್ತೇನಾವಿಷಯಃ । ಅಸ್ಮತ್ಪ್ರತ್ಯಯವಿಷಯತ್ವಾತ್ ।** ನನು ವಿಷಯಿಣಃ, ಚಿದಾತ್ಮನಃ, ಕಥಂ ವಿಷಯಭಾವಃ ? ಪರಾಗ್ಭಾವೇನ ಇದನ್ತಾಸಮುಲ್ಲೇಖ್ಯೋ ಹಿ ವಿಷಯೋ ನಾಮ ಭವತಿ । ತದ್ವಿಪರೀತ್ಯೇನ ಪ್ರತ್ಯಗ್ರೂಪೇಣ ಅನಿದಂಪ್ರಕಾಶೋ ವಿಷಯೀ । ತತ್ ಕಥಮ್ ಏಕಸ್ಯ ನಿರಂಶಸ್ಯ ವಿರುದ್ಧಾಂಶದ್ವಯಸಂನಿವೇಶಃ? ಅತ್ರೋಚ್ಯತೇ। ಅಸ್ಮತ್ಪ್ರತ್ಯಯತ್ವಾಭಿಮತೋಽಹಙ್ಕಾರಃ । ಸ ಚ ಇದಮನಿದಂರೂಪವಸ್ತುಗರ್ಭಃ ಸರ್ವಲೋಕಸಾಕ್ಷಿಕಃ । ತಮ್ ಅವಹಿತಚೇತಸ್ತಯಾ ನಿಪುಣತರಮ್ ಅಭಿವೀಕ್ಷ್ಯ ರೂಪಕಪರೀಕ್ಷಕವತ್ ಸ್ವಾನುಭವಮ್ ಅಪ್ರಚ್ಛಾದಯನ್ತೋ ವದನ್ತು ಭವನ್ತಃ ಪರೀಕ್ಷಕಾಃ ಕಿಮ್ ಉಕ್ತಲಕ್ಷಣೋ ವಾ ನ ವಾ ? ಇತಿ ॥

(ಅರ್ಥ)

'ಉಚ್ಯತೇ । ನ ತಾವತ್ ಅಯಮ್ ಏಕಾನ್ತೇನಾವಿಷಯಃ । ಅಸ್ಮತ್ಪ್ರತ್ಯಯವಿಷಯತ್ವಾತ್' (ಹೇಳುತ್ತೇವೆ. ಇವನು ನಿಯಮದಿಂದ ಅವಿಷಯನಲ್ಲ; ಏಕೆಂದರೆ ಅಸ್ಮತ್ಪ್ರತ್ಯಯಕ್ಕೆ (ನಾನು ಎಂಬ ಅರಿವಿಗೆ) ವಿಷಯನಾಗಿರುತ್ತಾನೆ).

(ಆಕ್ಷೇಪ) :– ವಿಷಯಿಯಾಗಿರುವ ಚಿದಾತ್ಮನಿಗೆ ವಿಷಯತ್ವವು ಹೇಗೆ ? ಹೊರಗಿನದಾಗಿ ಇದು ಎಂದು ತಿಳಿಯಬರತಕ್ಕದ್ದಲ್ಲವೆ, ವಿಷಯವೆಂಬುದು ? ಅದಕ್ಕೆ ವಿಪರೀತವಾಗಿ ಒಳಗಿನದೆಂಬ ರೂಪದ್ದಾಗಿ ಇದಲ್ಲವೆಂಬ ರೂಪದಿಂದ ಹೊಳೆಯುವದೇ ವಿಷಯಿ. ಹೀಗಿರುವಲ್ಲಿ ನಿರಂಶನಾದ ಒಬ್ಬನಿಗೇ ವಿರುದ್ಧವಾದ ಎರಡು ಅಂಶಗಳು ಸೇರಿರುವದು ಹೇಗೆ ?

(ಸಿದ್ಧಾಂತಿ) :– ಇದಕ್ಕೆ ಹೇಳುತ್ತೇವೆ : **ಅಸ್ಮತ್ಪ್ರತ್ಯಯವೆಂದು (ನಾವು) ತಿಳಿಯುವದು,**[1] **ಅಹಂಕಾರವು** ಅದು, ಇದು, ಇದಲ್ಲ- ಎಂಬ ರೂಪದ ವಸ್ತುವನ್ನು ಒಳಗೊಂಡಿದೆ ಎಂಬುದಕ್ಕೆ ಎಲ್ಲರ (ಅನುಭವದ) ಸಾಕ್ಷಿಯಿದೆ. ಅದನ್ನು ಸಾವಧಾನಚಿತ್ತದಿಂದ ಬೆಳ್ಳಿಯನ್ನು ಪರೀಕ್ಷಿಸುವವನಂತೆ ಚೆನ್ನಾಗಿ

---

1. 'ಅಹಂಕಾರ'ವೇ ನಾನು ಎಂಬ ಪ್ರತ್ಯಯವೆಂದು ಇಲ್ಲಿ ಇಟ್ಟುಕೊಂಡಿದೆ ; ಆದರೆ ಸಿದ್ಧಾಂತಭಾಷ್ಯದಲ್ಲಿ ಆತ್ಮನು ಅಸ್ಮತ್ಪ್ರತ್ಯಯವಿಷಯನು ಎಂದೇ ಇರುತ್ತದೆ.

ನೋಡಿ, ತಮ್ಮ ಅನುಭವವನ್ನು ಮುಚ್ಚಿಕೊಳ್ಳದೆ (ಅದು) ಮೇಲೆ ಹೇಳಿದ ಲಕ್ಷಣವುಳ್ಳದ್ದೊ, ಅಲ್ಲವೊ?- ಎಂಬುದನ್ನು ಪರೀಕ್ಷಕರಾದ ತಾವೇ ಹೇಳಬೇಕು.

## ಅಹಂಪ್ರತ್ಯಯವಿಚಾರ

(ಪಂಚಪಾದಿಕಾ)

೩೨. ನನು ಕಿಮತ್ರ ವದಿತವ್ಯಮ್ ? ಅಸಂಭಿನ್ನೇದಂರೂಪ ಏವ ಅಹಮಿತ್ಯನುಭವಃ । ಕಥಮ್ ? ಪ್ರಮಾತೃಪ್ರಮೇಯಪ್ರಮಿತಯಸ್ತಾವತ್ ಅಪರೋಕ್ಷಾಃ । ಪ್ರಮೇಯಂ ಕರ್ಮತ್ವೇನ ಅಪರೋಕ್ಷಮ್, ಪ್ರಮಾತೃಪ್ರಮಿತೀ ಪುನಃ, ಅಪರೋಕ್ಷೇ ಏವ ಕೇವಲಮ್ । ನ ಕರ್ಮತಯಾ । ಪ್ರಮಿತಿಃ ಅನುಭವಃ ಸ್ವಯಂಪ್ರಕಾಶಃ ಪ್ರಮಾಣಫಲಮ್ । ತದ್ಬಲೇನ ಇತರತ್ ಪ್ರಕಾಶತೇ । ಪ್ರಮಾಣಂ ತು ಪ್ರಮಾತೃವ್ಯಾಪಾರಃ, ಫಲಲಿಙ್ಗೋ ನಿತ್ಯಾನುಮೇಯಃ । ತತ್ರ 'ಅಹಮ್ ಇದಂ ಜಾನಾಮಿ' ಇತಿ ಪ್ರಮಾತುಃ ಜ್ಞಾನವ್ಯಾಪಾರಃ, ಕರ್ಮವಿಷಯಃ ನಾತ್ಮವಿಷಯಃ । ಆತ್ಮಾ ತು ವಿಷಯಾನುಭವಾದೇವ ನಿಮಿತ್ತಾತ್ ಅಹಮಿತಿ ಫಲೇ ವಿಷಯೇ ಚ ಅನುಸಂಧೀಯತೇ । ನನು ನಾಯಂ ವಿಷಯಾನುಭವನಿಮಿತ್ತಃ ಅಹಮುಲ್ಲೇಖಃ, ಕಿಂ ತು ಅನ್ಯ ಏವ ಆತ್ಮಮಾತ್ರವಿಷಯಃ 'ಅಹಮ್' ಇತಿ ಪ್ರತ್ಯಯಃ । ತಸ್ಮಿಂಶ್ಚ ದ್ರವ್ಯಸ್ವರೂಪತ್ವೇನ ಆತ್ಮನಃ ಪ್ರಮೇಯತ್ವಮ್, ಜ್ಞಾತೃತ್ವೇನ ಪ್ರಮಾತೃತ್ವಮ್- ಇತಿ ಪ್ರಮಾತೃಪ್ರಮೇಯನಿರ್ಭಾಸಸ್ವರೂಪತ್ವಾತ್ ಅಹಂಪ್ರತ್ಯಯಸ್ಯ ಗ್ರಾಹ್ಯಗ್ರಾಹಕರೂಪ ಆತ್ಮಾ । ತಸ್ಮಾತ್ ಇದಮನಿದಂರೂಪಃ ಪ್ರಮೇಯಾಂಶಸ್ಯ ಇದಂರೂಪತ್ವಾತ್, ಅನಿದಂರೂಪತ್ವಾತ್ ಪ್ರಮಾತ್ರಂಶಸ್ಯ । ನೈತದ್ ಯುಕ್ತಮ್ । ಅನಂಶತ್ವಾತ್ । ಅಪರಿಣಾಮಿತ್ವಾಚ್ಚ ಆತ್ಮನಃ । ಪ್ರಮೇಯಸ್ಯ ಚ ಇದಂರೂಪತಯಾ ಪರಾಗ್ರೂಪತ್ವಾತ್ ಅನಾತ್ಮತ್ವಾತ್। ತಸ್ಮಾದ್ ನೀಲಾದಿಜ್ಞಾನಫಲಮ್ ಅನುಭವಃ ಸ್ವಯಂಪ್ರಕಾಶಮಾನಃ ಗ್ರಾಹ್ಯಮ್ ಇದಂತಯಾ ಗ್ರಾಹಕಂ ಚ ಅನಿದಂತಯಾ ಅವಭಾಸಯತಿ । ಗ್ರಹಣಂ ಚ ಅನುಮಾಪಯತಿ ಇತಿ ಯುಕ್ತಮ್ । ಅತೋ ನೇದಮಂಶೋಽಹಙ್ಕಾರೋ ಯುಜ್ಯತೇ ॥

(ಅರ್ಥ)

(ಪೂರ್ವಪಕ್ಷಿ) :- ಇಲ್ಲಿ ಹೇಳತಕ್ಕದ್ದೇನಿದೆ? ನಾನು ಎಂಬ ಅನುಭವದಲ್ಲಿ ಇದಂರೂಪವು (ಇದು ಎಂಬ ರೂಪವು) ಸೇರಿಯೇ ಇಲ್ಲ. ಹೇಗೆಂದರೆ ಮೊದಲನೆಯದಾಗಿ ಪ್ರಮಾತೃ, ಪ್ರಮೇಯ, ಪ್ರಮಿತಿಗಳು ಅಪರೋಕ್ಷವಾಗಿವೆ. ಪ್ರಮೇಯವು ಕರ್ಮವಾಗಿ ಅಪರೋಕ್ಷವು ; ಪ್ರಮಾತೃಪ್ರಮಿತಿಗಳಾದರೋ ಹಾಗೆಯೇ ಅಪರೋಕ್ಷ, ಕರ್ಮವಾಗಿ (ಅಪರೋಕ್ಷ)ವಲ್ಲ; ಪ್ರಮಿತಿ ಎಂದರೆ

ಅನುಭವವು. ಸ್ವಯಂಪ್ರಕಾಶವಾಗಿರುವ ಪ್ರಮಾಣಫಲವು; ಅದರ ಬಲದಿಂದ ಮಿಕ್ಕದ್ದು ಬೆಳಗುತ್ತದೆ. ಪ್ರಮಾಣವೋ ಎಂದರೆ ಪ್ರಮಾತೃವಿನ ವ್ಯಾಪಾರವು, (ಅದು) ಫಲವೆಂಬ ಲಿಂಗದಿಂದ ನಿತ್ಯಾನುಮೇಯವು. ಇಲ್ಲಿ 'ನಾನು ಇದನ್ನು ಅರಿಯುತ್ತೇನೆ' ಎಂದು ಪ್ರಮಾತೃವಿನ ಜ್ಞಾನವ್ಯಾಪಾರವು ಕರ್ಮವಿಷಯವೇ ಹೊರತು ಆತ್ಮವಿಷಯಕವಾದದ್ದಲ್ಲ. ಆತ್ಮನಾದರೋ, ವಿಷಯಾನುಭವನಿಮಿತ್ತದಿಂದಲೇ 'ನಾನು' ಎಂದು ಫಲದಲ್ಲಿಯೂ ವಿಷಯದಲ್ಲಿಯೂ ಅನುಸಂಧಾನವಾಗುತ್ತಾನೆ.[1]

(ಆಕ್ಷೇಪ) :– ಈ ನಾನೆಂಬ ಅರಿವು ವಿಷಯಾನುಭವನಿಮಿತ್ತದಿಂದಾದದ್ದಲ್ಲ, ಮತ್ತೇನೆಂದರೆ, ಆತ್ಮಮಾತ್ರವಿಷಯಕವಾದ ನಾನೆಂಬ ಪ್ರತ್ಯಯ(ವಿದು).[2] ಅದರಲ್ಲಿ ದ್ರವ್ಯರೂಪದಿಂದ ಆತ್ಮನು ಪ್ರಮೇಯನು, ಜ್ಞಾತೃವಾಗಿ ಪ್ರಮಾತೃವು– ಎಂದು ಅಹಂಪ್ರತ್ಯಯವು ಪ್ರಮಾತೃಪ್ರಮೇಯರೂಪವಾಗಿ ತೋರುವದರಿಂದ ಆತ್ಮನು ಗ್ರಾಹ್ಯಗ್ರಾಹಕರೂಪನು. ಆದ್ದರಿಂದ ಇದಮನಿದಂ (ಇದು, ಇದಲ್ಲದ್ದು ಎಂಬ) ಎರಡೂ ರೂಪದವನಾಗಿರುತ್ತಾನೆ; ಏಕೆಂದರೆ ಪ್ರಮೇಯಾಂಶವು ಇದಂ ರೂಪವಾಗಿರುತ್ತದೆ, ಪ್ರಮಾತ್ರಂಶವು ಅನಿದಂರೂಪವಾಗಿರುತ್ತದೆ.

(ಪೂರ್ವಪಕ್ಷಿ) :– ಇದು ಯುಕ್ತವಲ್ಲ. ಏಕೆಂದರೆ ಆತ್ಮನು ಅಂಶವಿಲ್ಲದವನು, ಅಪರಿಣಾಮಿಯು. ಪ್ರಮೇಯವು ಇದಂರೂಪವುಳ್ಳದ್ದಾಗಿದೆಯಾಗಿ ಪರಾಗ್ರೂಪವಾಗಿರುವದರಿಂದ[3] ಅನಾತ್ಮವಾಗಿರುತ್ತದೆ; ಆದ್ದರಿಂದ ನೀಲಾದಿಜ್ಞಾನಫಲವಾದ ಅನುಭವವು ಸ್ವಯಂಪ್ರಕಾಶವಾಗಿದ್ದುಕೊಂಡು, ಗ್ರಾಹ್ಯವನ್ನು ಇದು ಎಂಬ ರೂಪದಿಂದಲೂ ಗ್ರಾಹಕನನ್ನು ಇದಲ್ಲವೆಂಬ ರೂಪದಿಂದಲೂ ತೋರಿಸುತ್ತದೆ. ಗ್ರಹಣವನ್ನು ಅನುಮಾನಿಸಿ (ತಿಳಿಸು)ತ್ತದೆ[4] –ಎಂಬುದೇ ಯುಕ್ತ. ಆದ್ದರಿಂದ ಅಹಂಕಾರವು ಇದಮಂಶ –ಎಂಬುದು ಸರಿಯಲ್ಲ.

## ಪ್ರಾಭಾಕರಖಂಡನೆಯೂ ಸಿದ್ಧಾಂತವೂ

(ಪಂಚಪಾದಿಕಾ)

೩೩. ಉಚ್ಯತೇ। ತತ್ರ ಇದಂ ಭವಾನ್ ಪ್ರಷ್ಟವ್ಯಃ। (೧) ಕಿಮ್ ಆತ್ಮಾ ಚೈತನ್ಯಪ್ರಕಾಶಃ, ಅನುಭವೋ ಜಡಪ್ರಕಾಶಃ (೨) ಉತ ಸೋಽಪಿ ಚೈತನ್ಯ

---

1. ಇದು ಯಾರ ಪಕ್ಷವೆಂಬುದು ಸ್ಫುಟವಾಗಿ ವ್ಯಾಖ್ಯಾನಗಳಿಂದ ತಿಳಿಯುವದಿಲ್ಲ; ಪ್ರಾಭಾಕರಪಕ್ಷವೆಂದು ತೋರುತ್ತದೆ.

2. ಇದು ಭಾಟ್ಟಮತವಿರಬೇಕು.

3. ಹೊರಗಿನ ವಿಷಯದ ಸ್ವರೂಪವಾಗಿರುವದರಿಂದ.

4. ವ್ಯಾಪಾರರೂಪವಾಗಿರುವ ಪ್ರಮಾಣವು ಪರೋಕ್ಷವು; ಅದನ್ನು ಅನುಭವವೆಂಬ ಫಲದ ಬಲದಿಂದ ಏತರಿಂದ ಅರಿಯುತ್ತೇವೆಯೋ ಅದೇ ಜ್ಞಾನವೆಂಬ ಪ್ರಮಾಣವು ಎಂದು ಕಲ್ಪಿಸಿಕೊಳ್ಳುತ್ತಾರೆ.

ಪ್ರಕಾಶಃ, (೩) ಅಥವಾ ಸ ಏವ ಚೈತನ್ಯಪ್ರಕಾಶಃ, ಆತ್ಮಾ ಜಡಸ್ವರೂಪ ಇತಿ। ತತ್ರ (೧) ನ ತಾವತ್ ಪ್ರಥಮಃ ಕಲ್ಪಃ; ಜಡಸ್ವರೂಪೇ ಪ್ರಮಾಣಫಲೇ ವಿಶ್ವಸ್ಯ ಅನವಭಾಸಪ್ರಸಙ್ಗಾತ್। ನೈವಮ್, ಪ್ರಮಾಣಚೇತನಃ; ತದ್ಬಲೇನ ಪ್ರದೀಪೇನೇವ ವಿಷಯಮ್ ಇದಂತಯಾ ಆತ್ಮಾನಂ ಚ ಅನಿದಂತಯಾ ಚೇತಯತೇ ಇತಿ ನ ವಿಶ್ವಸ್ಯಾನವಭಾಸಪ್ರಸಙ್ಗಃ। ತನ್ನ। ಸ್ವಯಂಪ್ರಕಾಶಚೈತನ್ಯಸ್ವಭಾವೋಽಪಿ ಸನ್ ವಿಷಯಪ್ರಮಾಣೇನ ಅಚೇತನೇನ ಅನುಗೃಹೀತಃ ಪ್ರಕಾಶತ ಇತಿ ನೈತತ್ ಸಾಧು ಲಕ್ಷ್ಯತೇ। ಕಿಞ್ಚ ಪ್ರಮಾಣಫಲೇನ ಚೇತ್ ಪ್ರದೀಪೇನೇವ ವಿಷಯಮ್ ಆತ್ಮಾನಂ ಚ ಚೇತಯತೇ, ತದಾ ಚೇತಯತಿಕ್ರಿಯಾನವಸ್ಥಾಪ್ರಸಙ್ಗಃ॥

(೨) ದ್ವಿತೀಯೋಽಪಿ ಕಲ್ಪೇ, ಆತ್ಮಾಪಿ ಸ್ವಯಮೇವ ಪ್ರಕಾಶೇತ, ಕಿಮಿತಿ ವಿಷಯಾನುಭವಮ್ ಅಪೇಕ್ಷೇತ? ಅಥ ಚೈತನ್ಯಸ್ವಭಾವತ್ವೇಽಪಿ ನಾತ್ಮಾ ಸ್ವಯಂ ಪ್ರಕಾಶಃ, ವಿಶೇಷೇ ಹೇತುರ್ವಾಚ್ಯಃ। ನ ಹಿ ಚೈತನ್ಯಸ್ವಭಾವಃ ಸನ್ ಸ್ವಯಂ ಪರೋಕ್ಷಃ, ಅನ್ಯತೋಽಪರೋಕ್ಷಃ ಇತಿ ಯುಜ್ಯತೇ। ಕಿಞ್ಚ, ಸಮತ್ವಾತ್ ನೇತರೇತರಾಪೇಕ್ಷತ್ವಂ ಪ್ರಕಾಶನೇ ಪ್ರದೀಪಯೋರಿವ। (೩) ತೃತೀಯೇಽಪಿ ಕಲ್ಪೇ ಅನಿಷ್ಟತೋಽಪಿ ಆತ್ಮೈವ ಚಿತಿಪ್ರಕಾಶಃ ಆಪದ್ಯತೇ, ನ ತದತಿರಿಕ್ತತಥಾವಿಧಫಲಸದ್ಭಾವೇ ಪ್ರಮಾಣಮಸ್ತಿ। ಕಥಮ್? ಪ್ರಮಾಣಜನ್ಯಶ್ಚೇತ್ ಅನುಭವಃ, ತಥಾ ಸತಿ ಸ್ವಗತೇನ ವಿಶೇಷೇಣ ಪ್ರತಿವಿಷಯಂ ಪೃಥಕ್ಪೃಥಕ್ ಅವಭಾಸೇತ; ಸರ್ವಾನುಭವಾನುಗತಂ ಚ ಗೋತ್ವವತ್ ಅನುಭವತ್ವಮ್ ಅಪರಮ್ ಈಕ್ಷ್ಯೇತ। ನ ಚ 'ನೀಲಾನುಭವಃ', 'ಪೀತಾನುಭವಃ'—ಇತಿ ವಿಷಯವಿಶೇಷಪರಾಮರ್ಶಶೂನ್ಯಃ ಸ್ವಗತೋ ವಿಶೇಷೋ ಲಕ್ಷ್ಯತೇ॥ ನನು ವಿನಷ್ಟಾವಿನಷ್ಟತ್ವೇನ ವಿಶೇಷಃ ಸಿಧ್ಯತಿ। ಸಿಧ್ಯೇತ್ ಯದಿ ವಿನಷ್ಟಾವಿನಷ್ಟತಾ ಸಿಧ್ಯೇತ್। ಸಾ ಚ ಜನ್ಯತ್ವೇ ಸತಿ, ತಸ್ಯಾಂ ಚ ಸಿದ್ಧಾಯಾಂ ಜನ್ಯತ್ವಮ್ ಇತಿ ಪರಸ್ಪರಾಯತ್ತಸ್ಥಿತಿತ್ವೇನ ಏಕಮಪಿ ನ ಸಿಧ್ಯೇತ್। ಏತೇನ, ಅತಿಸಾದೃಶ್ಯಾತ್ ಅನುಭವಭೇದೋ ನ ವಿಭಾವ್ಯತೇ ಇತಿ ಪ್ರತ್ಯುಕ್ತಮ್। ಭೇದಾಸಿದ್ಧೇಃ। ನ ಹಿ ಚಿತ್ಪ್ರಕಾಶಸ್ಯ ಸ್ವಗತೋ ಭೇದೋ ನ ಪ್ರಕಾಶತೇ ಇತಿ ಯುಕ್ತಿಮತ್; ಯೇನ ತದಪ್ರಕಾಶನಾತ್ ಸಾದೃಶ್ಯನಿಬನ್ಧನೋ ವಿಭ್ರಮಃ ಸ್ಯಾತ್। ನ ಚ ಯಥಾ ಜೀವಸ್ಯ ಸ್ವಯಂಜ್ಯೋತಿಷೋಽಪಿ ಸ್ವರೂಪಮೇವ ಸತ್ ಬ್ರಹ್ಮರೂಪತ್ವಂ ನ ಪ್ರಕಾಶತೇ, ತದ್ವತ್ ಸ್ಯಾತ್ – ಇತಿ ಯುಕ್ತಮ್। ಅಭಿಹಿತಂ ತತ್ರ ಅಪ್ರಕಾಶನೇ ಪ್ರಮಾಣಮ್। ಇಹ ತತ್ ನಾಸ್ತಿ। ನ ಹಿ ಸಾಮಾನ್ಯತೋ ದೃಷ್ಟಮ್ ಅನುಭವವಿರೋಧೇ ಯುಕ್ತಿವಿರೋಧೇ ಚ ಸಮುತ್ತಿಷ್ಠತಿ। ದರ್ಶಿತೇ ಚ ಅನುಭವಯುಕ್ತೀ॥

ತಸ್ಮಾತ್ ಚಿತ್ಸ್ವಭಾವ ಏವ ಆತ್ಮಾ ತೇನ ತೇನ ಪ್ರಮೇಯಭೇದೇನ ಉಪಧೀಯಮಾನಃ, ಅನುಭವಾಭಿಧಾನೀಯಕಂ ಲಭತೇ; ಅವಿವಕ್ಷಿತೋಪಾಧಿಃ,

ಆತ್ಮಾದಿಶಬ್ದೈರಭಿಧೀಯತೇ । ಅವಧೀರಿತವನಾಭಿಧಾನನಿಮಿತ್ತೈಕದೇಶಾವಸ್ಥಾನಾ ಇವ ವೃಕ್ಷಾ ವೃಕ್ಷಾದಿಶಬ್ದೈರಿತ್ಯಭ್ಯುಪಗನ್ತವ್ಯಮ್ ।

(ಅರ್ಥ)

(ಸಿದ್ಧಾಂತಿ) :– ಹೇಳುತ್ತೇವೆ; ಇಲ್ಲಿ ನಿನ್ನನ್ನು ಇದನ್ನು ಕೇಳಬೇಕಾಗಿದೆ: (೧) ಆತ್ಮನು ಚೈತನ್ಯಪ್ರಕಾಶರೂಪನು, ಅನುಭವವು ಜಡಪ್ರಕಾಶವು ಎನ್ನುವೆಯೊ? (೨) ಅಥವಾ ಅ (ಅನುಭವವೂ) ಚೈತನ್ಯಪ್ರಕಾಶವೊ? (೩) ಅಥವಾ ಅದೇ ಚೈತನ್ಯಪ್ರಕಾಶವು, ಆತ್ಮನು ಜಡಸ್ವರೂಪನು ಎನ್ನುವೆಯೊ? ಇವುಗಳೊಳಗೆ ಮೊದಲನೆಯದಾಗಿ ಒಂದನೆಯ ಕಲ್ಪವು (ಸರಿ)ಯಲ್ಲ; ಏಕೆಂದರೆ ಪ್ರಮಾಣ ಫಲವು ಜಡಸ್ವರೂಪವೆಂದಾದರೆ ಯಾವದೊಂದೂ ತೋರಬಾರದಾಗುವದು.

(ಪೂರ್ವಪಕ್ಷಿ) :– ಹಾಗಲ್ಲ. ಪ್ರಮಾತೃವು ಚೇತನನು; ಆ (ಅನುಭವದ) ಬಲದಿಂದ ದೊಡ್ಡದೀಪದಿಂದ ಹೇಗೋ ಹಾಗೆ ವಿಷಯವನ್ನು ಇದು ಎಂಬ ರೂಪ ದಿಂದಲೂ ತನ್ನನ್ನು ಇದಲ್ಲವು ಎಂಬ ರೂಪದಿಂದಲೂ– ಅರಿತುಕೊಳ್ಳುತ್ತಾನೆ, ಆದ್ದರಿಂದ ಯಾವದೂ ತೋರುವದಿಲ್ಲವೆಂಬ ಪ್ರಸಂಗವಿಲ್ಲ.

(ಸಿದ್ಧಾಂತಿ) :– ಹಾಗಲ್ಲ. ತಾನೇ ಚೈತನ್ಯದ ಸ್ವಭಾವವವನೇ ಆಗಿದ್ದರೂ ವಿಷಯಪ್ರಮಾಣವೆಂಬ ಅಚೇತನದಿಂದ ಅನುಗ್ರಹಿಸಲ್ಪಟ್ಟು ತೋರಿಕೊಳ್ಳುತ್ತಾನೆ ಎಂಬಿದು ಸರಿಯಾಗಿ ಕಾಣುವದಿಲ್ಲ. ಇದಲ್ಲದೆ ಪ್ರಮಾಣಫಲದಿಂದ ದೊಡ್ಡ ದೀಪದಿಂದ ಹೇಗೋ ಹಾಗೆ ವಿಷಯನಾದ ತನ್ನನ್ನು ಅರಿತುಕೊಳ್ಳುತ್ತಾನಾದರೆ, ಆಗ ಅರಿಯುವದೆಂಬ ಕ್ರಿಯೆಗೆ ಅನವಸ್ಥೆಯು ಪ್ರಸಂಗವಾಗುವದು.[1]

ಎರಡನೆಯ ಕಲ್ಪದಲ್ಲಿ[2] ಆತ್ಮನೂ ತಾನೇ ಬೆಳಗಿತೋರಬಹುದಾಗಿದೆ, (ಅವನಿಗೆ) ವಿಷಯಾನುಭವದ ಅಪೇಕ್ಷೆ ಏತಕ್ಕೆ ಬೇಕಾದೀತು[3]? ಹೀಗಲ್ಲದೆ ಚೈತನ್ಯಪ್ರಕಾಶ(ರೂಪ)ನಾಗಿದ್ದರೂ ಆತ್ಮನು ಸ್ವಯಂಪ್ರಕಾಶನಲ್ಲ– ಎನ್ನುವ ದಾದರೆ (ಈ) ವಿಶೇಷಕ್ಕೆ[4] ಕಾರಣವನ್ನು ಹೇಳಬೇಕು. ಚೈತನ್ಯಸ್ವಭಾವ

---

1. ಮೊದಲು ವಿಷಯವನ್ನು ಅರಿಯಬೇಕು; ಆ ಅರಿವಿನ ಫಲದ ಬಲದಿಂದ ತನ್ನನ್ನು ಅರಿಯಬೇಕು. ಆಮೇಲೆ ಅದರ ಫಲದ ಬಲದಿಂದ ಆ ಅರಿವೆಂಬ ಕ್ರಿಯೆಯನ್ನು ಅರಿತುಕೊಳ್ಳಬೇಕು; ಮತ್ತೆ ಅದನ್ನು ಹೀಗೆ ಅರಿಯಬೇಕು –ಎಂದು ನಿಲುಗಡೆಯಿಲ್ಲದೆ ಹೋಗುತ್ತದೆ ಎಂದರ್ಥ.

2. ಆತ್ಮ, ಅನುಭವ– ಎರಡೂ ಚೈತನ್ಯಪ್ರಕಾಶ ಎಂಬ ಪಕ್ಷದಲ್ಲಿ.

3. ವಿಷಯಾನುಭವದಿಂದ ಅನಿದಂರೂಪನಾಗಿ ಆತ್ಮನು ತೋರುತ್ತಾನೆ– ಎಂದು ಪೂರ್ವಪಕ್ಷಿ ಹೇಳಿದ್ದು ತಪ್ಪಾಗುವದು. ಏಕೆಂದರೆ ವಿಷಯಾನುಭವದಂತೆ ಆತ್ಮನು ಸ್ವಯಂ ಪ್ರಕಾಶನೇ ಆಗಿರುತ್ತಾನೆ.

4. ಅನುಭವವು ತಾನೇ ಬೆಳಗುತ್ತದೆ, ಆತ್ಮನು ಮಾತ್ರ ಫಲದ ಸಹಾಯದಿಂದ ತೋರಿಕೊಳ್ಳುತ್ತಾನೆ ಎಂಬ ವಿಶೇಷಕ್ಕೆ.

ನಾಗಿಯೂ ಇದ್ದುಕೊಂಡು ತಾನು ಪರೋಕ್ಷನು, ಮತ್ತೊಂದರ (ಬಲ)ದಿಂದ ಅಪರೋಕ್ಷನು- ಎಂಬುದು ಯುಕ್ತವಾಗಲಾರದಷ್ಟೆ ? ಇದಲ್ಲದೆ (ಎರಡೂ ಚೈತನ್ಯ ಸ್ವಭಾವದವಾಗಿರುವವೆಂಬುದು) ಸಮವಾಗಿರುವದರಿಂದ ಬೆಳಗಿತೋರುವದಕ್ಕೆ ಒಂದರ ಅಪೇಕ್ಷೆಯು ಒಂದಕ್ಕಿದೆ ಎಂಬುದು (ಸರಿ)ಯಲ್ಲ; ಎರಡು ದೀಪಗಳಂತೆ.[1]

ಮೂರನೆಯ ಕಲ್ಪದಲ್ಲಿಯೂ (ನಿನಗೆ) ಇಚ್ಛೆಯಿಲ್ಲದಿದ್ದರೂ ಆತ್ಮನೇ ಚೈತನ್ಯಪ್ರಕಾಶನೆಂದಾಗುವದು,[2] ಅದಕ್ಕಿಂತ ಬೇರೆಯು ಆ ಬಗೆಯ[3] ಫಲವಿದೆ ಎಂಬುದಕ್ಕೆ ಪ್ರಮಾಣವಿರುವದಿಲ್ಲ. (ಇದು) ಹೇಗೆಂದರೆ : ಅನುಭವವು ಪ್ರಮಾಣದಿಂದುಂಟಾಗುತ್ತದೆ ಎಂದರೆ, ಹಾಗಿದ್ದರೆ ತನ್ನಲ್ಲಿರುವ ವಿಶೇಷದಿಂದ ಒಂದೊಂದು ವಿಷಯಕ್ಕೂ ಬೇರೆಬೇರೆಯಾಗಿ ತೋರಿಕೊಳ್ಳಬೇಕಾಗುವದು ; ಎಲ್ಲಾ ಅನುಭವಗಳಲ್ಲಿಯೂ ಅನುಗತವಾಗಿರುವ ಅನುಭವತ್ವವೆಂಬ ಮತ್ತೊಂದೂ ಗೋತ್ವ(ಜಾತಿ)ಯಂತೆ ಕಾಣಬರಬೇಕಾಗುವದು.[4] ಕಪ್ಪಿನ ಅನುಭವ, ಹಳದಿಯ ಅನುಭವ- ಎಂದು ಆಯಾ ವಿಷಯದ ಪರಾಮರ್ಶವಿಲ್ಲದೆ (ಅನುಭವದಲ್ಲಿ) ತನ್ನಲ್ಲಿಯೇ ವಿಶೇಷವು (ಯಾವದೂ) ಕಾಣಿಸುವದಿಲ್ಲ.[5]

(ಪೂರ್ವಪಕ್ಷಿ) :- ನಾಶವಾದದ್ದು, ನಾಶವಾಗದೆ ಇರುವದು. ಎಂಬುದರಿಂದ ವಿಶೇಷವು ಸಿದ್ಧವಾಗುತ್ತದೆಯಲ್ಲ[6] !

(ಸಿದ್ಧಾಂತಿ) :- ಸಿದ್ಧವಾಗಬಹುದು, ವಿನಷ್ಟತ್ವ, ಅವಿನಷ್ಟತ್ವ ಎಂಬುದು ಸಿದ್ಧವಾದರೆ. ಆ (ವಿನಷ್ಟತ್ವಾವಿನಷ್ಟವೆಂಬುದು) ಜನ್ಯತ್ವವು (ಸಿದ್ಧವಾದರೆ), ಅದು ಸಿದ್ಧವಾದರೆ ಜನ್ಯತ್ವ(ಸಿದ್ಧಿ) -ಎಂದು ಒಂದಕ್ಕೊಂದು ಅಧೀನವಾಗಿರುವದರಿಂದ

---

1. ಈ ದೀಪದ ಬೆಳಕಿನಿಂದ ಆ ದೀಪವು ತೋರುತ್ತದೆ, ಆ ದೀಪದ ಬೆಳಕಿನಿಂದ ಇದು ತೋರುವದಿಲ್ಲ- ಎಂದು ವಿಶೇಷವನ್ನು ಕಲ್ಪಿಸುವದಕ್ಕೆ ಆಗುವದಿಲ್ಲ.

2. ಅನುಭವವೊಂದೇ ಚೈತನ್ಯಪ್ರಕಾಶರೂಪವಾಗಿದೆ, ಆತ್ಮನು ಜಡಪ್ರಕಾಶನು -ಎಂಬುದಾದರೆ ಎಂದರ್ಥ. ಜಡಪ್ರಕಾಶವೆಂದರೆ ಸೂರ್ಯಾದಿಗಳಂತೆ ಹೊಳೆಯುವ ವಸ್ತು, ಚೈತನ್ಯಪ್ರಕಾಶವೆಂದರೆ ಸ್ವತಃ ತೋರಿಕೊಳ್ಳುವ ವಸ್ತು. ಚೈತನ್ಯದಿಂದಲೇ ಸೂರ್ಯಾದಿಗಳು ತೋರಿಬರುತ್ತವೆ ಎಂಬುದು ಪ್ರಸಿದ್ಧ.

3. ಚೈತನ್ಯಪ್ರಕಾಶವಾದ ಎಂದರ್ಥ.

4. ಗಡಿಗೆಯ ಅನುಭವದ ಸ್ವರೂಪವು ಬೇರೆ, ಬಟ್ಟೆಯ ಅನುಭವದ ಸ್ವರೂಪವು ಬೇರೆ- ಎಂದು ತೋರಬೇಕು; ಬೇರೆಬೇರೆಯ ಜಾತಿಯ ಗೋವುಗಳೆಲ್ಲೆಲ್ಲ ಗೋತ್ವವು ಇರುವಂತೆ ಅನುಭವತ್ವವೆಂಬ ಬೇರೆ ಇರಬೇಕು.

5. ಅನುಭವವು ಒಂದೇ ರೂಪವಾಗಿದೆ; ವಿಷಯದ ಅಪೇಕ್ಷೆಯಿಂದ ಮಾತ್ರ ಅಂಥಿಂಥ ಅನುಭವ- ಎಂದು ಬೇರೆಯಾದಂತೆ ಕಾಣಿಸುತ್ತಿರುತ್ತದೆ.

6. ಆ ಅನುಭವವು ನಾಶವಾಯಿತು, ಇದು ನಾಶವಾಗದೆ ಇದೆ- ಎಂಬ ವಿಶೇಷವು ಕಾಣುತ್ತದೆಯಲ್ಲವೆ ?

(ಇವೆರಡರಲ್ಲಿ) ಒಂದೂ ಸಿದ್ಧವಾಗಲಾರದು.[1] ಬಹಳ ಸಾದೃಶ್ಯವಿರುವದರಿಂದ (ಅನುಭವಗಳ) ಭೇದವು ಕಾಣಿಸುವದಿಲ್ಲ-ಎಂಬ ಮತವನ್ನೂ ಇದರಿಂದ ತಿರಸ್ಕರಿಸಿದಂತೆ (ಆಯಿತು). ಏಕೆಂದರೆ ಭೇದವೇ ಸಿದ್ಧವಾಗಿಲ್ಲ.[2] ಏಕೆಂದರೆ, ಚಿತ್ಪ್ರಕಾಶದ ಸ್ವಗತಭೇದವು ತೋರುವದಿಲ್ಲ ಎಂಬುದು ಯುಕ್ತಾಯುಕ್ತವಲ್ಲವಷ್ಟೆ? ಹಾಗೆ (ತೋರದೆ) ಇದ್ದಿದ್ದರೆ, ಆ (ಭೇದವು) ತೋರದೆ ಇರುವದರಿಂದ ಸಾದೃಶ್ಯನಿಮಿತ್ತವಾಗಿ (ಒಂದೇ ಎಂಬ) ಭ್ರಾಂತಿಯಾಗಿದೆ ಎಂದಾಗಬಹುದಾಗುವದು.[3] ಜೀವನು ಸ್ವಯಂಜ್ಯೋತಿಯಾಗಿದ್ದರೂ ಅವನ ಸ್ವರೂಪವೇ ಆಗಿರುವ ಬ್ರಹ್ಮಸ್ವರೂಪವು ಹೇಗೆ ಕಾಣದೆ ಇರುವದೋ ಹಾಗೆ (ಇದೂ) ಆಗಬಹುದು ಎನ್ನುವದು ಸರಿಯಲ್ಲ. ಅಲ್ಲಿ (ಬ್ರಹ್ಮಸ್ವರೂಪವು) ಕಾಣದೆ ಇರುವದಕ್ಕೆ ಕಾರಣವನ್ನು ಹೇಳಿದ್ದಾಗಿದೆ[4], ಇಲ್ಲಿ ಅಂಥ (ಕಾರಣವೇನೂ) ಇಲ್ಲ. ಸಾಮಾನ್ಯತೋದೃಷ್ಟವಾದದ್ದು- ಅನುಭವವಿರೋಧವೂ ಯುಕ್ತಿವಿರೋಧವೂ ಇರುವಲ್ಲಿ - ಎದ್ದುಕೊಳ್ಳಲಾರದು.[5] ಅನುಭವಯುಕ್ತಿಗಳನ್ನು ತೋರಿಸಿದ್ದೂ ಆಗಿದೆ[6]?

---

1. ಯಾವದು ಹುಟ್ಟುವದೋ ಅದು ವಿನಷ್ಟವಾಗುತ್ತದೆ. ಆದ್ದರಿಂದ ಜನ್ಯತ್ವವನ್ನು (ಅನುಭವವು ಹುಟ್ಟುತ್ತದೆ ಎಂಬುದನ್ನು) ಮೊದಲು ತೋರಿಸಿಕೊಡಬೇಕು. ಯಾವದು ನಾಶವಾಗುತ್ತದೆಯೋ, ಅದು ಮತ್ತೆ ಹುಟ್ಟಬಹುದು. ಆದ್ದರಿಂದ ಅನುಭವವು ನಾಶವಾಗುವದೆಂಬುದನ್ನು ಮೊದಲು ತೋರಿಸಬೇಕಾಯಿತು. ಅಂತೂ ಈ ಎರಡರಲ್ಲಿ ಒಂದೂ ಮತ್ತೊಂದರ ಅಪೇಕ್ಷೆಯಿಲ್ಲದೆ ಸಿದ್ಧವಾಗಿಲ್ಲ. ಅನುಭವವು ಒಂದೇ ರೂಪದಲ್ಲಿ ಕಾಣಿಸುತ್ತಿದೆ; ಅದರಲ್ಲಿ ಭೇದವೇ ಕಾಣಿಸುತ್ತಿಲ್ಲ.

2. ಬೇಗಬೇಗನೆ ಹುಟ್ಟಿ ನಾಶವಾಗುವದರಿಂದ ಹುಟ್ಟಿದ ಅನುಭವ, ನಾಶವಾದ ಅನುಭವ- ಇವೆರಡಕ್ಕೂ ಇರುವ ಭೇದವು ಕಾಣಿಸುವದಿಲ್ಲ, ಇವೆರಡೂ ಒಂದರಂತೆ ಇರುವದರಿಂದ ಹುಟ್ಟಲಿಲ್ಲವೆಂಬ ಭ್ರಾಂತಿಯಾಗಿದೆ ಎಂಬ ಬೌದ್ಧರ ಮತವೂ ಸರಿಯಲ್ಲ; ಬೇರೆಬೇರೆ ಅನುಭವವು ಎರಡು ಎಂದು ಸಿದ್ಧವಾದಮೇಲಲ್ಲವೆ, ಆ ಮತವು ಸರಿಯೆಂದಾಗುವದು?

3. ಜ್ಞಾನಕ್ಕೇ ತನ್ನಲ್ಲಿರುವ ಭೇದವು ತೋರುವದಿಲ್ಲ ಎನ್ನುವದು ಸರಿಯಲ್ಲ, ಏಕೆಂದರೆ ತೋರದೆ ಇದ್ದರೆ ಅದು ಜ್ಞಾನವೆನಿಸಲೇ ಆರದು; ಚಿತ್ತಿಗೆ ತನ್ನ ಭೇದವು ತೋರುವದೇ ಇಲ್ಲವೆಂಬುದು ಸರಿಯಲ್ಲವಾದ್ದರಿಂದ ಸಾದೃಶ್ಯದಿಂದ ಭೇದವು ತೋರಲಿಲ್ಲ ಎಂಬ ಮತವೂ ಸರಿಯಲ್ಲ.

4. ಬ್ರಹ್ಮಸ್ವರೂಪವು ತೋರದೆ ಇರುವದಕ್ಕೆ ಸ್ವಾಭಾವಿಕವಾಗಿರುವ ಅವಿದ್ಯೆಯೇ ಕಾರಣವೆಂದು ಹೇಳಲಾಗಿದೆ ಎಂದರ್ಥ; ಅವಿದ್ಯೆಯೇ ಬ್ರಹ್ಮಸ್ವರೂಪವನ್ನು ಮುಚ್ಚಿಕೊಂಡಿದೆ ಎಂಬುದು ಈ ಪ್ರಸ್ಥಾನದ ಅಸಾಧಾರಣೋಪದೇಶ.

5. ಜೀವನಿಗೆ ಬ್ರಹ್ಮಸ್ವರೂಪವು ಕಾಣದೆ ಇರುವಂತೆ ಇಲ್ಲಿಯೂ ತೋರದೆ ಇರಬಹುದು ಎಂಬುದು ಸಾಮಾನ್ಯತೋದೃಷ್ಟ. ರಾಮನು ಮನುಷ್ಯನು, ಅವನು ಕೆಂಪಗೆ ಇದಾನೆ; ಭೀಮನೂ ಮನುಷ್ಯನಾದ್ದರಿಂದ ಅವನೂ ಕೆಂಪಗೆ ಇರಬಹುದು ಎಂಬುದು ಸರಿಯಲ್ಲ. ಭೀಮನು ಕಪ್ಪಗೆ ಇರುವ ಅನುಭವವಿದ್ದರೆ ಅದಕ್ಕೆ ಈ ಅನುಮಾನವು ವಿರುದ್ಧವಾಗುತ್ತದೆ; ಒಂದರಂತೆ ಒಂದು ಇರಬೇಕಾದದ್ದಿಲ್ಲ- ಎಂಬ ಯುಕ್ತಿಗೂ ಇದು ವಿರುದ್ಧ.

6. ನಾನು ಎಂಬ ಅನುಭವವು ಆತ್ಮ, ದೇಹ- ಈ ಎರಡರಲ್ಲಿಯೂ ಇದೆ ಎಂದು ತೋರಿಸಿದ್ದಾಗಿದೆ.

ಆದ್ದರಿಂದ ಚಿತ್ಸ್ವಭಾವನೇ ಆಗಿರುವ **ಆತ್ಮನು, ಆಯಾ ಪ್ರಮೇಯದ ಭೇದದಿಂದ ಉಪಹಿತನಾಗಿ, 'ಅನುಭವ' ಎಂಬ ಹೆಸರನ್ನು ಪಡೆಯುತ್ತಾನೆ.**[1] ಯಾವ ಉಪಾಧಿಯೂ ವಿವಕ್ಷಿತವಲ್ಲದಾಗ, 'ಆತ್ಮ' ಮುಂತಾದ ಶಬ್ದಗಳಿಂದ ಕರೆಯಲ್ಪಡುತ್ತಾನೆ. ಕಾಡು ಎಂಬ ಹೆಸರಿಗೆ ಬೇಕಾದ ನಿಮಿತ್ತವಾದ ಒಂದೇ ಕಡೆಯಲ್ಲಿರುವಿಕೆಯಿಲ್ಲದ ಮರಗಳು 'ಮರಗಳು' ಮುಂತಾದ ಹೆಸರಿನಿಂದ ಕರೆಯಲ್ಪಡುವಂತೆಯೇ[2] (ಇದು) ಎಂದು ಒಪ್ಪಬೇಕು.

## ಸುಷುಪ್ತ್ಯನುಭವವೂ ಪೂರ್ವಪಕ್ಷಿಗೆ ವಿರುದ್ಧ

(ಪಂಚಪಾದಿಕಾ)

೩೪. ಬಾಢಮ್ । ಅತ ಏವ ವಿಷಯಾನುಭವನಿಮಿತ್ತಃ ಅನಿದಮಾತ್ಮಕೋಽಹಙ್ಕಾರ ವರ್ಣ್ಯತೇ । ಸತ್ಯಮೇವಮ್, ಕಿಂ ತು ತಥಾ ಸತಿ ಸುಷುಪ್ತೇಽಪಿ ಅಹಮಿತಿ ಉಲ್ಲೇಖಃ ಸ್ಯಾತ್ । ಕಥಮ್ ? ನೀಲಾನುಷಙ್ಗೋ ಯಶ್ಚೈತನ್ಯಸ್ಯ ಸ ನೀಲಭೋಗಃ ನಾಸೌ ಅಹಮುಲ್ಲೇಖಾರ್ಹಃ । ಅಹಮ್ ಇತಿ ಆತ್ಮಾ ಅವಭಾಸತೇ । ತತ್ರ ಯದಿ ನಾಮ ಸುಷುಪ್ತೇ ವಿಷಯಾನುಷಙ್ಗಾಭಾವಾತ್ 'ಇದಂ ಜಾನಾಮಿ' ಇತಿ ವಿಷಯತದನುಭವಪರಾಮರ್ಶೋ ನಾಸ್ತಿ, ಮಾ ಭೂತ್ ; ಅಹಮ್ ಇತಿ ಆತ್ಮಮಾತ್ರಪರಾಮರ್ಶಃ ಕಿಮಿತಿ ನ ಭವೇತ್ ? ನನು ಅಹಮ್ ಇತಿ ಭೋಕ್ತೃತ್ವಂ ಪ್ರತಿಭಾಸತೇ; ತದಭಾವೇ ಕಥಂ ತಥಾ ಪ್ರತಿಭಾಸಃ ? ನೈತತ್ ಸಾರಮ್ । ಸಮುತ್ಕಾಲಿತೋಪಾಧಿವಿಶೇಷಂ ಚೈತನ್ಯಮಾತ್ರಮ್ ಅಸ್ಮದರ್ಥಃ । ತತಃ ಸರ್ವದಾ 'ಅಹಮ್' ಇತಿ ಸ್ಯಾತ್ । ನೈತತ್ ಶಕ್ಯಮ್ ಉಪಾಧಿಪರಾಮರ್ಶೇನ ಚೈತನ್ಯಮ್ ಅಹಮ್ ಇತ್ಯುಲ್ಲಿಖ್ಯತೇ ಇತಿ ವಕ್ತುಮ್ । ತತ್ಪರಾಮರ್ಶೋ ಹಿ ತತ್ಸಿದ್ಧಿನಿಮಿತ್ತಃ, ನ ಸ್ವರೂಪಸಿದ್ಧಿಹೇತುಃ । ಸ್ವಮಾಹಾತ್ಮ್ಯೇನೈವ ತು ಸ್ವರೂಪಸಿದ್ಧಿಃ । ತತಶ್ಚ ವಿಷಯೋಪರಾಗಾನುಭವಾತ್ಮತ್ವಶೂನ್ಯಃ ಸ್ವರೂಪತಃ 'ಅಹಮ್' ಇತಿ ಸುಷುಪ್ತೇಽಪಿ ಅವಭಾಸೇತ ; ದೃಶಿರೂಪತ್ವಾವಿಶೇಷಾತ್ ॥

(ಅರ್ಥ)

(ಪೂರ್ವಪಕ್ಷಿ) :- ನಿಜ. ಆದ್ದರಿಂದಲೇ ವಿಷಯಾನುಭವನಿಮಿತ್ತದಿಂದ ಅಹಂಕಾರವು ಅನಿದಮಾತ್ಮಕವೆಂದು (ನಾವು) ಹೇಳುತ್ತೇವೆ.

---

1. ಅವನ ಸ್ವರೂಪವು ಚೈತನ್ಯವೇ ಆಗಿದ್ದರೂ, ಆಯಾ ವಿಷಯನಿಮಿತ್ತದಿಂದ ಕಾಣಿಸಿಕೊಂಡಾಗ ಆಯಾ ಅನುಭವ– ಇದು ಘಟಾನುಭವ, ಪಟಾನುಭವ ಎಂದಿಂತು– ಕರೆಯಿಸಿಕೊಳ್ಳುತ್ತಾನೆ.

2. ಒಟ್ಟಿಗೆ ಇದ್ದರೆ ಕಾಡು ಎಂಬ ಹೆಸರು, ಬಿಡಿಬಿಡಿಯಾಗಿದ್ದರೆ ಮರ ಎಂದೇ ಹೆಸರು ; ಮರದ ಸ್ವರೂಪದಲ್ಲೇನೂ ವಿಶೇಷವಿಲ್ಲ.

(ಸಿದ್ಧಾಂತಿ) :- ಹೀಗೆಂಬುದು ನಿಜ.[1] ಆದರೆ ಹಾಗಾದರೆ[2] ಸುಷುಪ್ತಿಯಲ್ಲಿಯೂ ನಾನು ಎಂಬ ಅನುಭವವುಂಟಾಗಬೇಕಾಗುವದು. ಹೇಗೆಂದರೆ, ಚೈತನ್ಯಕ್ಕೆ ನೀಲಸಂಬಂಧದಿಂದ ಆಗುವ ನೀಲಭೋಗವಿದೆಯಲ್ಲ, ಅದು ನಾನೆಂದು ತೋರುವದಕ್ಕೆ ಅರ್ಹವಲ್ಲ, ಆತ್ಮನೇ ನಾನು ಎಂದು ತೋರುತ್ತಾನೆ. ಹೀಗಿರುವಲ್ಲಿ ಸುಷುಪ್ತಿಯಲ್ಲಿ ವಿಷಯದ ಸಂಬಂಧವಿಲ್ಲದ್ದರಿಂದ 'ಇದನ್ನು ಅರಿಯುತ್ತಿದ್ದೇನೆ' ಎಂದು ವಿಷಯ, ಮತ್ತು ಅದರ ಅನುಭವ– ಇವುಗಳ ಪರಾಮರ್ಶವು ಇಲ್ಲದಿದ್ದರೆ, ಇಲ್ಲದೆಹೋಗಲಿ; ನಾನು ಎಂದು ಆತ್ಮಮಾತ್ರದ ಪರಾಮರ್ಶವೇತಕ್ಕೆ ಇರಬಾರದು[3] ?

(ಪೂರ್ವಪಕ್ಷಿ) :- ನಾನು ಎಂದು ಭೋಕ್ತೃತ್ವವೇ ತೋರುತ್ತದೆ; ಅದು ಇಲ್ಲದಿರುವಾಗ ಹಾಗೆ ಹೇಗೆತಾನೆ ತೋರೀತು[4] ?

(ಸಿದ್ಧಾಂತಿ):- ಇದು ಹುರುಳಿಲ್ಲದ್ದು. ಯಾವ ಉಪಾಧಿವಿಶೇಷವೂ ಇಲ್ಲದ ಚೈತನ್ಯಮಾತ್ರವು ಅಸ್ಮದರ್ಥವು; ಆದ್ದರಿಂದ ಯಾವಾಗಲೂ ನಾನು ಎಂದೇ ಆಗಬೇಕು[5] ; ಉಪಾಧಿಪರಾಮರ್ಶದಿಂದ ಚೈತನ್ಯವು ನಾನು ಎಂದು ತೋರುತ್ತದೆ ಎಂದು ಹೇಳುವದಕ್ಕೆ ಆಗಲಾರದು. ಏಕೆಂದರೆ ಆ (ಉಪಾಧಿಯ) ಪರಾಮರ್ಶವು ಆ (ಉಪಾಧಿಯ) ಸಿದ್ಧಿಗೆ ಕಾರಣವೇ ಹೊರತು ಸ್ವರೂಪಸಿದ್ಧಿಗೆ ಕಾರಣವಲ್ಲ[6] ; ಸ್ವರೂಪಸಿದ್ಧಿಯು ತನ್ನ ಮಹಿಮೆಯಿಂದಲೇ (ಆಗಬೇಕು). ಆದ್ದರಿಂದ ವಿಷಯಸಂಬಂಧದಿಂದಾಗುವ ಅನುಭವರೂಪವಿಲ್ಲದೆ ಸ್ವರೂಪದಿಂದಲೇ 'ನಾನು' ಎಂದು ಸುಷುಪ್ತಿಯಲ್ಲಿಯೂ ತೋರಬೇಕು ; ಏಕೆಂದರೆ ದೃಗ್ರೂಪವು ಆಗಲೂ ಸಮಾನವಾಗಿಯೇ ಇರುತ್ತದೆ.

---

1. ವಿಷಯಾನುಭವವಿರುವಾಗ ನಾನು ಎಂಬ ತೋರಿಕೆಯಿದೆ ಎಂಬುದು ನಿಜ.

2. ನಿಜವಾಗಿಯೂ ನಾನೆಂಬುದು ಆತ್ಮನೇ ಆದರೆ.

3. ನಾನು ಎಂಬುದು ಚೈತನ್ಯದ ಸ್ವರೂಪವೆಂದಲ್ಲವೆ, ನೀವು ಹೇಳುವದು? ಅದು ಸುಷುಪ್ತಿಯಲ್ಲಿಯೂ ಇದ್ದೇ ಇದೆಯಲ್ಲ ?

4. ಆತ್ಮನ ಭೋಕ್ತೃರೂಪವೇ ನಾನೆಂಬುದು, ವಿಷಯಭೋಗನಿಮಿತ್ತದಿಂದಲಲ್ಲವೆ, ಅದು ತೋರಬೇಕು ?

5. ಆತ್ಮನ ಸ್ವರೂಪಕ್ಕೆ ಸೇರಿದ್ದಾದರೆ, ಅದು ನಾನು ಎಂದು ಯಾವಾಗಲೂ ತೋರಬೇಕು.

6. ಇದನ್ನು ಅನುಭವಿಸುತ್ತೇನೆ– ಎಂಬುದು ವಿಷಯದ ಸಿದ್ಧಿಗೂ ಅದರ ಅನುಭವದ ಸಿದ್ಧಿಗೂ ಕಾರಣವಾಗಲಿ ; ಆತ್ಮನ ಸ್ವರೂಪವು ತೋರುವದಕ್ಕೆ ಏತಕ್ಕೆ ಕಾರಣವಾಗಬೇಕು ? ವಸ್ತುವಿನ ಸ್ವರೂಪವು ಮತ್ತೊಂದರಿಂದ ಸಿದ್ಧಿಯಾಗಬೇಕಾದದ್ದಿಲ್ಲವಷ್ಟೆ ?– ಎಂದರ್ಥ. ಈ ಪ್ರಕರಣದಲ್ಲಿ ಪ್ರಾಭಾಕರನು ವಿಷಯಾನುಭವದಿಂದ ಆತ್ಮನ ವಿಷಯಕ್ಕೆ 'ನಾನು' ಎಂಬ ಅನುಭವವಾಗುವದೆಂದು ಹೇಳುತ್ತಿದ್ದಾನೆ. 'ಆದ್ದರಿಂದಲೇ ಅದು ಆತ್ಮನ ಸ್ವರೂಪಕ್ಕೆ ಸೇರಿದ್ದಲ್ಲ, ಅಧ್ಯಾಸವು'– ಎಂದು ಸಿದ್ಧಾಂತಿ ಹೇಳುತ್ತಿದ್ದಾನೆ.

(ಪಂಚಪಾದಿಕಾ)

೩೫. ಭವತ್ವೇವ ಇತಿ ಚೇತ್। ನ। ತಥಾ ಸತಿ ಸ್ಮರ್ಯೇತ ಹ್ಯಸ್ತನ ಇವಾಹಙ್ಕಾರಃ। ಅವಿನಾಶಿನಃ ಸಂಸ್ಕಾರಸ್ಯಾಭಾವಾತ್ ನ ಸ್ಮರ್ಯತೇ ಇತಿ ಚೇತ್। ಹ್ಯಸ್ತನೋಽಪಿ ನ ಸ್ಮರ್ಯೇತ ॥

ನನು ಅಸ್ತ್ಯೇವ ಸುಷುಪ್ತೇ ಅಹಮುಲ್ಲೇಖಃ 'ಸುಖಮಹಮ್ ಅಸ್ವಾಪ್ಸಮ್' ಇತಿ ಸುಷುಪ್ತೋತ್ಥಿತಸ್ಯ ಸ್ವಾಪಸುಖಾನುಭವಪರಾಮರ್ಶದರ್ಶನಾತ್ ; ನಾತ್ಮನೋಽನ್ಯಸ್ಯ ತತ್ರಾನುಭವಃ ಸಂಭವತಿ । ಸತ್ಯಮ್, ಅಸ್ತಿ । ನ ತತ್ ಸ್ವಾಪೇ ಸುಖಾನುಭವಸಂಸ್ಕಾರಜಂ ಸ್ಮರಣಮ್, ಕಿಂ ತರ್ಹಿ, ಸುಖಾವಮರ್ಶೋ ದುಃಖಾಭಾವನಿಮಿತ್ತಃ। ಕಥಮ್ ? ಸ್ವಪ್ನೇ ತಾವತ್ ಅಸ್ತ್ಯೇವ ದುಃಖಾನುಭವಃ। ಸುಷುಪ್ತೇ ತು ತದಭಾವಾತ್ ಸುಖವ್ಯಪದೇಶಃ। ತದಭಾವಶ್ಚ ಕರಣವ್ಯಾಪಾರೋಪರಮಾತ್। ಯದಿ ಪುನಃ ಸುಪ್ತಃ ಸುಖಮಿತಿ ಚ ತದ್ವಿಷಯಂ ಸ್ಮರಣಂ ಸ್ಯಾತ್, ತದಾ ವಿಶೇಷತಃ ಸ್ಮರ್ಯೇತ, ನ ಚ ತದಸ್ತಿ । ವ್ಯಪದೇಶೋಽಪಿ ಸುಖಂ ಸುಪ್ತಃ, ನ ಕಿಞ್ಚಿನ್ಮಯಾ ಚೇತಿತಮ್ ಇತಿ ಹಿ ದೃಶ್ಯತೇ ಯತ್ ಪುನಃ ಸುಪ್ತೋತ್ಥಿತಸ್ಯ ಅಙ್ಗಲಾಘವೇನ್ದ್ರಿಯಪ್ರಸಾದಾದಿನಾ ಸುಖಾನುಭವೋಽನ್ನಯನಮಿತಿ, ತದಸತ್। ಅನುಭೂತಂ ಚೇತ್ ಸುಖಮ್, ಸ್ಮರ್ಯೇತ ; ನ ತತ್ರ ಲಿಙ್ಗೇನ ಪ್ರಯೋಜನಮ್ । ಯದ್ಯೇವಂ ಸುಪ್ತೋತ್ಥಿತಸ್ಯ ಕಥಂ ಕಸ್ಯಚಿತ್ ಅಙ್ಗಲಾಘವಮ್, ಕಸ್ಯಚಿನ್ನ ಇತಿ ? ಉಚ್ಯತೇ। ಜಾಗರಣೇ ಕಾರ್ಯಕರಣಾನಿ ಶ್ರಾಮ್ಯನ್ತಿ । ತದಪನುತ್ತಯೇ ವ್ಯಾಪಾರೋಪರಮಃ ಸ್ವಾಪಃ। ತತ್ರ ಯದಿ ಸಮ್ಯಗ್ ವ್ಯಾಪಾರೋಪರಮಃ, ತದಙ್ಗಾನಿ ಲಘೂನಿ ; ಇತರಥಾ ಗುರೂಣಿ ಇತಿ ॥

(ಅರ್ಥ)

(ಪೂರ್ವಪಕ್ಷಿ) :– ಆಗಿಯೇ ಆಗುತ್ತದೆ.[2]

(ಸಿದ್ಧಾಂತಿ) :– ಹಾಗಾದರೆ ನಿನ್ನೆಯ ದಿನದ ಅಹಂಕಾರದಂತೆ (ಅದೂ) ನೆನಪಿಗೆ ಬರಬೇಕು.[3]

---

1. ಅಹಮನುಭವಃ' ಪಾ॥

2. ಅಲ್ಲಿಯೂ ನಾನೆಂಬ ಅನುಭವವು ಆಗಿಯೇ ಆಗುತ್ತದೆ– ಎಂದು ಪೂರ್ವಪಕ್ಷಿಯು ಹೇಳುತ್ತಾನೆ. ಸುಷುಪ್ತಿಯಲ್ಲಿ ಯಾವ ವಿಶೇಷಾನುಭವವಿಲ್ಲವೆಂಬುದು ಎಲ್ಲರಿಗೂ ತಿಳಿದಿದ್ದರೂ ಈಗಲೂ ಕೆಲವರು ಹೀಗೆಂದೇ ಹಠಹಿಡಿಯುತ್ತಿರುವರು.

3. ಅನುಭವಿಸಿದ್ದು ಸ್ಮರಣೆಗೆ ಬರಬೇಕೆಂದು ಸಿದ್ಧಾಂತಿಯು ನಿಯಮವನ್ನು ಇಟ್ಟುಕೊಂಡಿದಾನೆ. ನಿನ್ನೆ 'ನಾನು' ಎಂದು ಅನುಭವಿಸಿದ್ದು ಈಗ ನೆನಪಿಗೆ ಬರುತ್ತದೆ. ಸುಷುಪ್ತಿಯಲ್ಲಿ ಆದಿದ್ದರೆ ಏತಕ್ಕೆ ಬರಬಾರದು ?– ಎಂದು ಅವನ ಅಭಿಪ್ರಾಯ.

(ಪೂರ್ವಪಕ್ಷಿ):- ನಾಶವಾಗದೆ ಇರುವದಕ್ಕೆ ಸಂಸ್ಕಾರವಿಲ್ಲದ್ದರಿಂದ ನೆನಪಿಗೆ ಬರುವದಿಲ್ಲ.[1]

(ಸಿದ್ಧಾಂತಿ) :- (ಹಾಗಾದರೆ) ನಿನ್ನೆಯ (ಅಹಂಕಾರವೂ) ನೆನಪಿಗೆ ಬರಬಾರದು.[2]

(ಪೂರ್ವಪಕ್ಷಿ) :- ಸುಷುಪ್ತಿಯಲ್ಲಿ ನಾನು ಎಂಬ ಅನುಭವವು ಇದ್ದೇ ಇದೆ. ಏಕೆಂದರೆ 'ನಾನು ಸುಖವಾಗಿ ನಿದ್ರಿಸಿದೆನು' ಎಂದು ನಿದ್ರಿಸಿ ಎಚ್ಚತ್ತವನು ನಿದ್ರೆಯ ಸುಖವನ್ನು ಅನುಭವಿಸಿದ್ದನ್ನು ನೆನಪಿಸಿಕೊಳ್ಳುವದು ಕಂಡಿದೆ. ಅಲ್ಲಿ ಆತ್ಮನನ್ನು ಬಿಟ್ಟರೆ ಮತ್ತೇತರ ಅನುಭವವೂ ಇರುವಹಾಗಿಲ್ಲವಲ್ಲ !

(ಸಿದ್ಧಾಂತಿ) :- ನಿಜ. (ಆ ನೆನಪು) ಇದೆ. ಆದರೆ ಅದು ನಿದ್ರೆಯಲ್ಲಿ ಸುಖವನ್ನು ಅನುಭವಿಸಿದ್ದರಿಂದ ಆದ ನೆನಪಲ್ಲ ; ಮತ್ತೇನೆಂದರೆ, ದುಃಖದ ಅಭಾವದಿಂದಾದ ಸುಖಪರಾಮರ್ಶವದು. ಹೇಗೆಂದರೆ : ಮೊದಲನೆಯದಾಗಿ ಕನಸಿನಲ್ಲಿ ದುಃಖದ ಅನುಭವ ಇದ್ದೇಇರುತ್ತದೆ, ಸುಷುಪ್ತಿಯಲ್ಲಾದರೋ ಆ (ದುಃಖವು) ಇಲ್ಲದ್ದರಿಂದ (ಅದನ್ನು) ಸುಖವೆನ್ನುವರು. ಆ (ದುಃಖ)ವಿಲ್ಲ ವೆಂಬುದೂ ಕರಣಗಳ ವ್ಯಾಪಾರವು ನಿಂತುಹೋಗುವದರಿಂದ. ಹಾಗಲ್ಲದೆ 'ಸುಖ ವಾಗಿ ನಿದ್ರಿಸಿದೆನು' ಎಂದು (ನಿಜವಾಗಿ) ಅದರ ವಿಷಯದ ಸ್ಮರಣವಾಗಿದ್ದಿದ್ದರೆ, ಆಗ ವಿಶೇಷರೂಪದಿಂದ ಸ್ಮರಣೆಯಾಗಬೇಕಾಗಿತ್ತು ; ಆದರೆ ಹಾಗಿಲ್ಲ. 'ಸುಖ ವಾಗಿ ನಿದ್ರಿಸಿದೆನು, ನನಗೆ ಏತರ ಅರಿವೂ ಆಗಲಿಲ್ಲ' ಎಂದಲ್ಲವೆ, ಹೇಳಿಕೊಳ್ಳು ವದು ಕಂಡುಬರುತ್ತದೆ ?[3] ಇನ್ನು ನಿದ್ರಿಸಿ ಎಚ್ಚತ್ತವನಿಗೆ ಶರೀರವು ಹಗುರ ವಾಗಿರುವದು, ಇಂದ್ರಿಯಗಳು ಪ್ರಸನ್ನವಾಗಿರುವದು ಮುಂತಾದದ್ದರಿಂದ (ಅಲ್ಲಿ) ಸುಖದ ಅನುಭವ(ವಾಗಿರಬೇಕೆಂದು) ಊಹಿಸುತ್ತಾರಲ್ಲ, ಅದು ಸರಿಯಲ್ಲ ;

---

1. ಅನುಭವವು ನಾಶವಾದಬಳಿಕ ಅದರ ಸಂಸ್ಕಾರವುಂಟಾಗುತ್ತದೆ ; ಆ ಸಂಸ್ಕಾರವು ಹೊರಗಿನ ಉದ್ಬೋಧಕಸಾಮಗ್ರಿಯಿಂದ ಸ್ಮೃತಿಯಾಗುತ್ತದೆ. ಇಲ್ಲಿ ನಾನೆಂಬ ಅಹಂಕಾರವು ನಿತ್ಯವಾದ್ದರಿಂದ ಅದಕ್ಕೆ ಸಂಸ್ಕಾರವಿಲ್ಲ.

2. ನಿನ್ನೆಯ ಅಹಂಕಾರವೂ ನಿತ್ಯವೇ ಆದ್ದರಿಂದ ಅದರ ನೆನಪೂ ಬರಬಾರದಾಗು ವದು- ಎಂದು ಅಭಿಪ್ರಾಯ. ಸುಷುಪ್ತಿಯಲ್ಲಿ ನಾನು ಎಂಬ ಅನುಭವವಿದೆ ; ಅದರ ಸ್ಮರಣೆಯೂ ಆಗುತ್ತದೆ ಎಂದು ಹೇಳುವದಕ್ಕೆ ಇದು ಬೀಜವಾಗಿ ಹೇಳಿದ್ದು.

3. ಸುಷುಪ್ತಿಯಲ್ಲಿ ದುಃಖವಿಲ್ಲದ್ದನ್ನೇ 'ಸುಖವಾಗಿ ನಿದ್ರಿಸಿದೆ' ಎನ್ನುತ್ತಾರೆ ಎಂದು ಇಲ್ಲಿ ಯುಕ್ತಿಪೂರ್ವಕವಾಗಿ ಹೇಳಿದ್ದರೂ ಇದು ಪರಮತದಂತೆ ಹೇಳಿದ್ದು ; ನಿಜವಾಗಿ ಅಲ್ಲಿ ಸುಖದ ಮತ್ತು ಭಾವರೂಪಾಜ್ಞಾನದ ಅನುಭವವಿರುತ್ತದೆ-ಎಂದು ಪಂ. ವಿ. ದಲ್ಲಿ ಬರೆದಿದೆ.

(ಏಕೆಂದರೆ) ಸುಖವನ್ನು ಅನುಭವಿಸಿದ್ದರೆ (ಅದರ) ಸ್ಮರಣೆಯಾಗಬೇಕು; ಅಲ್ಲಿ (ಬರಿಯ) ಲಿಂಗದಿಂದ[1] ಯಾವ ಪ್ರಯೋಜನವೂ ಇಲ್ಲ.[2]

(ಪ್ರಶ್ನೆ):— ಹಾಗಾದರೆ ನಿದ್ರಿಸಿ ಎಚ್ಚತ್ತವನಿಗೆ ಒಬ್ಬನಿಗೆ ಮೈ ಹಗುರವಾಗಿರುವದು, ಮತ್ತೊಬ್ಬನಿಗೆ ಹಾಗಿಲ್ಲದಿರುವದು—ಇದು ಹೇಗೆ (ಸಂಭವಿಸುತ್ತದೆ)?

(ಉತ್ತರ):— ಹೇಳುತ್ತೇನೆ. ಎಚ್ಚರದಲ್ಲಿ ಶರೀರವೂ ಇಂದ್ರಿಯಗಳೂ ಸೋತಿರುತ್ತವೆ. ಆ (ಸೋಲನ್ನು) ಕಳೆದುಕೊಳ್ಳುವದಕ್ಕೆ (ಅವು) ಕೆಲಸವನ್ನು ಬಿಡುವದೇ ನಿದ್ರೆ. ಆಗ ಚೆನ್ನಾಗಿ ಕೆಲಸವು ನಿಂತುಹೋದರೆ, ಅಂಗಗಳು ಹಗುರವಾಗಿರುತ್ತವೆ; ಇಲ್ಲದಿದ್ದರೆ ಭಾರವಾಗಿರುತ್ತವೆ.[3]

## ಆತ್ಮನ ಅಹಂಕರ್ತೃತ್ವದ ಬಗ್ಗೆ ಭಾಷ್ಯಾಭಿಪ್ರಾಯ

(ಪಂಚಪಾದಿಕಾ)

೩೫. ತದೇವಂ ನಾಯಂ ನೀಲಾದಿಪ್ರತ್ಯಯಾದನ್ಯ ಏವಾತ್ಮವಿಷಯೋಽಹಂಪ್ರತ್ಯಯಃ, ನಾಪಿ ವಿಷಯಾನುಭವಾದೇವಾಹಮುಲ್ಲೇಖಃ। ತಸ್ಮಾತ್, ಬ್ರಹ್ಮವಿದಾಮ್ ಏಕಪುಣ್ಡರೀಕಸ್ಯ ಲೋಕಾನುಗ್ರಹೈಕರಸತಯಾ ಸಮ್ಯಗ್ಜ್ಞಾನಪ್ರವರ್ತನಪ್ರಯೋಜನಕೃತಶರೀರಪರಿಗ್ರಹಸ್ಯ ಭಗವತೋ ಭಾಷ್ಯಕಾರಸ್ಯ ಮತಮ್ ಅನುಗನ್ತವ್ಯಮ್ ॥

ತದುಚ್ಯತೇ। ಯೋಽಯಂ ಶ್ರುತಿಸ್ಮೃತೀತಿಹಾಸಪುರಾಣೇಷು ನಾಮರೂಪಮ್, ಅವ್ಯಾಕೃತಮ್, ಅವಿದ್ಯಾ, ಮಾಯಾ, ಪ್ರಕೃತಿಃ, ಅಗ್ರಹಣಮ್, ಅವ್ಯಕ್ತಮ್, ತಮಃ, ಕಾರಣಮ್, ಲಯಃ, ಶಕ್ತಿಃ, ಮಹಾಸುಪ್ತಿಃ, ನಿದ್ರಾ, ಅಕ್ಷರಮ್, ಆಕಾಶಮ್— ಇತಿ ಚ ತತ್ರ ತತ್ರ ಬಹುಧಾ ಗೀಯತೇ ಚೈತನ್ಯಸ್ಯ ಸ್ವತ ಏವಾವಸ್ಥಿತಲಕ್ಷಣಬ್ರಹ್ಮಸ್ವರೂಪತಾವಭಾಸಂ ಪ್ರತಿಬಧ್ಯ ಜೀವತ್ವಾಪಾದಿಕಾ ಅವಿದ್ಯಾಕರ್ಮಪೂರ್ವಪ್ರಜ್ಞಾಸಂಸ್ಕಾರಚಿತ್ರಭಿತ್ತಿಃ, ಸುಷುಪ್ತೇ ಪ್ರಕಾಶಾಚ್ಛಾದನವಿಕ್ಷೇಪಸಂಸ್ಕಾರಮಾತ್ರರೂಪಸ್ಥಿತಿಃ, ಅನಾದಿರವಿದ್ಯಾ; ತಸ್ಯಾಃ ಪರಮೇಶ್ವರಾಧಿಷ್ಠಿತತ್ವಲಬ್ಧಪರಿಣಾಮವಿಶೇಷೋ ವಿಜ್ಞಾನಕ್ರಿಯಾಶಕ್ತಿದ್ವಯಾಶ್ರಯಃ ಕರ್ತೃತ್ವಭೋಕ್ತೃತ್ವೈಕಾಧಾರಃ ಕೂಟಸ್ಥಚೈತನ್ಯಸಂವಲನಸಂಜಾತಜ್ಯೋತಿಃ ಸ್ವಯಂ

---

1. ಹೊಗೆಯು ಬೆಂಕಿಯಿರುವದನ್ನೂಹಿಸುವದಕ್ಕೆ ಸಾಧನವಾದ ಗುರುತಾಗಿರುವಂತೆ ಇರುವ ಗುರುತಿನಿಂದ.

2. ತಾನೇ ಅನುಭವಿಸಿದ್ದನ್ನು ಸ್ಮರಿಸಬೇಕೇ ಹೊರತು, ಅದನ್ನು ಅನುಮಾನದಿಂದ ಪರೋಕ್ಷವಾಗಿ ಊಹಿಸತಕ್ಕದ್ದಲ್ಲ —ಎಂದು ಭಾವ.

3. ಇಷ್ಟೇ ಹೊರತು ಸುಷುಪ್ತಿಯಲ್ಲಿ ಸುಖವನ್ನೇ ನೇರಾಗಿ ಅನುಭವಿಸಿದ್ದರಿಂದಾದ ಫಲವಿದಲ್ಲ ಎಂದರ್ಥ.

ಪ್ರಕಾಶಮಾನಃ, ಅಪರೋಕ್ಷೋಽಹಙ್ಕಾರಃ ಯತ್ಸಂಭೇದಾತ್ ಕೂಟಸ್ಥಚೈತನ್ಯಃ, ಅನಿದಮಂಶ ಆತ್ಮಾ ಭಾತುರಪಿ ಮಿಥ್ಯೈವ ಭೋಕ್ತೇತಿ ಪ್ರಸಿದ್ಧಿಮ್ ಉಪಗತಃ, ಸ ಚ ಸುಷುಪ್ತೇ ಸಮುತ್ಖಾತನಿಖಿಲಪರಿಣಾಮಾಯಾಮ್ ಅವಿದ್ಯಾಯಾಂ ಕುತಸ್ತ್ಯಃ? ನ ಚೈವಂ ಮನ್ತವ್ಯಮ್, ಆಶ್ರಿತಪರಿಣತಿಭೇದತಯೈವ ಅಹಙ್ಕಾರಸ್ಯ ನಿರ್ಭಾಸೇ ಅನನ್ತರ್ಭೂತ್ತ್ವೈವ ತನ್ನಿಮಿತ್ತಮಿತಿ। ತಥಾ ಸತಿ ಅಪಾಕೃತಾಹಙ್ಕೃತಿಸಂಸರ್ಗೋ ಭೋಕ್ತೃತ್ವಾದಿಸ್ತದ್ವಿಶೇಷಃ ಕೇವಲಮ್ ಇದನ್ತಯೈವ ಅವಭಾಸೇತ, ನ ಚ ತಥಾ ಸಮಸ್ತಿ। ಸ ಚ ಪರಿಣಾಮವಿಶೇಷಃ, ಅನಿದಞ್ಚಾದಾತ್ಮನೋ ಬುದ್ಧ್ಯಾ ನಿಷ್ಕೃಷ್ಯ ವೇದಾನ್ತವಾದಿಭಿಃ ಅನ್ತಃಕರಣಮ್, ಮನಃ, ಬುದ್ಧಿಃ, ಅಹಂಪ್ರತ್ಯಯೀ ಇತಿ ಚ ವಿಜ್ಞಾನಶಕ್ತಿವಿಶೇಷಮ್ ಆಶ್ರಿತ್ಯ ವ್ಯಪದಿಶ್ಯತೇ। ಪರಿಸ್ಪನ್ದಶಕ್ತ್ಯಾ ಚ ಪ್ರಾಣ ಇತಿ। ತೇನಾನ್ತಃಕರಣೋಪರಾಗನಿಮಿತ್ತಂ ಮಿಥ್ಯೈವ ಅಹಂಕರ್ತೃತ್ವಮಾತ್ಮನಃ, ಸ್ಫಟಿಕಮಣೇರಿವ ಉಪಧಾನನಿಮಿತ್ತೋ ಲೋಹಿತಿಮಾ॥

(ಅರ್ಥ)

ಅಂತೂ ಹೀಗೆ ಈ ಅಹಂಪ್ರತ್ಯಯವು ನೀಲಾದಿಜ್ಞಾನಕ್ಕಿಂತ ಬೇರೆಯೇ ಆಗಿರುವ ಆತ್ಮವಿಷಯಕವಾದ (ಪ್ರತ್ಯಯ)ವಲ್ಲ, ವಿಷಯಾನುಭವದಿಂದಲೇ ನಾನು ಎಂಬ ಅನುಭವವು ಆಗುವದೂ ಇಲ್ಲ.[1] ಆದ್ದರಿಂದ ಬ್ರಹ್ಮಜ್ಞಾನಿಗಳಲ್ಲಿ ಮುಖ್ಯ ಪುಂಡರೀಕರಾಗಿರುವ, ಲೋಕಕ್ಕೆ ಅನುಗ್ರಹವನ್ನು ಮಾಡಬೇಕೆಂಬ ಒಂದೇ ಇಚ್ಛೆಯಿಂದ, ಸಮ್ಯಗ್ಜ್ಞಾನವನ್ನು ಮುಂದುವರಿಯಿಸುವ ಪ್ರಯೋಜನಕ್ಕಾಗಿ ಶರೀರವನ್ನು ಧರಿಸಿಕೊಂಡ ಭಾಷ್ಯಕಾರಭಗವಂತನ ಮತವನ್ನು ಆಗಮವೆಂದಿಟ್ಟು ಕೊಳ್ಳಬೇಕು.[2]

ಅದನ್ನು ಹೇಳುತ್ತೇವೆ. ಶ್ರುತಿ, ಸ್ಮೃತಿಗಳು, ಇತಿಹಾಸ, ಪುರಾಣಗಳು- (ಇವು)ಗಳಲ್ಲಿ ನಾಮರೂಪ, ಅವ್ಯಾಕೃತ, ಅವಿದ್ಯೆ, ಮಾಯೆ, ಪ್ರಕೃತಿ, ಅಗ್ರಹಣ, ಅವ್ಯಕ್ತ, ತಮಸ್ಸು, ಕಾರಣ, ಲಯ, ಶಕ್ತಿ, ಮಹಾಸುಪ್ತಿ, ನಿದ್ರೆ, ಅಕ್ಷರ, ಆಕಾಶ-ಎಂದು ಅಲ್ಲಲ್ಲಿ ಬಹುಪ್ರಕಾರವಾಗಿ ಕರೆಯಲ್ಪಡುವ,[3] ಚೈತನ್ಯಕ್ಕೆ

---

1. ಆತ್ಮವಿಷಯಕವಾದ ಪ್ರತ್ಯಯವೇ ಅಹಂಪ್ರತ್ಯಯವೆಂಬ (ಭಾಟ್ಟರ) ಮತವೂ ಸರಿಯಲ್ಲ, ವಿಷಯಾನುಭವದಿಂದ ನಾನು ಎಂಬ ರೂಪದಲ್ಲಿ ಆತ್ಮನು ತೋರಿಕೊಳ್ಳುತ್ತಾನೆ ಎಂಬ (ಪ್ರಾಭಾಕರರ) ಮತವೂ ಸರಿಯಲ್ಲ.

2. ಇದು ಪಂ.ವಿ.ದಂತೆ ಅರ್ಥ. ಆಚಾರ್ಯರ ಮತವು ‹ಆಗಮಮೂಲಕ› ವಾದದ್ದು ಎಂದು ಹಿಡಿಯಬೇಕು- ಎಂಬ ಅರ್ಥವನ್ನು ಅಲ್ಲಿ ತೆಗೆದಿದೆ. ಆಚಾರ್ಯರ ಮತವು ಯಾವವೆಂಬುದನ್ನು ಸರಿಯಾಗಿ ತಿಳಿಸಬೇಕು- ಎಂದಿಷ್ಟೇ ಮೂಲದ ಅರ್ಥವಾಗಿದ್ದರೂ ಇರಬಹುದು.

3. ಇಲ್ಲಿಯವರೆಗೆ ಕೊಟ್ಟಿರುವದು ಜಗತ್ತಿನ ಬೀಜವಾಗಿರುವ ‹ಪ್ರಕೃತಿ›ಯ ಬಗೆಬಗೆಯ ಹೆಸರುಗಳು. ಇದನ್ನೇ ಮುಖ್ಯವಾಗಿ ಈ ಗ್ರಂಥದಲ್ಲಿ ‹ಅವಿದ್ಯೆ' ಎಂದು ಕರೆದಿರುತ್ತದೆ. ಇದನ್ನು ಭಾಷ್ಯದಲ್ಲಿ ಅವಿದ್ಯಾಕಲ್ಪಿತವೆಂದಿರುತ್ತದೆ; ಹಾಗೆಂದು ಇಲ್ಲಿ ಸ್ಪಷ್ಟವಾಗಿ ಹೇಳಿಲ್ಲ.

ತಾನೇ ಇದ್ದುಕೊಂಡಿರುವ ಲಕ್ಷಣದ ಬ್ರಹ್ಮಸ್ವರೂಪವಾಗಿ ತೋರಿಕೊಳ್ಳುವಿಕೆಗೆ ಅಡ್ಡಿಯನ್ನು ಮಾಡಿ ಜೀವತ್ವವನ್ನುಂಟುಮಾಡುವದಾಗಿ,[1] ವಿದ್ಯೆ, ಕರ್ಮ, ಪೂರ್ವಪ್ರಜ್ಞೆ– ಇವುಗಳ ಸಂಸ್ಕಾರವೆಂಬ ಚಿತ್ರಕ್ಕೆ ಭಿತ್ತಿಯಾಗಿರುವ,[2] ಸುಷುಪ್ತಿಯಲ್ಲಿ (ಚೈತನ್ಯ)ಪ್ರಕಾಶವನ್ನು ಮುಚ್ಚಿಕೊಂಡು ವಿಕ್ಷೇಪಸಂಸ್ಕಾರಮಾತ್ರ(ರೂಪ)ದಿಂದ ಇದ್ದುಕೊಂಡಿರುವ ಈ ಅನಾದ್ಯವಿದ್ಯೆಯಿದೆಯಲ್ಲ,[3] ಪರಮೇಶ್ವರನು ಅಧಿಷ್ಠಾತೃವಾಗಿರುವದರಿಂದ ಉಂಟಾದ ಇದರ ಪರಿಣಾಮವಿಶೇಷವೇ[4] ವಿಜ್ಞಾನಕ್ರಿಯಾಶಕ್ತಿಗಳೆರಡಕ್ಕೂ ಆಶ್ರಯವಾಗಿ,[5] ಕರ್ತೃತ್ವಭೋಕ್ತೃತ್ವಕ್ಕೆ ತಾನೊಂದೇ ಆಧಾರವಾಗಿ,[6] ಕೂಟಸ್ಥಚೈತನ್ಯದೊಡನೆ ಕೂಡಿಕೊಂಡಿರುವದರಿಂದ ಉಂಟಾದ ಬೆಳಕುಳ್ಳದ್ದಾಗಿ,[7] ತಾನೂ ಬೆಳಗುತ್ತಿರುವ ಅಪರೋಕ್ಷವಾಗಿರುವದು ಅಹಂಕಾರವು. ಅದರ ಬೆರಕೆಯಿಂದ ಕೂಟಸ್ಥಚೈತನ್ಯವಾಗಿರುವ ಅನಿದಮಂಶವಾದ ಆತ್ಮಧಾತುವು ಕೂಡ ಸುಳ್ಳಾಗಿಯೇ ಭೋಕ್ತೃವೆಂಬ ಪ್ರಸಿದ್ಧಿಯನ್ನು ಪಡೆದಿರುತ್ತದೆ.[8]

ಅವಿದ್ಯೆಯ ಎಲ್ಲಾ ಪರಿಣಾಮವೂ ಅಳಿದುಹೋಗಿರುವ ಸುಷುಪ್ತಿಯಲ್ಲಿ ಆ (ಅಹಂಕಾರವು) ಎಲ್ಲಿಂದ ಬರಬೇಕು ?[9]

ಆಶ್ರಿತದ ಪರಿಣಾಮವಿಶೇಷವಾಗಿಯೇ ಅಹಂಕಾರವು ತೋರುತ್ತಿರುವದರಿಂದ (ಅದರಲ್ಲಿ) ಸೇರಿಕೊಳ್ಳದೆಯೇ ಆ (ಭೋಕ್ತೃತ್ವಕ್ಕೆ) ನಿಮಿತ್ತವಾಗಿದೆ

---

1. ಅವಿದ್ಯೆಯೆಂಬ ಹೆಸರಿನ ಪ್ರಕೃತಿಯೇ ಜೀವನ ಬ್ರಹ್ಮಸ್ವರೂಪಕ್ಕೆ ಅಡ್ಡಿ, ಅದರಿಂದಲೇ ಜೀವನಿಗೆ ಜೀವತ್ವವುಂಟಾಗಿರುವದು. ಈ ಅವಿದ್ಯಾಶಕ್ತಿಯನ್ನೇ ಹಿಂದೆ ಬಾಹ್ಯಾಧ್ಯಾತ್ಮಿಕವಸ್ತುಗಳಲ್ಲಿದೆ ಎಂದು ಅವಶ್ಯವಾಗಿ ಒಪ್ಪಬೇಕು ಎಂದು (ಪು. ೫೧) ಹೇಳಿರುವದು.

2. ಇದನ್ನು 'ಅವಿದ್ಯೆ' ಎಂದು ಪಂ. ವಿ.ದಲ್ಲಿ ವಿವರಿಸಿದೆ. ಅದು ಸರಿಯಲ್ಲ; ಬೃ. ೪–೪–೨ನ್ನು ನೋಡಿ. ಪಂ. ಪಾ.ಯಲ್ಲಿ ಯಾವ ಪಾಠವನ್ನು ಅನುಸರಿಸಿದೆ ಎಂಬುದನ್ನು ಗೊತ್ತುಮಾಡುವದು ಕಷ್ಟ.

3. ಇಲ್ಲಿಯವರೆಗೆ ಹೇಳಿರುವದೆಲ್ಲ ಅವಿದ್ಯೆಯ ವಿಶೇಷಣ. ಇನ್ನುಮುಂದೆ ಅಹಂಕಾರದ ವಿಷಯವು ಬರುತ್ತದೆ.

4. ಅವಿದ್ಯೆಯೇ ಅಹಂಕಾರಕ್ಕೆ ಉಪಾದಾನಕಾರಣವೆಂದಂತೆ ಆಯಿತು; ಇದನ್ನು ಹಿಂದೆ (ಪು. ೧೫)ರಲ್ಲಿಯೂ ಸಂಗ್ರಹವಾಗಿ ಹೇಳಿತ್ತು; ಇಲ್ಲಿ ಪರಮೇಶ್ವರನೇ ನಿಮಿತ್ತಕಾರಣವೆಂದಿದೆ.

5. ಇದು ಅಹಂಕಾರದ ಸ್ವರೂಪವು. 6. ಇದು ಅಹಂಕಾರದ ಕಾರ್ಯ.

7. ಕೂಟಸ್ಥಚೈತನ್ಯವೇ ಅಹಂಕಾರಕ್ಕೆ ಪ್ರಮಾಣ.

8. ಆತ್ಮನಲ್ಲಿ ಅನಾತ್ಮವನ್ನೆಲ್ಲ ಆರೋಪಿಸುವದಕ್ಕೆ ಇದೇ ನಿಮಿತ್ತ ಎಂದು ಇದರ ಕಾರ್ಯಾಂತರವನ್ನು ಹೇಳಿದಂತೆ ಆಯಿತು.

9. ಅವಿದ್ಯೆಯಿದ್ದರೂ ಪರಿಣಾಮವಾಗದಿರುವದರಿಂದಲೇ ಅಲ್ಲಿ ಅಹಂಕಾರವು ತೋರುವದಿಲ್ಲವೆಂದು ಭಾವ.

ಎಂದಿಂತೂ ತಿಳಿಯಬಾರದು.[1] ಹಾಗಿದ್ದರೆ ಅಹಂಕಾರದ ಸಂಬಂಧವಿಲ್ಲದೆಯೇ ಅದರ ವಿಶೇಷವಾದ ಭೋಕ್ತೃತ್ವಾದಿಗಳು ಬರಿಯ 'ಇದು' ಎಂದೇ ತೋರಬೇಕು, ಆದರೆ ಹಾಗೆ ಸಂಭವಿಸುವದೇ ಇಲ್ಲ.[2]

ಆ ಪರಿಣಾಮವಿಶೇಷವನ್ನು ಅನಿದಂಚಿದಾತ್ಮನಿಂದ ಬುದ್ಧಿಯಲ್ಲಿ ವಿಂಗಡಿಸಿಕೊಂಡು[3] ವೇದಾಂತಿಗಳು ವಿಜ್ಞಾನಶಕ್ತಿವಿಶೇಷವನ್ನಾಶ್ರಯಿಸಿ ಅಂತಃಕರಣ, ಮನಸ್ಸು, ಬುದ್ಧಿ ಮತ್ತು ಅಹಂಪ್ರತ್ಯಯಿ ಎಂದು ಕರೆಯುತ್ತಾರೆ; ಪರಿಸ್ಪಂದಶಕ್ತಿಯ (ಆಶ್ರಯ)ದಿಂದ 'ಪ್ರಾಣ' ಎನ್ನುತ್ತಾರೆ.[4] ಆದ್ದರಿಂದ ಅಂತಃಕರಣದ ಸಂಬಂಧನಿಮಿತ್ತದಿಂದ ಆತ್ಮನಿಗೆ ಅಹಂಕರ್ತೃತ್ವವು, ಸ್ಫಟಿಕಮಣಿಗೆ ಉಪಾದಾನನಿಮಿತ್ತದಿಂದ ಕೆಂಪು (ತೋರು)ವಂತೆ ಸುಳ್ಳಾಗಿಯೇ (ತೋರುತ್ತಿರುತ್ತದೆ.)

## ಅಹಂಕಾರದಲ್ಲಿ ಇದಮಂಶದ ಮಿಥ್ಯಾತ್ವಕ್ಕೆ ಉದಾಹರಣೆಗಳು

### ಸ್ಫಟಿಕ

(ಪಂಚಪಾದಿಕಾ)

೩೬. ಕಥಂ ಪುನಃ ಸ್ಫಟಿಕೇ ಲೋಹಿತಿಮ್ನೋ ಮಿಥ್ಯಾತ್ವಮ್? ಉಚ್ಯತೇ। ಯದಿ ಸ್ಫಟಿಕಪ್ರತಿಸ್ಫಾಲಿತಾ ನಾಯನರಶ್ಮಯೋ ಜಪಾಕುಸುಮಮ್ ಉಪಸರ್ಪೇಯುಃ, ತದಾ ವಿಶಿಷ್ಟಸಂನಿವೇಶಂ ತದೇವ ಲೋಹಿತಂ ಗ್ರಾಹಯೇಯುಃ। ನ ಹಿ ರೂಪಮಾತ್ರನಿಷ್ಠಃ ಚಾಕ್ಷುಷಃ ಪ್ರತ್ಯಯೋ ದೃಷ್ಟಪೂರ್ವಃ; ನಾಪಿ ಸ್ವಾಶ್ರಯಮ್ ಅನಾಕರ್ಷದ್ ರೂಪಮಾತ್ರಂ ಪ್ರತಿಬಿಮ್ಬಿತಂ ಕ್ವಚಿತ್ ಉಪಲಬ್ಧಪೂರ್ವಮ್। ನನು, ಅಭಿಜಾತಸ್ಯೇವ ಪದ್ಮರಾಗಾದಿಮಣೇಃ, ಜಪಾಕುಸುಮಾದೇರಪಿ ಪ್ರಭಾ ವಿದ್ಯತೇ; ತಯಾ ವ್ಯಾಪ್ತತ್ವಾತ್ ಸ್ಫಟಿಕೋಽಪಿ ಲೋಹಿತ ಇವಾವಭಾಸತೇ। ತಥಾಪಿ ಸ್ವಯಮ್ ಅಲೋಹಿತೋ ಮಿಥ್ಯೈವ ಲೋಹಿತ

---

1. ಈ ವಾಕ್ಯಕ್ಕೆ ಅರ್ಥವೇನೆಂಬುದು ವ್ಯಾಖ್ಯಾನಗಳಿಂದ ಸ್ಫುಟವಾಗುವದಿಲ್ಲ; ವಾಕ್ಯಕ್ಕೆ ಅರ್ಥವೂ ಅಷ್ಟು ವಿಶದವಾಗಿ ಆಗುವಂತಿಲ್ಲ. ಅವಿದ್ಯೆಯು ಚೈತನ್ಯದಲ್ಲಿ ಸೇರಿಕೊಳ್ಳದೆ ತಾನೇ ಅಹಂಕಾರವಾಗಿ ಪರಿಣಮಿಸಿ ಭೋಕ್ತೃತ್ವವನ್ನುಂಟುಮಾಡುತ್ತದೆ ಎಂದು ಹೇಳಬಾರದು; ಚೈತನ್ಯವು ಅಹಂಕಾರದ ತೋರಿಕೆಯಲ್ಲಿ ಸೇರದೆ ಅದಕ್ಕೆ ನಿಮಿತ್ತವಾಗಿದೆ- ಎಂಬ ಅರ್ಥವನ್ನು ಹೇಗೋ ಹೊರಡಿಸಿಕೊಳ್ಳಬೇಕಾಗಿದೆ.

2. ಚೈತನ್ಯವು ಅವುಗಳಲ್ಲಿ ಸೇರದಿದ್ದರೆ 'ನಾನು' ಎಂದು ತೋರಬಾರದು, ಇದು ಎಂದೇ ಭೋಕ್ತೃತ್ವಾದಿಗಳು ತೋರಬೇಕು.

3. ಚೈತನ್ಯವೂ ಅವಿದ್ಯಾಪರಿಣಾಮವಾದ ಅಹಂಕಾರವೂ ಬೆರೆತುಕೊಂಡೇ ಇದ್ದರೂ ವಿವೇಚಿಸಿಕೊಂಡು.

4. ಅಹಂಕಾರ, ಪ್ರಾಣ- ಎಂಬ ಹೆಸರು ಶಕ್ತಿವಿಶೇಷಗಳಿಂದ ಒಂದೇ ವಸ್ತುವಿಗೆ.

ಇತ್ಯಾಪದ್ಯೇತ । ಅಥ ಪ್ರಭೈವ ಲೋಹಿತಾ ಅವಭಾಸತೇ, ನ ಸ್ಫಟಿಕ ಇತಿ ; ಶೌಕ್ಲ್ಯಮಪಿ ತರ್ಹಿ ಸ್ಫಟಿಕೇ ಪ್ರಕಾಶೇತ । ಅಥ ಪ್ರಭಯಾ ಅಪಸಾರಿತಂ ತತ್ ಇತಿ ಚೇತ್ । ಸ ತರ್ಹಿ ನೀರೂಪಃ ಕಥಂ ಚಾಕ್ಷುಷಃ ಸ್ಯಾತ್ ? ನ ಚ ರೂಪಿ ದ್ರವ್ಯಸಂಯೋಗಾತ್ । ವಾಯೋರಪಿ ತಥಾತ್ವಪ್ರಸಙ್ಗಾತ್ । ನ ಪ್ರಭಾನಿಮಿತ್ತಂ ಲೌಹಿತ್ಯಂ ತತ್ರೋತ್ಪನ್ನಮ್ । ಉತ್ತರಕಾಲಮಪಿ ತಥಾರೂಪಪ್ರಸಙ್ಗಾತ್ । ಅಭ್ಯುಪಗಮ್ಯ ಪ್ರಭಾಮ್ ಇದಮುಕ್ತಮ್ । ಯಥಾ ಪದ್ಮರಾಗಾದಿಪ್ರಭಾ ನಿರಾಶ್ರಯಾಪಿ ಉನ್ಮುಖಾ ಉಪಲಭ್ಯತೇ, ನ ತಥಾ ಜಪಾಕುಸುಮಾದೇಃ ॥

ತದೇವಂ ಸ್ಫಟಿಕಮಣೌ ಉಪಧಾನೋಪರಾಗ ಇವ ಚಿದಾತ್ಮನ್ಯಪಿ ಅಹಙ್ಕಾರೋಪರಾಗಃ, ತತಃ ಸಂಭಿನ್ನೋಭಯರೂಪತ್ವಾತ್ ಗ್ರನ್ಥಿರಿವ ಭವತಿ- ಇತ್ಯಹಙ್ಕಾರೋ 'ಗ್ರನ್ಥಿಃ' ಇತಿ ಗೀಯತೇ । ತತ್ರ ಜಡರೂಪತ್ವಾತ್ ಉಪರಕ್ತಸ್ಯ ನ ತದ್ಬಲಾದುಪರಾಗಸ್ಯ ಸಾಕ್ಷಾದ್ಭಾವಃ ; ಚಿದ್ರೂಪಸ್ಯ ಪುನರುಪರಾಗಃ, ತದ್ವಿಷಯವ್ಯಾಪಾರವಿರಹಿಣೋಽಪಿ ತದ್ಬಲಾತ್ ಪ್ರಕಾಶತೇ । ತೇನ ಲಕ್ಷಣತಃ ಇದಮಂಶಃ ಕಥ್ಯತೇ ? ನ ವ್ಯವಹಾರತಃ । ವ್ಯವಹಾರತಃ ಪುನಃ, ಯದುಪ ರಾಗಾತ್ ಅನಿದಮಾತ್ಮನೋಽಹಙ್ಕರ್ತೃತ್ವಂ ಮಿಥ್ಯಾ ತತ್, ಆತ್ಮನ ಸ್ತದ್ವ್ಯಾ ಪಾರೇಣ ವ್ಯಾಪ್ರಿಯಮಾಣಸ್ಯೈವ । ವ್ಯಾಪಾರಪೂರ್ವಕೋ ಯಸ್ಯ ಪರಿಚ್ಛೇದಃ ಸ ಏವೇದಮಾತ್ಮಕೋ ವಿಷಯಃ । ಅತ ಏವ 'ಅಹಮ್' ಇತ್ಯ ಸಂಭಿನ್ನೇದ ಮಾತ್ಮಕೋಽವಭಾಸ ಇತಿ ವಿಭ್ರಮಃ ಕೇಷಾಞ್ಚಿತ್ । ದೃಷ್ಟಶ್ಚ ಲಕ್ಷಣತಸ್ತ ದ್ವ್ಯಾಪಾರಾರ್ಹೋಽಪಿ ತಮ್ ಅನನುಪತನ್ ತದ್ಯಥಾ- ಅಙ್ಕುರಾದಿ ಫಲ ಪರ್ಯನ್ತೋ ವೃಕ್ಷವಿಕಾರೋ ಮೃತ್ಪರಿಣಾಮಪರಂಪರಾಪರಿನಿಷ್ಪನ್ನೋಽಪಿ ಘಟವಲ್ಮೀಕಾದಿವತ್ ನ ಮೃನ್ಮಯವ್ಯವಹಾರಮನುಪತತಿ । ವ್ಯುತ್ಪನ್ನಮತ ಯಸ್ತು ತದ್ವ್ಯವಹಾರಮಪಿ ನಾತೀವ ಉಲ್ಬಣಂ ಮನ್ಯನ್ತೇ । ಅತ ಏವ ನಿಪುಣ ತರಮ್ ಅಭಿವೀಕ್ಷ್ಯ ರೂಪಕಪರೀಕ್ಷಕವತ್ ಅಹಙ್ಕಾರಂ ನಿರೂಪಯತಾಂ ಸಂಭಿನ್ನೇದಂರೂಪಃ ಸ ಇತ್ಯಭಿಹಿತಮ್ ॥

(ಅರ್ಥ)

(ಪ್ರಶ್ನೆ) :- ಇನ್ನು ಸ್ಫಟಿಕದಲ್ಲಿ ಕೆಂಪು ಮಿಥ್ಯೆ ಹೇಗೆ ?

(ಉತ್ತರ) :- ಸ್ಫಟಿಕದಲ್ಲಿ ಮಾರುಹೊಳೆಯುವ ಕಣ್ಣಿನ ರಶ್ಮಿಗಳು ದಾಸಿವಾಳದ ಹೂವಿನಬಳಿಗೆ ಬಂದಿದ್ದರೆ, ಆಗ (ಅ) ಗೊತ್ತಾದ ಸಂನಿವೇಶ ದಲ್ಲಿರುವ ಅದೇ ಕೆಂಪನ್ನು ಗ್ರಹಿಸಿಯಾವು. ಬರಿಯ ರೂಪದಲ್ಲಿ ನಿಂತಿರುವ ಚಾಕ್ಷುಷಪ್ರತ್ಯಯವು ಹಿಂದೆ ಕಂಡುಬಂದಿಲ್ಲವಷ್ಟೆ ?[1] ತನ್ನ ಆಶ್ರಯವನ್ನೂ

1. ಬಣ್ಣವುಳ್ಳ ವಸ್ತುವಿನ ಜೊತೆಗೇ ಬಣ್ಣವು ಕಾಣಿಸುತ್ತದೆ ; ಬರಿಯ ಬಣ್ಣವನ್ನೇ ನಾವು ಕಂಡದ್ದಿಲ್ಲ.

ಎಳೆದುಕೊಳ್ಳುವ ಬರಿಯ ರೂಪವೇ ಪ್ರತಿಬಿಂಬಿಸಿದ್ದು ಎಲ್ಲಿಯೂ ಕಂಡು ಬರುವದಿಲ್ಲ.[1]

(ಆಕ್ಷೇಪ) :- ಉತ್ತಮಜಾತಿಯ ಪದ್ಮರಾಗವೇ ಮುಂತಾದ ರತ್ನದಂತೆ ದಾಸಿವಾಳದ ಹೂವೇ ಮುಂತಾದದ್ದಕ್ಕೂ ಪ್ರಭೆ ಇರುತ್ತದೆ ; ಅದರಿಂದ ವ್ಯಾಪ್ತವಾಗಿರುವದರಿಂದ ಸ್ಫಟಿಕವೂ ಕೆಂಪಾಗಿರುವಂತೆ ಕಾಣಿಸುತ್ತದೆ. (ಅಲ್ಲವೆ ?)

(ಪರಿಹಾರ) :- ಹಾಗಾದರೂ[2] ತಾನು ಕೆಂಪಲ್ಲದೆ ಇದ್ದು ಸುಳ್ಳಾಗಿಯೇ ಕೆಂಪು (ಎಂದು ತೋರುತ್ತದೆ) ಎಂದಾಗುವದು.

(ಆಕ್ಷೇಪ):- ಕೆಂಪನೆಯ ಪ್ರಭೆಯೇ ತೋರುತ್ತದೆ, ಸ್ಫಟಿಕವಲ್ಲ-ಎಂದರೊ?[3]

(ಪರಿಹಾರ) :- ಹಾಗಾದರೆ ಸ್ಫಟಿಕದಲ್ಲಿ ಬಿಳುಪೂ ತೋರಬೇಕು.

(ಆಕ್ಷೇಪ) :- ಪ್ರಭೆಯು ಅದನ್ನು ಅತ್ರ್ತಸಾಗಿಸಿರುತ್ತದೆ- ಎಂದರೊ![4]

(ಪರಿಹಾರ) :- ಹಾಗಾದರೆ ರೂಪರಹಿತವಾದ ಅದು ಹೇಗೆ ಕಣ್ಣಿಗೆ ಕಾಣಿಸಬೇಕು ?[5] ರೂಪಿದ್ರವ್ಯದ ಸಂಯೋಗದಿಂದ (ಕಾಣಿಸುತ್ತದೆ) ಎಂಬುದೂ (ಆಗು)ವಂತಿಲ್ಲ. ಏಕೆಂದರೆ ವಾಯುವೂ ಹಾಗೆ (ಕಾಣಿಸ)ಬಹುದಾಗುತ್ತದೆ. ಪ್ರಭೆಯ ನಿಮಿತ್ತದಿಂದ ಅಲ್ಲಿ ಕೆಂಪು ಹುಟ್ಟಿರುತ್ತದೆ ಎನ್ನುವದಕ್ಕೂ ಇಲ್ಲ ; ಏಕೆಂದರೆ (ಭ್ರಾಂತಿಯು ಕಳೆದ) ಆಮೇಲಿನ ಕಾಲದಲ್ಲಿಯೂ ಅದೇ ಬಣ್ಣವಾಗಿರಬೇಕಾಗುವದು. ಇದೆಲ್ಲ ಪ್ರಭೆಯು (ಇದೆ ಎಂದು) ಒಪ್ಪಿ ಹೇಳಿದ್ದು ; (ಆದರೆ ನಿಜವಾಗಿ) ಹೇಗೆ ಪದ್ಮರಾಗಾದಿಗಳ ಪ್ರಭೆಯು ಆಶ್ರಯವನ್ನು ಬಿಟ್ಟು ಮುಂಬರಿಯುವದು ಕಾಣಬರುತ್ತದೆಯೋ ಹಾಗೆ ದಾಸಿವಾಳದ ಹೂವೇ ಮುಂತಾದದ್ದಕ್ಕೆ (ಪ್ರಭೆಯಿದ್ದು ಮುಂಬರಿಯು)ವದು (ಕಾಣಬರು)ವದಿಲ್ಲ.

ಅಂತೂ ಹೀಗೆ ಸ್ಫಟಿಕಮಣಿಯಲ್ಲಿ ಉಪಧಾನದ ಸಂಬಂಧದಂತೆ ಚಿದಾತ್ಮನಲ್ಲಿ ಅಹಂಕಾರದ ಸಂಬಂಧವು[6] ; ಅದರಿಂದ ಎರಡು ರೂಪಗಳೂ ಸೇರಿಕೊಂಡಿರು

---

1. ಯಾವದರ ಪ್ರತಿಬಿಂಬವಾಗುವದೋ ಆ ಬಣ್ಣವು ಬಣ್ಣವುಳ್ಳ ವಸ್ತುವಿನೊಡನೆ ಪ್ರತಿಬಿಂಬಿಸಬೇಕು.

2. ದಾಸಿವಾಳದ ಹೂವಿಗೆ ಪ್ರತಿಬಿಂಬವಿದೆ ಎಂದು ಒಪ್ಪಿದರೂ.

3. ಸ್ಫಟಿಕಕ್ಕೂ ಕೆಂಪಿಗೂ ಸಂಬಂಧವಿಲ್ಲ ; ಸ್ಫಟಿಕವೂ ಕಾಣಿಸುತ್ತದೆ, ಕೆಂಪೂ ಕಾಣಿಸುತ್ತದೆ. ಆದ್ದರಿಂದ ಇದು ಭ್ರಾಂತಿಯಲ್ಲ.

4. ಹೂವಿನ ಕೆಂಪು ಸ್ಫಟಿಕದ ಬಿಳುಪನ್ನು ಮುಚ್ಚಿಹಾಕಿಬಿಟ್ಟಿರುತ್ತದೆ ಎನ್ನೋಣ-ಎಂದು ಅಭಿಪ್ರಾಯ.

5. ರೂಪವಿಲ್ಲದ ಸ್ಫಟಿಕವು ಕಾಣಿಸಬೇಕಾರದು ; ಏಕೆಂದರೆ ರೂಪಸಹಿತವಾದ ವಸ್ತುವನ್ನು ಮಾತ್ರ ಚಕ್ಷುರಿಂದ್ರಿಯವು ತೋರಿಸಬಲ್ಲದು.

6. ಉಪಾಧಿಯಿಂದ- ದಾಸಿವಾಳದ ಹೂವಿನ ಸಂಬಂಧದಂತೆ ಅಹಂಕಾರದ ಸಂಬಂಧವು ಮಿಥ್ಯೆ.

ವದರಿಂದ ಗಂಟಿನಹಾಗೆ ಆಗಿರುವದರಿಂದ ಅಹಂಕಾರವನ್ನು 'ಗ್ರಂಥಿ' ಎನ್ನುತ್ತಾರೆ.[1] ಅಲ್ಲಿ ಸಂಬಂಧವಾದದ್ದು[2] ಜಡರೂಪವಾಗಿರುವದರಿಂದ ಅದರ ಬಲದಿಂದ ಸಂಬಂಧವು ತೋರುವದಿಲ್ಲ; ಚಿದ್ರೂಪದಲ್ಲಾಗಿರುವ ಸಂಬಂಧವಾದರೋ, ಅದರ ವಿಷಯದಲ್ಲಿ (ಅದಕ್ಕೆ) ಯಾವ ವ್ಯಾಪಾರವೂ ಇಲ್ಲದಿದ್ದರೂ ಆ (ಚೈತನ್ಯದ) ಬಲದಿಂದ ತೋರಿಕೊಳ್ಳುತ್ತದೆ.[3] ಆದ್ದರಿಂದ (ಅಹಂಕಾರವನ್ನು) ಲಕ್ಷಣದಿಂದ ಇದಮಂಶವೆನ್ನುತ್ತಾರೆಯೇ ಹೊರತು ವ್ಯವಹಾರದಿಂದಲ್ಲ; ವ್ಯವಹಾರದಿಂದಲಾದರೋ ಯಾವದರ ಸಂಬಂಧದಿಂದ ಅನಿದಂರೂಪನಾದ ಆತ್ಮನಿಗೆ ಮಿಥ್ಯಾರೂಪವಾದ ಅಹಂಕರ್ತೃತ್ವವುಂಟಾಗಿರುವದೋ ಆ ರೂಪನಾಗಿರುವದರಿಂದ ಅದರ ವ್ಯಾಪಾರದಿಂದ ವ್ಯಾಪಾರಮಾಡುತ್ತಿರುವವನಿಗೇ ವ್ಯಾಪಾರಪೂರ್ವಕವಾಗಿ ಯಾವದರ ತಿಳಿವಳಿಕೆಯಾಗುವದೋ ಅದೇ ಇದಮಾತ್ಮಕವಾದ ವಿಷಯವು.[4] ಆದ್ದರಿಂದಲೇ[5] 'ನಾನು' ಎಂಬುದು ಇದಂರೂಪವು ಸೇರದೆ ಇರುವ ತೋರಿಕೆ-ಎಂದು ಕೆಲವರಿಗೆ ಭ್ರಾಂತಿ(ಯಾಗಿರುತ್ತದೆ). ಲಕ್ಷಣದ ಆ ವ್ಯವಹಾರಕ್ಕೆ ತಕ್ಕದ್ದಾಗಿದ್ದರೂ ಆ (ವ್ಯವಹಾರವನ್ನು) ಅನುಸರಿಸದೆ ಇರುವದು ಕಂಡೂ ಇದೆ. ಉದಾಹರಣೆಗೆ, ಮೊಳಕೆಯಿಂದ ಹಣ್ಣಿನವರೆಗೂ ಇರುವ ಮರದ ವಿಕಾರವು ಮಣ್ಣಿನ ಪರಿಣಾಮವಾದ ವಿಕಾರಪರಂಪರೆಯಿಂದ ಆದದ್ದಾದರೂ ಗಡಿಗೆ, ಹುತ್ತ-ಮುಂತಾದವುಗಳಂತೆ 'ಮಣ್ಣಿನದು' ಎಂಬ ವ್ಯವಹಾರವನ್ನು ಅನುಸರಿಸುವದಿಲ್ಲ. ವಿವೇಕವುಳ್ಳ ಬುದ್ಧಿಯುಳ್ಳವರಾದರೆ ಆ (ಮಣ್ಣಿನದೆಂಬ) ವ್ಯವಹಾರವನ್ನು ಕೂಡ ಬಹಳ ತಪ್ಪೆಂದು ಎಣಿಸುವದಿಲ್ಲ. ಆದ್ದರಿಂದಲೇ ಚೆನ್ನಾಗಿ ನೋಡಿ ಬೆಳ್ಳಿಯನ್ನು ಪರೀಕ್ಷಿಸುವವನಂತೆ ಅಹಂಕಾರವನ್ನು ಒಳಹೊಕ್ಕು ನೋಡುವವರಿಗೆ ಅದು ಇದಂರೂಪಯುಕ್ತವಾಗಿರುತ್ತದೆ ಎಂದು ನಾವು (ಹಿಂದೆ) ಹೇಳಿದ್ದು.

## ಪ್ರ ತಿ ಬಿಂ ಬ

(ಪಂಚಪಾದಿಕಾ)

೩೭. ಯತ್ ಪುನಃ, ದರ್ಪಣಜಲಾದಿಷು ಮುಖಚನ್ದ್ರಾದಿಪ್ರತಿಬಿಮ್ಬೋದಾಹರಣಮ್, ತತ್ ಅಹಂಕರ್ತುರನಿದಮಂಶೋ ಬಿಮ್ಬಾದಿವ ಪ್ರತಿಬಿಮ್ಬಂ

---

1. ಅಹಂಕಾರದಲ್ಲಿ 'ನಾನು, ಇದು' ಎಂಬ ಎರಡು ರೂಪಗಳೂ ಬೆರಕೆಯಾಗಿವೆ.

2. ಸ್ಫಟಿಕವು.

3. ಚಿದ್ರೂಪದಲ್ಲಿ ಅಹಂಕಾರವು ಸೇರಿದೆ; ಚೈತನ್ಯದ ವ್ಯಾಪಾರವಿಲ್ಲದಿದ್ದರೂ ಅದರ ಬಲದಿಂದಲೇ ಅಹಂಕಾರವು ತೋರುತ್ತದೆ.

4. ನಾನು ಇದನ್ನು ಅರಿಯುತ್ತೇನೆ, ಕಾಣುತ್ತೇನೆ- ಎಂದು ಮುಂತಾಗಿ ವ್ಯಾಪಾರಪೂರ್ವಕವಾಗಿ ತೋರುವದೇ ವಿಷಯ.

5. ಹೀಗೆ ಅಹಂಕಾರದಲ್ಲಿ ಎರಡು ಅಂಶಗಳಿದ್ದರೂ ಇದಮಂಶವು ಕಾಣದೆ ಇರುವದರಿಂದಲೇ.

ನ ಬ್ರಹ್ಮಣೋ ವಸ್ತ್ವನ್ತರಮ್, ಕಿಂ ತು ತದೇವ; ತತ್ಪೃಥಗವಭಾಸವಿಪರ್ಯಯ ಸ್ವರೂಪತಾಮಾತ್ರಂ ಮಿಥ್ಯಾ ಇತಿ ದರ್ಶಯಿತುಮ್ । ಕಥಂ ಪುನಸ್ತದೇವ ? ತದೇಕಸ್ವಲಕ್ಷಣತ್ವಾವಗಮಾತ್ । ತಥಾ ಚ ಯಥಾ ಬಹಿಃಸ್ಥಿತೋ ದೇವದತ್ತಃ ಯತ್ಸ್ವಲಕ್ಷಣಃ ಪ್ರತಿಪನ್ನಃ, ತತ್ಸ್ವಲಕ್ಷಣ ಏವ ವೇಶ್ಮಾನ್ತಃಪ್ರವಿಷ್ಟೋಽಪಿ ಪ್ರತೀಯತೇ । ತಥಾ ದರ್ಪಣತಲಸ್ಥಿತೋಽಪಿ । ನ ತದ್ ವಸ್ತ್ವನ್ತರತ್ವೇ ಯುಜ್ಯತೇ । ಅಪಿ ಚ ಅರ್ಥಾನ್ತರತ್ವೇ ವಸ್ತ್ವನ್ತರತ್ವೇ ಸತಿ ಆದರ್ಶ ಏವ ಬಿಮ್ಬ ಸಂನಿಧಾವೇವ ತದಾಕಾರಗರ್ಭಿತಃ ಪರಿಣತ ಇತಿ ವಾಚ್ಯಮ್ । ವಿರುದ್ಧಪರಿ ಮಾಣತ್ವಾತ್, ಸಂಶ್ಲೇಷಾಭಾವಾಚ್ಚ ಪ್ರತಿಮುದ್ರೇವ ಬಿಮ್ಬಲಾಞ್ಛಿತತ್ವಾನುಪ ಪತ್ತೇಃ । ತಥಾ ಸತಿ ಬಿಮ್ಬಸಂನಿಧಿಲಬ್ಧಪರಿಣತಿರಾದರ್ಶಃ, ತದಪಾಯೇಽಪಿ ತಥೈವ ಅವತಿಷ್ಠೇತ । ನ ಖಲು ಸಂವೇಷ್ಟಿತಃ ಕಟಃ ನಿಮಿತ್ತಲಬ್ಧಪ್ರಸಾರಣ ಪರಿಣತಿಃ, ನಿಮಿತ್ತಾಪಗಮೇ ತತ್ಕ್ಷಣಮೇವ ಸಂವೇಷ್ಟತೇ ಯಥಾ ತಥಾ ಸ್ಯಾತ್ ಇತಿ ಮನ್ತವ್ಯಮ್ । ಯತಃ ಚಿರಕಾಲಸಂವೇಷ್ಟನಾಹಿತಸಂಸ್ಕಾರಃ ತತ್ರ ಪುನಃಸಂವೇಷ್ಟನನಿಮಿತ್ತಮ್, ತಥಾ ಚ ಯಾವತ್ ಸಂಸ್ಕಾರಕ್ಷಯಂ ಪ್ರಸಾರಣನಿಮಿತ್ತಾನುವೃತ್ತೌ ನ ಪುನಃಸಂವೇಷ್ಟನೋಪಜನಃ । ಏವಂ ಚಿರಕಾಲ ಸಂನಿಹಿತಬಿಮ್ಬನಿಮಿತ್ತತದಾಕಾರಪರಿಣತಿರಾದರ್ಶಃ, ತಥೈವ ತದಪಾಯೇಽಪಿ ಯಾವದಾಯುರವತಿಷ್ಠೇತ । ನ ಚ ತಥಾ ಉಪಲಭ್ಯತೇ । ಯಃ ಪುನಃ ಕಮಲ ಮುಕುಲಸ್ಯ ವಿಕಾಸಪರಿಣತಿಹೇತೋಃ ಸಾವಿತ್ರಸ್ಯ ತೇಜಸಃ ದೀರ್ಘಕಾಲಾನು ವೃತ್ತಸ್ಯಾಪಿ ವಿಗಮೇ ತತ್ಸಮಕಾಲಂ ಪುನರ್ಮುಕುಲೀಭಾವಃ ಸಃ ಪ್ರಥಮತರ ಮುಕುಲಹೇತುಪಾರ್ಥಿವಾಪ್ಯಾವಯವವ್ಯಾಪಾರನಿಮಿತ್ತಃ, ತದುಪರಮೇ ಜೀರ್ಣಸ್ಯ ಪುನರ್ಮುಕುಲತಾನುಪಲಬ್ಧೇಃ, ನಾದರ್ಶೇ ಪುನಸ್ತಥಾ ಪೂರ್ವ ರೂಪಪರಿಣಾಮಹೇತುರಸ್ತಿ ॥

(ಅರ್ಥ)

ಇನ್ನು ಕನ್ನಡಿ, ನೀರು- ಮುಂತಾದವುಗಳಲ್ಲಿ ಮುಖ, ಚಂದ್ರ- ಮುಂತಾ ದವುಗಳ ಪ್ರತಿಬಿಂಬದ ಉದಾಹರಣೆಯನ್ನು (ಕೊಡುವರಲ್ಲ), ಅದು ಅಹಂ ಕರ್ತೃವಿನ ಅನಿದಮಂಶವು-ಬಿಂಬಕ್ಕಿಂತ ಪ್ರತಿಬಿಂಬವು (ಹೇಗೆ ಬೇರೆಯಲ್ಲವೋ) ಹಾಗೆ- ಬ್ರಹ್ಮಕ್ಕಿಂತ ಬೇರೆಯ ವಸ್ತುವಲ್ಲ; ಮತ್ತೇನೆಂದರೆ ಅದೇ ಅದು. ಅದಕ್ಕಿಂತ ಬೇರೆಯಾಗಿ ತೋರುವದೆಂಬ ವಿಪರೀತಸ್ವರೂಪವು ಮಾತ್ರ ಮಿಥ್ಯೆ[1] ಎಂದು ತಿಳಿಸುವದಕ್ಕೆ.

(ಪ್ರಶ್ನೆ) :- ಹಾಗಾದರೆ ಅದೇ (ಇದು) ಎನ್ನುವದು ಹೇಗೆ ?

---

1. ಬೇರೆಯಾಗಿ ತೋರುತ್ತದೆ, ನಿಜವಾಗಿ ಅದೇ- ಎಂದು ತಿಳಿಸುವದಕ್ಕೆ.

(ಉತ್ತರ) :- ಅದರ ಸ್ವಲಕ್ಷಣವೇ (ಇದರದು ಎಂದು) ನಿಶ್ಚಯವಾಗುವದರಿಂದ. ಆದ್ದರಿಂದ ಹೊರಗಿರುವ ದೇವದತ್ತನು ಯಾವ ಸ್ವಲಕ್ಷಣವುಳ್ಳವನಾಗಿ ತಿಳಿಯಬರುತ್ತಾನೋ ಅದೇ ಸ್ವಲಕ್ಷಣವುಳ್ಳವನಾಗಿಯೇ ಮನೆಯೊಳಗೆ ಹೊಕ್ಕರೂ ತೋರುತ್ತಿರುತ್ತಾನೆ. ಕನ್ನಡಿಯಲ್ಲಿಯೂ ಹಾಗೆಯೇ[1]. ಪ್ರತಿಬಿಂಬವು ಬೇರೆಯ ವಸ್ತುವಾಗಿದ್ದರೆ ಇದು ಹೊಂದುವದಿಲ್ಲ. ಇದೂ ಅಲ್ಲದೆ ಬೇರೊಂದು ವಸ್ತುವೇ ಆದರೆ ಕನ್ನಡಿಯೇ ಬಿಂಬದ ಸಂನಿಧಿಯಲ್ಲಿಯೇ ಆ ಆಕಾರದಿಂದೊಡಗೂಡಿ ಪರಿಣಾಮವಾಯಿತು ಎಂದು ಅರ್ಥವಶದಿಂದ ಹೇಳಬೇಕಾಗುವದು. ಏಕೆಂದರೆ ವಿರುದ್ಧ ಪರಿಮಾಣವಿರುವದರಿಂದಲೂ ಸಂಬಂಧವಿಲ್ಲದ್ದರಿಂದಲೂ ಪಡಿಯಚ್ಚಿನಂತೆ (ಅಲ್ಲಿ) ಬಿಂಬದ ಗುರುತಾಗಿದೆ ಎನ್ನುವದು ಆಗುವಹಾಗಿಲ್ಲ.[2] ಹಾಗಾದರೆ[3] ಬಿಂಬದ ಸಂನಿಧಿಯಿಂದ ಪರಿಣಾಮವನ್ನು ಹೊಂದಿದ ಕನ್ನಡಿಯು ಅದು ಹೋದಮೇಲೂ ಹಾಗೆಯೇ ಇದ್ದುಕೊಂಡಿರಬೇಕಾಗುವದು. ಸುತ್ತಿಟ್ಟಿದ್ದ ಚಾಪೆಯು (ಯಾವದಾದರೊಂದು) ನಿಮಿತ್ತದಿಂದ ಬಿಚ್ಚುವಿಕೆ ಎಂಬ ಪರಿಣಾಮವನ್ನು ಹೊಂದಿದರೆ (ಆ) ನಿಮಿತ್ತವು ಹೋದರೆ ಆ ಕ್ಷಣದಲ್ಲಿಯೇ ಹೇಗೆ ಮುದುರಿಕೊಳ್ಳುವದೋ ಹಾಗಾಗಬಹುದಲ್ಲ!- ಎಂದೇನೂ ತಿಳಿಯುವದಕ್ಕಾಗಲಾರದಷ್ಟೆ ? ಏಕೆಂದರೆ ಅಲ್ಲಿ ಮತ್ತೆ ಸುತ್ತಿಕೊಳ್ಳುವದಕ್ಕೆ ನಿಮಿತ್ತವು ಬಹುಕಾಲ ಸುತ್ತಿಟ್ಟಿದ್ದರಿಂದಾಗಿದ್ದ ಸಂಸ್ಕಾರವು ; ಆದ್ದರಿಂದ (ಆ) ಸಂಸ್ಕಾರವು ಕ್ಷಯವಾಗುವವರೆಗೂ ಪ್ರಸಾರಣದ ನಿಮಿತ್ತವು ಅನುವೃತ್ತಿಯಾಗುವದರಿಂದ ಮತ್ತೆ ಸುತ್ತಿಕೊಳ್ಳುವದೆಂಬುದು ಉಂಟಾಗುತ್ತದೆ. ಹೀಗೆಯೇ ಬಹುಕಾಲ ಹತ್ತಿರವಿದ್ದ ಬಿಂಬನಿಮಿತ್ತದಿಂದಾದ ಅದರ ಆಕಾರದ ಪರಿಣಾಮವುಳ್ಳ ಕನ್ನಡಿಯು ಅದು ಹೋದರೂ (ತನ್ನ) ಆಯುಸ್ಸಿರುವವರೆಗೂ ಹಾಗೆಯೇ ಇದ್ದುಕೊಂಡಿರಬೇಕಾಗುವದು. ಆದರೆ ಹಾಗೇನೂ ಕಾಣಿಸುವದಿಲ್ಲ.

ಇನ್ನು ತಾವರೆಯ ಮೊಗ್ಗು ಅರಳುವದೆಂಬ ಪರಿಣಾಮಹೇತುವಾದ ಸೂರ್ಯನ ಬಿಸಿಲು ದೀರ್ಘಕಾಲವಿದ್ದುಕೊಂಡಿದ್ದರೂ (ಅದು) ಹೋಗಲು ಅದರ ಸಮಕಾಲದಲ್ಲಿಯೇ ಮತ್ತೆ ಮೊಗ್ಗಾಗುವದಲ್ಲ, ಅದು (ಅದಕ್ಕೆ) ಮೊದಲು, ಮೊಗ್ಗಾಗುವದಕ್ಕೆ

---

1. ಕನ್ನಡಿಯಲ್ಲಿಯೂ ಅದೇ ಆಗಿದೆ ಎಂಬುದು ಆಕಾರಕ್ಕೆ ಮಾತ್ರ ಹೊಂದುತ್ತದೆ ; ಬಿಂಬದ ಎಡಗೈ ಪ್ರತಿಬಿಂಬದ ಬಲಗೈಯಾಗಿರುವದನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

2. ಬಿಂಬದ ಅಚ್ಚು ಕನ್ನಡಿಯಲ್ಲಿ ಒತ್ತಿದೆ ಎನ್ನಬೇಕಾದರೆ ಅದರ ಸಂಬಂಧವು ಕನ್ನಡಿಗೆ ಇರಬೇಕಾಗಿತ್ತು ಎಂದು ಭಾವ.

3. ಕನ್ನಡಿಯಲ್ಲಿಯೇ ಪರಿಣಾಮವಾಗಿದೆ ಎಂದಾದರೆ ಎಂದರ್ಥ. ತರ್ಕದ ಕಲ್ಪನೆಯು ಇಲ್ಲಿ ಬಹಳ ಹೆಚ್ಚಾಗಿದೆ.

ಕಾರಣವಾಗಿದ್ದ ಪೃಥಿವಿಯ ಮತ್ತು ಅಪ್ಪಿನ ಅವಯವಗಳ ವ್ಯಾಪಾರದಿಂದಾದದ್ದು; ಏಕೆಂದರೆ ಆ (ವ್ಯಾಪಾರವು) ನಿಂತರೆ ಒಣಗಿದ (ಹೂವು) ಮತ್ತೆ ಮೊಗ್ಗಾಗುವದು ಕಂಡುಬರುವದಿಲ್ಲ. ಆದರೆ ಕನ್ನಡಿಯಲ್ಲಿ ಮೊದಲಿನ ರೂಪವನ್ನು ಮತ್ತೆ ಪೂರ್ವರೂಪಕ್ಕೆ ತಿರುಗಿಸುವ ಕಾರಣವಿರುವದಿಲ್ಲ.

(ಪಂಚಪಾದಿಕಾ)

೩೮. ಅತ್ರಾಹ । ಭವತು ನ ವಸ್ತ್ವನ್ತರಮ್ ; 'ತದೇವ ತತ್' ಇತಿ ತು ನ ಕ್ಷಮ್ಯತೇ । ಶುಕ್ತಿಕಾರಜತಸ್ಯ ಮಿಥ್ಯಾರೂಪಸ್ಯಾಪಿ ಸತ್ಯರಜತೈಕರೂಪಾವಭಾಸಿತ್ವದರ್ಶನಾತ್ । ನೈವಮ್ । ತತ್ರ ಹಿ ಬಾಧದರ್ಶನಾತ್ ಮಿಥ್ಯಾಭಾವಃ, ನೇಹ ಸ ಬಾಧೋ ದೃಶ್ಯತೇ । ಯತ್ ಪುನಃ ದರ್ಪಣಾಪಗಮೇ ತದಪಗಮಃ, ನ ಸ ಬಾಧಃ । ದರ್ಪಣೇಽಪಿ ತತ್ಪ್ರಸಙ್ಗಾತ್ । ನನು ತತ್ತ್ವಮಸಿವಾಕ್ಯಾದ್ ಬಾಧೋ ದೃಶ್ಯತೇ । ನೈವಮ್ । 'ತತ್ ತ್ವಮ್' ಇತಿ ಬಿಮ್ಬಸ್ಥಾನೀಯಬ್ರಹ್ಮಸ್ವರೂಪತಾ ಪ್ರತಿಬಿಮ್ಬಸ್ಥಾನೀಯಸ್ಯ ಜೀವಸ್ಯ ಉಪದಿಶ್ಯತೇ । ಅನ್ಯಥಾ ನ 'ತತ್ತ್ವಮಸಿ' ಇತಿ ಸ್ಯಾತ್, ಕಿಂ ತು 'ನ ತ್ವಮಸಿ' ಇತಿ ಭವೇತ್, ನ ರಜತಮಸ್ತಿ-ಇತಿವತ್ । ಕಿಞ್ಚ, ಶಾಸ್ತ್ರೀಯೋಽಪಿ ವ್ಯವಹಾರಃ ಪ್ರತಿಬಿಮ್ಬಸ್ಯ ಪಾರಮಾರ್ಥಿಕಮೇವ ಬಿಮ್ಬೈಕರೂಪತ್ವಂ ದರ್ಶಯತಿ 'ನೇಕ್ಷೇತೋದ್ಯನ್ತಮ್ ಆದಿತ್ಯಂ ನಾಸ್ತಂ ಯನ್ತಂ ಕದಾಚನ । ನೋಪರಕ್ತಂ ನ ವಾರಿಸ್ಥಂ ನ ಮಧ್ಯಂ ನಭಸೋ ಗತಮ್' (ಮನು. ೪-೩೭) ಇತಿ । ಯಸ್ತು ಮನ್ಯತೇ ನ ಪರಾಕ್ಪ್ರವಣಪ್ರವೃತ್ತನಾಯನರಶ್ಮಿಭಿಃ, ಬಿಮ್ಬಮೇವ ಭಿನ್ನದೇಶಸ್ಥಂ ಗೃಹ್ಯತೇ, ಕಿಂ ತು ದರ್ಪಣಪ್ರತಿಸ್ಫಾಲಿತೈಃ ಪರಾವೃತ್ಯ ಪ್ರತ್ಯಙ್ಮುಖೈಃ ಸ್ವದೇಶಸ್ಥಮೇವ ಬಿಮ್ಬಂ ಗೃಹ್ಯತೇ ಇತಿ, ತಮ್ ಅನುಭವ ಏವ ನಿರಾಕರೋತಿ ಇತಿ ನ ಪರಾಕ್ರಮ್ಯತೇ ॥

(ಅರ್ಥ)

ಇಲ್ಲಿ (ಆಕ್ಷೇಪಕನು) ಹೇಳುತ್ತಾನೇನೆಂದರೆ, (ಪ್ರತಿಬಿಂಬವು) ಮತ್ತೊಂದು ವಸ್ತುವಲ್ಲ ಎಂದಾಗಲಿ, ಆದರೆ ಆ (ಬಿಂಬವೇ) ಅದು ಎಂಬುದನ್ನು (ನಾವು) ಸಹಿಸಲಾರೆವು: ಏಕೆಂದರೆ ಮಿಥ್ಯಾರೂಪವಾದ ಶುಕ್ತಿರಜತವೂ ಸತ್ಯರಜತದಂತೆಯೇ ಅದೇ ರೂಪದಿಂದ ತೋರುವದು ಕಂಡುಬರುತ್ತದೆ.[1]

(ಪರಿಹಾರ) :- ಹಾಗಲ್ಲ.[2] ಏಕೆಂದರೆ ಅಲ್ಲಿ ಬಾಧವು ಕಂಡುಬರುವದರಿಂದ (ರಜತಕ್ಕೆ ಮಿಥ್ಯಾತ್ವವು ಸಿದ್ಧವಾಗುತ್ತದೆ.) ಇಲ್ಲಿ ಆ (ಬಾಧವು) ಕಾಣುವದಿಲ್ಲ. ಆದರೆ ಕನ್ನಡಿಯು (ಅತ್ತ) ಹೋದರೆ ಆ (ಪ್ರತಿಬಿಂಬವು) ಹೋಗುವದಲ್ಲ,

---

1. ಆದ್ದರಿಂದ ಅದೇ ರೂಪದಲ್ಲಿ ಕಂಡಮಾತ್ರದಿಂದ ನಿಜವೆನ್ನುವದಕ್ಕಿಲ್ಲ.

2 ಇಲ್ಲಿ ಸಿದ್ಧಾಂತಿಯು ಪ್ರತಿಬಿಂಬವು ಸತ್ಯವೆಂದೇ ಪಟ್ಟುಹಿಡಿದಿರುತ್ತಾನೆ.

ಅದು ಬಾಧೆಯಲ್ಲ; ಏಕೆಂದರೆ (ಹಾಗಾದರೆ) ಕನ್ನಡಿಯೂ ಬಾಧಿತವಾಯಿತು ಎನ್ನಬೇಕಾದೀತು.[1]

(ಆಕ್ಷೇಪ) :– 'ತತ್ತ್ವಮಸಿ' (ಛಾಂ. ೬-೮-೭) ಎಂಬ ವಾಕ್ಯದಿಂದ ಬಾಧೆಯಾದದ್ದು ಕಾಣುವದಲ್ಲ!

(ಪರಿಹಾರ) :– ಹಾಗಲ್ಲ. 'ಅದು ನೀನು' ಎಂದು ಪ್ರತಿಬಿಂಬದಂತಿರುವ ಜೀವನಿಗೆ ಬಿಂಬದಂತಿರುವ ಬ್ರಹ್ಮಸ್ವರೂಪವನ್ನು ತಿಳಿಸಿಕೊಟ್ಟಿದೆ. ಹಾಗಿಲ್ಲದಿದ್ದರೆ,[2] 'ಅದು ನೀನಾಗಿರುವೆ' ಎಂದಾಗುತ್ತಿರಲಿಲ್ಲ.[3] 'ಬೆಳ್ಳಿಯಿಲ್ಲ' ಎಂಬಂತೆ 'ನೀನಿಲ್ಲ' ಎಂದಾಗಬೇಕಾದೀತು, ಇದಲ್ಲದೆ ಶಾಸ್ತ್ರೀಯವ್ಯವಹಾರವೂ ಪ್ರತಿಬಿಂಬವು ಬಿಂಬದೊಡನೆ ಐಕ್ಯವನ್ನು ಹೊಂದಿರುವದು ಪರಮಾರ್ಥವೆಂದೇ ತಿಳಿಸುತ್ತದೆ: (ಏಕೆಂದರೆ) "ಹುಟ್ಟುವ ಸೂರ್ಯನನ್ನು ಎಂದಿಗೂ ನೋಡಬಾರದು, ಮುಳುಗುವ (ಸೂರ್ಯ)ನನ್ನು (ನೋಡಬಾರದು), ಗ್ರಹಣವಾಗಿರುವ (ಸೂರ್ಯ)ನನ್ನು (ನೋಡ)ಬಾರದು, ನೀರಿನಲ್ಲಿರುವ (ಸೂರ್ಯ)ನನ್ನು (ನೋಡ)ಬಾರದು; ಆಕಾಶದ ನಡುಭಾಗದಲ್ಲಿರುವ (ಸೂರ್ಯ)ನನ್ನು (ನೋಡ)ಬಾರದು" ಎಂದು (ಸ್ಮೃತಿವಾಕ್ಯ).[4] ಹೊರಕ್ಕೆ ಹೊರಟಿರುವ ಕಣ್ಣಿನ ರಶ್ಮಿಗಳು ಮತ್ತೊಂದು ದೇಶದಲ್ಲಿ ಬಿಂಬವನ್ನೇ ಕಾಣುವದಿಲ್ಲ, ಮತ್ತೇನೆಂದರೆ ಕನ್ನಡಿಯಿಂದ ಮಾರುಹೊಳೆದು ಹಿಂತಿರುಗಿ ಈಕಡೆಗೆ ತಿರುಗಿ ತನ್ನ ದೇಶದಲ್ಲಿಯೇ ಇರುವ ಬಿಂಬವನ್ನು ಗ್ರಹಿಸುತ್ತವೆ ಎಂದು ಯಾವನಾದರೆ ತಿಳಿಯುವನೋ[5] ಆವನನ್ನು ಅನುಭವವೇ ನಿರಾಕರಿಸುತ್ತದೆಯಾದ್ದರಿಂದ (ನಾವು ಆ ವಿಷಯದಲ್ಲಿ) ಮೇಲೆಬೀಳುವದಿಲ್ಲ.

---

1. ಕನ್ನಡಿಯೂ ಕಾಣದೆಹೋದರೆ ಅದು ಬಾಧಿತವಾಯಿತು ಎಂದು ಯಾರೂ ಹೇಳುವದಿಲ್ಲ.

2. ಸೂ. ಭಾ. ದಲ್ಲಿ ಜಲಸೂರ್ಯಕಾದಿವತ್ (ನೀರಿನಲ್ಲಿರುವ ಸೂರ್ಯಪ್ರತಿಬಿಂಬವೇ ಮುಂತಾದದ್ದರಂತೆ) 'ಜೀವನು ಅವನೇ ಅಲ್ಲ, ಬೇರೆಯ ವಸ್ತುವೂ ಅಲ್ಲ' ಎಂದು ಸ್ಪಷ್ಟವಾಗಿ ಹೇಳಿದೆ. ಇದನ್ನು ಇಲ್ಲಿ ಹೊಂದಿಸಿಲ್ಲ.

3. 'ಅದು ನೀನಾಗಿರುವೆ' ಎಂಬಲ್ಲಿ ಜೀವನು ಕಾಣುವ ರೂಪದಿಂದಲೇ ಬ್ರಹ್ಮವಲ್ಲ; ಅವನಲ್ಲಿರುವ ವಿಷಯಾಂಶವನ್ನು ಕಳೆದೇ 'ತತ್ತ್ವಮಸಿ' ಎಂದು ಹೇಳಿದೆ– ಎಂತ ಉ. ಸಾ. ಪದ್ಯ ೧೮–೧೬೪, ೧೬೫ರಲ್ಲಿದೆ. ಮಾಂ. ಭಾ. ೭ರಲ್ಲಿ ಸರ್ಪಾದಿವಿಕಲ್ಪಗಳನ್ನು ಅಲ್ಲಗಳೆದೇ ಹಗ್ಗದ ತತ್ತ್ವವನ್ನು ತಿಳಿಸುವಂತೆ ತುರೀಯನನ್ನು ತಿಳಿಸಿದೆ ಎಂಬುದಕ್ಕೆ 'ತತ್ತ್ವಮಸಿ' ವಾಕ್ಯವನ್ನು ದೃಷ್ಟಾಂತವಾಗಿ ಕೊಟ್ಟಿದೆ. ನೈ. ಸಿ. ೩–೭೫ಯಲ್ಲಿ ಬಾಧೆಯನ್ನು ಒಪ್ಪಿದೆ. ಆದ್ದರಿಂದ ಈ ಪ್ರಸ್ಥಾನವು ಅವೆಲ್ಲಕ್ಕಿಂತ ಬೇರೆ ಎಂದಾಯಿತು.

4. ಇಂಥ ವಾಕ್ಯದಿಂದ ಪ್ರತಿಬಿಂಬಸತ್ಯತ್ವವು ಸಿದ್ಧವಾಗದೆಂದು ಉ. ಸಾ. ೧೮–೪೯ ದಲ್ಲಿ ಹೇಳಿದೆ.

5. ನ್ಯಾ. ಭಾಷ್ಯ. ೩–೧–೪೪ರಲ್ಲಿ ಈ ಪಕ್ಷವನ್ನೇ ಒಪ್ಪಿದೆ. ಭಾಮತಿಯಲ್ಲಿ ಅಧ್ಯಾಸಲಕ್ಷಣವನ್ನು ಸಮನ್ವಯಮಾಡುವಾಗಲೂ ಇದೇ ಪೂರ್ವಪಕ್ಷವನ್ನು ಸಿದ್ಧಾಂತವಾಗಿ ಒಪ್ಪಿದೆ.

(ಪಂಚಪಾದಿಕಾ)

೩೯. ಕಥಂ ಪುನಃ ಪರಿಚ್ಛಿನ್ನಮೇಕಮ್ ಏಕಸ್ವಭಾವಂ ವಿಚ್ಛಿನ್ನದೇಶದ್ವಯೇ ಸರ್ವಾತ್ಮನಾ ಅವಭಾಸಮಾನಮ್ ಉಭಯತ್ರ ಪಾರಮಾರ್ಥಿಕಂ ಭವತಿ ? ನ ವಯಂ ವಿಚ್ಛೇದಾವಭಾಸಂ ಪಾರಮಾರ್ಥಿಕಂ ಬ್ರೂಮಃ, ಕಿಂ ತು ಏಕತ್ವಮ್ । ವಿಚ್ಛೇದಸ್ತು ಮಾಯಾವಿಜೃಮ್ಭಿತಃ । ನ ಹಿ ಮಾಯಾಯಾಮ್ ಅಸಂಭಾವನೀಯಂ ನಾಮ । ಅಸಂಭಾವನೀಯಾವಭಾಸಚತುರಾ ಹಿ ಸಾ । ನನು ಸತ್ಯೇವ ಬಿಮ್ಬೈಕತಾವಗಮೇ ಪ್ರತಿಬಿಮ್ಬಸ್ಯ ತದ್ಗತೋ ವಿಚ್ಛೇದಾದಿಮಿಥ್ಯಾವಭಾಸಃ । ತಥಾ ಬ್ರಹ್ಮೈಕತಾವಗಮೇಽಪಿ ಜೀವಸ್ಯ ವಿಚ್ಛೇದಾದಿರ್ಮಿಥ್ಯಾವಭಾಸೋ ನ ನಿವರ್ತಿತುಮರ್ಹತಿ । ಉಚ್ಯತೇ । ದೇವದತ್ತಸ್ಯ ಅಚೇತನಾಂಶಸ್ಯೈವ ಪ್ರತಿಬಿಮ್ಬತ್ವಾತ್, ಸಚೇತನಾಂಶಸ್ಯೈವ ವಾ ಪ್ರತಿಬಿಮ್ಬತ್ವೇ ಪ್ರತಿಬಿಮ್ಬಹೇತೋಃ ಶ್ಯಾಮಾದಿಧರ್ಮೇಣೇವ ಜಾಡ್ಯೇನಾಪಿ ಆಸ್ಕನ್ದಿತತ್ವಾತ್, ನ ತತ್ ಪ್ರತಿಬಿಮ್ಬಂ ಬಿಮ್ಬೈಕರೂಪತಾಮ್ ಆತ್ಮನೋ ಜಾನಾತಿ । ಅಚೇತನತ್ವಾತ್ । ತಥಾ ಚಾನುಭವಃ, ನ ಬಿಮ್ಬಚೇಷ್ಟಯಾ ವಿನಾ ಪ್ರತಿಬಿಮ್ಬಂ ಚೇಷ್ಟತೇ । ಯಸ್ಯ ಹಿ ಭ್ರಾನ್ತಿರಾತ್ಮನಿ ಪರತ್ರ ವಾ ಸಮುತ್ಪನ್ನಾ ತದ್ಗತೇನೈವ ಸಮ್ಯಗ್ಜ್ಞಾನೇನ ಸಾ ನಿವರ್ತತೇ । ಯಸ್ತು ಜಾನೀತೇ ದೇವದತ್ತಃ, ಪ್ರತಿಬಿಮ್ಬಸ್ಯ ಆತ್ಮನೋಽಭಿನ್ನತ್ವಮ್; ನ ಸ ತದ್ಗತೇನ ದೋಷೇಣ ಸಂಸ್ಪೃಶ್ಯತೇ, ನಾಪಿ ಜ್ಞಾನಮಾತ್ರಾತ್ ಪ್ರತಿಬಿಮ್ಬಸ್ಯ ನಿವೃತ್ತಿಃ । ತದ್ಧೇತೋಃ, ದರ್ಪಣಾದೇಃ ಪಾರಮಾರ್ಥಿಕತ್ವಾತ್ । ಜೀವಃ ಪುನಃ ಪ್ರತಿಬಿಮ್ಬಕಲ್ಪಃ ಸರ್ವೇಷಾಂ ನಃ ಪ್ರತ್ಯಕ್ಷಃ, ಚಿದ್ರೂಪೋ ನಾನ್ತಃಕರಣಜಾಡ್ಯೇನಾಸ್ಕನ್ದಿತಃ; ಸ ಚ ಅಹಙ್ಕರ್ತೃತ್ವಮ್ ಆತ್ಮನೋ ರೂಪಂ ಮನ್ಯತೇ ನ ಬಿಮ್ಬಕಲ್ಪಬ್ರಹ್ಮೈಕರೂಪತಾಮ್ ; ಅತೋ ಯುಕ್ತಃ, ತದ್ರೂಪಾವಗಮೇ ಮಿಥ್ಯಾತ್ವಾವಗಮಃ ॥

(ಅರ್ಥ)

(ಆಕ್ಷೇಪ) :-ಹಾಗಾದರೆ ಪರಿಚ್ಛಿನ್ನವಾದ,[1] ಒಂದೇ ಆಗಿರುವ, ಒಂದೇ ಸ್ವಭಾವದ (ವಸ್ತು) ವಿಚ್ಛಿನ್ನವಾಗಿರುವ ಎರಡು ಸ್ಥಳಗಳಲ್ಲಿ ಸಂಪೂರ್ಣವಾಗಿ ತೋರುತ್ತಿರುವದು, ಎರಡು ಕಡೆಗಳಲ್ಲಿಯೂ ನಿಜವಾಗಿದೆ ಎಂಬುದು ಹೇಗಾದೀತು ?[2]

(ಪರಿಹಾರ) :- ನಾವು ಹೀಗೆ ಕಡಿದು (ಬೇರೆಬೇರೆ ನಿಜವೆಂದು ಹೇಳುತ್ತಿಲ್ಲ ; ಮತ್ತೇನೆಂದರೆ (ಅವೆರಡೂ) ಒಂದೇ ಎಂಬುದು (ಪರಮಾರ್ಥವೆಂದು ಹೇಳುತ್ತೇವೆ).[3] ವಿಚ್ಛೇದವೋ ಎಂದರೆ ಮಾಯೆಯಿಂದ ತೋರಿಕೊಂಡದ್ದು

---

1. ಗೊತ್ತಾಗಿರುವ ಪರಿಮಾಣದ. 2. ಬಿಂಬವೂ ನಿಜ, ಮತ್ತೊಂದು ಕಡೆ ಇರುವ ಪ್ರತಿಬಿಂಬವೂ ನಿಜ— ಎಂಬುದು ಹೇಗೆ ? ಅವೆರಡೂ ನಿಜವಾದರೆ ಒಂದೇ ವಸ್ತು ಬೇರೆಬೇರೆಯ ಕಡೆಗಳಲ್ಲಿ ಪೂರ್ಣವಾಗಿರುವದು ಹೇಗೆ ?

3. ಬೇರೆಬೇರೆಯ ಕಡೆಗಳಲ್ಲಿ ತೋರುವದು ಅಧ್ಯಾಸ, ವಸ್ತುವೊಂದೇ ಎಂಬುದು ನಿಜ.

ಮಾಯೆಯಲ್ಲಿ ಅಸಂಭವವೆನಿಸತಕ್ಕದ್ದು (ಯಾವದೂ) ಇಲ್ಲವಷ್ಟೆ ? ಅಸಂಭಾವನೀಯವಾದದ್ದನ್ನು ತೋರಿಸುವದರಲ್ಲಿ ಅದು ಜಾಣನಾಗಿರುತ್ತದೆಯಲ್ಲವೆ ?

(ಆಕ್ಷೇಪ) :–ಪ್ರತಿಬಿಂಬವು ಬಿಂಬದೊಡನೆ ಒಂದಾಗಿರುವದೆಂದು ತಿಳಿದರೂ, ಅದರಲ್ಲಿ ಬೇರೆಯಾಗಿರುವದೇ ಮುಂತಾದ ಹುಸಿತೋರಿಕೆ(ಯಾಗಿದೆ). ಹಾಗೆಯೇ ಬ್ರಹ್ಮದೊಡನೆ ಒಂದಾಗಿರುತ್ತಾನೆಂದು ತಿಳಿದರೂ ಜೀವನು ಬೇರೆಯಾಗಿ ತೋರುವದು ಮುಂತಾದ ಹುಸಿತೋರಿಕೆ ಹೋಗಬಾರದೆಂದಾಗುವದಲ್ಲ ![1]

(ಪರಿಹಾರ) :– ಹೇಳುತ್ತೇವೆ. ದೇವದತ್ತನ ಅಚೇತನಾಂಶವೇ ಪ್ರತಿಬಿಂಬವಾಗಿರುತ್ತದೆ. ಅಥವಾ ಚೇತನಾಂಶವೇ ಪ್ರತಿಬಿಂಬವಾಗಿದೆ ಎಂದರೂ ಪ್ರತಿಬಿಂಬಕ್ಕೆ ಕಾರಣವಾಗಿರುವ (ಕನ್ನಡಿಯ) ಕಪ್ಪು ಮುಂತಾದ ಧರ್ಮವು ಹೇಗೋ ಹಾಗೆ (ಅದರ) ಜಡತ್ವವೂ ಸೇರಿಕೊಂಡಿರುವದರಿಂದ, ಆ ಪ್ರತಿಬಿಂಬವು ತಾನು ಬಿಂಬದೊಡನೆ ಒಂದಾಗಿರುವೆನೆಂದು ತಿಳಿಯುವದಿಲ್ಲ ; ಏಕೆಂದರೆ (ಅದು) ಅಚೇತನವಾಗಿರುತ್ತದೆ. ಆದ್ದರಿಂದಲೇ ಬಿಂಬದ ವ್ಯಾಪಾರವಿಲ್ಲದೆ ಪ್ರತಿಬಿಂಬವು ಅಲುಗಾಡುವದಿಲ್ಲ ಎಂಬ ಅನುಭವವಿದೆ.[2] ಯಾವನಿಗೆ ತನ್ನ ವಿಷಯದಲ್ಲಿ ಅಥವಾ ಮತ್ತೊಂದರ ವಿಷಯದಲ್ಲಿ ಭ್ರಾಂತಿಯುಂಟಾಗಿರುವದೋ, ಅವನಲ್ಲಿರುವ ಸರಿಯಾದ ತಿಳಿವಳಿಕೆಯಿಂದಲೇ ಆ (ಭ್ರಾಂತಿ) ಹೋಗುತ್ತದೆ. ಆದರೆ ಯಾವ ದೇವದತ್ತನು ಪ್ರತಿಬಿಂಬವು ತನಗಿಂತ ಬೇರೆಯಲ್ಲನೆಂದು ತಿಳಿದುಕೊಂಡಿರುತ್ತಾನೋ, ಅವನಿಗೆ ಅದರಲ್ಲಿರುವ ದೋಷದ ಸೋಂಕು ಇರುವದಿಲ್ಲ.[3] ಜ್ಞಾನ

1. ಜ್ಞಾನವಾದಮೇಲೂ ಕನ್ನಡಿಯಲ್ಲಿರುವ ಮನುಷ್ಯನ ಪ್ರತಿಬಿಂಬವು ಇದ್ದುಕೊಂಡಿರುವಂತೆ ಜೀವನ ಜೀವತ್ವವೂ ಹಾಗೇ ಇರಬೇಕಾಗುವದಲ್ಲ !

2. ಪ್ರತಿಬಿಂಬಕ್ಕೆ ಕನ್ನಡಿಯ ದೋಷವೆಲ್ಲ ಅಂಟಿಕೊಂಡಿರುತ್ತದೆ ; ಆದ್ದರಿಂದ ಮುಖದಲ್ಲಿಲ್ಲದ ಕಪ್ಪು ಕನ್ನಡಿಯ ಅಚೇತನತ್ವ- ಇವೂ ಅದಕ್ಕೆ ಅಂಟಿಕೊಂಡಿವೆ, ತನ್ನ ನಿಜವಾದ ಸ್ವರೂಪದ ಜ್ಞಾನವೂ ಅದಕ್ಕಿಲ್ಲ.

3. ಜ್ಞಾನವಾಗುವವನಿಗೆ ತಾನೂ ಕನ್ನಡಿಯಲ್ಲಿರುವ ಪ್ರತಿಬಿಂಬವೂ ಒಂದೇ ಎಂದು ತಿಳಿವಳಿಕೆಯಿದ್ದರೂ ಕನ್ನಡಿಯ ದೋಷವು ತನ್ನಲ್ಲಿದೆ ಎಂಬ ಭಾವನೆ ಅವನಿಗಿಲ್ಲವಾದ್ದರಿಂದ ಭ್ರಾಂತಿ ಉಳಿಯಿತೆನ್ನುವಹಾಗಿಲ್ಲ. ದಾರ್ಷ್ಟಾಂತಿಕದಲ್ಲಿ ಜೀವನನ್ನು ಪ್ರತಿಬಿಂಬಕ್ಕೆ ಹೋಲಿಸಿದೆ ; ಇವನಿಗೆ ಕನ್ನಡಿಯ ಪ್ರತಿಬಿಂಬದಂತೆ ಉಪಾಧಿಯ ದೋಷವು ಅಂಟಿಲ್ಲ, ಆದರೂ ತಾನೂ ಅಹಂಕರ್ತೃ (ನಾನು ಎಂಬ ಸ್ವರೂಪದವನು) ಎಂದುಕೊಂಡಿರುತ್ತಾನೆ. ಈ ತಪ್ಪು ತಿಳಿವಳಿಕೆಯು ನಾನು ಬ್ರಹ್ಮವು ಎಂದು ಅರಿವು ಆದಾಗ ಹೋಗಬಹುದಾಗಿದೆ. ಆದ್ದರಿಂದ ದೃಷ್ಟಾಂತದಲ್ಲಿರುವ ಪ್ರತಿಬಿಂಬವಿಚ್ಛೇದದಂತೆ ಜೀವತ್ವವು ಉಳಿದೇ ಇರಬೇಕೆಂಬ ಆಕ್ಷೇಪವು ಸರಿಯಲ್ಲ- ಎಂದು ಅಭಿಪ್ರಾಯ. ಜೀವನು 'ಪ್ರತಿಬಿಂಬಕಲ್ಪ' (ಪ್ರತಿಬಿಂಬದಂತೆ) ಇರುತ್ತಾನೆಂಬುದರ ಸ್ವಾರಸ್ಯವೇನೋ ತಿಳಿಯಲಿಲ್ಲ. ಪಂ. ವಿ. ದಲ್ಲಿ ಪ್ರತಿಬಿಂಬವಾದದ ಹೆಚ್ಚುಗಾರಿಕೆಯನ್ನು ತೋರಿಸಿ ಅವಚ್ಛೇದವಾದವನ್ನು ದೂಷಿಸಿದೆ.

ಮಾತ್ರದಿಂದ ಪ್ರತಿಬಿಂಬವು ಹೋಗುವದೂ ಇಲ್ಲ ; ಏಕೆಂದರೆ ಅದಕ್ಕೆ ಕಾರಣವಾಗಿರುವ ಕನ್ನಡಿಯೇ ಮುಂತಾದದ್ದು ನಿಜವಾದದ್ದು. ಪ್ರತಿಬಿಂಬದಂತೆ ಇರುವ ಜೀವನಾದರೋ ನಮ್ಮೆಲ್ಲರಿಗೂ ಪ್ರತ್ಯಕ್ಷನಾಗಿ ಚಿದ್ರೂಪನಾಗಿರುತ್ತಾನೆ; ಅಂತಃಕರಣದ[1] ದೋಷದ ಸೋಂಕೂ ಅವನಿಗಿರುವದಿಲ್ಲ. ಅವನು ಅಹಂಕರ್ತೃತ್ವವು ತನ್ನ ರೂಪವೆಂದು ಭಾವಿಸಿರುತ್ತಾನೆಯೇ ಹೊರತು ಬಿಂಬದಂತೆ ಬ್ರಹ್ಮದೊಡನೆ ತಾನು ಒಂದಾಗಿರುವೆನೆಂದು ತಿಳಿದುಕೊಂಡಿರುವದಿಲ್ಲ. ಆದ್ದರಿಂದ ಆ (ತಾನು ಒಂದೆಂಬ) ರೂಪವನ್ನು ಅರಿತುಕೊಂಡರೆ (ಈ ತೋರಿಕೆಯು) ಮಿಥ್ಯೆ ಎಂಬುದು ಹೋಗಿಬಿಡುವದು ಯುಕ್ತ.

## ರಜ್ಜುಸರ್ಪ

**(ಪಂಚಪಾದಿಕಾ)**

೪೦. ನನು ತತ್ರ ವಿಭ್ರಾಮ್ಯತೋ ವಿಭ್ರಮಹೇತುಃ ದರ್ಪಣಾಲಕ್ತಕಾದಿಪರಮಾರ್ಥವಸ್ತು ಸಂನಿಹಿತಮಸ್ತಿ, ನ ತಥೇಹ ಕಿಞ್ಚಿತ್ ಸರ್ವತ್ರೈವ ಚಿದ್ವಿಲಕ್ಷಣೇ ವಿಭ್ರಮವಿಲಾಸಾಭಿಮಾನಿನಃ– ಇತಿ ಮಾ ಭೂದಾಶಙ್ಕಾ ಇತಿ ರಜ್ಜುಸರ್ಪಮ್ ಉದಾಹರನ್ತಿ। ನನು ತತ್ರಾಪಿ ಯದಿ ನಾಮ ಇದಾನೀಮ್ ಅಸಂನಿಹಿತಃ ಸರ್ಪಃ, ತಥಾಪಿ ಪೂರ್ವನಿರ್ವೃತ್ತತದನುಭವಸಂಸ್ಕಾರಃ ಸಮಸ್ತ್ಯೇವ। ಬಾಢಮ್। ಇಹಾಪಿ ಅಹಙ್ಕರ್ತೃತಾತತ್ಸಂಸ್ಕಾರಯೋಃ, ಬೀಜಾಙ್ಕುರಯೋರಿವ ಅನಾದೇಃ ಕಾರ್ಯಕಾರಣಭಾವಸ್ಯ ವಕ್ಷ್ಯಮಾಣತ್ವಾತ್ ತತ್ಸಂಸ್ಕಾರೋ ವಿಭ್ರಮಹೇತುರ್ವಿದ್ಯತೇ।

**(ಅರ್ಥ)**

ಅಲ್ಲಿ[2] ಭ್ರಾಂತನಾದವನಿಗೆ ಭ್ರಾಂತಿಗೆ ಕಾರಣವಾಗಿ ಕನ್ನಡಿ, ಅರಗು–ಮುಂತಾದ ಪರಮಾರ್ಥವಸ್ತು ಹತ್ತಿರ ಇರುತ್ತದೆ. ಆದರೆ ಇಲ್ಲಿ ಎಲ್ಲೆಲ್ಲಿಯೂ ಚಿದ್ವಿಲಕ್ಷಣವಾದ (ವಸ್ತುವಿನಲ್ಲಿ) ಭ್ರಾಂತಿವಿಲಾಸವನ್ನು ಅನುಭವಿಸುತ್ತಿರುವ (ಜೀವ)ನಿಗೆ ಹಾಗೆ ಯಾವದೊಂದು (ಉಪಾಧಿ)ಯೂ ಇರುವದಿಲ್ಲವಲ್ಲ !– ಎಂಬ ಶಂಕೆಯು ಆಗದೆ ಇರಲೆಂದು ರಜ್ಜುಸರ್ಪವನ್ನು ಉದಾಹರಿಸುತ್ತಾರೆ.[3]

---

1. ಇಲ್ಲಿ ಅಂತಃಕರಣವು ಜೀವನಿಗೆ ಉಪಾಧಿ ಎಂದದ್ದು ಹಿಂದೆ ಅಜ್ಞಾನವೇ ಉಪಾಧಿ ಎಂದದ್ದಕ್ಕೆ ವಿರುದ್ಧವಲ್ಲವೆ ?–ಎಂಬ ಶಂಕೆಯನ್ನು ತೆಗೆದು ಸುಷುಪ್ತಿಯಲ್ಲಿ ಅವಿದ್ಯೆ, ಸ್ವಪ್ನದಲ್ಲಿ ಅದರಿಂದಾಗಿರುವ ಅಂತಃಕರಣ, ಎಚ್ಚರದಲ್ಲಿ ಅವೆರಡರಿಂದೊಡಗೂಡಿದ ಸ್ಥೂಲ ಶರೀರ ಹೀಗೆ ಉಪಾಧಿಗಳು ; ಆದ್ದರಿಂದ ವಿರೋಧವಿಲ್ಲ– ಎಂದು ಪಂ. ವಿ. ದಲ್ಲಿ ಹೇಳಿದೆ.

2. ಹಿಂದಿನ ದೃಷ್ಟಾಂತಗಳಲ್ಲಿ ಜೀವಬ್ರಹ್ಮವಿಭಾಗವು ಔಪಾಧಿಕವೆಂಬುದಕ್ಕೆ ಪ್ರತಿಬಿಂಬದೃಷ್ಟಾಂತವೆಂದೂ ಕರ್ತೃತ್ವಾದಿಗಳು ಮಿಥ್ಯೆ ಎಂಬುದಕ್ಕೆ ಸ್ಫಟಿಕದೃಷ್ಟಾಂತವೆಂದೂ ತ. ದೀ.

3. ನಿರುಪಾಧಿಕಾಧ್ಯಾಸಕ್ಕೆ ದೃಷ್ಟಾಂತವಾಗಿ ಉದಾಹರಿಸುತ್ತಾರೆ ಎಂದರ್ಥ.

(ಆಕ್ಷೇಪ) :- ಅಲ್ಲಿಯೂ ಈಗ ಹತ್ತಿರದಲ್ಲಿ ಹಾವು ಇಲ್ಲದಿದ್ದರೂ ಹಿಂದೆ ಆಗಿದ್ದ ಅದರ ಅನುಭವದ ಸಂಸ್ಕಾರವು ಇರಬಹುದಲ್ಲವೆ ?

(ಪರಿಹಾರ) :- ನಿಜ. ಇಲ್ಲಿಯೂ ಅಹಂಕರ್ತೃತ್ವ, ಮತ್ತು ಅದರ ಸಂಸ್ಕಾರ- ಇವುಗಳಿಗೆ ಬೀಜಾಂಕುರಗಳಂತೆ ಅನಾದಿಯಾದ ಕಾರ್ಯಕಾರಣಭಾವ ವಿದೆಯೆಂದು[1] ಮುಂದೆ (?) ಹೇಳುವದರಿಂದ, ಸಂಸ್ಕಾರವೆಂಬ ಭ್ರಾಂತಿಹೇತುವು ಇದ್ದೇ ಇರುತ್ತದೆ.

## ಘಟಾಕಾಶ

(ಪಂಚಪಾದಿಕಾ)

೪೧. ತತ್ರ ಯದ್ಯಪಿ ಅನಿರ್ವಚನೀಯತಯೈವ ಅರುಣಾದಿನಾ ಸ್ಫಟಿಕಾದೇಃ ಸಾವಯವತ್ವೇನ ಸಂಭೇದಯೋಗ್ಯಸ್ಯಾಪಿ ಅಸಂಭೇದಾವಭಾಸಃ ಸಿದ್ಧಃ, ತಥಾಪಿ ತದಾಸಙ್ಗೀವ ಸ್ಫಟಿಕಪ್ರತಿಬಿಮ್ಬಮ್ ಉತ್ಪ್ರೇಕ್ಷತೇ । ರಜ್ಜ್ವಾಂ ಪುನಃ ಸರ್ಪಬುದ್ಧಿರೇವ; ನ ತತ್ಸಂಭಿನ್ನತ್ವಮ್, ಅಸಂಭಿನ್ನತ್ವಂ ವಾ ತಸ್ಯಾಮ್। ತೇನ 'ಅಸಙ್ಗೋ ನ ಹಿ ಸಜ್ಜತೇ', 'ಅಸಙ್ಗೋ ಹ್ಯಯಂ ಪುರುಷಃ' ಇತ್ಯಾದಿ ಶ್ರುತಿಸಮರ್ಪಿತಾ ಅಸಙ್ಗತಾ ಆತ್ಮನೋ ನ ಸ್ಪಷ್ಟಂ ದರ್ಶಿತಾ ಇತಿ ತದರ್ಥಂ ಘಟಾಕಾಶೋದಾಹರಣಮ್ । ತತ್ರ ಹಿ ತತ್ಪರಾಮರ್ಶಾದ್ ಋತೇ ನ ಭೇದರೂಪ ಕಾರ್ಯಸಮಾಖ್ಯಾಃ ಸ್ವಗತಾ ದೃಶ್ಯನ್ತೇ ॥

ಏತಚ್ಚ ಸರ್ವಮ್ ಉದಾಹರಣಜಾತಂ ಶ್ರುತಿತನ್ನ್ಯಾಯಾನುಭವಸಿದ್ಧಸ್ಯ ತದಸಂಭಾವನಾಪರಿಹಾರಾಯ ಬುದ್ಧಿಸಾಮರ್ಥ್ಯಾರ್ಥಂ ಚ, ನ ವಸ್ತುನ ಏವ ಸಾಕ್ಷಾತ್ ಸಿದ್ಧಯೇ ॥

(ಅರ್ಥ)

ಇಲ್ಲಿ ಸ್ಫಟಿಕವೇ ಮುಂತಾದದ್ದು ಸಾವಯವವಾಗಿರುವದರಿಂದ ಕೆಂಪು ಮುಂತಾದದ್ದರೊಡನೆ ಬೆರಕೆಯಾಗುವದಕ್ಕೆ ತಕ್ಕದ್ದಾಗಿದ್ದರೂ ಅನಿರ್ವಚನೀಯವಾಗಿರುವದರಿಂದಲೇ ಬೆರಕೆಯಾಗಿಲ್ಲದಂತೆ ತೋರುತ್ತದೆ ಎಂದು ಸಿದ್ಧವಾಗಿರುತ್ತದೆ; ಆದರೂ ಅದರ ಅಂಟಿರುವಂತೆ ಸ್ಫಟಿಕಪ್ರತಿಬಿಂಬವನ್ನು ಕಲ್ಪಿಸಬಹುದು.[2] ಆದರೆ ಹಗ್ಗದಲ್ಲಿ ಹಾವಿನ ಬುದ್ಧಿಯಿರುವದೇ ಹೊರತು (ಅದರಲ್ಲಿ) ಆ (ಹಾವಿನ)

---

1. ಅಧ್ಯಾಸ, ಸಂಸ್ಕಾರಗಳು- ಇವು ಪ್ರವಾಹರೂಪದಿಂದ ಅನಾದಿ ಎಂದಂತೆ ಆಯಿತು. ಹೀಗೆ ಆಕ್ಷೇಪಸಮಾಧಾನಗಳನ್ನು ಭಾಷ್ಯದಲ್ಲಿ ಎಲ್ಲಿಯೂ ವರ್ಣಿಸಿಲ್ಲ; ದೃಷ್ಟಾಂತಗಳನ್ನು ಉಪಯೋಗಿಸಿರುವದರಲ್ಲಿಯೂ ಸ್ವಲ್ಪ ವೈಲಕ್ಷಣ್ಯವಿರುತ್ತದೆ.

2. ಸಾವಯವವಾದ ಸ್ಫಟಿಕದಲ್ಲಿ ಕೆಂಪು ತೋರಿಕೊಂಡಿದೆ ಎಂದು ಕಲ್ಪಿಸಬಹುದು ; ಆದರೂ ಅದು ಹಾಗಿಲ್ಲ. ಸ್ಫಟಿಕವೇ ಕೆಂಪಾಗಿದೆ ಎಂಬುದು ಮಿಥ್ಯಾಧ್ಯಾಸ.

ಬೆರಕೆಯಾಗಲಿ, ಅಥವಾ ಬೆರಕೆಯಿಲ್ಲದ್ದಾಗಲಿ ಇಲ್ಲ.[1] ಆದರಿಂದ 'ಅಸಂಗನು, ಏಕೆಂದರೆ (ಮತ್ತೊಂದಕ್ಕೆ) ಅಂಟಿಕೊಳ್ಳುವದಿಲ್ಲ' (ಬೃ. ೩-೯-೧೬), 'ಈ ಪುರುಷನು ಅಸಂಗನಲ್ಲವೆ ?' (ಬೃ. ೪-೩-೧೬) ಮುಂತಾದ ಶ್ರುತಿಯಿಂದ ತಿಳಿಸಿಕೊಟ್ಟಿರುವ ಅಸಂಗತ್ವವು ಸ್ಪಷ್ಟವಾಗಿ ವರ್ಣಿತ(ವಾದಂತೆ) ಆಗಿಲ್ಲ. ಆದ್ದರಿಂದ ಅದಕ್ಕಾಗಿ ಘಟಾಕಾಶದ ಉದಾಹರಣೆ(ಯನ್ನು ಕೊಡುತ್ತಾರೆ). ಅಲ್ಲಿ ಆ (ಘಟದ) ಪರಾಮರ್ಶವಿಲ್ಲದೆ ಭೇದ, ರೂಪ, ಕಾರ್ಯ, ನಾಮ- ಎಂಬಿವು (ಆಕಾಶದಲ್ಲಿ) ಸ್ವಗತವಾಗಿ ಕಂಡುಬರುವದಿಲ್ಲ.[2]

ಈ ಉದಾಹರಣೆಗಳ ಸಮೂಹವೆಲ್ಲ ಶ್ರುತಿಗಳು, ಅವುಗಳಲ್ಲಿರುವ ನ್ಯಾಯ, ಅನುಭವ- ಇವುಗಳಿಂದ ಸಿದ್ಧವಾಗಿರುವದಕ್ಕೆ ಅದು ಅಸಂಭಾವಿತವೆಂಬುದನ್ನು ಪರಿಹರಿಸುವದಕ್ಕೂ[3] ಮತ್ತು ಬುದ್ಧಿಸಾಮ್ಯಕ್ಕೂ[4] (ಹೇಳಿದ್ದು) ; ವಸ್ತುವೇ ನೇರಾಗಿ ಸಿದ್ಧವಾಗುವದಕ್ಕಲ್ಲ.

## ಪ್ರಮಾತೃಪ್ರಮಾಣಪ್ರಮೇಯಫಲವ್ಯವಹಾರ

### (ಪಂಚಪಾದಿಕಾ)

೪೨. ತದೇವಂ ಯದ್ಯಪಿ ಚೈತನ್ಯೈಕರಸಃ, ಅನಿದಮಾತ್ಮಕತ್ವಾತ್ ಅವಿಷಯಃ ; ತಥಾಪಿ ಅಹಙ್ಕಾರೇ ವ್ಯವಹಾರಯೋಗ್ಯೋ ಭವತೀತಿ ಗೌಣ್ಯಾ ವೃತ್ತ್ಯಾ ಅಸ್ಮತ್ಪ್ರತ್ಯಯವಿಷಯತಾ ಉಚ್ಯತೇ । ಪ್ರಮೇಯಸ್ಯ ಚ ವ್ಯವಹಾರ ಯೋಗ್ಯತ್ವಾವ್ಯಭಿಚಾರಾತ್ । ನನು ವ್ಯವಹಾರಯೋಗ್ಯತ್ವೇ ಅಧ್ಯಾಸಃ ಅಧ್ಯಾಸ ಪರಿನಿಷ್ಪನ್ನಾಹಂಪ್ರತ್ಯಯಬಲಾದ್ ವ್ಯವಹಾರಯೋಗ್ಯತ್ವಮ್ ಇತಿ ಪ್ರಾಪ್ತಮ್ ಇತರೇತರಾಶ್ರಯತ್ವಮ್ । ನ । ಅನಾದಿತ್ವೇನ ಪ್ರತ್ಯುಕ್ತತ್ವಾತ್ ॥

ತತ್ರ ಏವಂಭೂತಸ್ಯ ಅಹಙ್ಕರ್ತುಃ ಇದಮಂಶಸ್ಯ ಜ್ಞಾನಸಂಶಬ್ದಿತೋ ವ್ಯಾಪಾರವಿಶೇಷಃ ಸಕರ್ಮಕತ್ವಾತ್ ಕರ್ಮಕಾರಕಾಭಿಮುಖಂ ಸ್ವಾಶ್ರಯೇ ಕಿಞ್ಚಿತ್ ಅವಸ್ಥಾವಿಶೇಷಮ್ ಆದಧಾತಿ । ಸ್ವಾಶ್ರಯವಿಕಾರಹೇತುತ್ವಾತ್ ಕ್ರಿಯಾಯಾಃ । ಸ ಚ ಪ್ರಾಪ್ನೋತಿಕ್ರಿಯಾಽಽಹಿತಕರ್ತೃಸ್ಥವಿಶೇಷವತ್ಕರ್ಮ

---

1. ಹಗ್ಗದಲ್ಲಿ ಹಾವು ಬೆರಕೆಯಾಗಿರುವಂತೆ, ಅಥವಾ ಆಗದಿರುವಂತೆ ಕಾಣಿಸುವದಿಲ್ಲ; ಹಗ್ಗವು ಮರೆಯಾಗಿ ಹಾವೆಂದೇ ತೋರುತ್ತಿರುತ್ತದೆ.

2. ಗಡಿಗೆಯ ಭೇದ, ರೂಪ, ಕಾರ್ಯ, ನಾಮ- ಇವುಗಳಿಂದಲೇ ಘಟಾಕಾಶಕ್ಕೆ ಭೇದಾದಿಗಳು, ಆಕಾಶದಲ್ಲಿಯೇ ಅವಿಲ್ಲ. ಗೌ. ಕಾ. ೩-೬ ನೋಡಿ.

3. ಲೋಕಾನುಭವದಿಂದ ಸಿದ್ಧವಾದಮೇಲೂ ಸಂಭಾವನೆ ಬೇಕೆಂದು ಅಭಿಪ್ರಾಯ ವಿರಲೂಬಹುದು ; ಇದು ಮುಂದೆ ಸ್ಪಷ್ಟವಾಗುವದು.

4. ಈ ಮಾತಿನ ನಿಜವಾದ ಅರ್ಥವೇನೆಂಬುದು ತಿಳಿಯಲಿಲ್ಲ ; 'ದೃಷ್ಟಾಂತದಿಂದ ವಿಷಯವು ಬುದ್ಧಿಗೆ ಹೊಳೆಯಲೆಂದು' ಎಂದಿರಬಹುದು.

ಸಂಬನ್ಧೋ ಜ್ಞಾತೃಜ್ಞೇಯಸಂಬನ್ಧಃ ಇತಿ ಗೀಯತೇ । ತೇನ ವಿಷಯವಿಶೇಷಸಂಬದ್ಧಮೇವ ಅನ್ತಃಕರಣಂ ಚೈತನ್ಯಸ್ಯ ಅವಚ್ಛೇದಕಮ್ । ಕರ್ಮಕಾರಕಮಪಿ ಪ್ರಧಾನಕ್ರಿಯಾಸಿದ್ಧ್ಯಾ ಸ್ವವ್ಯಾಪಾರಾವಿಷ್ಟಂ ಚೈತನ್ಯವಿವರ್ತತ್ವಾತ್ ಪ್ರಧಾನಕ್ರಿಯಾಽಽಹಿತಪ್ರಮಾತ್ರವಸ್ಥಾವಿಶೇಷಾವಚ್ಛಿನ್ನಾಪರೋಕ್ಷತ್ವೈಕರೂಪಾಮ್ ಅಪರೋಕ್ಷತಾಮ್ ಅಭಿವ್ಯನಕ್ತಿ । ತತಶ್ಚ ಆತ್ಮನಃ ಅನ್ತಃಕರಣಾವಸ್ಥಾವಿಶೇಷೋಪಾಧಿಜನಿತೋ ವಿಶೇಷಃ ವಿಷಯಾನುಭವಸಂಶಬ್ದಿತಃ ವಿಷಯಸ್ಥಾಪರೋಕ್ಷ್ಯೈಕರಸಃ ಫಲಮಿತಿ ಕ್ರಿಯೈಕವಿಷಯತಾ ಫಲಸ್ಯ ಯುಜ್ಯತೇ । ಏವಂ ಚ ಅಹಙ್ಕರ್ತಾ ಸ್ವಾಂಶಚೈತನ್ಯಬಲೇನ ವ್ಯಾಪಾರಾವಿಷ್ಟತಯಾ ಚ 'ಪ್ರಮಾತಾ' ಇತಿ, 'ಬುದ್ಧಿಸ್ಥಮರ್ಥಂ ಪುರುಷಶ್ಚೇತಯತೇ' ಇತಿ ಉಚ್ಯತೇ । ತತ್ರ ಚ ಪ್ರಮಾತುಃ ಸ್ವಯಂಜ್ಯೋತಿಷಃ, ವಿಷಯಸಂಬನ್ಧಸಂಜಾತವಿಶೇಷೋಽನುಭವಃ, ಅಪರೋಕ್ಷತಯಾ ಸರ್ವಾನ್ ಪ್ರತಿ ಅವಿಶಿಷ್ಟೋಽಪಿ ಕಾರಕಾಣಾಂ ಸಂಭೂಯ ಪ್ರಧಾನಕ್ರಿಯಾಸಾಧನತ್ವಾತ್, ಯೇನ ಸಹ ಸಾಧನಮ್, ತನ್ನಿಷ್ಠ ಏವ ನಾನ್ಯತ್ರ ; ಕರ್ಮಕಾರಕಮಪಿ ಯೇನ ಸಹ ಸಾಧನಂ ತಸ್ಯೈವ ಅಪರೋಕ್ಷಮ್ ಗನ್ತೃಸಂಬನ್ಧ ಇವ ಗ್ರಾಮಸ್ಯ ।

(ಅರ್ಥ)

ಅಂತೂ ಹೀಗೆ ಚೈತನ್ಯೈಕರಸವಾಗಿ ಅನಿದಮಾತ್ಮಕವಾಗಿರುವದರಿಂದ ವಿಷಯನಲ್ಲದಿದ್ದರೂ ಅಹಂಕಾರದಲ್ಲಿ ವ್ಯವಹಾರಯೋಗ್ಯನಾಗಿರುತ್ತಾನಾಗಿ ಗೌಣವೃತ್ತಿಯಿಂದ (ಅವನಿಗೆ) ಅಸ್ಮತ್ಪ್ರತ್ಯಯವಿಷಯತ್ವವನ್ನು ಹೇಳಿದೆ[1] ; ಏಕೆಂದರೆ ಪ್ರಮೇಯವು ವ್ಯವಹಾರಕ್ಕೆ ಯೋಗ್ಯವಾಗಿರುವದು ತಪ್ಪುವದಿಲ್ಲ.

(ಆಕ್ಷೇಪ) :— ವ್ಯವಹಾರಯೋಗ್ಯನಾದರೆ ಅಧ್ಯಾಸ, ಅಧ್ಯಾಸದಿಂದುಂಟಾದ ಅಹಂಪ್ರತ್ಯಯದ ಬಲದಿಂದ ವ್ಯವಹಾರಯೋಗ್ಯತ್ವ— ಎಂದು ಅನ್ಯೋನ್ಯಾಶ್ರಯತ್ವವು ಬಂದೊದಗುವದಲ್ಲ ?

(ಪರಿಹಾರ) :— ಹಾಗಲ್ಲ. ಏಕೆಂದರೆ ಅನಾದಿಯಾಗಿರುವದರಿಂದ (ಎಂದು ಇದಕ್ಕೆ) ಉತ್ತರವನ್ನು ಹೇಳಿದ್ದಾಗಿದೆ.[2]

---

1. ಭಾಷ್ಯದಲ್ಲಿರುವ 'ಅಸ್ಮತ್ಪ್ರತ್ಯಯವಿಷಯತ್ವಾತ್' ಎಂಬ ವಾಕ್ಯದಲ್ಲಿ ಅಸ್ಮತ್ (ನಾನು), ಪ್ರತ್ಯಯ (ತಿಳಿಯುವ ಸಾಧನ) ಎಂಬ ಮಾತುಗಳನ್ನು ವಿವರಿಸಿದ್ದಾಯಿತು ; ಈಗ 'ವಿಷಯ' ಎಂಬ ಮಾತನ್ನು ವಿವರಿಸುತ್ತಾರೆ. ಅಹಂಕಾರದಲ್ಲಿ ವ್ಯವಹಾರಕ್ಕೆ ಯೋಗ್ಯನಾಗುವದರಿಂದ 'ಅಸ್ಮತ್ಪ್ರತ್ಯಯವಿಷಯ', ನಿಜವಾಗಿ ನಾನು ಎಂಬ ಪ್ರತ್ಯಯಕ್ಕೆ ವಿಷಯನಲ್ಲ—ಎಂದರ್ಥ. ಹೀಗೆ ಗೌಣವೃತ್ತಿಯಿಂದ ವಿಷಯವೆಂದರೆ ಪೂರ್ವಪಕ್ಷಕ್ಕೆ ಉತ್ತರವು ಬಂದಂತೆ ಆಗುವದಿಲ್ಲ ; ಏಕೆಂದರೆ ಒಂದು ವಿಷಯದಲ್ಲಿ ಮತ್ತೊಂದು ವಿಷಯವನ್ನು ಅಧ್ಯಾಸಮಾಡುತ್ತಾರೆ— ಎಂಬ ನಿಯಮಕ್ಕೆ ಉತ್ತರವಾಗಿ ಪ್ರಕೃತಭಾಷ್ಯವು ಬಂದಿದೆ— ಎಂಬುದನ್ನು ಇಲ್ಲಿ ನೆನಪಿಡಬೇಕು.

2. ಅಹಂಕಾರದಲ್ಲಿ ವ್ಯವಹಾರಕ್ಕೆ ಯೋಗ್ಯತೆ ಬರುವದಕ್ಕೇ ಮೊದಲು ಅಧ್ಯಾಸವಾಗಿರಬೇಕಲ್ಲ!— ಎಂಬ ಆಕ್ಷೇಪಕ್ಕೆ ಯೋಗ್ಯತೆಯೂ ಅಧ್ಯಾಸವೂ ಬೀಜಾಂಕುರದಂತೆ ಅನಾದಿ ಎಂದು ಉತ್ತರ ಹೇಳಿದೆ. ಇಲ್ಲಿ ಬೀಜಾಂಕುರಗಳಂತೆ ಕಾಲವು ಇವೆರಡಕ್ಕೂ ಆಧಾರವಾಗಿಲ್ಲವಲ್ಲ !— ಎಂಬ ಆಕ್ಷೇಪವನ್ನು ಎದುರಿಸಿಲ್ಲ.

ಇಲ್ಲಿ (ಹೀಗಿರುವಲ್ಲಿ)[1] ಹಾಗಿರುವ[2] ಅಹಂಕರ್ತನ ಇದಮಂಶವಾದ ಜ್ಞಾನವೆಂಬ ಹೆಸರಿನ ವ್ಯಾಪಾರವಿಶೇಷವು[3] ಸಕರ್ಮಕವಾಗಿರುವದರಿಂದ ಕರ್ಮ ಕಾರಕದಕಡೆಗೆ ತಿರುಗಿ ತನ್ನ ಆಶ್ರಯದಲ್ಲಿ ಯಾವದೋ ಒಂದು ಅವಸ್ಥಾವಿಶೇಷ ವನ್ನುಂಟುಮಾಡುತ್ತದೆ ; ಏಕೆಂದರೆ ಕ್ರಿಯೆಯು ತನ್ನ ಆಶ್ರಯದಲ್ಲಿ ಆಗಲಿರುವ ವಿಕಾರಕ್ಕೆ ಹೇತುವಾಗಿರುತ್ತದೆ. ಆ ವ್ಯಾಪಾರವಿಶೇಷವು ಪ್ರಾಪ್ತಿಕ್ರಿಯೆಯಿಂದಾದ ಕರ್ತೃಸ್ಥವಾದ ವಿಶೇಷವುಳ್ಳ ಕರ್ಮಸಂಬದ್ಧವಾಗಿ ಜ್ಞಾತೃವಿಗೆ (ಆಗುವ) ಜ್ಞೇಯ ಸಂಬಂಧ ಎನಿಸುತ್ತದೆ.[4] ಆದ್ದರಿಂದ ಗೊತ್ತಾದ ವಿಷಯಕ್ಕೆ ಸಂಬಂಧಿಸಿರುವ ಅಂತಃಕರಣವೇ ಚೈತನ್ಯಕ್ಕೆ ಅವಚ್ಛೇದಕವು.[5] ಕರ್ಮಕಾರಕವೂ ಮುಖ್ಯವಾದ ಕ್ರಿಯೆಯು ಸಿದ್ಧಿಯಾಗುವದಕ್ಕಾಗಿ ತನ್ನ ವ್ಯಾಪಾರದಿಂದ ಕೂಡಿಕೊಂಡು (ತಾನು) ಚೈತನ್ಯವಿವರ್ತವಾಗಿರುವದರಿಂದ[6] ಪ್ರಧಾನಕ್ರಿಯೆಯಿಂದಾದ ಪ್ರಮಾತೃವಿನ (ಆಯಾ) ಅವಸ್ಥೆಯಿಂದ ಅವಚ್ಛಿನ್ನವಾದ ಅಪರೋಕ್ಷತೆಯ ರೂಪವನ್ನೇ ಉಳ್ಳ ಅಪರೋಕ್ಷತೆಯನ್ನು ಹೊರಪಡಿಸುತ್ತದೆ.[7] ಆದರಿಂದ ಆತ್ಮನಿಗೆ ಅಂತಃಕರಣದ ಅವಸ್ಥಾವಿಶೇಷವೆಂಬ ಉಪಾಧಿಯಿಂದುಂಟಾದ ವಿಶೇಷವು ವಿಷಯಾನುಭವವೆಂಬ ಹೆಸರುಳ್ಳದ್ದಾಗಿ ವಿಷಯದ ಅಪರೋಕ್ಷ್ಯ ವೆಂಬೊಂದೇ ಫಲವಾಗುವದರಿಂದ ಫಲವು (ಆ) ಕ್ರಿಯೆಯ ವಿಷಯವೇ ಆಗಿರುವ ದೆಂಬುದು ಯುಕ್ತವಾಗುತ್ತದೆ.[8] ಅಂತೂ ಹೀಗೆ ಅಹಂಕರ್ತೃವು ತನ್ನ ಅಂಶ

---

1. ಅಸ್ಮತ್ಪ್ರತ್ಯಯವಿಷಯತ್ವವು ಸಿದ್ಧವಾಗಿರುವಲ್ಲಿ ಎಂದರ್ಥ.

2. ಅಹಂಕಾರಾಧ್ಯಾಸವುಳ್ಳ ಚೈತನ್ಯೈಕರಸನಾದ.

3. ಒಂದಾನೊಂದು ಕ್ರಿಯೆಯು.

4. ಕರ್ತೃವು ಜ್ಞಾನಕ್ರಿಯೆಯಿಂದ ಕರ್ಮವನ್ನು ವ್ಯಾಪಿಸುವದರಿಂದ ಜ್ಞಾತೃವಿಗೆ ಜ್ಞೇಯಸಂಬಂಧವಾಗುತ್ತದೆ.

5. ಘಟವನ್ನು ನೋಡುವಾಗ ಘಟಜ್ಞಾನವೇ ಚೈತನ್ಯಕ್ಕೆ ಅವಚ್ಛೇದಕವು ; ಎಂದರೆ ಅವನು ಘಟಜ್ಞಾತೃವೇ ಆಗಿರುತ್ತಾನೆ, ಪಟಾದಿಜ್ಞಾತೃವಾಗಿರುವದಿಲ್ಲ.

6. ಈ ಮಾತನ್ನು ಯಾವದಕ್ಕೆ ಅನ್ವಯಿಸಬೇಕೆಂಬುದು ಸ್ಪಷ್ಟವಾಗಿಲ್ಲ.

7. ಘಟವನ್ನು ನೋಡಿದಾಗ ಘಟಜ್ಞಾತೃತ್ವವೆಂಬ ಅವಸ್ಥೆಯಿಂದ ಕೂಡಿದ ಘಟದ ಅರಿವೆಂಬ ಅಪರೋಕ್ಷತೆಯ ರೂಪವುಳ್ಳ ಅಪರೋಕ್ಷತ್ವವನ್ನು ಪ್ರಕಟಿಸುತ್ತದೆ ; ಎಂದರೆ ಘಟವನ್ನು ನೋಡಿದವನ ಜ್ಞಾನಕ್ಕೆ ಆ ಘಟವು ಅಪರೋಕ್ಷವಾಯಿತೆನ್ನಿಸುತ್ತದೆ. ಅವನು ಪಟವನ್ನು ನೋಡುವಾಗ ಪಟಜ್ಞಾತೃತ್ವವೆಂಬ ಅವಸ್ಥೆಯಿರುವದರಿಂದ ಘಟವು ಅವನಿಗೆ ಪ್ರತ್ಯಕ್ಷವೆನಿಸುವದಿಲ್ಲ.

8. ದೇವದತ್ತನೆಂಬವನು ಘಟವನ್ನು ಅರಿಯುವಾಗ ಘಟಜ್ಞಾತೃತ್ವವೆಂಬ ಅವಸ್ಥಾ ವಿಶೇಷದಿಂದ ಆ ಅರಿವು ಎಂದರೆ ಘಟಾನುಭವವು ಉಂಟಾಗುವದರಿಂದ ಘಟಾದಿಜ್ಞಾನ ಕ್ರಿಯೆಯ ಫಲವೆನಿಸುತ್ತದೆ ; ಮತ್ತೊಂದು ಕ್ರಿಯೆಯ ಫಲವೆನಿಸುವದಿಲ್ಲ.

ವಾದ ಚೈತನ್ಯದ ಬಲದಿಂದ ವ್ಯಾಪಾರಾವಿಷ್ಟನಾಗುವದರಿಂದ ಪ್ರಮಾತೃವಾಗುವನಾಗಿ 'ಪುರುಷನು ಬುದ್ಧಿಯಲ್ಲಿರುವ ಅರ್ಥವನ್ನು ಅರಿಯುತ್ತಾನೆ' ಎನ್ನುತ್ತಾರೆ.[1] ಅಲ್ಲಿ ಸ್ವಯಂಜ್ಯೋತಿಯಾದ ಪ್ರಮಾತೃವಿಗೆ ವಿಷಯಸಂಬಂಧದಿಂದ ಉಂಟಾದ ಅನುಭವವೆಂಬ ವಿಶೇಷವು ಅಪರೋಕ್ಷವಾಗಿರುವದರಿಂದ ಎಲ್ಲರಿಗೂ ಸಮಾನವಾಗಿದ್ದರೂ[2] ಕಾರಕಗಳು ಒಟ್ಟಾಗಿ ಮುಖ್ಯಕ್ರಿಯೆಯನ್ನುಂಟುಮಾಡುವದರಿಂದ[3] ಯಾವನೊಡಗೂಡಿ ಸಾಧನವಾಗುವದೋ[4] ಅವನವನಿಗೇ ಸೇರುತ್ತದೆಯೇ[5] ಹೊರತು, ಮತ್ತೊಬ್ಬನಿಗಲ್ಲ; ಕರ್ಮಕಾರಕವೂ ಯಾವನೊಡಗೂಡಿ ಸಾಧನವಾಗಿರುವದೋ ಅವನಿಗೇ ಅಪರೋಕ್ಷವಾಗಿರುತ್ತದೆ. (ಮತ್ತೊಬ್ಬನಿಗಲ್ಲ;)[6] ಹೋಗುವವನಿಗೇ ಗ್ರಾಮವು ಹೇಗೆ ಸಂಬಂಧಪಡುವದೋ ಹಾಗೆ (ಇದು).[7]

## ಸಿದ್ಧಾಂತಕ್ಕೂ ವಿಜ್ಞಾನವಾದಕ್ಕೂ ತಾರತಮ್ಯ

(ಪಂಚಪಾದಿಕಾ)

೪೩. ನನು ನೀಲಾದಿವಿಷಯೋಽಪಿ ಚೇತ್ ಅಪರೋಕ್ಷಸ್ವಭಾವಃ ನೀಲಾತ್ಮಿಕಾ ಸಂವಿತ್ ಇತ್ಯುಕ್ತಂ ಸ್ಯಾತ್। ಅತಃ ಸ ಏವ ಮಾಹಾಯಾನಿಕಪಕ್ಷಃ ಸಮರ್ಥಿತಃ । ನೈವಮ್ । ಪರಸ್ಪರವ್ಯಾವೃತ್ತೌ ನೀಲಪೀತೌ ಅವಭಾಸೇತೇ, ಅಪರೋಕ್ಷತಾ ತು ನ ತಥಾ । ಏಕರೂಪಾವಗಮಾತ್, ವಿಚ್ಛೇದಾವಭಾಸೇಽಪಿ

---

1. ಪುರುಷನು ಬರಿಯ ಚೈತನ್ಯರೂಪದಿಂದ ಜ್ಞಾತೃವಾಗುವದಿಲ್ಲ. 'ನಾನು' ಎಂಬುದರಲ್ಲಿರುವ ಅಂತಃಕರಣಭಾಗವು ತನ್ನೊಳಗೆ ಅಡಕವಾಗಿರುವ ಚೈತನ್ಯಬಲದಿಂದ ಜ್ಞಾತೃ ಎನಿಸಿಕೊಂಡಿರುತ್ತದೆ; ಹೀಗೆ ಅಧ್ಯಸ್ತಾಹಂಕಾರವುಳ್ಳ ಚೈತನ್ಯವು, ಅಂತಃಕರಣದಲ್ಲಾಗುವ ವೃತ್ತಿವಿಶೇಷದಿಂದ ಘಟಕ್ಕೆ ಸಂಬಂಧಪಡುವದರಿಂದಲೂ, ಆ ಅಂತಃಕರಣವೃತ್ತಿಯಿಂದೊಡಗೂಡಿಯೇ ಘಟಾನುಭವವಾಗುವದರಿಂದಲೂ 'ದೇವದತ್ತನು ಘಟವನ್ನು ಅರಿಯುತ್ತಾನೆ' ಎಂಬ ವ್ಯವಹಾರವಾಗುತ್ತದೆ ಎಂದರ್ಥ.

2. ಅನುಭವವು ಚೈತನ್ಯರೂಪದಿಂದ ಯಾರಿಗೂ ಸೇರಿದ್ದಲ್ಲವಾದರೂ.

3. ಕ್ರಿಯೆಯುಂಟಾಗಬೇಕಾದರೆ ಕರ್ತೃ, ಕರ್ಮ, ಕರಣ– ಮುಂತಾದ ಎಲ್ಲಾ ಕಾರಕಗಳೂ ಒಟ್ಟುಗೂಡಿ ವ್ಯಾಪಾರಮಾಡಬೇಕು.

4. ಯಾವ ಕರ್ತೃವಿನಿಂದ ಕೂಡಿದ ಕಾರಕಗಳು ಕ್ರಿಯೆಯನ್ನುಂಟುಮಾಡುವವೋ.

5. ಅವನಿಗೇ ಆಯಾ ಅನುಭವವಾಯಿತೆನಿಸುತ್ತದೆಯೇ ಹೊರತು.

6. ಯಾವ ಕರ್ತೃವಿನ ಜ್ಞಾನಾದಿಕಾರಕಗಳಿಂದ ಘಟವು ತೋರುವದೋ ಅವನಿಗೇ ಅಪರೋಕ್ಷವೆನಿಸುತ್ತದೆ.

7. ಊರನ್ನು ಯಾರು ಬೇಕಾದರೂ ಮುಟ್ಟಬಹುದಾದರೂ ಅಲ್ಲಿಗೆ ಹೋದವನು ಮಾತ್ರ ಮುಟ್ಟುವಂತೆ, ಕರ್ಮಕಾರಕವು ಜ್ಞಾನವ್ಯಾಪಾರವನ್ನು ಮಾಡಿದವನಿಗೆ ಅಪರೋಕ್ಷವಾಗುತ್ತದೆ ಎಂದರ್ಥ. ಚೈತನ್ಯವು ಒಂದೇ ಆದರೂ ಅದರಲ್ಲಿ ಪ್ರಮಾತೃ, ಪ್ರಮಾಣ– ಮುಂತಾದ ವಿಭಾಗಗಳು ಆಗುವದು ಹೇಗೆಂಬುದನ್ನು ಇಲ್ಲಿ ಪಂ. ವಿ.ದಲ್ಲಿ ವಿವರಿಸಿದೆ.

ಅತೋ ನ ತತ್ಸ್ವಭಾವಾ । ಯದಿ ಸ್ಯಾತ್ ತದ್ವದೇವ ವ್ಯಾವೃತ್ತಸ್ವಭಾವತಾಪಿ ಅವಭಾಸೇತ ನ ಚ ತಥಾ ॥

(ಅರ್ಥ)

ನೀಲಾದಿವಿಷಯವೂ ಅಪರೋಕ್ಷಸ್ವಭಾವವೆಂದಾದರೆ ಸಂವಿತ್ತು ನೀಲರೂಪವಾಗಿರುತ್ತದೆ ಎಂದಂತಾಯಿತು. ಆದ್ದರಿಂದ ಆದೇ ಮಹಾಯಾನಿಕರ ಪಕ್ಷವನ್ನೇ (ನೀವೂ) ಸಮರ್ಥನೆಮಾಡಿದಂತೆ ಆಯಿತಲ್ಲ ![1]

(ಪರಿಹಾರ) ;- ಹಾಗಲ್ಲ. ನೀಲಪೀತಗಳು ಒಂದಕ್ಕಿಂದ ಒಂದು ಭಿನ್ನವಾಗಿ ತೋರುತ್ತವೆ ; ಆದರೆ ಅಪರೋಕ್ಷತೆಯು ವಿಚ್ಛಿನ್ನವಾಗಿ ತೋರಿದರೂ ಹಾಗಿಲ್ಲ ; ಏಕೆಂದರೆ ಒಂದೇ ರೂಪವಾಗಿ ನಿಶ್ಚಿತವಾಗುತ್ತದೆ.[2] ಆದ್ದರಿಂದ (ಅದು) ಆ (ವಿಷಯಗಳ) ಸ್ವಭಾವದ್ದಲ್ಲ. ಹಾಗೆ (ಅವುಗಳ ಸ್ವಭಾವದ್ದೇ) ಆಗಿದ್ದರೆ (ಅವುಗಳಂತೆ) ಬೇರೆಬೇರೆಯ ಸ್ವಭಾವದ್ದಾಗಿಯೂ ತೋರಬೇಕಾದೀತು : ಹಾಗಿಲ್ಲ.

## ವಿಜ್ಞಾನವಾದಿಗಳೂ ಗ್ರಾಹ್ಯಗ್ರಾಹಕಭೇದವನ್ನು ಒಪ್ಪಬೇಕು

(ಪಂಚಪಾದಿಕಾ)

೪೪. ಕಿಞ್ಚ, ತ್ವಯಾಪಿ ನೀಲಾತ್ಮಕಸಂವಿದೋಽನ್ಯ ಏವ ಪರಾಗ್ವ್ಯಾವೃತ್ತೋಽಪರೋಕ್ಷಃ ಪ್ರತ್ಯಗವಭಾಸಃ ಸ್ವರೂಪಮಾತ್ರೇ ಪರ್ಯವಸಿತೋ ವಿಕಲ್ಪಃ ಉಪೇಯತೇ । ಪ್ರತೀಯತೇ ಚ ನೀಲಸಂವಿತ್ ಪ್ರತ್ಯಗ್ವ್ಯಾವೃತ್ತೇದಂತಯಾ ಗ್ರಾಹ್ಯರೂಪಾ । ತತಶ್ಚ ವಸ್ತುದ್ವಯಂ ಗ್ರಾಹ್ಯಗ್ರಾಹಕರೂಪಮ್ ಇತರೇತರವ್ಯಾವೃತ್ತಂ ಸಿದ್ಧಮ್ ॥

ನೈತತ್ । ದ್ವಯೋರಪಿ ಸ್ವರೂಪಮಾತ್ರನಿಷ್ಠಯೋಃ ಕುತೋ ವಿಷಯವಿಷಯಿಭಾವಃ ? ಕಥಂ 'ಪುನರಿದಮಹಂ ಜಾನಾಮಿ' ಇತಿ ತಯೋರ್ಗ್ರಾಹ್ಯಗ್ರಾಹಕತಾವಭಾಸಃ ? ನಾಯಂ ತದವಭಾಸಃ । ಕಿಂ ತು 'ಅಹಮ್' ಇತಿ 'ಇದಮ್' ಇತಿ, 'ಜಾನಾಮಿ' ಇತಿ ಚ ಪರಸ್ಪರವ್ಯಾವೃತ್ತಾ ವಿಕಲ್ಪಾ ಏತೇ । ಕಥಂ ಪುನಸ್ತೇಷು ಕಟಾಕ್ಷೇಣಾಪಿ ಅನ್ಯೋನ್ಯಮ್ ಅನೀಕ್ಷಮಾಣೇಷು ಅಯಂ ಸಂಬನ್ಧಾವಗಮಃ ? ತದ್ವಾಸನಾಸಮೇತಸಮನನ್ತರಪ್ರತ್ಯಯಸಮುತ್ಥಂ ಸಙ್ಕಲನಾತ್ಮಕಂ ಪ್ರತ್ಯಯಾನ್ತರಮೇತತ್, ನೇಹ ಸಂಬನ್ಧಾವಗಮಃ । ಕಿಂ ಪುನರೇವಮ್

---

1. ವಿಷಯವೂ ಅಪರೋಕ್ಷ, ಜ್ಞಾನವೂ ಅಪರೋಕ್ಷ- ಎಂದರೆ ಜ್ಞಾನವೇ ವಿಷಯ ಎನ್ನುವ ವಿಜ್ಞಾನವಾದವನ್ನೇ ನೀವೂ ಒಪ್ಪಿದಂತೆ ಆಯಿತಲ್ಲ !

2. ಇದು ಕಪ್ಪು, ಇದು ಹಳದಿ- ಎಂದು ವಿಷಯಗಳು ಬೇರೆಬೇರೆ ತೋರುತ್ತವೆ ; ಆದರೆ ಕಪ್ಪಿನ ಜ್ಞಾನ, ಹಳದಿಯ ಜ್ಞಾನ- ಎಂದು ಬೇರೆಬೇರೆ ತೋರಿದರೂ ಎರಡು ವಿಷಯಗಳಲ್ಲಿ ತೋರುವದರಿಂದ ಎರಡು ಜ್ಞಾನಗಳಲ್ಲಿ ವಿಶೇಷರೂಪಗಳೇನೂ ತೋರುತ್ತಿರುವದಿಲ್ಲ.

ಅನುಭವಾನಾರೂಢಾಮೇವ ಪ್ರಕ್ರಿಯಾಂ ವಿರಚಯತಿ ಭವಾನ್ ? ಕ್ಷಣವಿಧ್ವಂಸಿನಃ ಕ್ರಿಯಾನುಪಪತ್ತೇಃ । ಸ್ಥಾಯಿತ್ವೇ ಹಿ ಸತಿ ಅಹಮುಲ್ಲೇಖ್ಯಸ್ಯ ಸ್ಥಾಯಿನೈವ ನೀಲಾದಿನಾ ಕ್ರಿಯಾನಿಮಿತ್ತಃ ಸಂಬನ್ಧಃ, ತತಶ್ಚ ಕ್ರಿಯಾನಿಮಿತ್ತೈವ ನೀಲಾದೇರಪಿ ಅಪರೋಕ್ಷತಾ ಸ್ಯಾತ್ ; ನ ಚ ಸ್ಥಾಯಿತ್ವಮಸ್ತಿ । ಯದ್ಯೇವಮ್ ಅಹಮ್ ಇತಿ ಸಂವಿದಃ ಪ್ರತಿಕ್ಷಣಂ ಸ್ವಲಕ್ಷಣಭೇದೇನ ಭಾವ್ಯಮ್ । ಸ ಕಿಂ ವಿದ್ಯತೇ ನ ವಾ ಇತಿ ಸ್ವಸಂವಿದಮ್ ಅಗೂಹಮಾನೈರೇವ ಅಭಿಧೀಯತಾಮ್ । ಅಥ ಅತ್ಯನ್ತಸಾದೃಶ್ಯಾತ್, ನ ಭೇದೋಽವಭಾಸತ ಇತಿ ; ಸಂವಿದೋಽಪಿ ಚೇತ್ ಸ್ವರೂಪಮ್ ನಾವಭಾಸತೇ, ಆಯಾತಮ್ ಆನ್ಧ್ಯಮ್ ಅಶೇಷಸ್ಯ ಜಗತಃ । ಅಪಿ ಚ ತದ್ರೂಪಪ್ರತಿಭಾಸೇ ಸಾದೃಶ್ಯಕಲ್ಪನಾ ಪ್ರಮಾಣವಿರುದ್ಧಾ ನಿಷ್ಪ್ರಮಾಣಿಕೀ ಚ । ತದ್ರೂಪಪ್ರತೀತೇರ್ವ್ಯಾಮೋಹತ್ವಾತ್, ನ ಪ್ರಮಾಣವಿರುದ್ಧತಾ; ನಾಪ್ಯಪ್ರಾಮಾಣಿಕತಾ । ನಿರ್ಬೀಜಭ್ರಾನ್ತ್ಯಯೋಗಾತ್ ಇತಿ ಚೇತ್ । ನ । ಇತರೇತರಾಶ್ರಯತ್ವಾತ್ । ಸಿದ್ಧೇ ವ್ಯಾಮೋಹೇ ಸಾದೃಶ್ಯಸಿದ್ಧಿಃ, ಪ್ರಮಾಣವಿರೋಧಾಭಾವಾತ್ ಪ್ರಮಾಣಸದ್ಭಾವಾಚ್ಚ । ಸಿದ್ಧೇ ಚ ಸಾದೃಶ್ಯೇ ತನ್ನಿಮಿತ್ತಾ ವ್ಯಾಮೋಹಸಿದ್ಧಿಃ । ಸ್ಯಾದೇತತ್– ಅವ್ಯಾಮೋಹೇಽಪಿ ತುಲ್ಯಮೇತತ್ । ಸಿದ್ಧೇ ಹಿ ಸಾದೃಶ್ಯಕಲ್ಪನಾಯಾ ಅಪ್ರಾಮಾಣಿಕತ್ವೇ ಪ್ರಮಾಣವಿರೋಧೇ ಚ ತದ್ರೂಪಪ್ರತೀತೇರವ್ಯಾಮೋಹತ್ವಮ್, ಅವ್ಯಾಮೋಹತ್ವೇ ಚ ಅಸ್ಯಾಃ ಸಾದೃಶ್ಯಕಲ್ಪನಾಯಾಃ ನಿಷ್ಪ್ರಮಾಣಕತ್ವಂ ಪ್ರಮಾಣವಿರೋಧಶ್ಚ । ನೈತತ್ । ಸ್ವಾರಸಿಕಂ ಹಿ ಪ್ರಾಮಾಣ್ಯಂ ಪ್ರತೀತೇರನಪೇಕ್ಷಮ್ । ತಥಾ ಚ ತತ್ಪ್ರಾಮಾಣ್ಯಾತ್ ಸಾದೃಶ್ಯಕಲ್ಪನಾ ನಿಷ್ಪ್ರಮಾಣಿಕೀ ಪ್ರಮಾಣವಿರುದ್ಧಾ ಚ । ನ ತು ಸಾದೃಶ್ಯಕಲ್ಪನಾ ಸ್ವತಃಸಿದ್ಧಾ, ಯೇನ ಪ್ರಾಮಾಣ್ಯಮಾವಹೇತ್ । ಅಪ್ರಾಮಾಣ್ಯಪೂರ್ವಿಕೈವ ಸಾ । ಅಥ, ಅನ್ತೇ ಕ್ಷಯದರ್ಶನಾತ್ ಆದೌ ಕ್ಷಯಾನುಮಾನಮ್, ಅತೋ ಭಿನ್ನತ್ವಾತ್ ಸಾದೃಶ್ಯಕಲ್ಪನಾ–ಇತಿ । ಆದೌ ಸತ್ತ್ವಾದರ್ಶನಾತ್ ಅನ್ತೇಽಪಿ ಸಾ ಕಿಂ ನಾನುಮೀಯತೇ? ಕ್ಷಯಾನುಭವವಿರೋಧಾತ್ ಇತಿ ಚೇತ್ ? ಇಹಾಪಿ ತದ್ರೂಪಸತ್ತ್ವಾನುಭವವಿರೋಧಃ । ನ ಹ್ಯುಭಯೋರನುಭವಯೋಃ ಕಶ್ಚಿದ್ ವಿಶೇಷಃ ॥

(ಅರ್ಥ)

ಇದಲ್ಲದೆ, ಆ (ಮಹಾಯಾನಪಕ್ಷದವ)ರೂ ನೀಲಾತ್ಮಕವಾದ ಸಂವಿತ್ತಿಗಿಂತ[1] ಬೇರೆಯಾಗಿ ಪರಾಗ್ಭಿನ್ನವಾದ ಅಪರೋಕ್ಷವಾದ ಪ್ರತ್ಯಗ್ರೂಪವಾದ ತೋರಿಕೆಯು ಸ್ವರೂಪಮಾತ್ರದಲ್ಲಿ ಕೊನೆಗಾಣುವ ವಿಕಲ್ಪವನ್ನು[2] ಒಪ್ಪಿರುತ್ತಾರೆ ; ಮತ್ತು ನೀಲಸಂವಿತ್ತು ಪ್ರತ್ಯಗ್ರೂಪ(ಕ್ಕಿಂತ) ಬೇರೆಯಾಗಿ 'ಇದು' ಎಂದು ಗ್ರಾಹ್ಯ

1. ನೀಲವೆಂಬ ವಿಷಯರೂಪವಾಗಿರುವ ಜ್ಞಾನ.

2. ವಿಷಯಕ್ಕಿಂತ ಬೇರೆಯಾಗಿರುವ ನಾನು ಎಂಬ ವಿಕಲ್ಪವನ್ನು.

ರೂಪವಾಗಿ ಕಾಣುತ್ತಲೂ ಇರುತ್ತದೆ.[1] ಆದ್ದರಿಂದ ಗ್ರಾಹ್ಯಗ್ರಾಹಕರೂಪವಾಗಿರುವ ಎರಡು ವಸ್ತುಗಳು ಒಂದಕ್ಕಿಂತ ಒಂದು ಬೇರೆ (ಎಂದು) ಸಿದ್ಧವಾಯಿತು.

(ವಿಜ್ಞಾನವಾದಿ) :- ಇದು (ಸರಿ)ಯಲ್ಲ. ಎರಡೂ ಸ್ವರೂಪಮಾತ್ರದಲ್ಲಿ ಪರ್ಯವಸಾನವಾಗುತ್ತಿರುವಲ್ಲಿ (ಅವಕ್ಕೆ) ವಿಷಯವಿಷಯಿಭಾವವೆಲ್ಲಿ ಬಂತು ?[2]

(ಸಿದ್ಧಾಂತಿ) :- ಹಾಗಾದರೆ 'ಇದನ್ನು ನಾನು ಅರಿಯುತ್ತಿದೇನೆ' ಎಂದು ಅವೆರಡಕ್ಕೂ ಗ್ರಾಹ್ಯಗ್ರಾಹಕಭಾವವು ತೋರುತ್ತಿರುವದು ಹೇಗೆ ?[3]

(ವಿಜ್ಞಾನವಾದಿ) :- ಇದು ಆ (ತೋರಿಕೆ)ಯಲ್ಲ, ಮತ್ತೇನೆಂದರೆ 'ನಾನು' -ಎಂದೂ 'ಇದು' ಎಂದೂ 'ಅರಿಯುತ್ತಿದೇನೆ' ಎಂದೂ ಒಂದಕ್ಕಿಂತ ಒಂದು ಬೇರೆಯಾಗಿರುವ ವಿಕಲ್ಪಗಳಿವು.[4]

(ಸಿದ್ಧಾಂತಿ) :- ಹಾಗಾದರೆ ಒಂದನ್ನೊಂದು ಕಡೆಗಣ್ಣಿಂದಲೂ ನೋಡದ ಅವುಗಳಲ್ಲಿ ಈ ಸಂಬಂಧದ ನಿಶ್ಚಯವಾಗುತ್ತಿರುವದು ಹೇಗೆ ?

(ವಿಜ್ಞಾನವಾದಿ) :- ಆ ವಾಸನೆಯಿಂದೊಡಗೂಡಿದ **ಸ ಮ ನ ಂ ತ ರ** ಪ್ರತ್ಯಯದಿಂದುಂಟಾದ **ಸಂಕಲನಾತ್ಮಕ**ವಾದ ಮತ್ತೊಂದು ಪ್ರತ್ಯಯವಿದು.[5] (ಇಷ್ಟೇ ಹೊರತು) ಇಲ್ಲಿ ಸಂಬಂಧನಿಶ್ಚಯವೇನೂ ಇರುವದಿಲ್ಲ.[6]

(ಸಿದ್ಧಾಂತಿ) :- ನೀನು ಹೀಗೆ ಅನುಭವಕ್ಕೆ ಹತ್ತದೆ ಇರುವ ಪ್ರಕ್ರಿಯೆಯನ್ನೇ ರಚಿಸುತ್ತಿರುವೆಯಲ್ಲ, ಇದೇಕೆ ?

---

1. ನೀಲವಿಕಲ್ಪವು ಇದು ಎಂದೂ ಇನ್ನೊಂದು 'ನಾನು' ಎಂದೂ ತೋರುತ್ತಲೂ ಇದೆ.

2 ವಿಷಯಿ ಎಂದು ನೀವು ಕರೆಯುವ ಪದಾರ್ಥವೂ ವಿಷಯವೆಂಬುದೂ ಬೇರೆಬೇರೆಯಾಗಿ ತಮ್ಮ ರೂಪದಲ್ಲಿಯೇ ಇವೆ. ಅವಕ್ಕೆ ಸಂಬಂಧವೇ ಇಲ್ಲ.

3. ಅನುಭವಕ್ಕೆ ಹೊಂದುಗೆಯಾಗಿ ಒಪ್ಪಬೇಕಲ್ಲವೆ ?- ಎಂದು ಭಾವ.

4. ಸಂಬಂಧವು ಭ್ರಾಂತಿ- ಎಂದು ವಿಜ್ಞಾನವಾದಿಯ ಮತ.

5. ವಿಜ್ಞಾನವಾದಿಯ ಮತದಲ್ಲಿ ಇದು ಎಂಬ ವಿಕಲ್ಪವು ಬೇರೆ, ನಾನು ಎಂಬುದು ಬೇರೆ ; ಇವೆರಡನ್ನೂ ಕೂಡಿಸುವ ವಿಜ್ಞಾನವು ಮತ್ತೊಂದು. ಆದರಿಂದಲೇ ನಾನು ಇದನ್ನು ಅರಿಯುತ್ತೇನೆ ಎಂಬ ವಿಕಲ್ಪವಾಗುತ್ತದೆ. ಈ ವಿಜ್ಞಾನಗಳು ಬೇರೆಬೇರೆಯೇ ಆಗಿಹೋದರೂ ಸಂಕಲನಪ್ರತ್ಯಯದಿಂದ ಇವೆಲ್ಲವೂ ಒಂದೇ ಕಾಲದಲ್ಲಿ ಸಂಬಂಧಿಸಿಕೊಂಡು ಇರುವವೆಂಬ ಭ್ರಾಂತಿಯಾಗುತ್ತದೆ. ಅನಾದಿವಾಸನೆಯಿಂದ ಹೀಗೆ ತೋರುತ್ತದೆ. ಅಷ್ಟೆ. ಸ್ಥಾಯಿಯಾಗಿದ್ದುಕೊಂಡಿರುವ ವಿಜ್ಞಾನವೇ ಇಲ್ಲ.

6. ಬಿಡಿಬಿಡಿಯಾಗಿರುವ ಪ್ರತ್ಯಯಗಳಲ್ಲಿ ಕೊನೆಯಲ್ಲುಂಟಾಗುವ ಪ್ರತ್ಯಯವು ಸಮನಂತರಪ್ರತ್ಯಯ. ಅವುಗಳನ್ನೆಲ್ಲ ಕೂಡಿಸಿ ತೋರಿಸುವದು ಸಂಕಲನಪ್ರತ್ಯಯ.

(ವಿಜ್ಞಾನವಾದಿ) :- ಏಕೆಂದರೆ ಕ್ಷಣದಲ್ಲಿ ವಿನಾಶವಾಗುವ (ವಸ್ತುವಿಗೆ) ಕ್ರಿಯೆಯು ಹೊಂದುವದಿಲ್ಲ, (ವಸ್ತು) ಸ್ಥಿರವಾದರಲ್ಲವೆ, ನಾನು ಎಂದು ತೋರುವ (ಆತ್ಮ)ನಿಗೆ ಸ್ಥಾಯಿಯೇ ಆಗಿರುವ ನೀಲಾದಿ(ವಿಷಯ)ಗಳೊಡನೆ ಕ್ರಿಯಾನಿಮಿತ್ತವಾದ ಸಂಬಂಧವಾಗುವದು ? ಆದರಿಂದ ಕ್ರಿಯಾನಿಮಿತ್ತವಾಗಿಯೇ ನೀಲಾದಿಗಳಿಗೂ ಅಪರೋಕ್ಷತ್ವವಾಗಬಹುದು. ಆದರೆ (ಅದಕ್ಕೆ) ಸ್ಥಾಯಿತ್ವವಿಲ್ಲ.[1]

(ಸಿದ್ಧಾಂತಿ) :- ಹೀಗಾದರೆ, ನಾನು ಎಂಬ ಜ್ಞಾನಕ್ಕೆ ಪ್ರತಿಕ್ಷಣವೂ ಸ್ವಲಕ್ಷಣವು ಬೇರೆಯಾಗಬೇಕು. ಅದೇನು ಇದೆಯೊ, ಇಲ್ಲವೋ- ಎಂಬುದನ್ನು ನಿಮ್ಮ ಅನುಭವವನ್ನು ಮುಚ್ಚಿಕೊಳ್ಳದೆಯೇ ಹೇಳಿರಿ.[2]

( ವಿಜ್ಞಾನವಾದಿ ) :- ಅತ್ಯಂತಸಾದೃಶ್ಯದಿಂದ ಭೇದವು ತೋರುವದಿಲ್ಲ ಎಂದರೊ ?[3]

(ಸಿದ್ಧಾಂತಿ) :- ಅನುಭವಕ್ಕೂ ಸ್ವರೂಪವು ತೋರುವದಿಲ್ಲ ಎನ್ನುವದಾದರೆ ಜಗತ್ತಿಗೆಲ್ಲ ಕುರುಡು ಬಂದಂತೆ (ಆಯಿತು).[4] ಇದೂ ಅಲ್ಲದೆ, ಅದೇ ರೂಪವು ಕಾಣಿಸುತ್ತಿರುವಲ್ಲಿ, ಸಾದೃಶ್ಯವನ್ನು ಕಲ್ಪಿಸುವದು ಪ್ರಮಾಣವಿರುದ್ಧವೂ ನಿಷ್ಪ್ರಮಾಣಕವೂ ಆಗಿರುತ್ತದೆ.[5]

(ವಿಜ್ಞಾನವಾದಿ) :- ಅದೇ ರೂಪವಿರುವದೆಂಬ ಜ್ಞಾನವು ಭ್ರಾಂತಿಯಾಗಿರುವದರಿಂದ, (ಇದು) ಪ್ರಮಾಣವಿರುದ್ಧವೂ ಅಲ್ಲ, ಅಪ್ರಮಾಣಕವೂ ಅಲ್ಲ. ಏಕೆಂದರೆ ನಿರ್ಬೀಜವಾದ ಭ್ರಾಂತಿಯು ಆಗಲಾರದು.[6]

(ಸಿದ್ಧಾಂತಿ) :- ಹಾಗಲ್ಲ. ಏಕೆಂದರೆ ಭ್ರಾಂತಿಯೆಂದು ಸಿದ್ಧವಾದರೆ ಸಾದೃಶ್ಯವು ಸಿದ್ಧಿಸುವದು ; ಏಕೆಂದರೆ (ಆಗ) ಪ್ರಮಾಣವಿರೋಧವೂ ಇಲ್ಲ,

---

1. ನಾನು ಎಂಬುದೂ ವಿಷಯಗಳೂ ಸಿದ್ಧವಾಗಿದ್ದರೆ ನಾನು ಎಂಬಾತ್ಮನ ಕ್ರಿಯೆಯಿಂದ ಅವನಿಗೆ ವಿಷಯಗಳ ಸಂಬಂಧವಾಗಬಹುದು, ಆದರೆ ಇವೆಲ್ಲ ಕ್ಷಣಿಕವಾಗಿವೆ, ಆದ್ದರಿಂದ ಸಂಬಂಧವಿಲ್ಲ.

2. 'ನಾನು' ಎಂಬ ಅರಿವು ಬಿಟ್ಟುಬಿಟ್ಟು ಆಗುವದೆಂಬ ಅನುಭವವು ನಿಮಗೆ ಇದೆಯೆ, ನಿಜವಾಗಿ ಹೇಳಿ.

3. 'ನಾನು' ಎಂಬ ಅರಿವು ಬಿಟ್ಟುಬಿಟ್ಟೇ ಆದರೂ ದೀಪಜ್ವಾಲೆಯಂತೆ ಬೇಗಬೇಗನೆ ಆಗುವದರಿಂದ ಹಾಗೆಂದು ಗೊತ್ತಾಗುವದಿಲ್ಲ.

4. ಜ್ಞಾನವೇ ಎಲ್ಲವನ್ನೂ ಬೆಳಗುವದು, ಅದೂ ತೋರುವದಿಲ್ಲ ಎಂದರೇನರ್ಥ ?

5. ಅನುಭವಕ್ಕೆ ವಿರುದ್ಧವಾಗಿ ಯಾವದನ್ನೂ ಕಲ್ಪಿಸುವದು ಸರಿಯಲ್ಲ.

6. ಇದು ಹೀಗೆ ಎಂಬ ಭ್ರಾಂತಿಯೂ ಹಾಗೆ ನಿಜವಾಗಿರುವದರ ಆಧಾರದಿಂದ ಆಗುತ್ತದೆ ; ಇದು ಒಂದೇ ಎಂಬ ಭ್ರಾಂತಿಯಿಂದಲೇ ನಾವು ಸಾದೃಶ್ಯವನ್ನು ಕಲ್ಪಿಸಿರುವದು.

ಪ್ರಮಾಣವೂ ಇರುತ್ತದೆ. ಸಾದೃಶ್ಯವು ಸಿದ್ಧವಾದರೆ ಆದರ ನಿಮಿತ್ತದಿಂದ ಭ್ರಾಂತಿಯು ಸಿದ್ಧವಾಗುತ್ತದೆ !– ಎಂದು ಅನ್ಯೋನ್ಯಾಶ್ರಯವಾಗುವದು.[1]

(ವಿಜ್ಞಾನವಾದಿಯ ಮತವು) ಇದಾಗಿರಬಹುದು : (ಇದು) ಭ್ರಾಂತಿಯಲ್ಲ (ಎಂಬ ಪಕ್ಷ)ದಲ್ಲಿಯೂ (ಈ ದೋಷವು) ಸಮಾನವು. (ಹೇಗೆಂದರೆ) ಸಾದೃಶ್ಯ ಕಲ್ಪನೆಯು ಅಪ್ರಮಾಣಿಕವೆಂದೂ ಪ್ರಮಾಣವಿರುದ್ಧವೆಂದೂ ಸಿದ್ಧವಾದರೇ ಅಲ್ಲವೆ, ಅದೇ ರೂಪವೆಂದು ತೋರುವದು ಅಭ್ರಾಂತಿಯೆಂದಾಗುವದು ? ಇದು ಅಭ್ರಾಂತಿ ಯೆಂದಾದರೇ ಸಾದೃಶ್ಯಕಲ್ಪನೆಯು ನಿಷ್ಪ್ರಮಾಣಕ ಮತ್ತು ಪ್ರಮಾಣವಿರುದ್ಧ ವೆಂದಾಗುವದು ?[2] (ಆದರೆ) ಇದು ಸರಿಯಲ್ಲ. ಏಕೆಂದರೆ ಪ್ರತೀತಿಯು ಪ್ರಾಮಾಣಿಕವೆಂಬುದು ನಿರಪೇಕ್ಷವಾಗಿರುವದೇ ಸ್ವಾರಸಿಕವು. ಆದ್ದರಿಂದ ಆ (ಪ್ರತೀತಿಯು) ಪ್ರಮಾಣವಾಗಿರುವದರಿಂದ, ಸಾದೃಶ್ಯಕಲ್ಪನೆಯು ಪ್ರಮಾಣವಿಲ್ಲ ದ್ದೂ ಪ್ರಮಾಣವಿರುದ್ಧವೂ ಆಗಿರುತ್ತದೆ.[3] ಆದರೆ ಸಾದೃಶ್ಯಕಲ್ಪನೆ ಎಂಬುದು (ಹೀಗೆ)ಸ್ವತಃಸಿದ್ಧವಲ್ಲ, ಹಾಗಿದ್ದರೆ (ಅದು) ಸಪ್ರಮಾಣವೆಂದಾಗಬಹುದಿತ್ತು. ಅದು ಅಪ್ರಮಾಣಪೂರ್ವಕವಾಗಿಯೇ ಉಂಟಾಗುತ್ತದೆ.[4]

ಇನ್ನು ಕೊನೆಯಲ್ಲಿ ನಾಶವಾಗುವದು ಕಂಡಿರುವದರಿಂದ ಮೊದಲೂ ಕ್ಷಯ ವಾಗುವದೆಂದು ಅನುಮಾನಮಾಡಬಹುದು ; ಆದ್ದರಿಂದ (ಅವೆರಡೂ) ಭಿನ್ನ ವಾಗಿರುವದರಿಂದ ಸಾದೃಶ್ಯಕಲ್ಪನೆಯನ್ನು (ಮಾಡಬಹುದು)– ಎಂದರೆ, ಮೊದಲು ಇರುವದನ್ನು ಕಂಡದ್ದರಿಂದ ಕೊನೆಯಲ್ಲಿಯೂ ಆ (ಇರವನ್ನು) ಏತಕ್ಕೆ ಅನು ಮಾನಿಸುವದಿಲ್ಲ ? ಕ್ಷಯವಾಗುತ್ತದೆ ಎಂಬ ಅನುಭವಕ್ಕೆ ವಿರುದ್ಧವಾಗುವದರಿಂದ (ಅದರ ಇರವನ್ನು ಅನುಮಾನಿಸುವದಿಲ್ಲ) ಎನ್ನುವದಾದರೆ, ಇಲ್ಲಿಯೂ ಅದೇ ರೂಪವು ಇರುವದೆಂಬ ಅನುಭವಕ್ಕೆ (ಅದು ಕ್ಷಯವಾಗುವದೆಂದು ಅನುಮಾನಿಸು

1. ಭ್ರಾಂತಿಯೆಂದು ಸಿದ್ಧಪಡಿಸುವದಕ್ಕೆ ಸಾದೃಶ್ಯವು ಬೇಕು, ಸಾದೃಶ್ಯವು ಸಿದ್ಧವಾಗು ವದಕ್ಕೆ ಭ್ರಾಂತಿ ಬೇಕು. ಆದ್ದರಿಂದ ಎರಡೂ ಸಿದ್ಧವಾಗಲಿಲ್ಲ.

2 ಒಂದು ಎಂಬುದು ಭ್ರಾಂತಿ ಎಂದು ನಿಶ್ಚಯಿಸಿಯೇ ಅದರ ಆಧಾರದಿಂದ ಸಾದೃಶ್ಯ ಕಲ್ಪನೆಮಾಡಬೇಕು ಎಂದು ಸಿದ್ಧಾಂತಿ ; ಸಾದೃಶ್ಯಕಲ್ಪನೆಯು ಅಪ್ರಮಾಣಿಕ ಎಂದು ತೋರಿಸಿ ಕೊಟ್ಟಮೇಲೆಯೇ ಅದು ಒಂದೇ ಎಂಬುದು ಭ್ರಾಂತಿಯಲ್ಲವೆಂದಾಗುವದು – ಎಂದು ವಿಜ್ಞಾನವಾದಿ.

3. ಜ್ಞಾನವು ತಾನು ಹುಟ್ಟುವಾಗಲೇ ಪ್ರಮಾಣವೆಂದು ತೋರುತ್ತದೆ , ಬೇರೊಂದು ಕಾರಣದಿಂದ ಅದು ಭ್ರಾಂತಿಯಾಗಬೇಕು. ; ಆದ್ದರಿಂದ ಒಂದೇ ಎಂಬುದನ್ನು ಪ್ರಾಮಾಣಿಕ ವೆಂದು ತೋರಿಸಬೇಕಾದದ್ದಿಲ್ಲ.

4. ಇದು ಸಾದೃಶ್ಯದಿಂದಾದದ್ದು ಎಂದು ಯಾರೂ ಮೊದಲೇ ಗೊತ್ತುಮಾಡಿಕೊಳ್ಳು ವದಿಲ್ಲ ; ಒಂದೇ ಎಂಬುದು ಭ್ರಾಂತಿ ಎಂದಾದರೆ ಆಮೇಲೆ ಸಾದೃಶ್ಯದಿಂದ ಒಂದೇ ಎಂದು ತೋರುತ್ತದೆ– ಎಂದು ನಿಶ್ಚಯಿಸುತ್ತಾರೆ.

ವದು) ವಿರುದ್ಧವಾಗುತ್ತದೆ. ಈ ಎರಡು ಅನುಭವಗಳಿಗೂ ಯಾವ ವಿಶೇಷವೂ ಇರುವದಿಲ್ಲವಷ್ಟೆ ?[1]

## ಪೂರ್ವಪಕ್ಷ :
## ಅಹಂಕಾರವು ಅರ್ಥಕ್ರಿಯಾಕಾರಿಯಾದ್ದರಿಂದ ಕ್ಷಣಿಕ

(ಪಂಚಪಾದಿಕಾ)

೪೫. ಅಥ ಮನ್ಯೇತ ಯೋಽಸೌ ಸ್ಥಿರತ್ವೇನಾಭಿಮತೋಽಹಮುಲ್ಲೇಖಃ, ಸ ಕಿಂ ಕಾಞ್ಚಿತ್ ಅರ್ಥಕ್ರಿಯಾಂ ಕುರ್ಯಾದ್ ವಾ ನ ವಾ ? ಯದಿ ನ ಕುರ್ಯಾತ್, ಅಸಲ್ಲಕ್ಷಣಪ್ರಾಪ್ತೇಃ ನ ಪರಮಾರ್ಥವಸ್ತು । ಅಥ ಕುರ್ಯಾದ್, ನ ತರ್ಹಿ ಸ್ಥಾಯೀ । ಸ್ಥಾಯಿನೋಽರ್ಥಕ್ರಿಯಾಽಯೋಗಾತ್ । ಕಥಮಯೋಗಃ? ಇತ್ಥಮಯೋಗಃ । ಸ ತಾಂ ಕುರ್ವನ್ ಕ್ರಮೇಣ ಕುರ್ಯಾತ್, ಯೌಗಪದ್ಯೇನ ವಾ? ನ ತಾವತ್ ಕ್ರಮೇಣ । ಪೂರ್ವೋತ್ತರಕಾಲಯೋಸ್ತಸ್ಯ ವಿಶೇಷಾಭಾವೇಽಪಿ ಕಿಮಿತಿ ಪೂರ್ವಸ್ಮಿನ್ನೇವ ಕಾಲೇ ಉತ್ತರಕಾಲಭಾವಿನೀಮಪಿ ನ ಕುರ್ಯಾತ್ । ನಾಪಿ ಯೌಗಪದ್ಯೇನ । ಯಾವಜ್ಜೀವಕೃತ್ಯಮ್ ಏಕಸ್ಮಿನ್ನೇವ ಕ್ಷಣೇ ಕೃತಮ್ ಇತ್ಯುತ್ತರಕಾಲೇ ತದ್ವಿರಹಾತ್ ಅಸಲ್ಲಕ್ಷಣಪ್ರಾಪ್ತೇಃ । ಅತೋಽರ್ಥಕ್ರಿಯಾಕಾರಿತ್ವಾದೇವ ನ ಸ್ಥಾಯೀ । ತೇನ ಪ್ರತಿಕ್ಷಣಂ ಭಿನ್ನೇಷು ಅಹಮುಲ್ಲೇಖೇಷು ತದ್ಬುದ್ಧಿಃ ಸಾದೃಶ್ಯನಿಬನ್ಧನೇತಿ ॥

(ಅರ್ಥ)

ಇನ್ನು (ವಿಜ್ಞಾನವಾದಿಯು) ಹೀಗೆಂದು ಭಾವಿಸಬಹುದು : ಸ್ಥಿರವೆಂದು (ನೀವು) ಎಣಿಸಿರುವ[2] ಈ ನಾನು ಎಂಬ ಅನುಭವವಿದೆಯಲ್ಲ, ಅದೇನು ಯಾವ ದಾದರೂ ಅರ್ಥಕ್ರಿಯೆಯನ್ನು ಮಾಡುವದೊ, ಇಲ್ಲವೊ ? ಮಾಡುವದಿಲ್ಲವಾದರೆ ಅಸಲ್ಲಕ್ಷಣವು ಬಂದೊದಗುವದರಿಂದ, (ಅದು) ಪರಮಾರ್ಥವಸ್ತುವಲ್ಲ.[3] ಹಾಗಿಲ್ಲದೆ (ಅರ್ಥಕ್ರಿಯೆಯನ್ನು) ಮಾಡುತ್ತದೆ ಎಂದರೆ, ಹಾಗಾದರೆ (ಅದು) ಸ್ಥಿರವಲ್ಲವೆಂದಾಯಿತು ; ಏಕೆಂದರೆ ಸ್ಥಿರವಾದದ್ದಕ್ಕೆ ಅರ್ಥಕ್ರಿಯೆಯು ಹೊಂದಲಾರದು.[4]

---

1. ಕೊನೆಗೆ ನಾಶವಾಗುತ್ತದೆ ಎಂಬ ಅನುಭವದ ಆಧಾರದಿಂದ ಮೊದಲೂ ನಾಶವಾಗಬೇಕು– ಎಂದು ಅನುಮಾನಮಾಡುವದಾದರೆ, ಮೊದಲು ಇರುವದರಿಂದ ಕೊನೆಗೂ ಇರಬೇಕು –ಎಂದು ಅನುಮಾನಿಸಬಹುದಾಗುವದು. ಈ ಎರಡಕ್ಕೂ ಅನುಭವದ ಆಧಾರವಿದೆ. ಇಂಥದ್ದೊಂದು ಅನುಭವವು ಪ್ರಬಲವೆನ್ನುವದಕ್ಕೆ ಕಾರಣವೇನೂ ಇಲ್ಲ.

2. ಬೌದ್ಧನು ಇದನ್ನು ಒಪ್ಪಿಲ್ಲ ; ಅಂತಃಕರಣವಿಶಿಷ್ಟಾತ್ಮನು ಜ್ಞಾತೃ, ಪೂರ್ವಾಪರಕಾಲವಿಶಿಷ್ಟಾತ್ಮನು ಜ್ಞೇಯ– ಎಂದು ಆತ್ಮಪ್ರತ್ಯಭಿಜ್ಞಾನವನ್ನು ಪಂ. ವಿ. ದಲ್ಲಿ ಪ್ರತಿಪಾದಿಸಿದೆ.

3. ಅರ್ಥಕ್ರಿಯೆಯೇ ಇಲ್ಲದಿದ್ದರೆ ಅದು ವಸ್ತುವೆಂಬುದಕ್ಕೆ ಗುರುತೇನು ?

4. ಇದು ವಿಜ್ಞಾನವಾದಿಯ ಅಂಗೀಕಾರ.

(ಸಿದ್ಧಾಂತಿ) :- ಹೊಂದುವದಿಲ್ಲವೆಂಬುದು ಹೇಗೆ ?

(ವಿಜ್ಞಾನವಾದಿ) :- ಹೀಗೆ ಹೊಂದುವದಿಲ್ಲ : ಅದು ಆ (ಅರ್ಥಕ್ರಿಯೆಯನ್ನು) ಮಾಡುವಾಗ ಕ್ರಮವಾಗಿ ಮಾಡುವದೊ, ಒಮ್ಮೆಗೇ ಮಾಡುವದೊ ? ಮೊದಲನೆಯದಾಗಿ ಕ್ರಮಕ್ರಮವಾಗಿ (ಮಾಡುತ್ತದೆ ಎನ್ನು)ವದಕ್ಕಿಲ್ಲ. (ಏಕೆಂದರೆ) ಹಿಂದಿನ ಕಾಲ, ಮುಂದಿನ ಕಾಲಗಳೆರಡರಲ್ಲಿಯೂ ಅದರಲ್ಲಿ ಯಾವ ವಿಶೇಷವೂ ಇಲ್ಲದಿದ್ದರೆ, ಹಿಂದಿನ ಕಾಲದಲ್ಲಿಯೇ ಮುಂದಿನ (ಕ್ರಿಯೆ)ಯನ್ನೂ ಏತಕ್ಕೆ ಮಾಡಬಾರದು ? ಒಂದೇ ಕಾಲದಲ್ಲಿ (ಮಾಡುತ್ತದೆ) ಎನ್ನುವದಕ್ಕೂ ಇಲ್ಲ, ಏಕೆಂದರೆ ಬದುಕಿರುವವರೆಗೂ ಮಾಡಬಹುದಾದ್ದನ್ನು ಒಂದೇ ಕ್ಷಣದಲ್ಲಿ ಮಾಡಿದ್ದಾಗಿರುವದರಿಂದ, ಮುಂದಿನ ಕಾಲದಲ್ಲಿ ಆ (ಮಾಡಬೇಕಾದ ಕ್ರಿಯೆ) ಇಲ್ಲದಿರುವದರಿಂದ ಅಸಲ್ಲಕ್ಷಣವು (ಅದಕ್ಕೆ) ಬಂದೊದಗುವದು. ಆದ್ದರಿಂದ ಅರ್ಥಕ್ರಿಯೆಯನ್ನು ಮಾಡುವದರಿಂದಲೇ (ಅದು) ಸ್ಥಾಯಿಯಲ್ಲ. ಆದ್ದರಿಂದ ಅಹಂಪ್ರತ್ಯಯಗಳು ಒಂದೊಂದು ಕ್ಷಣವೂ ಭಿನ್ನವಾಗಿರುವಲ್ಲಿ, ಅದೇ (ಅಹಂಪ್ರತ್ಯಯವು) ಎಂಬ ಬುದ್ಧಿಯು ಸಾದೃಶ್ಯನಿಮಿತ್ತವಾಗಿ ಆದದ್ದು.[1]

## ಸಿದ್ಧಾಂತ: ಅರ್ಥಕ್ರಿಯೆಯಿದ್ದರೆ ಸತ್ತು ಎಂಬುದು ಸರಿಯಲ್ಲ

(ಪಂಚಪಾದಿಕಾ)

೪೬. ಉಚ್ಯತೇ । ಅಥ ಕೇಯಮ್ ಅರ್ಥಕ್ರಿಯಾ ಯದಭಾವಾತ್ ಅಸಲ್ಲಕ್ಷಣತ್ವಪ್ರಾಪ್ತಿಃ ? ಸ್ವವಿಷಯಜ್ಞಾನಜನನಮ್ । ಪ್ರಾಪ್ತಂ ತರ್ಹಿ ಸರ್ವಾಸಾಮೇವ ಸಂವಿದಾಂ ಸ್ವಸಂವಿದಿತರೂಪತ್ವೇನ ಸ್ವವಿಷಯಜ್ಞಾನಜನನಾತ್ ಅಸಲ್ಲಕ್ಷಣತ್ವಮ್ । ನ ಸನ್ತಾನಾನ್ತರೇಽಪಿ ತಜ್ಜನನಮ್ । ಅನ್ಯೈನ್ದ್ರಿಯಕತ್ವಾತ್ । ಅನುಮಾನೇಽಪಿ ಅರ್ಥಜನ್ಯತ್ವಾಭಾವಾತ್ । ಸಾರ್ವಜ್ಞ್ಯೇಽಪಿ ನ ಸಾಕ್ಷಾತ್ ಸ್ವಸಂವಿದಂ ಜನಯತಿ ಸಂಸಾರಸಂವಿದೇಕರೂಪತ್ವಪ್ರಸಙ್ಗಾತ್ । ಅತದ್ರೂಪತ್ವೇ ತದ್ವಿಷಯತ್ವಾಯೋಗಾತ್ । ಅಥ ಕ್ಷಣಾನ್ತರೋತ್ಪಾದೋಽರ್ಥಕ್ರಿಯಾ, ಚರಮಕ್ಷಣಸ್ಯಾಸಲ್ಲಕ್ಷಣತ್ವಪ್ರಸಙ್ಗಃ । ನ ಚ ಸಾರ್ವಜ್ಞಜ್ಞಾನಜನನೇನ ಅರ್ಥವತ್ತ್ವಮ್ । ಚರಮತ್ವಾನುಪಪತ್ತೇರ್ಮುಕ್ತ್ಯಭಾವಪ್ರಸಙ್ಗಾತ್ । ನ ಚ ಸಂವಿತ್ ಸಂವಿದೋ ವಿಷಯಃ । ಸಂವಿದಾತ್ಮನಾ ಭೇದಾಭಾವಾತ್ । ಪ್ರದೀಪಸ್ಯೇವ ಪ್ರದೀಪಾನ್ತರಮ್ । ಕಿಞ್ಚ, ನಾರ್ಥಕ್ರಿಯಾತಃ ಸತ್ತ್ವಂ ಭವತಿ ಸ್ವಕಾರಣನಿಷ್ಪನ್ನಸ್ಯ

---

1. ಅರ್ಥಕ್ರಿಯೆ ಹೊಂದಿದ್ದರೆ ಸ್ಥಿರಬುದ್ಧಿಯು ಅಭ್ರಾಂತಿ ಎಂದು ಹೇಳಬಹುದಿತ್ತು ; ಅದು ಯುಕ್ತಿವಿರುದ್ಧವಾದ್ದರಿಂದ ಕ್ಷಣಿಕವಾದ ಬುದ್ಧಿಗಳಲ್ಲಿಯೇ ಒಂದು ಎಂಬ ಭ್ರಾಂತಿಯಾಗುತ್ತಿದೆ. ಅದಕ್ಕೆ ಸಾದೃಶ್ಯವೇ ನಿಮಿತ್ತ ಎಂದಾಯಿತು— ಎಂಬುದು ವಿಜ್ಞಾನವಾದಿಯ ವಾದದ ಸಾರ.

ಕಾರ್ಯಜನನಾತ್ । ಅತಃ ಪ್ರತೀತಿರ್ವಕ್ತವ್ಯಾ । ತತ್ರ ತಸ್ಯಾ ಅನ್ಯತಃ ಸತ್ತಾಪ್ರತೀತಿಃ ತಸ್ಯಾ ಅಪ್ಯನ್ಯತಃ !- ಇತ್ಯನವಸ್ಥಾನಾತ್ ನ ಕ್ವಚಿತ್ ಸತ್ತಾವಗಮಃ ಇತಿ ಶೂನ್ಯಂ ಜಗದಭವಿಷ್ಯತ್ । ನನು ಸ್ವಜ್ಞಾನಾರ್ಥಕ್ರಿಯಾಯಾಃ ಸ್ವಯಂಸಿದ್ಧತ್ವಾತ್ ನಾನವಸ್ಥಾ । ನ ತರ್ಹಿ ಅರ್ಥಕ್ರಿಯಾತಃ ಸತ್ತಾವಗಮಃ । ನ ಹಿ ಸ್ವರೂಪಮೇವ ಸ್ವಸ್ಯ ಅರ್ಥಕ್ರಿಯಾ ॥

(ಅರ್ಥ)

(ಇದಕ್ಕೆ) ಹೇಳುತ್ತೇವೆ: ಯಾವದು ಇಲ್ಲದ್ದರಿಂದ (ಅಹಂಕಾರಕ್ಕೆ) ಅಸಲ್ಲಕ್ಷಣತ್ವವು ಬಂದೊದಗುವದು (ಎನ್ನುತ್ತೀರೋ), ಆ ಅರ್ಥಕ್ರಿಯೆ ಎಂಬುದಾದರೂ ಯಾವದು?[1]

(ವಿಜ್ಞಾನವಾದಿ):- ತನ್ನ ವಿಷಯದ ಜ್ಞಾನವನ್ನುಂಟುಮಾಡುವದೇ (ಅರ್ಥಕ್ರಿಯೆ).

(ಸಿದ್ಧಾಂತಿ):- ಹಾಗಾದರೆ ಎಲ್ಲಾ ಸಂವಿತ್ತುಗಳೂ ಸ್ವಸಂವಿದಿತವಾಗಿರುವದರಿಂದ ತಮ್ಮ ವಿಷಯದ ಜ್ಞಾನವನ್ನುಂಟುಮಾಡದೆ ಇರುವವಾಗಿ (ಅವಕ್ಕೆ) ಅಸಲ್ಲಕ್ಷಣತ್ವ ಬಂದಿತು.[2] ಮತ್ತೊಂದು (ಜ್ಞಾನ)ಸಂತಾನದಲ್ಲಿ ಕೂಡ ಅದನ್ನು ಉಂಟುಮಾಡುವಂತಿಲ್ಲ; ಏಕೆಂದರೆ (ಅದು) ಇಂದ್ರಿಯಕ್ಕೆ ವಿಷಯವಲ್ಲ. ಅನುಮಾನ(ದಿಂದ ತಿಳಿಯಬರುವ)ದೆಂಬಲ್ಲಿಯೂ (ಅದಕ್ಕೆ) ಅರ್ಥಜನ್ಯತ್ವವಿಲ್ಲ.[3] ಸರ್ವಜ್ಞ(ಜ್ಞಾನ)ವಾದರೂ ನೇರಾಗಿ ತನ್ನ ವಿಷಯದ ಜ್ಞಾನವನ್ನುಂಟುಮಾಡುವದಿಲ್ಲ; ಏಕೆಂದರೆ ಆಗ ಸಾಂಸಾರಿಕಜ್ಞಾನಗಳ ಅದೇ ರೂಪವೇ (ಸರ್ವಜ್ಞಜ್ಞಾನಕ್ಕೂ) ಬಂದಂತಾಗುವದು.[4] ಅವುಗಳ ರೂಪವಿಲ್ಲದೆಹೋದರೆ ಅವುಗಳು ವಿಷಯವಾಗುವದೆಂಬುದೇ ಹೊಂದುವದಿಲ್ಲ.[5]

---

1. ಅರ್ಥಕ್ರಿಯೆಯನ್ನುಂಟುಮಾಡದಿದ್ದರೆ ಅಸತ್ತಾಗುವದೆಂಬ ನಿಯಮವಿಲ್ಲವೆಂದು ತೋರಿಸುವದಕ್ಕೆ ಈ ಪ್ರಶ್ನೆಯನ್ನು ತೆಗೆದಿದೆ.

2. ಪ್ರತಿಯೊಂದು ಜ್ಞಾನವೂ ತನ್ನನ್ನು ತಾನು ವಿಷಯೀಕರಿಸಿರುವದೆಂಬುದು ಬೌದ್ಧರ ಮತ; ಆದ್ದರಿಂದ ವಿಜ್ಞಾನವನ್ನು ಅರಿಯುವ ಮತ್ತೊಂದು ಜ್ಞಾನವು ಉಂಟಾಗುವಹಾಗಿಲ್ಲವಾಗಿ ಅದೂ ನಿಮ್ಮ ನಿಯಮದಂತೆ ಅಸತ್ತೆಂದಾಗಬೇಕಾಗುವದು.

3. ಕ್ಷಣಿಕವಿಜ್ಞಾನಗಳ ಸಂತಾನದಲ್ಲಿ ಒಂದಕ್ಕೊಂದು ವಿಷಯವಾಗದಿದ್ದರೂ ಮತ್ತೊಂದು ಸಂತಾನದ ಜ್ಞಾನಕ್ಕೆ ಅವು ವಿಷಯವಾಗಬಹುದಲ್ಲ !- ಎಂಬ ಶಂಕೆಗೆ ಪರಿಹಾರವಿದು. ಜ್ಞಾನವು ಅತೀಂದ್ರಿಯವಾದ್ದರಿಂದ ಮತ್ತೊಬ್ಬರು ಅದನ್ನು ಅರಿಯುವಂತಿಲ್ಲ; ಸುಮ್ಮನೆ ಅನುಮಾನದಿಂದ ಕಲ್ಪಿಸಿದರೆ ಜ್ಞಾನವು ವಿಷಯದಿಂದಾದದ್ದೆಂದಾಗುವದಿಲ್ಲ.

4. ಸರ್ವಜ್ಞನಿಗೆ ಎಲ್ಲವೂ ಗೋಚರವಾಗುವದಾದರೂ ಅದು ಸಾಂಸಾರಿಕಜ್ಞಾನವೆಂಬ ವಿಷಯದಿಂದ ಉಂಟಾದದ್ದಲ್ಲ; ಏಕೆಂದರೆ ಹಾಗಾದರೆ ವಿಷಯವೂ ಜ್ಞಾನವೂ ಒಂದೇ ರೂಪವಾಗಿರಬೇಕೆಂಬುದು ನಿಮ್ಮ ಮತವಾದ್ದರಿಂದ ಮುಕ್ತನ ಜ್ಞಾನವು ಸಂಸಾರಿಯ ಜ್ಞಾನದಂತೆಯೇ ಇರಬೇಕಾಗುವದು. 5. ವಿಷಯದಿಂದಾದ ಜ್ಞಾನವು ವಿಷಯದಂತೆ ಇರಬೇಕಷ್ಟೆ?

(ವಿಜ್ಞಾನವಾದಿ) : ಇನ್ನು ಮತ್ತೊಂದು ಕ್ಷಣವನ್ನುಂಟುಮಾಡುವದೇ ಅರ್ಥಕ್ರಿಯೆ- ಎಂದರೋ ?

(ಸಿದ್ಧಾಂತಿ) : (ಹಾಗಾದರೆ) ಕೊನೆಯ ಕ್ಷಣಕ್ಕೆ ಅಸಲ್ಲಕ್ಷಣತ್ವವು ಬರುವದು.[1] ಸರ್ವಜ್ಞಜ್ಞಾನವನ್ನುಂಟುಮಾಡುವದರಿಂದ (ಅದಕ್ಕೂ) ಅರ್ಥವತ್ತ್ವವಿದೆ ಎಂದರೆ ಅದು ಕೊನೆಯದಲ್ಲದೆಹೋಗುವದರಿಂದ ಮುಕ್ತಿಯಿಲ್ಲವೆಂಬ ಪ್ರಸಂಗವು ಬರುವದು.[2] (ಒಂದು) ಸಂವಿತ್ತು ಇನ್ನೊಂದು ಸಂವಿತ್ತಿಗೆ ವಿಷಯವೂ ಅಲ್ಲ ; ಏಕೆಂದರೆ ಅವೆರಡಕ್ಕೂ ಸಂವಿದ್ರೂಪದಿಂದ ಯಾವ ಭೇದವೂ ಇರುವದಿಲ್ಲ. (ಒಂದು) ಪ್ರದೀಪಕ್ಕೆ ಮತ್ತೊಂದು ಪ್ರದೀಪವು ಹೇಗೆ (ವಿಷಯವಲ್ಲವೋ) ಹಾಗೆಯೇ ಇದು.[3]

ಇದೂ ಅಲ್ಲದೆ, ಅರ್ಥಕ್ರಿಯೆಯಿಂದ ಸತ್ತ್ವವು ಉಂಟಾಗುವದಿಲ್ಲ ; ಏಕೆಂದರೆ ತನ್ನ ಕಾರಣದಿಂದ ಉಂಟಾಗಿರುವದೇ ಕಾರ್ಯವನ್ನುಂಟುಮಾಡುತ್ತದೆ.[4] ಆದ್ದರಿಂದ (ಕಾರಣದಿಂದ ಸತ್ತ್ವ)ಪ್ರತೀತಿ(ಯುಂಟಾಗುವದೆಂದು) ಹೇಳಬೇಕಾಯಿತು ; ಆಗ ಆ (ಕಾರಣ)ಕ್ಕೆ ಮತ್ತೊಂದರಿಂದ ಸತ್ತ್ವಪ್ರತೀತಿ, ಅದಕ್ಕೆ ಮತ್ತೊಂದರಿಂದ- ಎಂದು ಅನವಸ್ಥೆಯಾಗಿ ಎಲ್ಲಿಯೂ ಸತ್ತ್ವದ ನಿಶ್ಚಯವಾಗದೆ ಜಗತ್ತು ಶೂನ್ಯವೇ ಆಗಬೇಕಾದೀತು.[5]

---

1. ಸಂಸಾರಿಜ್ಞಾನಗಳ ಸಂತಾನವು ಮುಗಿದಮೇಲೆ ಮುಕ್ತಿಯು ಬರುತ್ತದೆ ; ಆದ್ದರಿಂದ ಕೊನೆಯ ಜ್ಞಾನವಾದ ಮೇಲೆ ಮತ್ತೊಂದು ಜ್ಞಾನದ ಉತ್ಪತ್ತಿಯಿಲ್ಲವಾಗಿ, ಅರ್ಥಕ್ರಿಯಾಕಾರಿತ್ವವಿಲ್ಲ ; ಆದ್ದರಿಂದ ಅದು ಅಸತ್ತು ಎಂದಾಯಿತು.

2. ಕೊನೆಯ ಜ್ಞಾನವಾದಮೇಲೆ ಸರ್ವಜ್ಞಜ್ಞಾನವುಂಟಾಗುವದರಿಂದ ಆಕ್ಷೇಪವಿಲ್ಲ ಎನ್ನುವದೂ ಸರಿಯಲ್ಲ ; ಅದಾದಮೇಲೂ ಮತ್ತೊಂದು ಜ್ಞಾನವುಂಟಾಗುವದಾದರೆ ಅದು ಕೊನೆಯ ಜ್ಞಾನವೆಂಬುದು ಹೇಗೆ ?

3. ಒಂದು ಜ್ಞಾನವನ್ನು ಮತ್ತೊಂದು ಜ್ಞಾನವು ವಿಷಯೀಕರಿಸುವಂತಿದ್ದರಲ್ಲವೆ, ಅರ್ಥಕ್ರಿಯಾಕಾರಿತ್ವವುಂಟೆಂದು ಹೇಳಬಹುದಾಗಿತ್ತು. ಆದರೆ ಒಂದು ದೀಪಕ್ಕೆ ತನ್ನನ್ನು ಬೆಳಗುವ ಮತ್ತೊಂದು ದೀಪದ ಅಪೇಕ್ಷೆಯಿಲ್ಲದಿರುವಂತೆ ಒಂದು ಜ್ಞಾನಕ್ಕೆ ತನ್ನನ್ನು ತೋರಿಸುವ ಮತ್ತೊಂದು ಜ್ಞಾನದ ಅಪೇಕ್ಷೆಯೇ ಇರುವದಿಲ್ಲ.

4. ಕಾರಣವು ಇದ್ದರೆ ಸಾಕು, ಕಾರ್ಯವು ಉಂಟಾಗಿಬಿಡುತ್ತದೆ. ಕಾರ್ಯವು ಇರುವದಕ್ಕೆ ಅರ್ಥಕ್ರಿಯೆ ಏತಕ್ಕೆ ?

5. ಕಾರಣದ ಇರವಿನಿಂದಲೇ ಕಾರ್ಯದಲ್ಲಿ ಇರವು ತೋರುತ್ತದೆ ಎನ್ನುವದಾದರೆ ಹೀಗೆ ಅನವಸ್ಥೆ ಬರುತ್ತದೆ. ಯಾವದಕ್ಕಾದರೂ 'ಇದೆ' ಎನ್ನಿಸಿಕೊಳ್ಳುವದಕ್ಕೆ ಕಾರಣವೊಂದು ಇರಬೇಕೆಂದಾಗುವದು. ಆ ಕಾರಣವೂ ತನ್ನ ಕಾರಣದಿಂದ ಇದೆ ಎನ್ನಿಸಿಕೊಳ್ಳಬೇಕಾಗುವದು. ಹೀಗೆ ಯಾವದಕ್ಕೂ ಇರವೇ ಇಲ್ಲವಾದೀತು.

(ವಿಜ್ಞಾನವಾದಿ) :- ತನ್ನ ಜ್ಞಾನವೆಂಬ ಅರ್ಥಕ್ರಿಯೆ ತಾನೇ ಸಿದ್ಧವಾಗಿರುವದರಿಂದ ಅನವಸ್ಥೆಯಿಲ್ಲವಲ್ಲ![1]

(ಸಿದ್ಧಾಂತಿ) :- ಹಾಗಾದರೆ ಅರ್ಥಕ್ರಿಯೆಯಿಂದ ಸತ್ತ್ವದ ನಿಶ್ಚಯವಲ್ಲ (ವೆಂದಾಯಿತು)[2] ತನ್ನ ಸ್ವರೂಪವೇ ತನ್ನ ಅರ್ಥಕ್ರಿಯೆ ಎಂದಾಗಲಾರದಷ್ಟೆ?

## ಸ್ಥಿರವಾದದ್ದು ಸಹಕಾರಿಗಳ ನೆರವಿನಿಂದ ಅರ್ಥಕ್ರಿಯಾಕಾರಿಯಾಗಬಹುದು

(ಪಂಚಪಾದಿಕಾ)

೪೭. ಯತ್ ಪುನಃ, ಕ್ರಮೇಣ ಅರ್ಥಕ್ರಿಯಾ ನ ಯುಜ್ಯತೇ, ಪೂರ್ವೋತ್ತರಕಾಲಯೋಸ್ತಸ್ಯ ವಿಶೇಷಾಭಾವಾತ್ ಇತಿ । ನೈಷ ದೋಷಃ । ಸ್ಥಾಯಿನೋಽಪಿ ಕಾರಣಸ್ಯ ಸಹಕಾರಿಸವ್ಯಪೇಕ್ಷಸ್ಯ ಜನಕತ್ವಾತ್, 'ವಿಶೇಷಾಭಾವಾತ್' ಇತ್ಯಯುಕ್ತಮ್ । ಅಥ ಕಾರಣಸ್ಯ ಅನ್ಯಾಪೇಕ್ಷಾ ನ ಯುಕ್ತಾ । ಅಕಾರಣಸ್ಯಾಪಿ ನತರಾಮ್ ಇತ್ಯಸಹಕಾರಿ ವಿಶ್ವಂ ಸ್ಯಾತ್ । ಅಥ ಅಕಾರಣಂ ಕಾರಣೋತ್ಪತ್ತಯೇ ಅಪೇಕ್ಷ್ಯತ ಇತಿ ಚೇತ್ । ಅಥ ತತ್ಕಾರಣಸ್ಯ ಕಾರಣಮ್ ಅಕಾರಣಂ ವಾ ? ಕಾರಣಂ ಚೇತ್ ನಾಪೇಕ್ಷಿತುಮರ್ಹತಿ, ಅಕಾರಣಂ ಚೇತ್ ನತರಾಮ್ । ಅಥ ನಾಪೇಕ್ಷಾ ಹೇತೂನಾಂ ಸಹಕಾರಿಣಿ ಇತಿ ಬ್ರೂಯಾತ್, ದರ್ಶನೇನ ಬಾಧ್ಯೇತ। ದೃಷ್ಟಂ ಹಿ ಸಹಕಾರ್ಯಪೇಕ್ಷತ್ವಂ ಹೇತೂನಾಮ್। ತಸ್ಮಾತ್, ಯಥೈವ ಹೇತೋರ್ಹೇತುತ್ವಂ ಸತಿ ಕಾರ್ಯೇ ಕೇನಾಪ್ಯತರ್ಕಣೀಯೇನ ಕ್ರಮೇಣ ಜ್ಞಾಯತೇ, ಸತ್ಯೇವ ಹೇತೌ ಕಾರ್ಯಸ್ಯ ದರ್ಶನಾತ್, ತಥಾ ಸಮೇತಸಹಕಾರಿಣ್ಯೇವ ದರ್ಶನಾತ್ ಸಹಕಾರ್ಯಪೇಕ್ಷಸ್ಯ ತದ್ ವಿಜ್ಞೇಯಮ್॥

(ಅರ್ಥ)

ಇನ್ನು (ಕ್ರಮ) ಕ್ರಮದಿಂದ ಅರ್ಥಕ್ರಿಯೆಯಾಗುವದು ಹೊಂದುವದಿಲ್ಲ, ಏಕೆಂದರೆ ಹಿಂದುಮುಂದಿನ ಕಾಲಗಳಲ್ಲಿ ಅದಕ್ಕೆ (ಯಾವ) ವಿಶೇಷವೂ (ಆಗಿರುವ)ದಿಲ್ಲ- ಎಂದಿರಲ್ಲ, ಇದೇನೂ ದೋಷವಲ್ಲ. (ಏಕೆಂದರೆ) ಸ್ಥಾಯಿಯಾಗಿರುವ ಕಾರಣವೂ ಸಹಕಾರಿಗಳ ಅಪೇಕ್ಷೆಯಿಂದ (ಕಾರ್ಯ)ಜನಕವಾಗುವದರಿಂದ ವಿಶೇಷವೇ ಇಲ್ಲವೆಂಬುದು ಯುಕ್ತವಲ್ಲ.[3]

---

1. ಜ್ಞಾನವು ತನ್ನನ್ನು ತಾನೇ ಬೆಳಗುವದೆಂಬುದು ತಾನೇ ಸಿದ್ಧವಾಗಿದೆ; ಮತ್ತೊಂದರ ಅಪೇಕ್ಷೆ ಏತಕ್ಕೆ ?

2. ಏಕೆಂದರೆ ಅರ್ಥಕ್ರಿಯೆಯನ್ನು ಮಾಡದೆ ಜ್ಞಾನವು ಇದ್ದುಕೊಂಡಿದೆ ಎಂದಾಯಿತು. ಅದರ ವಿಷಯಕ್ಕೆ ಮತ್ತೆ ಯಾವ ಜ್ಞಾನವೂ ಬೇಕಾಗಿರುವದಿಲ್ಲ.

3. ಮೊದಲು ತಾನೊಂದೇ ಇದ್ದದ್ದು ಸಹಕಾರಿಗಳ ನೆರವಿನಿಂದ ಅರ್ಥಕ್ರಿಯೆಯನ್ನುಂಟುಮಾಡಬಹುದು. ಮೊದಲು ಒಂದೇ ಇತ್ತು, ಆಮೇಲೆ ಸಹಕಾರಿಗಳೂ ಇವೆ- ಎಂಬ ವಿಶೇಷವಿದ್ದೇ ಇದೆ.

(ವಿಜ್ಞಾನವಾದಿ) :- ಕಾರಣಕ್ಕೆ ಮತ್ತೊಂದರ ಅಪೇಕ್ಷೆಯು ಯುಕ್ತವಲ್ಲ ವಲ್ಲ ![1]

(ಸಿದ್ಧಾಂತಿ) :- (ಹಾಗಾದರೆ) ಅಕಾರಣವಾದದ್ದಕ್ಕೂ ಮತ್ತೊಂದರ ಬಯಕೆ ಇನ್ನೂ ಇಲ್ಲವಾದ್ದರಿಂದ[2] ಯಾವದಕ್ಕೂ ಸಹಕಾರಿಯಿಲ್ಲವೆಂದೇ ಆಗುವದು! ಹೀಗಲ್ಲದೆ ಅಕಾರಣವಾದದ್ದು ಕಾರಣದ ಉತ್ಪತ್ತಿಗಾಗಿ (ಸಹಕಾರಿಯನ್ನು) ಬಯಸುತ್ತದೆ- ಎನ್ನುವದಾದರೆ,[3] ಆಗ ಅದು ಕಾರಣಕ್ಕೆ ಕಾರಣವೊ, ಕಾರಣ ವಲ್ಲವೊ ? ಕಾರಣವಾದರೆ ಬಯಸಬಾರದು, ಕಾರಣವಲ್ಲದಿದ್ದರೆ ಇನ್ನೂ ಬಯಸಬಾರದು !

ಇನ್ನು ಕಾರಣಗಳಿಗೆ ಸಹಕಾರಿಗಳ ಅಪೇಕ್ಷೆಯೇ ಇಲ್ಲ ಎಂದು (ಪೂರ್ವಪಕ್ಷಿ) ಹೇಳುವದಾದರೆ (ಅದು) ಅನುಭವಕ್ಕೆ ವಿರುದ್ಧವಾಗುವದು. ಏಕೆಂದರೆ ಕಾರಣ ಗಳು ಸಹಕಾರಿಯನ್ನು ಬಯಸುವದು (ಅನುಭವದಲ್ಲಿ) ಕಂಡುಬಂದಿದೆ. ಆದ್ದರಿಂದ ಹೇತುವಿದ್ದರೇ ಕಾರ್ಯವಾಗುವದು ಕಂಡುಬರುವದರಿಂದ ಹೇಗೆ ಕಾರ್ಯವಿದ್ದ ಮಾತ್ರದಿಂದ ಕಾರಣವು ಕಾರಣವೆಂಬುದು ಯಾವದೋ ಒಂದು ಊಹಿಸಲಾಗದ ಕ್ರಮದಿಂದ ತಿಳಿಯಬರುತ್ತದೆಯೋ, ಹಾಗೆಯೇ ಸಹಕಾರಿಸಮೇತವಾದ (ಕಾರಣ ವಿದ್ದರೇ ಕಾರ್ಯವು) ಕಂಡುಬರುವದರಿಂದ ಸಹಕಾರ್ಯಪೇಕ್ಷವಾದ (ಕಾರಣಕ್ಕೆ) ಕಾರಣತ್ವವು ಎಂದು ನಿಶ್ಚಯಿಸಬೇಕಾಗಿರುತ್ತದೆ.[4]

## ಸಹಕಾರಿಗಳ ವಿಷಯಕ್ಕೆ ವಿವಾದ

(ಪಂಚಪಾದಿಕಾ)

೪೮. ಯಸ್ತು ಮನ್ಯತೇ ಸಹಕಾರಿಜನಿತವಿಶೇಷೋ ಹೇತುಃ ಕಾರ್ಯಂ ಜನಯತಿ । ಅನ್ಯಥಾ ಅನುಪಕಾರಿಣೋಽಪೇಕ್ಷಾಯೋಗಾತ್ ಇತಿ, ಸ ವಕ್ತವ್ಯಃ- ವಿಶೇಷಸ್ಯ ಸ ಹೇತುಃ, ಅಹೇತುರ್ವಾ ? ಅಹೇತುಶ್ಚೇತ್ ವಿಶೇಷೋತ್ಪತ್ತೌ

---

1. ತಾನು ಅರ್ಥಕ್ರಿಯೆಗೆ ಕಾರಣವೇ ಆಗಿದ್ದರೆ ಮತ್ತೊಂದರ ನೆರವನ್ನೇಕೆ ಬಯಸ ಬೇಕು ? ತಾನೇ ಕಾರ್ಯವನ್ನುಂಟುಮಾಡಬಹುದಲ್ಲವೆ ?

2. ಕಾರಣವೇ ಅಲ್ಲದ್ದಕ್ಕೆ ಸಹಕಾರಿ ಇದ್ದರೆತಾನೆ ಕಾರ್ಯವನ್ನುಂಟುಮಾಡೀತೆ ? ಇಲ್ಲ. ಈ ನಿಮ್ಮ ನಿಯಮದ ಪ್ರಕಾರ ಯಾವದಕ್ಕೂ ಸಹಕಾರಿ ಬೇಡವೆಂದೇ ಆಗಿಬಿಟ್ಟೀತು; ಇದನ್ನು ಯಾರೂ ಒಪ್ಪರು.

3. ಸಹಕಾರಿಗಳ ನೆರವಿನಿಂದಲೇ ಅದು ಕಾರಣವಾಗುತ್ತದೆ, ಮೊದಲು ಕಾರಣವಲ್ಲ- ಎಂದರ್ಥ.

4. ಕಾರಣವಾಗಿದ್ದರೂ ಅದಕ್ಕೆ ಸಹಕಾರಿ ಏಕೆ ?- ಎಂಬುದು ಕುತರ್ಕ. ಕಾರಣವೇ ಕಾರಣವಾಗಿರುವದೇಕೆ ?- ಎಂದು ಹೇಗೆ ಕೇಳುವದಿಲ್ಲವೋ ಅನುಭವದಲ್ಲಿ ಕಂಡಿರುವದರಿಂದ ಕಾರಣವೆಂದು ಹೇಗೆ ಒಪ್ಪುವೆವೋ ಹಾಗೆಯೇ ಸಹಕಾರಿಯೂ ಬೇಕಾಗಬಹುದೆಂಬುದನ್ನು ಅನುಭವದಿಂದಲೇ ನಿಶ್ಚಯಿಸಬೇಕು- ಎಂದು ಅಭಿಪ್ರಾಯ.

ನಾಪೇಕ್ಷ್ಯೇತ ; ತತ್ರ ಕೇವಲಾ ಏವ ಸಹಕಾರಿಣೋ ವಿಶೇಷಮ್ ಉತ್ಪಾದ
ಯೇಯುಃ, ತತಶ್ಚ ಕಾರ್ಯಂ ಸ್ಯಾತ್ । ಅಥ ಹೇತುಃ, ಸಹಕಾರಿಭಿಃ ಜನಿತ
ವಿಶೇಷಃ ತಮೇವ ಕಥಂ ಕುರ್ಯಾತ್ ; ವಿಶೇಷಸ್ಯ ವಾ ಜನನೇ ಅನವಸ್ಥಾ !
ಅಥ ಮತಮ್, ನ ಸರ್ವಂ ಕಾರ್ಯಂ ಸಹಕಾರಿಭಿರ್ಜನಿತಾತ್ಮಭೇದಹೇತು
ಜನ್ಯಮ್ ; ಸಮಗ್ರೇಷು ಹೇತುಷು ತಾವತ್ಯೇವಾಭವತ್ ಅಙ್ಕುರಾದಿ । ತಥಾ
ಕಿಞ್ಚಿತ್ ಸಂನಿಹಿತಸಹಕಾರಿಹೇತುಜನ್ಯಮ್; ಯಥಾ ಆಕ್ಷೇಪಕಾರೀನ್ದ್ರಿಯಾದಿ
ಜ್ಞಾನಮ್ । ತತ್ರ ಆದ್ಯೋ ವಿಶೇಷಃ ಸಹಕಾರಿಸಂನಿಧಾನಮಾತ್ರಲಭ್ಯಃ ಆಕ್ಷೇಪ
ಕಾರೀನ್ದ್ರಿಯಾದಿಜ್ಞಾನವತ್ ಇತಿ ನಾನವಸ್ಥಾ । ಅನುಪಕುರ್ವನ್ನಪಿ ತರ್ಹಿ
ಸಹಕಾರ್ಯಪೇಕ್ಷ್ಯೇತ । ನ ಹಿ ತತ್ರ ಹೇತೋಃ ಸಹಕಾರಿಭ್ಯ ಆತ್ಮಭೇದಃ ।
ನಾನುಪಕುರ್ವನ್ ಅಪೇಕ್ಷ್ಯತೇ, ಅತಿಪ್ರಸಙ್ಗಾತ್ । ಸ್ವರೂಪೇ ತು ನೋಪ
ಕರೋತಿ, ಕಿಂ ತು ಕಾರ್ಯೇ; ತತ್ಸಿದ್ಧೇಸ್ತನ್ನಾನ್ತರೀಯಕತ್ವಾತ್ । ನಿತ್ಯೋಽಪಿ
ತರ್ಹಿ ಅನಾಧೇಯಾತಿಶಯೋ ಭಾವಃ ಕಾರ್ಯಸಿದ್ಧಯೇ ಕ್ಷಣಿಕ ಇವ ಸಹಕಾರಿ
ಣಮ್ ಅಪೇಕ್ಷತೇ- ಇತಿ ಕಿಂ ನಾಭ್ಯುಪೇಯತೇ ? ಯಥೈವ ಕ್ಷಣಿಕೋ ಭಾವಃ
ಸಹಕಾರಿಸಮವಧಾನೇ ಏವ ಕಾರ್ಯಂ ಜನಯತಿ ಸಾಮಗ್ರೀಸಾಧ್ಯತ್ವಾತ್, ತಥಾ
ನಿತ್ಯೋಽಪಿ ಸ್ವರೂಪಾನುಪಯೋಗಿತ್ವೇಽಪಿ ಸಹಕಾರಿಸಮವಧಾನಂ ಕಾರ್ಯೋಪ
ಯೋಗಾದಪೇಕ್ಷೇತ । ಅಥ ಮತಮ್ । ಕ್ಷಣಿಕೋಽಪಿ ನೈವಾಪೇಕ್ಷತೇ, ಜನ್ಯ
ಜನಕಸ್ಯ ಸ್ವಯಮ್ ಅನ್ಯಾಪೇಕ್ಷಾನುಪಪತ್ತೇಃ । ಕಾರ್ಯಂ ತು ಯದನ್ಯ
ಸಂನಿಧೌ ಭವತಿ, ತತ್ ತಸ್ಯಾನ್ಯಸಂನಿಧಾವೇವ ಭಾವಾತ್, ಅನ್ಯಥಾ ಚಾಭಾ
ವಾತ್ । ನಿತ್ಯಸ್ಯ ತು ಜನಕಸ್ಯ ಸರ್ವದಾ ಜನಕತ್ವಪ್ರಸಙ್ಗಃ । ಕೋ ಹೇತು
ರನ್ಯಾಪೇಕ್ಷಾಯಾಃ ? ಕ್ಷಣಿಕಸ್ತು ಯೋ ಜನಕೋ ಭಾವಃ, ಸ ನ ಪುರಸ್ತಾತ್,
ನ ಪಶ್ಚಾತ್ ಇತಿ ನ ಪೂರ್ವೋತ್ತರಕಾಲಯೋಃ ಕಾರ್ಯೋತ್ಪಾದಃ ॥

ಇದಮಯುಕ್ತಂ ವರ್ತತೇ । ಕಿಮತ್ರಾಯುಕ್ತಮ್ ? ಸತಿ ನಿಯಮೇಽಪಿ
ನಿರಪೇಕ್ಷತ್ವಮ್ । ತಥಾ ಹಿ- ಯಃ ಕಶ್ಚಿತ್ ಕಸ್ಯಚಿತ್ ಕ್ವಚಿನ್ನಿಯಮಃ, ಸ
ತದಪೇಕ್ಷಾಪ್ರಭಾವಿತಃ । ಅನಪೇಕ್ಷತ್ವೇ ನಿಯಮಾನುಪಪತ್ತೇಃ । ಏವಂ ಹಿ
ಕಾರ್ಯಕಾರಣಭಾವಸಿದ್ಧಿಃ । ಕಾರ್ಯಾರ್ಥಿಭಿಶ್ಚ ವಿಶಿಷ್ಟಾನಾಂ ಹೇತೂನಾಮ್
ಉಪಾದಾನಮ್ । ತತ್ರ ಯದಿ ನ ಕ್ಷಣಿಕಂ ಕಾರಣಂ ಸಹಕಾರಿಣಮ್ ಅಪೇಕ್ಷತೇ,
ನಾಪಿ ತತ್ಕಾರ್ಯಮ್ । ಕಥಂ ನಿಯಮಃ ? ತಥಾ ಹಿ- ಹೇತುಪರಂಪರಾಪ್ರತಿ
ಬನ್ಧಾತ್, ನ ಹೇತುಃ ಸ್ವರೂಪೇ ಸಹಕಾರಿಣಮ್ ಅಪೇಕ್ಷತೇ । ನ ತು ಕಾರ್ಯೇ
ಸ್ವಯಂಜನನಶಕ್ತೇಃ । ನಾಪಿ ಕಾರ್ಯಮ್ ; ಏಕಸ್ಯಾಪಿ ಶಕ್ತಿಮತ್ತ್ವೇನ ಪ್ರಸಹ್ಯ
ಜನನಾತ್ ತತ್ರ ಸಹಕಾರಿಸಂನಿಧಿನಿಯಮೋಽನರ್ಥಕಃ ಸ್ಯಾತ್ । ಕಾಕ
ತಾಲೀಯಮ್ ಉಚ್ಯತೇ । ತಥಾ ಚ ಕಾರ್ಯಕಾರಣವ್ಯವಹಾರಾಃ ಸರ್ವ ಏವ

ಉತ್ಪದ್ಯೇಯುಃ । ತಸ್ಮಾತ್ ಕ್ಷಣಿಕಸ್ಯಾಪಿ ಭಾವಸ್ಯ ಸ್ವಯಂಜನಕಸ್ಯ ಸ್ವರೂಪಾನುಪಯೋಗಿನ್ಯಪಿ ಸಹಕಾರಿಣಿ ಕಾರ್ಯಸಿದ್ಧಯೇ ಅಪೇಕ್ಷಾ ವಾಚ್ಯಾ; ಕಾರ್ಯಸ್ಯೈವ ವಾ ಸಾಮಗ್ರೀಸಾಧ್ಯತ್ವಾತ್ ತತ್ರ ನಿಯಮಾತ್ । ತದಾ ನಿತ್ಯೇಽಪೀತಿ ನ ವಿಶೇಷಂ ಪಶ್ಯಾಮಃ ॥

(ಅರ್ಥ)

ಇನ್ನು ಯಾವ (ವೈಶೇಷಿಕಾದಿಪಕ್ಷದವ)ನು[1] ಸಹಕಾರಿಯಿಂದುಂಟಾದ ವಿಶೇಷದಿಂದ[2] ಹೇತುವು ಕಾರ್ಯವನ್ನುಂಟುಮಾಡುತ್ತದೆ, ಏಕೆಂದರೆ ಯಾವ ಉಪಕಾರವನ್ನೂ ಮಾಡದಿದ್ದರೆ (ಅಂಥ ಸಹಕಾರಿಯನ್ನು) ಬಯಸುವದೆಂಬುವದೇ ಹೊಂದುವದಿಲ್ಲ- (ಹೀಗೆಂದು) ಅಭಿಪ್ರಾಯಪಡುವನೋ, ಅವನಿಗೆ ಹೇಳಬೇಕಾದದ್ದೇನೆಂದರೆ, ಅದು ವಿಶೇಷಕ್ಕೆ ಕಾರಣವೊ, ಅಲ್ಲವೊ ? ಕಾರಣವಲ್ಲದಿದ್ದರೆ ವಿಶೇಷವನ್ನುಂಟುಮಾಡುವದಕ್ಕೆ (ಅದನ್ನು) ಬಯಸಬಾರದು ; ಅಲ್ಲಿ ಬರಿಯ ಸಹಕಾರಿಗಳೇ ವಿಶೇಷವನ್ನುಂಟುಮಾಡಬಹುದಾಗುವದು. ಆದರಿಂದಲೇ ಕಾರ್ಯವಾಗಬಹುದಾಗುವದು.[3] ಹಾಗಿಲ್ಲದೆ ಅದು ಕಾರಣವೆ, ಎಂದರೆ ಸಹಕಾರಿಗಳಿಂದ ವಿಶೇಷವು ಉಂಟಾಗದೆ, ಅದನ್ನೇ[4] ಹೇಗೆ ಮಾಡೀತು ? ಅಥವಾ ವಿಶೇಷವನ್ನುಂಟುಮಾಡುತ್ತದೆ ಎಂಬ ಪಕ್ಷದಲ್ಲಿಯೂ ಅನವಸ್ಥೆಯುಂಟಾಗುವದು.[5]

ಇನ್ನು ನಿಮ್ಮ ಮತವು ಹೀಗಿರಬಹುದು : ಎಲ್ಲಾ ಕಾರ್ಯವೂ ಸಹಕಾರಿಗಳಿಂದುಂಟಾದ ತನ್ನ ವಿಶೇಷವುಳ್ಳ ಕಾರಣದಿಂದುಂಟಾಗುವದಿಲ್ಲ ; (ಉದಾಹರಣೆಗೆ) ಕಾರಣಗಳು ಸಮಗ್ರವಾಗಿದ್ದರೆ, ಅಷ್ಟರಿಂದಲೇ ಮೊಳಕೆ ಮುಂತಾದದ್ದು ಆಯಿತು.[6] ಇದರಂತೆ ಒಂದೊಂದು (ಕಾರ್ಯವು) ಸಮೀಪದಲ್ಲಿರುವ ಸಹಕಾರಿಯಿಂದೊಡಗೂಡಿದ ಕಾರಣದಿಂದ ಉಂಟಾಗುವದು ; ತಟ್ಟನೆ (ಕಾರ್ಯ

---

1. ಈ ಪಕ್ಷವು ಪ್ರಕೃತವಲ್ಲದಿದ್ದರೂ ಅದನ್ನು ಅನುವಾದಮಾಡಿಕೊಂಡು ಕ್ಷಣಿಕವಾದಿಯನ್ನು ಖಂಡಿಸುವದೇ ಇಲ್ಲಿ ಉದ್ದೇಶವು- ಎಂದು ಪಂ. ವಿ.

2. ಸಹಕಾರಿಯು ಹೇತುವಿನಲ್ಲಿ ವಿಶೇಷವನ್ನುಂಟುಮಾಡುತ್ತದೆ ; ವಿಶೇಷಸಹಿತವಾದ ಹೇತುವು ಕಾರ್ಯವನ್ನುಂಟುಮಾಡುತ್ತದೆ- ಎಂಬುದು ಈ ವಾದಿಗಳ ಮತ.

3. ಹೇತುವು ಸಹಕಾರಿಯಿಂದಾಗುವ ವಿಶೇಷಕ್ಕೆ ಕಾರಣವಲ್ಲದಿದ್ದರೆ, ವಿಶೇಷವು ಅದನ್ನು ಬಯಸದೆ ಕಾರ್ಯವನ್ನುಂಟುಮಾಡಲಿ !

4. ಅದೂ ವಿಶೇಷಕ್ಕೆ ಕಾರಣವೆಂದರೆ, ವಿಶೇಷವನ್ನುಂಟುಮಾಡುವ ಮುಂಚೆ ವಿಶೇಷವಿಲ್ಲವಲ್ಲ ! ಅದೇ ವಿಶೇಷವನ್ನೇ ವಿಶೇಷವಿಲ್ಲದೆ ಹೇಗೆ ಮಾಡುತ್ತದೆ ?

5. ವಿಶೇಷವು ಇದೆ ಎಂದರೆ ಅದನ್ನುಂಟುಮಾಡುವದಕ್ಕೆ ಮತ್ತೊಂದು ವಿಶೇಷ, ಅದಕ್ಕೆ ಮತ್ತೊಂದು ವಿಶೇಷ- ಹೀಗೆ ಬೇಕಾಗುವದಲ್ಲ !

6 ಅಲ್ಲಿ ವಿಶೇಷವೇನೂ ಬೇಕಿಲ್ಲ. ಕಾರಣಗಳಿಂದಲೇ ಕಾರ್ಯವಾಗುತ್ತದೆ.

ವನ್ನುಂಟುಮಾಡುವ) ಇಂದ್ರಿಯಾದಿಗಳಿಂದುಂಟಾದ ಜ್ಞಾನವು (ಇಂಥ ಕಾರ್ಯ.)[1] ಹೀಗಿರುವಲ್ಲಿ ಮೊದಲನೆಯ ವಿಶೇಷವು ತಟ್ಟನೆ (ಕಾರ್ಯವನ್ನುಂಟು)ಮಾಡುವ ಇಂದ್ರಿಯಾದಿಜ್ಞಾನದಂತೆ ಸಹಕಾರಿಯ ಸಂನಿಧಾನಮಾತ್ರದಿಂದ ಆಗಿಬಿಡುತ್ತದೆಯಾದ್ದರಿಂದ ಅನವಸ್ಥಾದೋಷವಿಲ್ಲ.[2]

(ಸಿದ್ಧಾಂತಿ) :-ಹಾಗಾದರೆ ಉಪಕಾರವನ್ನು ಮಾಡದಿರುವ ಸಹಕಾರಿಯ ಅಪೇಕ್ಷೆಯೂ ಇದೆ (ಎಂದಾಯಿತು) ; ಏಕೆಂದರೆ ಅಲ್ಲಿ ಹೇತುವಿಗೆ ಸಹಕಾರಿಗಳಿಂದ ತನ್ನಲ್ಲಿ (ಯಾವ) ವಿಶೇಷವೂ (ಆಗಲಿಲ್ಲ).[3]

(ವಿಜ್ಞಾನವಾದಿ)[4] :- ಉಪಕಾರಮಾಡದೆ ಇರುವದನ್ನು ಅಪೇಕ್ಷಿಸುವದೆಂಬುದಿಲ್ಲ. ಏಕೆಂದರೆ (ಹಾಗಾದರೆ) ಅತಿಪ್ರಸಂಗವಾದೀತು.[5] ಮತ್ತೇನೆಂದರೆ (ಸಹಕಾರಿಯು) ಸ್ವರೂಪಕ್ಕೆ ಉಪಕಾರಮಾಡುವದಿಲ್ಲ, ಕಾರ್ಯವನ್ನುಂಟುಮಾಡುವದಕ್ಕೆ (ಅದು ಉಪಕಾರಕವಾಗಿದೆ); ಆ (ಉಪಕಾರವು ಆದರೆ) ಅನಂತರದಲ್ಲಿಯೇ ( ಕಾರ್ಯದ ) ಸಿದ್ಧಿಯು ( ತಾನೇ) ಆಗಿಬಿಡುತ್ತದೆಯಾದ್ದರಿಂದ (ಹೀಗೆನ್ನಬೇಕು.[6] )

(ಸಿದ್ಧಾಂತಿ) :- ಹಾಗಾದರೆ (ತನ್ನಲ್ಲಿ) ಯಾವ ಅತಿಶಯವನ್ನುಂಟುಮಾಡುವದಕ್ಕೂ ಆಗದಿರುವ ನಿತ್ಯಪದಾರ್ಥವೂ ಕಾರ್ಯಸಿದ್ಧಿಗೆ ಕ್ಷಣಿಕ(ಪದಾರ್ಥ)ದಂತೆ ಸಹಕಾರಿಕಾರಣವನ್ನು ಬಯಸುತ್ತದೆ ಎಂದು (ನೀವು) ಏತಕ್ಕೆ ಒಪ್ಪುವದಿಲ್ಲ ? (ಕಾರ್ಯವು) ಸಾಮಗ್ರೀಸಾಧ್ಯವಾಗಿರುವದರಿಂದ[7] ಕ್ಷಣಿಕಪದಾರ್ಥವು ಹೇಗೆ ಸಹಕಾರಿಸಹಿತವಾದರೇ ಕಾರ್ಯವನ್ನುಂಟುಮಾಡುವದೋ, ಹಾಗೆಯೇ ನಿತ್ಯ

---

1. ಕಣ್ಣನ್ನು ಬಿಟ್ಟರೆ ರೂಪವು ಕಂಡುಬಿಡುತ್ತದೆ; ಚಕ್ಷುರಿಂದ್ರಿಯದಲ್ಲಿ ವಿಶೇಷವೇನೂ ಆಗಬೇಕಾದದ್ದಿಲ್ಲ.

2. ಹೇತುವಿನಲ್ಲಿ ವಿಶೇಷವುಂಟಾಗುವದಕ್ಕೆ ಮತ್ತೊಂದು ವಿಶೇಷವೇನೂ ಬೇಡ, ಇಂದ್ರಿಯಜನ್ಯಜ್ಞಾನದಂತೆ ತಟ್ಟನೆ ತಾನೇ ತನ್ನ ಕಾರ್ಯವನ್ನು ಅದು ಮಾಡಿಬಿಡಬಹುದು.

3. ಸಹಕಾರಿಯಿದ್ದಾಗಲೆಲ್ಲ ಹೇತುವಿನಲ್ಲಿ ವಿಶೇಷವನ್ನುಂಟುಮಾಡಬೇಕೆಂಬ ನಿಯಮವಿಲ್ಲವೆಂದು ನೀವೇ ಒಪ್ಪಿದ್ದೀರಷ್ಟೆ ? ಎಂದು ಭಾವ.

4. ಮತಾಂತರದ ಮೇಲಿನ ಶಂಕೆಯಿಹಾದರೂ ವಿಜ್ಞಾನವಾದಿ ತನ್ನ ಮತವನ್ನು ತಾನು ಇಲ್ಲಿ ಸ್ಪಷ್ಟಪಡಿಸಿಕೊಂಡಿರುತ್ತಾನೆ.

5. ಉಪಕಾರಕವಲ್ಲದ ಯಾವ ಪದಾರ್ಥವನ್ನಾದರೂ ಬಯಸಬಹುದೆಂದಾದೀತು.

6. ಸ್ವರೂಪಕ್ಕೆ ಅತಿಶಯವೇನೂ ಆಗದಿದ್ದರೂ ಕಾರ್ಯವಾಗುವದಕ್ಕೆ ಸಹಕಾರಿಯಿರಬಹುದು.

7. ಅನೇಕಕಾರಕಗಳಿಂದಾಗತಕ್ಕದ್ದಾಗಿರುವದರಿಂದ. ಪಂ. ವಿ.

ವಾದರೂ ತನ್ನ ಸ್ವರೂಪಕ್ಕೆ (ಯಾವ) ಉಪಯೋಗವೂ ಇಲ್ಲದಿದ್ದರೂ ಕಾರ್ಯಕ್ಕೆ ಉಪಯೋಗವಾಗುವದರಿಂದ ಸಹಕಾರಿಸಾಧನವನ್ನು ಅಪೇಕ್ಷಿಸಬಹುದು.[1]

(ವಿಜ್ಞಾನವಾದಿ) :– ಕ್ಷಣಿಕಕ್ಕೂ ಮತ್ತೊಂದರ ಅಪೇಕ್ಷೆಯಿಲ್ಲ.[2] ಏಕೆಂದರೆ ಮತ್ತೊಂದನ್ನುಂಟುಮಾಡುವ (ಕಾರಣಕ್ಕೆ) ತನಗೇ ಮತ್ತೊಂದರ ಅಪೇಕ್ಷೆಯಿರುತ್ತದೆ ಎಂಬುದು ಹೊಂದುವದಿಲ್ಲ. ಕಾರ್ಯವಾದರೋ ಯಾವ ಮತ್ತೊಂದು ಇದ್ದರೇ ಆಗುವದೋ (ಅದನ್ನು) ಅಪೇಕ್ಷಿಸುತ್ತದೆ. ಏಕೆಂದರೆ ಆ (ಕಾರ್ಯವು) ಮತ್ತೊಂದು ಹತ್ತಿರವಿದ್ದರೇ ಆಗತಕ್ಕದ್ದಾಗಿರುತ್ತದೆ, ಇಲ್ಲದಿದ್ದರೆ ಆಗುವದಿಲ್ಲ. ನಿತ್ಯಕಾರಣವಾದರೋ (ಕಾರ್ಯ)ಜನಕವಾದರೆ, ಯಾವಾಗಲೂ (ಕಾರ್ಯವು) ಉಂಟಾಗಬೇಕಾಗುವದು[3]. ಮತ್ತೊಂದನ್ನು ಬಯಸಲು ಕಾರಣವೇನು?[4] ಕ್ಷಣಿಕ ಪದಾರ್ಥವಾದ ಕಾರಣವಾದರೋ ಅದು ಮೊದಲಿರುವದಿಲ್ಲ, ಆಮೇಲೂ ಇರುವದಿಲ್ಲ; ಆದ್ದರಿಂದ ಹಿಂದುಮುಂದಿನ ಕಾಲಗಳಲ್ಲಿ ಕಾರ್ಯವು ಉಂಟಾಗುವ ಹಾಗಿಲ್ಲ.[5]

(ಸಿದ್ಧಾಂತಿ) :– ಇದು ಅಯುಕ್ತವಾಗಿದೆ.

(ವಿಜ್ಞಾನವಾದಿ) :– ಇಲ್ಲಿ ಅಯುಕ್ತವಾದದ್ದು ಯಾವದು ?

(ಸಿದ್ಧಾಂತಿ) :– ನಿಯಮವಿದ್ದರೂ ಅಪೇಕ್ಷೆಯಿರುವದಿಲ್ಲ– ಎಂಬುದು[6]. ಹೇಗೆಂದರೆ, ಯಾವದಕ್ಕಾದರೂ ಎಲ್ಲಿಯಾದರೂ ಯಾವ ನಿಯಮ(ವಿರುವದೋ) ಅದು ಅದರ ಅಪೇಕ್ಷೆಯಿಂದಾದದ್ದು ; ಏಕೆಂದರೆ ಅಪೇಕ್ಷೆಯಿಲ್ಲದಿದ್ದರೆ ನಿಯಮವೆಂಬುದೇ ಹೊಂದುವದಿಲ್ಲ. ಹೀಗಾದರಲ್ಲವೆ, ಕಾರ್ಯಕಾರಣಭಾವವು ಸಿದ್ಧವಾಗುತ್ತದೆ ? ಮತ್ತು ಕಾರ್ಯವನ್ನು ಬಯಸುವವರು ಆಯಾ ಕಾರಣಗಳನ್ನು

---

1. ಹಾಗಾದರೆ ಕ್ಷಣಿಕವೇನು, ನಿತ್ಯವೇನು ? ನಿತ್ಯವಸ್ತುವಿಗೂ ಸಹಕಾರಿಯಿದ್ದರೇ ಅರ್ಥಕ್ರಿಯೆಯಾಗುತ್ತದೆ ; ಸಹಕಾರಿಯಿಂದ ಅದರ ಸ್ವರೂಪದಲ್ಲಿ ಯಾವ ಹೆಚ್ಚುಕಡಿಮೆಯೂ ಆಗುವದಿಲ್ಲ ಎಂದೇಕೆ ಹೇಳಬಾರದು ? ಇಲ್ಲಿ ಪ್ರತಿವಾದಿಯು ತರ್ಕದಿಂದಲೇ ತಮ್ಮ ಮತವನ್ನು ಸಾಧಿಸಿಕೊಂಡಿದ್ದಾರೆ. ಇದೆಲ್ಲ ಕೇವಲ ತರ್ಕಮಾತ್ರವೆಂಬುದನ್ನು ನೆನಪಿನಲ್ಲಿಡಬೇಕು.

2. ಉಪಕಾರ್ಯಕಾರಣಕ್ಕೆ ಉಪಕಾರಕಸಹಕಾರಿಯ ಅಪೇಕ್ಷೆಯಿದೆ, ಅನುಪಕಾರ್ಯಕ್ಕಿಲ್ಲ– ಎಂದು ಮತ್ತೊಮ್ಮೆ ಇಲ್ಲಿ ಶಂಕೆಯನ್ನು ತೆಗೆದಿದೆ. ಪಂ. ವಿ.

3. ಏಕೆಂದರೆ ಕಾರಣವು ಇದ್ದೇ ಇದೆ.

4. ಕಾರಣವಾದಮೇಲೆ ಜನನಶಕ್ತಿ ಇದ್ದೇ ಇದೆಯಲ್ಲ !

5. ಅದು ತಾನಿದ್ದಾಗ ಕಾರ್ಯವನ್ನುಂಟುಮಾಡಿ ನಾಶವಾಗಿಬಿಡುತ್ತದೆ, ಅಷ್ಟೆ.

6. ಸಹಕಾರಿಗಳು ಇದ್ದರೇ ಕಾರ್ಯವಾಗುವದು, ಇಲ್ಲದಿದ್ದರೆ ಇಲ್ಲ– ಎಂಬ ನಿಯಮವಿದ್ದರೂ ಉಪಕಾರ್ಯೋಪಕಾರಕಸಂಬಂಧವಿಲ್ಲ– ಎಂಬುದು ಪಂ. ವಿ.

ತೆಗೆದುಕೊಳ್ಳುತ್ತಾರೆ ?[1] ಇಲ್ಲಿ ಕ್ಷಣಿಕಕಾರಣವು ಸಹಕಾರಿಯನ್ನು ಬಯಸು ವದಿಲ್ಲ, ಅದರ ಕಾರ್ಯವೂ ಬಯಸುವದಿಲ್ಲ– ಎಂದಾದರೆ ನಿಯಮವು ಹೇಗೆ ? ಇದರ ವಿವರ : ಹೇತುಪರಂಪರೆಯ ಪ್ರತಿಬಂಧವಿರುವವರಿಂದ[2] ಹೇತುವು ತನ್ನ ಸ್ವರೂಪಕ್ಕಾಗಿ ಸಹಕಾರಿಯನ್ನು ಬಯಸುವದಿಲ್ಲ, ಕಾರ್ಯಕ್ಕಾಗಿಯೂ ಬಯಸು ವದಿಲ್ಲ ; ಏಕೆಂದರೆ ತಾನೇ ಜನನಶಕ್ತಿಯುಳ್ಳದ್ದಾಗಿರುತ್ತದೆ. ಕಾರ್ಯವೂ (ಅದನ್ನು) ಅಪೇಕ್ಷಿಸುವದಿಲ್ಲ. ಏಕೆಂದರೆ ಒಂದಕ್ಕೇ ಶಕ್ತಿಯಿರುವದರಿಂದ, ನಿರ್ಬಂಧದಿಂದ ಹುಟ್ಟಿಯೇತೀರುವದರಿಂದ, ಅಲ್ಲಿ ಸಹಕಾರಿಯ ಸಂನಿಧಿ ಯಿರಬೇಕೆಂಬ ನಿಯಮವು ವ್ಯರ್ಥವಾಗುವದು. ಕಾಕತಾಲೀಯವೆಂದು ಹೇಳಿ ದಂತಾಗುತ್ತದೆ.[3] ಹೀಗಾಗಿ ಕಾರ್ಯಕಾರಣವ್ಯವಹಾರಗಳೆಲ್ಲ ಹಾಳಾಗುವವು. **ಆದ್ದರಿಂದ ಸ್ವಯಂಜನಕವಾದ ಕ್ಷಣಿಕಪದಾರ್ಥಕ್ಕೂ ಸ್ವರೂಪಕ್ಕೆ ಉಪಯೋಗವಿಲ್ಲದಿದ್ದರೂ ಕಾರ್ಯಸಿದ್ಧಿಗಾಗಿ ಸಹಕಾರಿಯ ಅಪೇಕ್ಷೆ ಯಿದೆ ಎನ್ನಬೇಕಾಯಿತು. ಅಥವಾ ಕಾರ್ಯಕ್ಕೆ ಅದು (ಅನೇಕ) ಸಾಮಗ್ರೀಸಿದ್ಧವಾಗಿರುವದರಿಂದ (ಅದರ ಅಪೇಕ್ಷೆಯಿದೆ ಎನ್ನಬೇಕಾ ಯಿತು. ) ಏಕೆಂದರೆ ಅದರಲ್ಲಿ (ಆ) ನಿಯಮವಿದೆ.**[4] ಹಾಗೆಯೇ ನಿತ್ಯ (ಪದಾರ್ಥದ) ವಿಷಯದಲ್ಲಿಯೂ (ಆಗಬಹುದಾಗಿದೆ) ; ಇದರಲ್ಲಿ ಯಾವ ವಿಶೇಷವೂ ನಮಗೆ ಕಾಣಿಸುತ್ತಿಲ್ಲ[5]

## ವಿಜ್ಞಾನವಾದಮತಸಾಂಕರ್ಯಪರಿಹಾರದ ಉಪಸಂಹಾರ

(ಪಂಚಪಾದಿಕಾ)

೪೯. ತದೇವಮ್ ಅಹಂಕರ್ತುಃ ಸದಾ ಏಕರೂಪಾವಗಮಾತ್ ಸ್ಥಾಯಿ ತ್ವೇಽಪಿ ಅರ್ಥಕ್ರಿಯಾಸಂಭವಾತ್, ನ ನೀಲಸ್ಯ ಸ್ವಗತಾಪರೋಕ್ಷತ್ವಮಾತ್ರೇಣ ಮಾಹಾಯಾನಿಕಪಕ್ಷಃ ಸಮರ್ಥ್ಯತೇ ; ಕಿಂ ತು ಗ್ರಾಹಕಸ್ಯ ಅಹಙ್ಕರ್ತುರಾತ್ಮನಃ ಸ್ಥಾಯಿನೋಽಭಾವೇ । ಸ ಚೈಕರೂಪೋಽನುಭವಾದ್, ಯುಕ್ತಿಬಲಾಚ್ಚ ಪ್ರಸಾಧಿತಃ ॥

---

1. ನಿಯಮವಿದ್ದರೇ ಇಂಥ ಕಾರ್ಯಕ್ಕೆ ಇಂಥ ಕಾರಣವು ಬೇಕು ಎಂದು ಅದನ್ನೇ ತೆಗೆದುಕೊಂಡು ಕಾರ್ಯವನ್ನು ಸಿದ್ಧಪಡಿಸಿಕೊಳ್ಳುತ್ತಾರೆ.

2. ಕಾರಣಕ್ಕೆ ಸ್ವಯಂಶಕ್ತಿಯಿರುವದರಿಂದ ಎಂದರ್ಥ. ಪಂ. ವಿ.

3. ಕಾಗೆ ಬರುವದಕ್ಕೆ ಸರಿಯಾಗಿ ತಾಳೆಯಹಣ್ಣು ಬೀಳುವದು ಯಾವದೊಂದು ನಿಯಮವನ್ನೂ ಬಯಸದೆ ಅಕಸ್ಮಾತ್ತಾಗಿ ಆಗುವಂತೆ.

4. ಸಹಕಾರಿಗಳ ಅಪೇಕ್ಷೆಯಿರುವದೆಂಬ ನಿಯಮವಿದೆ.

5. ನಿತ್ಯವಾದ ಪದಾರ್ಥಕ್ಕೂ ಸ್ವರೂಪಕ್ಕೆ ಯಾವ ಉಪಯೋಗವೂ ಇಲ್ಲದಿದ್ದರೂ ಸಹಕಾರಿಗಳು ಬೇಕಾಗಿರುತ್ತವೆ, ಅಥವಾ ಕಾರ್ಯಕ್ಕೆ ಅನೇಕಸಾಮಗ್ರಿಗಳು ಬೇಕಾಗಿರು ವದರಿಂದ ಸಹಕಾರಿಯ ಅಪೇಕ್ಷೆಯಿದೆ– ಎಂದು ಕಲ್ಪಿಸಬಹುದು. ಕ್ಷಣಿಕವಾಗಿದ್ದರೆ ಹೀಗೆ, ನಿತ್ಯವಾದರೆ ಇಲ್ಲ– ಎನ್ನುವದಕ್ಕೆ ವಿಶೇಷಕಾರಣವೇನೂ ಕಾಣುತ್ತಿಲ್ಲ.

ನನು ನಾನುಮೇಯಾದಿಷ್ವಪರೋಕ್ಷತಾ ದೃಶ್ಯತೇ । ಉಚ್ಯತೇ । ನಾನುಮೇಯಾದಿಷು ಅಪರೋಕ್ಷತ್ವಮ್ । ಸ್ವಜ್ಞಾನೋತ್ಪತ್ತೌ ಅವ್ಯಾಪೃತತ್ವಾತ್ । ಲಿಙ್ಗಾದೀನಾಮೇವ ಕುತಶ್ಚಿತ್ ಸಂಬನ್ಧವಿಶೇಷಾತ್ ವಿಶಿಷ್ಟೈಕಾರ್ಥಜ್ಞಾನಹೇತುತ್ವಾತ್ । ಪ್ರಮೇಯಸ್ಯ ಚ ಸ್ವಜ್ಞಾನೋತ್ಪತ್ತಿಹೇತುತ್ವೇ ಪ್ರಮಾಣಾಭಾವಾತ್ । ಅಲಂ ಪ್ರಸಙ್ಗಾಗತಪ್ರಪಞ್ಚೇನ ; ಸ್ವಾವಸರ ಏವೈತತ್ ಸುಗತಮತಪರೀಕ್ಷಣಾಯಾಂ ನಿಪುಣತರಂ ಪ್ರಪಞ್ಚಯಿಷ್ಯಾಮಃ ॥

(ಅರ್ಥ)

ಅಂತೂ ಹೀಗೆ ಅಹಂಕರ್ತೃವು ಯಾವಾಗಲೂ ಒಂದೇ ರೂಪದಲ್ಲಿರುವದು ಗೊತ್ತಾಗಿರುವದರಿಂದ, (ಅದು) ಸ್ಥಿರವಾಗಿದ್ದರೂ ಅರ್ಥಕ್ರಿಯೆಯುಳ್ಳದ್ದಾಗಬಹುದಾಗಿದೆಯಾಗಿ ನೀಲ(ರೂಪವಾದ ವಿಷಯಕ್ಕೆ) ಆತ್ಮಗತಾಪರೋಕ್ಷತ್ವವಿದೆ ಎಂದಮಾತ್ರದಿಂದ[1] ಮಹಾಯಾನಿಕರ ಪಕ್ಷವನ್ನು ಸಮರ್ಥನೆಮಾಡಿದಂತಾಗುವದಿಲ್ಲ ; ಮತ್ತೇತರಿಂದ ಎಂದರೆ ಗ್ರಾಹಕನಾದ ಅಹಂಕರ್ತೃವಾದ ಆತ್ಮನು ಸ್ಥಿರವಾಗಿಲ್ಲ ಎಂದರೆ (ಆ ಪಕ್ಷವನ್ನು ಸಮರ್ಥನೆಮಾಡಿದಂತೆ ಆಗುವದು). ಆ (ಅಹಂಕರ್ತ್ರಾತ್ಮನು) ಒಂದೇ ರೂಪನಾಗಿರುತ್ತಾನೆಂದು ಅನುಭವಬಲದಿಂದಲೂ ಯುಕ್ತಿಬಲದಿಂದಲೂ ಸಾಧಿಸಿದ್ದಾಗಿದೆ.

(ಪೂರ್ವಪಕ್ಷಿ) :— ಅನುಮೇಯಾದಿಗಳಲ್ಲಿ ಅಪರೋಕ್ಷತ್ವವಿಲ್ಲವಲ್ಲ ![2]

(ಸಿದ್ಧಾಂತಿ):— ಹೇಳುತ್ತೇವೆ ; ಅನುಮೇಯಾದಿಗಳಲ್ಲಿ ಅಪರೋಕ್ಷತ್ವವಿರುವದಿಲ್ಲ. ಏಕೆಂದರೆ ತಮ್ಮ ಜ್ಞಾನವುಂಟಾಗುವದರಲ್ಲಿ ಅವು ವ್ಯಾಪೃತವಾಗಿರುವದಿಲ್ಲ. ಲಿಂಗಾದಿಗಳೇ ಯಾವದೋ ಒಂದು ಸಂಬಂಧವಿಶೇಷದಿಂದ ವಿಶಿಷ್ಟವಾದ ಒಂದು ಪದಾರ್ಥದ ಜ್ಞಾನಕ್ಕೆ ಹೇತುವಾಗಿರುತ್ತವೆ[3] ; ಪ್ರಮೇಯವಾದದ್ದು ತನ್ನ ಜ್ಞಾನವನ್ನುಂಟುಮಾಡುವಲ್ಲಿ ಹೇತುವಾಗಿರುವದೆಂಬುದಕ್ಕೆ ಪ್ರಮಾಣವಿಲ್ಲ. ಪ್ರಸಂಗದಿಂದ ಬಂದಿರುವ (ಈ ವಿಷಯವನ್ನು) ವಿಸ್ತರಿಸಿದ್ದು ಸಾಕು. ಅದರ

---

1. ಜ್ಞಾನಾಭೇದವಿದೆ ಎಂದ ಮಾತ್ರದಿಂದ.

2. ವಿಷಯವು ಚೈತನ್ಯವನ್ನು ಅಭಿವ್ಯಕ್ತಿಗೊಳಿಸುವದರಿಂದ ಅಪರೋಕ್ಷವೆನಿಸುತ್ತದೆ ಎಂಬುದು ಪ್ರಕೃತ. ಚೈತನ್ಯಾಭೇದದಿಂದ ವಿಷಯವು ಅಪರೋಕ್ಷವೆಂದಾದರೆ, ವಿಜ್ಞಾನವಾದಿಗಳ ಪಕ್ಷವೇ ಬಂದಿತಲ್ಲ !— ಎಂಬ ಪ್ರಸಂಗವನ್ನು ಈವರೆಗೆ ಪರಿಗಣಿಸಿ, ಈಗ 'ಹಾಗಾದರೆ ಅನುಮೇಯಾದಿಗಳೆಲ್ಲ ವಿಷಯವಾಗಿರುವದರಿಂದ ಅವೂ ಅಪರೋಕ್ಷವಾಗಬೇಕಲ್ಲ !' ಎಂಬ ಶಂಕೆಯನ್ನು ಎಬ್ಬಿಸಿದೆ.

3. ಲಿಂಗವು ವಿಷಯವಾಗಿದೆಯೇ ಹೊರತು ಅನುಮೇಯಾದಿಗಳಲ್ಲ ; ಅವುಗಳಲ್ಲಿ ಕಾರಕತ್ವ ವ್ಯಂಜಕತ್ವರೂಪವಾದ ವ್ಯಾಪಾರವಿರುವದಿಲ್ಲವಾಗಿ ಅವು ಅಪರೋಕ್ಷವಾಗಿಲ್ಲ. ಲಿಂಗವೇ ಅನುಮೇಯಕ್ಕೆ ಸಂಬದ್ಧವಾಗಿರುವದರಿಂದ ಅದರ ಮೂಲಕ ಅನುಮೇಯದ ಅರಿವಾಗುತ್ತದೆ.

ಕಾಲದಲ್ಲಿಯೇ ಸುಗತಮತದ ಪರೀಕ್ಷೆಯನ್ನು ಮಾಡುವಾಗ ಇದನ್ನು ಬಲುಚೆನ್ನಾಗಿ ವಿಸ್ತರಿಸುವೆವು.[1]

## ಅಸ್ಮತ್ಪ್ರತ್ಯಯವಿಷಯತ್ವಭಾಷ್ಯದ ಯೋಜನೆ

(ಪಂಚಪಾದಿಕಾ)

೫೦. ತದೇವಮ್ ಅಹಙ್ಕಾರಗ್ರನ್ಥಿಃ ಅಸ್ಮಚ್ಛಬ್ದಸಂಶಬ್ದಿತಃ ; ಪ್ರತ್ಯಯಶ್ಚಾಸೌ । ಆದರ್ಶೇ ಇವ ಪ್ರತಿಬಿಮ್ಬಸ್ಯ ಅನಿದಞ್ಚಿತ್ಸಂವಲಿತತ್ವೇನ ತಸ್ಯಾಭಿವ್ಯಕ್ತಿಹೇತುತ್ವಾತ್ । ಅತಃ, ತಸ್ಯ ವಿಷಯವದ್ ಭವತೀತಿ ಉಪಚಾರೇಣ ಅನಿದಞ್ಚಿದಾತ್ಮಧಾತುಃ ಅಸ್ಮತ್ಪ್ರತ್ಯಯವಿಷಯ ಉಚ್ಯತೇ । ಸ ಪುನರೇವಂಭೂತೋ ಜಾಗ್ರತ್ಸ್ವಪ್ನಯೋರಹಮುಲ್ಲೇಖರೂಪೇಣ ಸುಷುಪ್ತೇ ತತ್ಸಂಸ್ಕಾರರಞ್ಜಿತಾಗ್ರಹಣಾವಿದ್ಯಾಪ್ರತಿಬದ್ಧಪ್ರಕಾಶತ್ವೇನ ಚ ಗತಾಗತಮ್ ಆಚರನ್ ಸಂಸಾರೀ ಜೀವಃ, ವಿಜ್ಞಾನಘನಃ, ವಿಜ್ಞಾನಾತ್ಮಾ, ಪ್ರಾಜ್ಞಃ, ಶರೀರೀ, ಶಾರೀರಃ, ಆತ್ಮಾ, ಸಂಪ್ರಸಾದಃ, ಪುರುಷಃ, ಪ್ರತ್ಯಗಾತ್ಮಾ, ಕರ್ತಾ, ಭೋಕ್ತಾ, ಕ್ಷೇತ್ರಜ್ಞಃ- ಇತಿ ಚ ಶ್ರುತಿಸ್ಮೃತಿಪ್ರವಾದೇಷು ಗೀಯತೇ ॥

(ಅರ್ಥ)

ಅಂತೂ ಹೀಗೆ ಅಹಂಕಾರಗ್ರಂಥಿಯನ್ನು ಅಸ್ಮಚ್ಛಬ್ದದಿಂದ ಕರೆಯುತ್ತಾರೆ; ಇದು ಪ್ರತ್ಯಯವೂ (ಆಗಿದೆ) ; ಏಕೆಂದರೆ ಕನ್ನಡಿಯಲ್ಲಿ ಪ್ರತಿಬಿಂಬಕ್ಕೆ ಹೇಗೋ ಹಾಗೆ ಅನಿದಂಚಿತ್ತಿನಿಂದೊಡಗೂಡಿ ಅದರ ಅಭಿವ್ಯಕ್ತಿಗೆ ಹೇತುವಾಗಿರುತ್ತದೆ. ಆದ್ದರಿಂದ ಅದಕ್ಕೆ ವಿಷಯದಂತೆ ಆಯಿತಾಗಿ ಉಪಚಾರದಿಂದ ಅನಿದಂಚಿದಾತ್ಮಧಾತುವು ಅಸ್ಮತ್ಪ್ರತ್ಯಯವಿಷಯ ಎನಿಸುತ್ತದೆ.[2]

ಹೀಗಾದ ಆ (ಆತ್ಮನು) ಜಾಗ್ರತ್ಸ್ವಪ್ನಗಳಲ್ಲಿ ನಾನು ಎಂದು ಎದ್ದು ಕಾಣುವ ರೂಪದಿಂದಲೂ ಸುಷುಪ್ತಿಯಲ್ಲಿ (ಆ ಅಹಂಕಾರದ) ಸಂಸ್ಕಾರದಿಂದ ರಂಜಿತವಾದ ಅಗ್ರಹಣಾವಿದ್ಯೆ[3]ಯಿಂದ ಪ್ರತಿಬದ್ಧವಾದ ಪ್ರಕಾಶ(ವುಳ್ಳ ರೂಪ)ದಿಂದಲೂ

---

1. ಈ ಗ್ರಂಥವು ಈಗಿರುವದಕ್ಕಿಂತ ಮುಂದಕ್ಕೂ ರಚಿತವಾಗಿತ್ತು ಅಥವಾ ಅದು ಮುಂದುವರಿಯಬೇಕೆಂಬ ಇಚ್ಛೆಯು ಗ್ರಂಥಕಾರರಿಗೆ ಇತ್ತು ಎಂಬುದಕ್ಕೆ ಇದೊಂದು ಗುರುತು.

2. ಅಸ್ಮತ್ಪ್ರತ್ಯಯವೆಂದರೆ ಅಹಂಕಾರವು ; ವಿಷಯತ್ವ ಎಂದರೆ ಅದರಲ್ಲಿ ಅಭಿವ್ಯಕ್ತವಾಗುವದು ; ಆದ್ದರಿಂದ ಅಸ್ಮತ್ಪ್ರತ್ಯಯವಿಷಯತ್ವವೆಂಬುದು ಗೌಣ ಎಂದು ಹೇಳಿದಂತೆ ಆಯಿತು. ಅವಿಷಯದಲ್ಲಿ ಅಧ್ಯಾಸ ಹೇಗೆ ?– ಎಂಬ ಆಕ್ಷೇಪಕ್ಕೆ ಗೌಣವಿಷಯತ್ವವಿದೆ ಎಂದು ಹೇಳುವ ಉತ್ತರವು ಹೇಗೆ ಸರಿ ? ಇದನ್ನು ಇಲ್ಲಿ ವಿಚಾರಮಾಡಿರುವದಿಲ್ಲ.

3. ಅಧ್ಯಾಸಕ್ಕೆ ಕಾರಣವಾದ ಅವಿದ್ಯೆ.

ಹೋಗೀಬಂದೂ ಮಾಡುತ್ತಾ, ಸಂಸಾರಿ, ಜೀವ, ವಿಜ್ಞಾನಘನ, ವಿಜ್ಞಾನಾತ್ಮ, ಪ್ರಾಜ್ಞ, ಶರೀರಿ, ಶಾರೀರ, ಆತ್ಮ, ಸಂಪ್ರಸಾದ, ಪುರುಷ, ಪ್ರತ್ಯಗಾತ್ಮ, ಕರ್ತೃ, ಭೋಕ್ತೃ, ಮತ್ತು ಕ್ಷೇತ್ರಜ್ಞ-- ಎಂದು ಶ್ರುತಿಸ್ಮೃತಿವಾದಗಳಲ್ಲಿ ಕರೆಯಲ್ಪಟ್ಟಿರುತ್ತಾನೆ.[1]

## ಆತ್ಮನು ಅಪರೋಕ್ಷನಾಗಿರುವದರಿಂದಲೂ ಅಧ್ಯಾಸಾರ್ಹನು

(ಪಂಚಪಾದಿಕಾ)

೫೧. ಕಿಞ್ಚ, ನ ಕೇವಲಮ್ ಅಸ್ಮತ್ಪ್ರತ್ಯಯವಿಷಯತ್ವಾತ್, ಅಧ್ಯಾಸಾರ್ಹಃ, ಅಪರೋಕ್ಷತ್ವಾಚ್ಚ । ತತ್ಸಾಧನಾರ್ಥಮಾಹ— **ಪ್ರತ್ಯಗಾತ್ಮಪ್ರಸಿದ್ಧೇಃ** ಇತಿ । ನ ಹಿ ಆತ್ಮನಿ ಅಪ್ರಸಿದ್ಧೇ ಸ್ವಪರಸಂವೇದ್ಯಯೋರ್ವಿಶೇಷಃ । ನ ಚ ಸಂವೇದ್ಯಜ್ಞಾನೇನೈವ ತತ್ಸಿದ್ಧಿಃ, ಅಕರ್ಮಕಾರಕತ್ವಾತ್ ಅತಿಪ್ರಸಙ್ಗಾತ್। ನ ಚ ಜ್ಞಾನಾನ್ತರೇಣ। ಭಿನ್ನಕಾಲತ್ವೇ ಸಂವೇದ್ಯಸಂಬನ್ಧಾನವಗಮಾತ್, ಸ್ವಪರಸಂವೇದ್ಯಾವಿಶೇಷಾತ್ । ನ ಹಿ ಏಕಕಾಲಂ ವಿರುದ್ಧವಿಷಯದ್ವಯಗ್ರಾಹಿಜ್ಞಾನದ್ವಯೋತ್ಪಾದಃ । ನ ಹಿ ದೇವದತ್ತಸ್ಯ ಅಗ್ರಪೃಷ್ಠದೇಶಸ್ಥಿತಾರ್ಥವ್ಯಾಪಿಗಮನಕ್ರಿಯಾದ್ವಯಾವೇಶೋ ಯುಗಪದ್ ದೃಶ್ಯತೇ । ಆಹ– ಮಾ ಭೂತ್ ಚಲನಾತ್ಮಕಂ ಕ್ರಿಯಾದ್ವಯಂ ಯುಗಪತ್ ; ಪರಿಣಾಮಾತ್ಮಕಂ ತು ಭವತ್ಯೇವ । ನೈವಮ್ । ಪರಿಸ್ಪನ್ದಾತ್ಮಕಮಪಿ ಭವತ್ಯವಿರುದ್ಧಮ್ ಯಥಾ 'ಗಾಯನ್ ಗಚ್ಛತಿ' ಇತಿ । ಪರಿಣಾಮಾತ್ಮಕಮಪಿ ನ ಭವತಿ ವಿರುದ್ಧಮ್, ಯಥಾ ಯೌವನಸ್ಥಾವಿರಹೇತುಃ । ತಸ್ಮಾತ್ ಪ್ರತ್ಯಗಾತ್ಮಾ ಸ್ವಯಂಪ್ರಸಿದ್ಧಃ ಸರ್ವಸ್ಯ ಹಾನೋಪಾದಾನಾವಧಿಃ, ಸ್ವಯಮ್ ಅಹೇಯೋಽನುಪಾದೇಯಃ । ಸ್ವಮಹಿಮ್ನೈವಾಪರೋಕ್ಷತ್ವಾತ್, ಅಧ್ಯಾಸಯೋಗ್ಯಃ ॥

ನನು ನ ಕ್ವಚಿತ್ ಅಪರೋಕ್ಷಮಾತ್ರೇ ಅಧ್ಯಾಸೋ ದೃಷ್ಟಪೂರ್ವಃ । ಸರ್ವತ್ರಾಕ್ಷಿಸಂಪ್ರಯೋಗಿತಯಾ ಪುರೋಽವಸ್ಥಿತಾಪರೋಕ್ಷ ಏವ ದೃಶ್ಯತೇ- ಇತ್ಯಾಶಙ್ಕ್ಯಾಹ- **'ನ ಚಾಯಮಸ್ತಿ ನಿಯಮಃ'** ಇತಿ 'ಅಪ್ರತ್ಯಕ್ಷೇಽಪಿ ಹ್ಯಾಕಾಶೇ'– ಇತಿ ಪರೋಕ್ಷೇ ಇತ್ಯರ್ಥಃ । ಅಥವಾ ಅಕ್ಷವ್ಯಾಪಾರಮನ್ತರೇಣಾಪ್ಯಪರೋಕ್ಷೇ ಆಕಾಶೇ ಬಾಲಾ ಅಯಥಾರ್ಥದರ್ಶಿನಃ, ತಲಮ್ ಇನ್ದ್ರನೀಲತಮಾಲಪತ್ರಸದೃಶಮ್, ಮಲಿನತಾಂ ಚ ಧೂಮಾದಿಕಂ ಅನ್ಯಚ್ಚ ನೀಲೋತ್ಪಲ

1. ಅಹಂಕಾರವೂ ಅದರ ಸಂಸ್ಕಾರವೂ ಅಲ್ಲದೆ ಬೇರೆಯ ವಿಶೇಷ ಉಪಾಧಿಗಳೂ ಉಂಟು ; ಅವುಗಳಿಂದ ಈ ಹೆಸರುಗಳು ಬಂದಿವೆ ಎಂದಭಿಪ್ರಾಯ. ಇವುಗಳಲ್ಲಿ 'ವಿಜ್ಞಾನಘನ, 'ಪ್ರಾಜ್ಞ', 'ಪ್ರತ್ಯಗಾತ್ಮ'– ಈ ಹೆಸರುಗಳನ್ನು ಶ್ರುತಿಸ್ಮೃತಿಗಳಲ್ಲಿ ಜೀವವಾಚಕವಾಗಿ ಉಪಯೋಗಿಸಿರುವದು ಕಂಡುಬರುವದಿಲ್ಲ.

ಸಮಾನವರ್ಣತಾದಿ ಅಧ್ಯಸ್ಯನ್ತಿ । 'ಏವಂ ಅವಿರುದ್ಧಃ'- ಇತಿ ಸಂಭಾವನಾಂ ನಿಗಮಯತಿ । ಯಥಾ ಆಕಾಶಸ್ಯ ಅಕ್ಷವ್ಯಾಪಾರಮನ್ತರಾಪಿ ಅಪರೋಕ್ಷತಾ ತಥಾ ದರ್ಶಯಿಷ್ಯಾಮಃ ॥

(ಅರ್ಥ)

ಮತ್ತು ಅಸ್ಮತ್ಪ್ರತ್ಯಯವಿಷಯನಾಗಿರುವದರಿಂದ ಮಾತ್ರವೇ ಅಲ್ಲ, ಅಧ್ಯಾಸಕ್ಕೆ ಅರ್ಹನಾಗಿರುವದು ; ಮತ್ತೇನೆಂದರೆ **ಅಪರೋಕ್ಷನಾಗಿರುವದರಿಂದಲೂ** (ಹಾಗೆ). ಇದನ್ನು ಸಾಧಿಸುವದಕ್ಕಾಗಿ 'ಪ್ರತ್ಯಗಾತ್ಮಪ್ರಸಿದ್ಧೇಃ' (ಪ್ರತ್ಯಗಾತ್ಮನು ಪ್ರಸಿದ್ಧನಾಗಿರುವದರಿಂದ) ಎಂದು (ಭಾಷ್ಯಕಾರರು) ಹೇಳಿರುತ್ತಾರೆ.[1] (ಇದರ ವಿವರ: ) ಆತ್ಮನು ಪ್ರಸಿದ್ಧನಲ್ಲದಿದ್ದರೆ ಸ್ವಸಂವೇದ್ಯ (ತನ್ನಿಂದ ತಾನು ಅರಿಯಲ್ಪಡತಕ್ಕದ್ದು ), ಪರಸಂವೇದ್ಯ (ಮತ್ತೊಂದರಿಂದ ಅರಿಯಲ್ಪಡತಕ್ಕದ್ದು)- ಇವುಗಳಿಗೆ (ಯಾವ) ವಿಶೇಷವೂ ಇರುತ್ತಿರಲಿಲ್ಲ. ಸಂವೇದ್ಯ(ವಿಷಯ)ಜ್ಞಾನದಿಂದಲೇ ಆ (ಆತ್ಮನ) ಸಿದ್ಧಿಯಾಗಲಿ, ಎನ್ನುವದು ಸರಿಯಲ್ಲ ; ಏಕೆಂದರೆ (ಆತ್ಮನು) ಕರ್ಮಕಾರಕವಲ್ಲ ![2] (ಹೀಗಲ್ಲವೆಂದರೆ) ಅತಿಪ್ರಸಂಗವಾಗುವದು.[3] ಮತ್ತೊಂದು ಜ್ಞಾನದಿಂದಲೂ (ಸಿದ್ಧನಾಗುವದಿಲ್ಲ); ಏಕೆಂದರೆ ಆ (ಜ್ಞಾನಗಳು) ಬೇರೆಬೇರೆಯ ಕಾಲದಲ್ಲಾದರೆ ಸಂವೇದ್ಯದ ಸಂಬಂಧವು ಗೊತ್ತಾಗುವಹಾಗಿಲ್ಲ.[4] ಸ್ವಪರಸಂವೇದ್ಯಗಳಿಗೆ ವಿಶೇಷವೂ ಇರುವದಿಲ್ಲ.[5] ಒಂದೇ ಕಾಲದಲ್ಲಿ ವಿರುದ್ಧವಾದ ಎರಡು ವಿಷಯಗಳನ್ನು ಗ್ರಹಿಸುವ ಜ್ಞಾನದ್ವಯವು ಹುಟ್ಟುವಂತೆಯೂ ಇಲ್ಲ.[6] ದೇವದತ್ತನ ಮುಂದೆ, ಹಿಂದೆ- ಇರುವ ಪದಾರ್ಥಗಳನ್ನು ವ್ಯಾಪಿಸುವ ಗಮನಕ್ರಿಯೆಗಳೆರಡೂ ಒಟ್ಟಿಗೇ ಆಗುವದು ಕಂಡಿಲ್ಲವಷ್ಟೆ ?[7]

---

1. ಇಲ್ಲಿ 'ಪ್ರಸಿದ್ಧೇಃ' ಎಂಬುದು ಹೇತುವನ್ನು ಹೇಳುವ ಪಂಚಮಿ ; ಭಾಮತೀಪ್ರಸ್ಥಾನವಲ್ಲಿ ಇದು ಷಷ್ಠಿ. ಉಪದೇಶಸಾಹಸ್ರೀ ಗದ್ಯ ಅವಗತಿಪ್ರಕರಣದಲ್ಲಿ 'ಪ್ರಸಿದ್ಧವಾದದ್ದನ್ನು ಪ್ರಸಿದ್ಧವಾದದ್ದರಲ್ಲಿ ಅಧ್ಯಾಸಮಾಡುತ್ತಾರೆ' ಎಂದೇ ಸಮಾನಪ್ರಕರಣದಲ್ಲಿ ಬರೆದಿದೆ ಎಂಬುದನ್ನು ಲಕ್ಷಿಸಬೇಕು.

2. ವಿಷಯಸ್ವರೂಪನಲ್ಲ.

3. ಯಾವದರಿಂದ ಯಾವದು ಬೇಕಾದರೂ ಸಿದ್ಧವಾಗಬಹುದೆಂದಾದೀತು.

4. ಪ್ರಕೃತಜ್ಞಾನದಿಂದ ವಿಷಯವು ಸಿದ್ಧವಾಗುವಂತೆ ಈ ಜ್ಞಾನವು ಮತ್ತೊಂದು ಜ್ಞಾನದಿಂದ ಏತಕ್ಕೆ ಸಿದ್ಧವಾಗಬಾರದು ?- ಎಂಬ ಆಕ್ಷೇಪಕ್ಕೆ ಪರಿಹಾರವಿದು.

5. ಏಕೆಂದರೆ ಆಗ ಎರಡೂ ಸಂವೇದ್ಯವೇ ಆಗಿರುತ್ತವೆ ; ಜ್ಞಾನದಲ್ಲಿ ಏನೂ ವಿಶೇಷವಿರುವದಿಲ್ಲ.

6. ಏಕೆಂದರೆ ಒಂದು ಜ್ಞಾನವಾದಾಗ ಅದರ ವಿರುದ್ಧವಿಷಯದ ಜ್ಞಾನದ ಉತ್ಪತ್ತಿಗೆ ಅಡ್ಡಿಯಾಗಿರುತ್ತದೆ.

7. ಮುಂದಕ್ಕೆ ಹೋದರೆ ಹಿಂದಕ್ಕೆ ಹೋಗುವಹಾಗಿಲ್ಲ, ಹಿಂದಕ್ಕೆ ಹೋದರೆ ಮುಂದಕ್ಕೆ ಹೋಗುವಂತಿಲ್ಲ- ಎಂಬುದು ಸ್ಪಷ್ಟ.

(ಆಕ್ಷೇಪಕನು) ಹೇಳುತ್ತಾನೆ : ಚಲನಾತ್ಮಕವಾದ ಎರಡು ಕ್ರಿಯೆಗಳು ಒಂದೇ ಕಾಲಕ್ಕೆ ಆಗದೆ ಇದ್ದರೆ ಇರಲಿ ; ಪರಿಣಾಮಾತ್ಮಕವಾದ (ಎರಡು) ಕ್ರಿಯೆಗಳು ಒಟ್ಟಿಗೆ) ಆಗಬಹುದಲ್ಲ !

(ಸಿದ್ಧಾಂತಿ) :— ಚಲನಾತ್ಮಕವಾದರೂ ವಿರುದ್ಧವಲ್ಲದೆ ಇದ್ದರೆ ಆಗಬಹುದು ; ಉದಾಹರಣೆಗೆ 'ಹಾಡುತ್ತಾ ಹೋಗುತ್ತಿದ್ದಾನೆ' (ಎಂದಾಗಬಹುದು). ಪರಿಣಾಮಾತ್ಮಕವಾದರೂ ವಿರುದ್ಧವಾದರೆ ಆಗುವದಿಲ್ಲ ; ಉದಾಹರಣೆಗೆ ಯೌವನ (ಕಾರಣವೂ) ವಾರ್ಧಕಹೇತುವೂ (ಒಟ್ಟಿಗೆ ಆಗುವದಿಲ್ಲ. )[1] ಆದ್ದರಿಂದ ಪ್ರತ್ಯಗಾತ್ಮನು ಸ್ವಯಂಪ್ರಸಿದ್ಧನಾಗಿರುತ್ತಾನೆ.[2] ಯಾವದನ್ನಾದರೂ ಬಿಡುವದಕ್ಕೂ ತೆಗೆದುಕೊಳ್ಳುವದಕ್ಕೂ ಅವಧಿಯಾಗಿರುತ್ತಾನೆ.[3] ತಾನು ಅಹೇಯನೂ ಅನುಪಾದೇಯನೂ ಆಗಿರುತ್ತಾನೆ. ತನ್ನ ಮಹಿಮೆಯಿಂದಲೇ ಅಪರೋಕ್ಷನಾಗಿರುವದರಿಂದ [4]ಅಧ್ಯಾಸಕ್ಕೆ ತಕ್ಕವನಾಗಿರುತ್ತಾನೆ.

(ಆಕ್ಷೇಪ) :— ಬರಿಯ ಅಪರೋಕ್ಷವಾದದ್ದರಲ್ಲಿ ಅಧ್ಯಾಸವಾಗುವದು ಎಲ್ಲಿಯೂ ಕಂಡಿಲ್ಲವಲ್ಲ ! ಎಲ್ಲೆಲ್ಲಿಯೂ ಕಣ್ಣಿಗೆ[5] ಸಂಬಂಧಪಟ್ಟು ಎದುರಿಗಿರುವ ಅಪರೋಕ್ಷವಸ್ತುವಿನಲ್ಲಿಯೇ (ಅಧ್ಯಾಸವಾಗುವದು) ಕಂಡಿದೆಯಲ್ಲ ?

ಇದನ್ನು ಆಶಂಕಿಸಿ (ಭಾಷ್ಯಕಾರರು) **'ನ ಚಾಯಮಸ್ತಿ ನಿಯಮಃ'** (ಹೀಗೆಂಬ ನಿಯಮವು ಇಲ್ಲವೂ ಇಲ್ಲ) ಎಂದು ಹೇಳಿರುತ್ತಾರೆ. 'ಅಪ್ರತ್ಯಕ್ಷೇಽಪಿ ಹ್ಯಾಕಾಶೇ" (ಪ್ರತ್ಯಕ್ಷವಲ್ಲದ ಆಕಾಶದಲ್ಲಿಯೂ ಅಧ್ಯಾಸಮಾಡುತ್ತಾರೆ) ಎಂಬಲ್ಲಿ (ಅಪ್ರತ್ಯಕ್ಷವಾದ ಎಂದರೆ) ಪರೋಕ್ಷವಾದ ಎಂದರ್ಥ ;[6] ಅಥವಾ ಇಂದ್ರಿಯ

---

1. ವಿರುದ್ಧಜ್ಞಾನಗಳು ಒಟ್ಟಿಗೆ ಹುಟ್ಟಲಾರವು ಎಂಬುದನ್ನು ಹೀಗೆ ಏಕೆ ತರ್ಕಮಾಡಿ ನಿರ್ಣಯಿಸಬೇಕಾಯಿತೋ ತಿಳಿಯಲಿಲ್ಲ.

2. ಆತ್ಮನು ಮತ್ತೊಂದರಿಂದ ಸಿದ್ಧನಾಗಿಲ್ಲ ಎಂಬುದನ್ನು ಹೀಗೆ ಏತಕ್ಕೆ ತರ್ಕಮಾಡಿ ಸಿದ್ಧಪಡಿಸುವದು ತರ್ಕಕ್ಕೆ ಅನುಭವಕ್ಕಿಂತ ಹೆಚ್ಚಿನ ಬೆಲೆಯನ್ನು ಕೊಟ್ಟಂತೆ ಆಗುವದಿಲ್ಲವೆ ?– ಎಂಬುದನ್ನು ಇಲ್ಲಿ ಯೋಚಿಸಬೇಕು.

3. ಯಾವದನ್ನು ಬಿಟ್ಟರೂ ಯಾವದನ್ನು ತೆಗೆದುಕೊಂಡರೂ ಆತ್ಮನವರೆಗಿರುವ ಪದಾರ್ಥದ ವಿಷಯದಲ್ಲಿಯೇ.

4. ಅಪರೋಕ್ಷನಾಗಿರುವದರಿಂದ ಆತ್ಮನು ಅಧ್ಯಾಸಕ್ಕೆ ಯೋಗ್ಯನು ಎಂಬ ಪ್ರತಿಜ್ಞೆಯನ್ನು ಸಾಧಿಸುವದಕ್ಕೆ ಸ್ವತಃಪ್ರಸಿದ್ಧಿಯನ್ನು ಸಾಧಿಸುವ ಈ ಕ್ರಮವು ಭಾಷ್ಯದಲ್ಲಿ ಮತ್ತೆಲ್ಲಿಯೂ ಕಾಣಿಸುವದಿಲ್ಲ.

5. 'ಅಕ್ಷಿ' ಎಂಬ ಪಾಠಕ್ಕೆ ಇದು ಅರ್ಥ; ಇಂದ್ರಿಯವೆಂಬುದಕ್ಕೆ ಇದು ಉಪಲಕ್ಷಣ; ಅಥವಾ 'ಅಕ್ಷ' ಎಂದೇ ಪಾಠವಿದ್ದು ಲೇಖಕರು ಹೀಗೆ ಬರೆದುಕೊಂಡಿದ್ದರೂ ಇರಬಹುದು.

6. ಪರೋಕ್ಷವಾದ ಆಕಾಶದಲ್ಲಿಯೂ ಪ್ರತ್ಯಕ್ಷವಾದಂತೆ ಇಟ್ಟುಕೊಂಡು ತಲಮಲಿನಾದಿಗಳನ್ನು ಅಧ್ಯಾಸಮಾಡುವದುಂಟು ಎಂಬುದಕ್ಕೆ ಇದು ದೃಷ್ಟಾಂತ.

ವ್ಯಾಪಾರವಿಲ್ಲದೆಯೂ ಅಪರೋಕ್ಷವಾಗಿರುವ[1] ಆಕಾಶದಲ್ಲಿ ಬಾಲರು, ಎಂದರೆ ಸರಿಯಾದ ತಿಳಿವಳಿಕೆಯಿಲ್ಲದವರು, ತಲವನ್ನು ಇಂದ್ರನೀಲ, ಹೊಂಗೆಮರದ ಎಲೆ—(ಇವುಗಳಿಗೆ) ಸಮಾನವಾಗಿರುವಿಕೆಯನ್ನು, ಮಲಿನತೆಯನ್ನು ಎಂದರೆ ಹೊಗೆ ಮುಂತಾದದ್ದನ್ನು, ಮತ್ತು (ಆದಿ ಎಂದದ್ದರಿಂದ) ಕನ್ನೈದಿಲೆ ಮುಂತಾದದ್ದಕ್ಕೆ ಸಮಾನವಾದ ಬಣ್ಣವುಳ್ಳದ್ದಾಗಿರುವಿಕೆಯನ್ನು ಅಧ್ಯಾಸಮಾಡುತ್ತಾರೆ. 'ಏವಮವಿರುದ್ಧಃ' (ಹೀಗೆ ಪ್ರತ್ಯಗಾತ್ಮನಲ್ಲಿ ಅಧ್ಯಾಸವಾಗುವದು ವಿರುದ್ಧವಲ್ಲ) ಎಂಬುದರಿಂದ (ಅಧ್ಯಾಸದ) ಸಂಭಾವನೆಯನ್ನು ನಿಗಮನಮಾಡಿರುತ್ತಾರೆ. ಆಕಾಶವು ಇಂದ್ರಿಯವ್ಯಾಪಾರವಿಲ್ಲದೆಯೇ ಅಪರೋಕ್ಷವಾಗಿದೆ ಎಂಬುದು ಹೇಗೆಂಬುದನ್ನು (ಮುಂದೆ) ತಿಳಿಸುವೆವು.[2]

## ೭. ವಿದ್ಯಾವಿದ್ಯಾವಿವೇಕಲಕ್ಷಣಭಾಷ್ಯ

**ತಮೇತಮ್ ಏವಂಲಕ್ಷಣಮ್ ಅಧ್ಯಾಸಂ ಪಣ್ಡಿತಾ ಅವಿದ್ಯೇತಿ ಮನ್ಯನ್ತೇ। ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮ್ ಆಹುಃ । ತತ್ರ, ಏವಂ ಸತಿ, ಯತ್ರ ಯದಧ್ಯಾಸಃ ತತ್ಕೃತೇನ ದೋಷೇಣ ಗುಣೇನ ವಾ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ ॥**

### ಅಧ್ಯಾಸವೇ ಅವಿದ್ಯೆ

(ಪಂಚಪಾದಿಕಾ)

೫೨. ನನು ಬ್ರಹ್ಮವಿದ್ಯಾಮ್ ಅನರ್ಥಹೇತುನಿಬರ್ಹಣೀಂ ಪ್ರತಿಜಾನತಾ ಅವಿದ್ಯಾ ಅನರ್ಥಹೇತುಃ ಸೂಚಿತಾ । ತತಃ ಸೈವ ಕರ್ತೃತ್ವಾದ್ಯನರ್ಥಬೀಜಮ್ ಉಪದರ್ಶನೀಯಾ । ಕಿಮಿದಮ್ ಅಧ್ಯಾಸಃ ಪ್ರಪಞ್ಚ್ಯತೇ?– ಇತ್ಯಾಶಙ್ಕ್ಯಾಹ **ತಮೇತಮ್ ಏವಂಲಕ್ಷಣಮ್ ಅಧ್ಯಾಸಂ ಪಣ್ಡಿತಾಃ** ಪ್ರಮಾಣಕುಶಲಾಃ **ಅವಿದ್ಯೇತಿ ಮನ್ಯನ್ತೇ; ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮಾಹುಃ** ಅಧ್ಯಸ್ತಾತದ್ರೂಪಸರ್ಪವಿಲಯನಂ ಕುರ್ವದ್, ವಸ್ತುಸ್ವರೂಪಂ ರಜ್ಜುರೇವೇತ್ಯವಧಾರಯದ್ ವಿಜ್ಞಾನಂ ವಿದ್ಯಾ ಇತಿ ಪ್ರಸಿದ್ಧಮೇವ ಲೋಕೇ ಬ್ರಹ್ಮವಿದೋ ವದನ್ತಿ ।

1. ಸಾಕ್ಷಿವೇದ್ಯವಾಗಿ ಅಥವಾ ಮನೋಮಾತ್ರವೇದ್ಯವಾಗಿ ಅಪರೋಕ್ಷವಾಗಿರುವ ಎಂದರ್ಥ. ಪಂ. ವಿ. ಇದು ಈ ಪ್ರಸ್ಥಾನಕ್ಕೇ ಸೇರಿದ್ದು ; ಭಾಷ್ಯದಲ್ಲಿ ಆಕಾಶವನ್ನು ಅಪರೋಕ್ಷವೆಂದು ಕರೆದಿರುವದು ಎಲ್ಲಿಯೂ ಕಾಣುವದಿಲ್ಲ.

2 ಈ ಬಗ್ಗೆ ಸಿಕ್ಕಿರುವಷ್ಟು ಭಾಗದ ಗ್ರಂಥದಲ್ಲಿ ಇದು ಎಲ್ಲಿಯೂ ಕಾಣುವದಿಲ್ಲ.

(ಅರ್ಥ)

(ಆಕ್ಷೇಪ) :— ಬ್ರಹ್ಮವಿದ್ಯೆಯು ಅನರ್ಥಹೇತುನಾಶಕವೆಂದು ಪ್ರತಿಜ್ಞೆ ಮಾಡಿರುವ (ಸೂತ್ರಕಾರರು) ಅವಿದ್ಯೆಯೇ ಅನರ್ಥಹೇತುವೆಂದು ಸೂಚಿಸಿದಂತೆ (ಆಗಿರುತ್ತದೆ). ಆದ್ದರಿಂದ ಕರ್ತೃತ್ವಾದ್ಯನರ್ಥಗಳಿಗೆ ಬೀಜವಾಗಿರುವ ಅದನ್ನೇ (ಇಲ್ಲಿ) ತಿಳಿಸಬೇಕು; (ಹೀಗಿರುವಲ್ಲಿ) ಅಧ್ಯಾಸವನ್ನು ವಿವರಿಸಿದೆಯಲ್ಲ, ಇದೇನು?

(ಪರಿಹಾರ) :— ಹೀಗೆಂದು ಆಶಂಕಿಸಿ (ಭಾಷ್ಯಕಾರರು) ಹೇಳುತ್ತಾರೆ : ಈ ಲಕ್ಷಣದ 'ತಮೇತಮ್' ಆ ಈ (ಅಧ್ಯಾಸಂ ಪಣ್ಡಿತಾ ಅವಿದ್ಯೇತಿ ಮನ್ಯನ್ತೇ') ಅಧ್ಯಾಸವನ್ನು ಪಂಡಿತರು ಪ್ರಮಾಣಕುಶಲರು ಅವಿದ್ಯೆಯೆಂದು ಎಣಿಸುತ್ತಾರೆ. (ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮ್ ಆಹುಃ) ಅದನ್ನು ವಿಂಗಡಿಸಿ ವಸ್ತುಸ್ವರೂಪವನ್ನು ನಿಶ್ಚಯಿಸುವದನ್ನು 'ವಿದ್ಯೆ' ಎಂದು ಕರೆಯುತ್ತಾರೆ. ಅಧ್ಯಸ್ತವಾದ ಅತದ್ರೂಪವಾದ ಸರ್ಪವನ್ನು ವಿಲಯ ಮಾಡಿ ವಸ್ತುಸ್ವರೂಪವನ್ನು ಹಗ್ಗವೇ ಎಂದು ನಿಶ್ಚಯಿಸುವ ಜ್ಞಾನವು 'ವಿದ್ಯೆ' ಎಂದು ಲೋಕದಲ್ಲಿ ಪ್ರಸಿದ್ಧವಾಗಿರುವದನ್ನೇ ಬ್ರಹ್ಮಜ್ಞಾನಿಗಳು ಹೇಳುತ್ತಾರೆ.

## 'ಅಧ್ಯಾಸ'ವೆಂದು ಮೊದಲು ಕರೆದದ್ದೇಕೆ?

(ಪಂಚಪಾದಿಕಾ)

೫೩. ಯದ್ಯೇವಮ್ 'ಅಧ್ಯಾಸಃ' ಇತಿ ಪ್ರಕ್ರಮ್ಯ ಪುನಸ್ತಸ್ಯಾವಿದ್ಯಾಭಿಧಾನವ್ಯಾಖ್ಯಾನೇ ಯತ್ನಗೌರವಾತ್, ವರಮ್ 'ಅವಿದ್ಯಾ' ಇತ್ಯೇವೋಪಕ್ರಮಃ ಕೃತಃ । ನೈತತ್ ಸಾರಮ್ । ಆದೌ 'ಅವಿದ್ಯಾ' ಇತ್ಯೇವೋಚ್ಯಮಾನೇ ಆಚ್ಛಾದಕತ್ವಂ ನಾಮ ಯತ್ ತಸ್ಯಾಪ್ರತ್ವಮ್ ಪದೇವ ಅಭಿಹಿತಂ ಸ್ಯಾತ್ । ನಾತದ್ರೂಪಾವಭಾಸಿತಯಾ ಅನರ್ಥಹೇತುತ್ವಮ್ । ಅತಃ, ಅತದ್ರೂಪಾವಭಾಸಿತ್ವಮ್ ಅಧ್ಯಾಸಶಬ್ದೇನ ಪ್ರಕೃತೋಪಯೋಗಿತಯಾ ಉಪಕ್ಷಿಪ್ಯ ಪುನಸ್ತಯಾ ಅವಿದ್ಯಾಶಬ್ದತಯಾ ವಿದ್ಯಾಮಾತ್ರಾಪನೋದನಾರ್ಹತ್ವಂ ದರ್ಶನೀಯಮ್ । ತದೇತದಾಹ -ಯತ್ರ ಯದಧ್ಯಾಸಃ, ತತ್ಕೃತೇನ ದೋಷೇಣ ಗುಣೇನ ವಾ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ ಇತಿ, ಅವಾಸ್ತವಮ್ ಅನರ್ಥಂ ದರ್ಶಯತಿ । ವಾಸ್ತವತ್ವೇ ಹಿ- ನ ಜ್ಞಾನಮಾತ್ರಾತ್ ತದ್ವಿಗಮಃ, ಇತಿ ಪ್ರತಿಜ್ಞಾಹೀಯೇತ ॥

(ಅರ್ಥ)

(ಆಕ್ಷೇಪ) :— ಹೀಗಾದರೆ 'ಅಧ್ಯಾಸ' ಎಂದು ಉಪಕ್ರಮಿಸಿ ಮತ್ತೆ ಅದಕ್ಕೆ 'ಅವಿದ್ಯೆ'ಯೆಂದು ಹೆಸರು ಎಂದು ವ್ಯಾಖ್ಯಾನಮಾಡುವದರಲ್ಲಿ ಯತ್ನವು ಹೆಚ್ಚಾಗುವದರಿಂದ 'ಅವಿದ್ಯೆ' ಎಂದು ಉಪಕ್ರಮಿಸುವದು ಮೇಲು.

(ಪರಿಹಾರ):— ಇದು ಸಾರವಲ್ಲ. ಅವಿದ್ಯೆ ಎಂದಿಷ್ಟೇ ಹೇಳಿದ್ದರೆ ಆಚ್ಛಾದಕತ್ವವೆಂಬ ಅದರ ಶಕ್ತಿಯಿದೆಯಲ್ಲ, ಅದನ್ನು ಮಾತ್ರವೇ ಹೇಳಿದಂತೆ ಆಗುವದು[1]; ಅತದ್ರೂಪವಾಗಿ[2] ತೋರಿಸುವದೆಂಬ ಕಾರಣದಿಂದ ಅನರ್ಥಹೇತುವಾಗಿದೆ ಎಂಬುದು ಆಗುವದಿಲ್ಲ.[3] ಆದ್ದರಿಂದ ಅತದ್ರೂಪವನ್ನು ತೋರಿಸುವದೆಂಬುದನ್ನು ಅಧ್ಯಾಸಶಬ್ದದಿಂದ ಪ್ರಕೃತೋಪಯೋಗಿ ಎಂಬ ಕಾರಣದಿಂದ (ಮೊದಲು) ಹೇಳಿ ಮತ್ತೆ ಅವಿದ್ಯಾಶಬ್ದವಾಚ್ಯವೆಂದು- ವಿದ್ಯಾಮಾತ್ರದಿಂದ ತೊಲಗಿಸುವದಕ್ಕೆ ಅರ್ಹವಾಗಿದೆ[3] ಎಂಬುದನ್ನು ತಿಳಿಸಬೇಕು.

ಆ ಇದನ್ನೇ ಹೇಳುತ್ತಿದಾರೆ: (**'ಯತ್ರ ಯದಧ್ಯಾಸಃ, ತತ್ಕೃತೇನ ದೋಷೇಣ ಗುಣೇನ ವಾ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ'**) ಎಲ್ಲಿ ಯಾವದರ ಅಧ್ಯಾಸವಾಗಿರುವದೋ ಅದರಿಂದಾದ ದೋಷದಿಂದಲಾಗಲಿ ಗುಣದಿಂದಲಾಗಲಿ ಅದು ಅಣುಮಾತ್ರವೂ ಸಂಬದ್ಧವಾಗಿರುವದಿಲ್ಲ. ಹೀಗೆಂದದ್ದರಿಂದ ಅನರ್ಥವು ವಾಸ್ತವವಲ್ಲವೆಂದು ತಿಳಿಸಿರುತ್ತಾರೆ; ಏಕೆಂದರೆ ವಾಸ್ತವವಾಗಿದ್ದರೆ ಜ್ಞಾನಮಾತ್ರದಿಂದ ಅದು ತೊಲಗಲಾರದಾಗಿ (ಸೂತ್ರಕಾರರು ಮಾಡಿರುವ) ಪ್ರತಿಜ್ಞೆಯು ನಾಶವಾಗಿಬಿಡುವದು.

## ೮. ಅಧ್ಯಾಸಸದ್ಭಾವಭಾಷ್ಯ, ಪ್ರಮಾತೃತ್ವ

(ಪಂಚಪಾದಿಕಾ)

**ತಮೇತಮ್ ಅವಿದ್ಯಾಖ್ಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ । ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ । ಕಥಂ ಪುನರವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚೇತಿ ? ಉಚ್ಯತೇ । ದೇಹೇನ್ದ್ರಿಯಾದಿಷು**

---

1. 'ಮಿಥ್ಯಾಜ್ಞಾನನಿಮಿತ್ತಃ' ಎಂಬಲ್ಲಿ ಹೇಳಿದ ಅವಿದ್ಯಾಶಕ್ತಿಯನ್ನು ಮಾತ್ರ ಹೇಳಿದಂತೆ ಆಗುವದು ಎಂಬ ಅಭಿಪ್ರಾಯವಿರಬಹುದು. ಇದು ಭಾಷ್ಯದಿಂದ ಸ್ಪಷ್ಟವಾಗುವದಿಲ್ಲವೆಂಬುದು ಗೊತ್ತೇ ಇದೆ.

2. ಅಧ್ಯಾಸರೂಪದಿಂದಲೇ ಅವಿದ್ಯೆ ಅನರ್ಥಕಾರಿ.

3. ಅಧ್ಯಾಸವಾದರೆ ಜ್ಞಾನಮಾತ್ರದಿಂದ ನಾಶವಾಗುತ್ತದೆ ಎಂದಭಿಪ್ರಾಯ. ಅವಿದ್ಯೆ ಎಂಬುದನ್ನು ಇಲ್ಲಿ ವ್ಯಾಖ್ಯಾನಕ್ಕನುಗುಣವಾಗಿ ಉಪಯೋಗಿಸಿದ್ದರೆ ಮುಂದಿನ ಭಾಷ್ಯವು ಸಂಗತವಾಗುವಂತೆ ತೋರುವದಿಲ್ಲ. ಏಕೆಂದರೆ ಅಧ್ಯಾಸವನ್ನು ಅವಿದ್ಯೆ ಎಂದಿದೆಯೇ ಹೊರತು ಅವಿದ್ಯೆಯು ಆಚ್ಛಾದಕವೆಂಬುದನ್ನೇನೂ ಸ್ಪಷ್ಟಪಡಿಸಿಲ್ಲ.

**ಅಹಂಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ । ನ ಹಿ ಇನ್ದ್ರಿಯಾಣಿ ಅನುಪಾದಾಯ ಪ್ರತ್ಯಕ್ಷಾದಿವ್ಯವಹಾರಃ ಸಂಭವತಿ । ನ ಚ ಅಧಿಷ್ಠಾನಮನ್ತರೇಣ ಇನ್ದ್ರಿಯಾಣಾಂ ವ್ಯವಹಾರಃ ಸಂಭವತಿ । ನ ಚ ಅನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ ವ್ಯಾಪ್ರಿಯತೇ । ನ ಚ ಏತಸ್ಮಿನ್ ಸರ್ವಸ್ಮಿನ್ನಸತಿ ಅಸಙ್ಗಸ್ಯಾತ್ಮನಃ ಪ್ರಮಾತೃತ್ವಮ್ ಉಪಪದ್ಯತೇ । ನ ಚ ಪ್ರಮಾತೃತ್ವಮನ್ತರೇಣ ಪ್ರಮಾಣಪ್ರವೃತ್ತಿರಸ್ತಿ । ತಸ್ಮಾತ್, ಅವಿದ್ಯಾವದ್ವಿಷಯಾಣ್ಯೇವ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚ ॥**

## ಮುಂದಿನ ಭಾಷ್ಯದ ಸಂಬಂಧ

( ಪಂಚಪಾದಿಕಾ )

೫೪. ಏವಂ ತಾವದ್ "**ಯುಷ್ಮದಸ್ಮತ್**" ಇತ್ಯಾದಿನಾ "**ಮಿಥ್ಯಾಜ್ಞಾನನಿಮಿತ್ತಃ, ಸತ್ಯಾನೃತೇ ಮಿಥುನೀಕೃತ್ಯ 'ಅಹಮಿದಂ ಮಮೇದಮ್' ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ**"- ಇತ್ಯನ್ತೇನ ಭಾಷ್ಯೇಣ ಸಿದ್ಧವದುಪನ್ಯಸ್ತಮ್ ಆತ್ಮಾನಾತ್ಮನೋರಿತರೇತರವಿಷಯಮ್ ಅವಿದ್ಯಾಖ್ಯಮ್ ಅಧ್ಯಾಸಂ ಸಿಸಾಧಯಿಷುಃ, ತಸ್ಯ ಲಕ್ಷಣಮಭಿಧಾಯ, ತತ್ಸಂಭವಂ ಚಾತ್ಮನಿ ದರ್ಶಯಿತ್ವಾ, ಪುನಸ್ತತ್ರ ಸದ್ಭಾವನಿಶ್ಚಯಮ್ ಉಪಪತ್ತಿತಃ ಉಪಪಾದಯಿತುಮಿಚ್ಛನ್ ಆಹ- **ತಮೇತಮ್ ಅವಿದ್ಯಾಖ್ಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ, ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ**- ಇತಿ । ಮೋಕ್ಷಪರತ್ವಂ ಚ ಶಾಸ್ತ್ರಸ್ಯ ವಿಧಿಪ್ರತಿಷೇಧವಿರಹಿತತಯಾ ಉಪಾದಾನಪರಿತ್ಯಾಗಶೂನ್ಯತ್ವಾತ್, ಸ್ವರೂಪಮಾತ್ರನಿಷ್ಠತ್ವಮ್ ಅಙ್ಗೀಕೃತ್ಯ ಪೃಥಕ್ ಕ್ರಿಯತೇ ॥

(ಅರ್ಥ)

ಹೀಗೆ ಮೊದಲನೆಯದಾಗಿ '**ಯುಷ್ಮದಸ್ಮದ್**' ಎಂಬುದರಿಂದ ಮೊದಲಾಗಿ '**ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ಅಹಮಿದಂ ಮಮೇದಮಿತಿ ಚ ನೈಸರ್ಗಿಕೋಽಯಂ ಲೋಕವ್ಯವಹಾರಃ**' ಎಂಬ ವರೆಗಿನ ಭಾಷ್ಯದಿಂದ, ಸಿದ್ಧವಾಗಿಯೇ ಇರುವಂತೆ ಹೇಳಿದ ಆತ್ಮಾನಾತ್ಮರುಗಳ

ಪರಸ್ಪರವಿಷಯವಾದ ಅವಿದ್ಯೆಯೆಂಬ ಅಧ್ಯಾಸವನ್ನು ಸಾಧಿಸಬೇಕೆಂಬ ಇಚ್ಛೆಯಿಂದ ಅದರ ಲಕ್ಷಣವನ್ನು ಹೇಳಿ, ಅದು ಆತ್ಮನಲ್ಲಿ ಸಂಭವಿಸುತ್ತದೆ ಎಂಬುದನ್ನು ತೋರಿಸಿಕೊಟ್ಟು, ಮತ್ತೆ ಅದು ಇದೆ ಎಂಬ ನಿಶ್ಚಯವನ್ನು ಉಪಪತ್ತಿಯಿಂದ ಹೊಂದಿಸುವದಕ್ಕಾಗಿ '**ತಮೇತಮ್ ಅವಿದ್ಯಾಖ್ಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ, ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ**' (ಆ ಈ ಅವಿದ್ಯೆ ಎಂಬ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವನ್ನು ಮುಂದುಮಾಡಿಕೊಂಡು ಎಲ್ಲಾ ಲೌಕಿಕವೈದಿಕಪ್ರಮಾಣ ಪ್ರಮೇಯವ್ಯವಹಾರಗಳೂ ವಿಧಿಪ್ರತಿಷೇಧಮೋಕ್ಷಪರವಾದ ಶಾಸ್ತ್ರಗಳೂ ಹೊರಟರುತ್ತವೆ) -ಎಂದಿರುತ್ತಾರೆ. ಶಾಸ್ತ್ರವು ಮೋಕ್ಷಪರವಾಗಿರುವದೆಂಬುದನ್ನು ವಿಧಿಪ್ರತಿಷೇಧಗಳಿಲ್ಲದಿರುವದರಿಂದ ತೆಗೆದುಕೊಳ್ಳುವದು, ಬಿಡುವದು- (ಈ ಎರಡೂ) ಇಲ್ಲದ್ದರಿಂದ ಸ್ವರೂಪಮಾತ್ರದಲ್ಲಿ ಕೊನೆಗಂಡಿರುತ್ತದೆ ಎಂಬ ಕಾರಣದಿಂದ ಬೇರ್ಪಡಿಸಿ (ಹೇಳಿ)ರುತ್ತದೆ.

## ಪ್ರಮಾಣಗಳು ಅವಿದ್ಯಾವದ್ವಿಷಯವೆಂಬುದು ಹೇಗೆ?

**(ಪಂಚಪಾದಿಕಾ)**

೫೫. "**ಕಥಂ ಪುನರವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚೇತಿ**" ಬಾಧಮ್, ಉಕ್ತಲಕ್ಷಣಾ ಅವಿದ್ಯಾ ಪ್ರತ್ಯಗ್ದೃಶ್ಯಪಿ ಸಂಭವೇತ್ ; ನೈತಾವತಾ ತತ್ಸದ್ಭಾವಃ[1] ಸಿಧ್ಯತಿ । ತೇನ ನಿದರ್ಶನೀಯಃ ಸಃ । ಪ್ರಮಾತಾರಮಾಶ್ರಯನ್ತಿ ಪ್ರಮಾಣಾನಿ । ತೇನ ಪ್ರಮಾತಾ ಪ್ರಮಾಣಾನಾಮ್ ಆಶ್ರಯೋ ನಾವಿದ್ಯಾವಾನ್, ಅನುಪಯೋಗಾತ್- ಇತ್ಯಭಿಪ್ರಾಯಃ । ಅಥವಾ ಕಥಮ್ ಅವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಶಾಸ್ತ್ರಾಣಿ ಚ ಪ್ರಮಾಣಾನಿ?- ಇತಿ ಸಂಬನ್ಧಃ । ಅವಿದ್ಯಾವದ್ವಿಷಯತ್ವೇ ಸತಿ ಆಶ್ರಯದೋಷಾನುಗಮಾತ್ ಅಪ್ರಮಾಣಾನ್ಯೇವ ಸ್ಯುಃ- ಇತ್ಯಾಕ್ಷೇಪಃ ॥

ಉಚ್ಯತೇ - "**ದೇಹೇನ್ದ್ರಿಯಾದಿಷ್ವಹಂಮಮಾಭಿಮಾನಹೀನಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ**" ಇತಿ ಭಾಷ್ಯಕಾರಸ್ಯ ವಸ್ತುಸಂಗ್ರಹವಾಕ್ಯಮ್ । ಅಸ್ಯೈವ ಪ್ರಪಞ್ಚಃ, 'ನ ಹೀನ್ದ್ರಿಯಾಣ್ಯನುಪಾದಾಯ' ಇತ್ಯಾದಿಃ । ನ ಹಿ ದೇಹೇನ್ದ್ರಿಯಾದಿಷು ಅಹಂಮಮಾಭಿಮಾನಹೀನಸ್ಯ ಸುಷುಪ್ತಸ್ಯ ಪ್ರಮಾತೃತ್ವಂ ದೃಶ್ಯತೇ । ಯತೋ ದೇಹೇ ಅಹಮಭಿಮಾನಃ, ಇನ್ದ್ರಿಯಾದಿಷು ಮಮಾಭಿಮಾನಃ । ಆದಿಶಬ್ದೇನ ಬಾಹ್ಯಾದ್ಯವಯವಗ್ರಹಣಮ್ । ದೇಹಶಬ್ದೇನ ಸಶಿರಸ್ಕೋ ಮನುಷ್ಯತ್ವಾದಿಜಾತಿಸಂಭಿನ್ನೋ ಅವ

---

1 'ಸಂಭವಃ' ಎಂಬ ಪಾಠವನ್ನು ಬಿಟ್ಟು ಇದನ್ನೇ ಇಟ್ಟುಕೊಳ್ಳಲಾಗಿದೆ.

ಯುವೀ ಅಭಿಮತಃ, ನ ಶರೀರಮಾತ್ರಮ್ । 'ದೇಹೋಽಹಮ್' ಇತಿ ಪ್ರತೀತ್ಯಭಾವಾತ್ । ಸರ್ವೋ ಹಿ 'ಮನುಷ್ಯೋಽಹಮ್', 'ದೇವೋಽಹಮ್' ಇತಿ ಜಾತಿವಿಶೇಷೈಕಾಧಿಕರಣೇ ಚೈತನ್ಯೇ ಏವ ಪ್ರವರ್ತತೇ ಇತಿ ಸ್ವಸಾಕ್ಷಿಕಮೇತತ್ । ನ ಸ್ವತ್ವೇನ ಸಂಬನ್ಧಿನಾ ಮನುಷ್ಯಾವಯವಿನಾ ತದನುಸ್ಯೂತೇನ ವಾ ಚಕ್ಷುರಾದಿನಾ ಪ್ರಮಾತ್ರಾದಿವ್ಯವಹಾರಃ ಸಿಧ್ಯತಿ । ಭೃತ್ಯಾದಿಮನುಷ್ಯಾವಯವಿನಾಪಿ ಪ್ರಸಙ್ಗಾತ್ । ಅಪರ ಆಹ– ಆತ್ಮೇಚ್ಛಾನುವಿಧಾಯಿತ್ವಂ ಕಾರ್ಯಕರಣಸಂಘಾತಸ್ಯ[1] ಆತ್ಮನಾ ಸಂಬನ್ಧಃ । ತಸ್ಯಾಪಿ ತಸ್ಯ ಯಥೇಷ್ಟವಿನಿಯೋಜಕತ್ವಂ ತೇನ ಸಂಬನ್ಧಃ । ತತಃ ಆತ್ಮನಃ ಪ್ರಮಾತ್ರಾದಿಕಃ ಸರ್ವಃ ಕ್ರಿಯಾಕಾರಕಫಲವ್ಯವಹಾರಃ । ತಥಾ ಚ 'ಉತ್ತಿಷ್ಠಾಮಿ' ಇತಿ ಇಚ್ಛಯಾ ಉತ್ತಿಷ್ಠತಿ, ಉಪವಿಶತಿ ಚ । ನ ಚ ಭೃತ್ಯಾದಿಷು ತದಸ್ತಿ । ತೇನ ತತ್ರ ಪ್ರಮಾತ್ರಾದಿವ್ಯವಹಾರಾಭಾವೋ ನ ಮಿಥ್ಯಾ ಮುಖ್ಯಾಭಿಮಾನಾಭಾವಾತ್ ಇತಿ । ನೈತತ್ ಸಂವಿದಿಬಹುಮಾನವತೋ ಯುಕ್ತಮ್। ತಥಾ ಹಿ–'ಮನುಷ್ಯೋಽಹಮ್'ಇತಿ ಸ್ವಸಾಕ್ಷಿಕಾ ಸಂವಿತ್ । ನ 'ಮೇ ಮನುಷ್ಯಃ' ಇತಿ । ಗೌಣೀ ಇತಿ ಚೇತ್, ಭವಾನೇವ ಅತ್ರ ಪ್ರಮಾಣಮ್ । ಅಪಿ ಚ । ಇಚ್ಛಾಪಿ ಪರಿಣಾಮವಿಶೇಷಃ । ಸ ಕಥಮ್ ಅಪರಿಣಾಮಿನ ಆತ್ಮನಃ ಸ್ಯಾತ್, ಪರಿಣಾಮ್ಯನ್ತಃಕರಣಸಂವಲಿತಾಹಙ್ಕರ್ತೃತ್ವಮನ್ತರೇಣ ? ತಥಾ ಚಾನುಭವಃ– 'ಅಹಮ್ ಉತ್ತಿಷ್ಠಾಮಿ' ಇತೀಚ್ಛಯಾ ಉತ್ತಿಷ್ಠತಿ, ಉಪವಿಶತಿ ಚ । ತಸ್ಮಾತ್ ಯತ್ಕಿಞ್ಚಿದೇತತ್ । ಅತಃ ಸ್ವಯಮ್ ಅಸಙ್ಗಸ್ಯ ಅವಿಕಾರಿಣೋಽವಿದ್ಯಾಧ್ಯಾಸಮನ್ತರೇಣ ನ ಪ್ರಮಾತೃತ್ವಮ್ ಉಪಪದ್ಯತೇ। ತೇನ ಯದ್ಯಪಿ ಪ್ರಮಾತೃತ್ವಶಕ್ತಿಸನ್ಮಾತ್ರಂ[3] ಪ್ರಮಾಣಪ್ರವೃತ್ತಿನಿಮಿತ್ತಮ್, ತದೇವ ತು ಅವಿದ್ಯಾಧ್ಯಾಸವಿಲಸಿತಮ್ ಇತಿ ಅವಿದ್ಯಾವದ್ವಿಷಯತಾ ಪ್ರಮಾಣಾನಾಮ್ ಉಚ್ಯತೇ ॥

(ಅರ್ಥ)

**'ಕಥಂ ಪುನರವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚ'– ಇತಿ** । ಹಾಗಾದರೆ ಪ್ರತ್ಯಕ್ಷಾದಿಪ್ರಮಾಣಗಳೂ ಶಾಸ್ತ್ರಗಳೂ ಅವಿದ್ಯಾವಂತರ ವಿಷಯ ಎಂಬುದು ಹೇಗೆ? (ಎಂಬ ಭಾಷ್ಯದ ಅಭಿಪ್ರಾಯವಿದು): ನಿಜ, ಹಿಂದೆ ಹೇಳಿದ ಲಕ್ಷಣವುಳ್ಳ ಅವಿದ್ಯೆಯು ಪ್ರತ್ಯಗ್ರೂಪನಾದ[2] (ಆತ್ಮನಲ್ಲಿ)ಯೂ ಸಂಭವಿಸಬಹುದು. (ಆದರೆ) ಇಷ್ಟುಮಾತ್ರದಿಂದ ಅದರ ಸದ್ಭಾವವೂ ಸಿದ್ಧಿಸುವದಿಲ್ಲ. ಆದ್ದರಿಂದ ಅದನ್ನು ತೋರಿಸಿಕೊಡಬೇಕು. ಪ್ರಮಾಣಗಳು ಪ್ರಮಾತೃವನ್ನು ಆಶ್ರಯಿಸಿಕೊಂಡಿರುತ್ತವೆ ; ಅದ್ದರಿಂದ ಪ್ರಮಾತೃವು ಪ್ರಮಾಣಗಳಿಗೆ ಆಶ್ರಯವೇ ಹೊರತು, ಅವಿದ್ಯಾವಂತನಲ್ಲ; ಏಕೆಂದರೆ (ಅವಿದ್ಯಾವತ್ತ್ವದ)

1. 'ಕಾರಣ' ಎಂಬ ಪಾಠವು ಸರಿಯಲ್ಲ.
2. ಒಳಗಿರುವ ದ್ರಷ್ಟೃವಾದ.
3. 'ಮನ್ಮಾತ್ರಂ' ಎಂಬುದನ್ನು 'ಸನ್ಮಾತ್ರಂ' ಎಂದು ತಿದ್ದಿದೆ.

ಉಪಯೋಗವು (ಪ್ರಮಾಣಗಳಿಗಿಲ್ಲ)[1] ಎಂದು ಅಭಿಪ್ರಾಯ. ಅಥವಾ. ಅವಿದ್ಯಾವದ್ವಿಷಯಗಳಾಗಿರುವ ಪ್ರತ್ಯಕ್ಷಾದಿ(ಪ್ರಮಾಣಗಳೂ) ಶಾಸ್ತ್ರಗಳೂ ಪ್ರಮಾಣವೆಂಬುದು ಹೇಗೆ? ಎಂದು (ವಾಕ್ಯದ ಪದಗಳಿಗೆ) ಸಂಬಂಧವು.[2] (ಅವು) ಅವಿದ್ಯಾವಂತರ ವಿಷಯವಾಗಿದ್ದರೆ ಆಶ್ರಯವಾದ (ಅವಿದ್ಯಾವಂತನ) ದೋಷವು ಅವುಗಳಿಗೂ ಅಂಟಿಕೊಂಡೇ ಬರುವದರಿಂದ ಅಪ್ರಮಾಣವೇ ಆದಾವಲ್ಲ! ಎಂದು ಆಕ್ಷೇಪ.[3]

**ಉಚ್ಯತೇ : 'ದೇಹೇನ್ದ್ರಿಯಾದಿಷ್ವಹಂಮಮಾಭಿಮಾನಹೀನಸ್ಯ[4] ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ'** (ಹೇಳುತ್ತೇವೆ. ದೇಹೇಂದ್ರಿಯಾದಿಗಳಲ್ಲಿ ನಾನು, ನನ್ನದು- ಎಂಬ ಅಭಿಮಾನವಿಲ್ಲದವನಿಗೆ ಪ್ರಮಾತೃತ್ವವು ಹೊಂದುವದಿಲ್ಲವಾಗಿ ಪ್ರಮಾಣಪ್ರವೃತ್ತಿಯು ಹೊಂದುವದಿಲ್ಲ) -ಎಂಬಿದು ಭಾಷ್ಯಕಾರರ ವಸ್ತುಸಂಗ್ರಹವಾಕ್ಯವು.[5] ಇದಕ್ಕೇ **'ನ ಹೀನ್ದ್ರಿಯಾಣ್ಯನುಪಾದಾಯ'** ಇಂದ್ರಿಯಗಳನ್ನು ತೆಗೆದುಕೊಳ್ಳದೆ ಇದ್ದರೆ- ಎಂದು ಮುಂತಾದದ್ದರ ವಿವರಣವು. ದೇಹೇಂದ್ರಿಯಾದಿಗಳಲ್ಲಿ ನಾನು, ನನ್ನದು-ಎಂಬ ಅಭಿಮಾನವಿಲ್ಲದಿರುವ ಸುಷುಪ್ತನಿಗೆ ಪ್ರಮಾತೃತ್ವವು (ಇರುವದು) ಕಾಣಿಸುವದಿಲ್ಲವಷ್ಟೆ? ದೇಹದಲ್ಲಿ ನಾನು ಎಂಬ ಅಭಿಮಾನವೂ ಇಂದ್ರಿಯಾದಿಗಳಲ್ಲಿ ನನ್ನವು ಎಂಬ ಅಭಿಮಾನವೂ (ಇವುಗಳಿಲ್ಲದಿದ್ದರೆ ಎಂದರ್ಥ). ಇಲ್ಲಿ (ದೇಹೇಂದ್ರಿಯಾದಿಷು ಎಂಬಲ್ಲಿ) ಆದಿ ಎಂಬ ಮಾತಿನಿಂದ ತೋಳು ಮುಂತಾದ ಅವಯವಗಳನ್ನು ಗ್ರಹಿಸ

1. ಪ್ರಮಾತೃವು, ಸರಿಯಾಗಿ ಅರಿಯುವಾತನು, ಪ್ರಮಾಣಗಳಿಗೆ ಆಶ್ರಯನಾಗಿರುತ್ತಾನೆ ಎಂಬುದನ್ನು ಒಪ್ಪಬೇಕು; ಏನೂ ಅರಿಯದವನು, ಅಥವಾ ತಪ್ಪಾಗಿ ತಿಳಿಯುವವನು, ಪ್ರಮಾಣಗಳಿಗೆ ಆಶ್ರಯನು ಎಂದರೆ ಹೇಗೆ ಸರಿಯಾದೀತು? ಪ್ರಮಾಣಗಳಿಗೆ ಅವಿದ್ಯಾವಂತನಿಂದ ಏನು ಉಪಯೋಗವಿದೆ?

2. ಪ್ರಮಾಣಗಳು ಅವಿದ್ಯಾವಂತರ ವಿಷಯವಾದವೆಂಬುದು ಹೇಗೆ?- ಎಂದು ಮೊದಲು ಅನ್ವಯಮಾಡಿತ್ತು; ಅವಿದ್ಯಾವಂತರನ್ನಾಶ್ರಯಿಸಿಕೊಂಡರೆ ಪ್ರಮಾಣಗಳೆನಿಸುವದು ಹೇಗೆ?- ಎಂದು ಈಗ ಅನ್ವಯ. ವಾಕ್ಯವನ್ನು ಆಕ್ಷೇಪವೆಂದು ಭಾವಿಸಿದೆ, ಪ್ರಶ್ನೆಯೆಂದಲ್ಲ- ಎಂಬುದು ಸ್ಪಷ್ಟ.

3. 'ಅವಿದ್ಯೆಯಿದ್ದರೆ ಪ್ರಮಾಣವೇ ಆಗುವದಿಲ್ಲವಲ್ಲ!' ಎಂಬ ಆಕ್ಷೇಪವು ಪ್ರಕೃತಕ್ಕೆ ಅಷ್ಟು ಹೊಂದಿಕೆಯಾಗಿಲ್ಲವೆಂದು ತೋರುತ್ತದೆ. ಅವಿದ್ಯೆಯನ್ನು ಮುಂದುಮಾಡಿಕೊಳ್ಳದೆ ಪ್ರಮಾಣಾದಿವ್ಯವಹಾರವಿಲ್ಲವೆಂಬುದು ಹೇಗೆ? -ಎಂದು ಆಕ್ಷೇಪದಲ್ಲಿ ಕೇಳಿದೆ. ಅದಕ್ಕೆ ಪರಿಹಾರವನ್ನು ಭಾಷ್ಯದಲ್ಲಿ ಕೊಟ್ಟಿದೆ, ಅಷ್ಟೆ.

4. 'ರಹಿತಸ್ಯ' ಎಂಬುದು ಈಗಿನ ಅಚ್ಚಿನ ಪುಸ್ತಕಗಳ ಪಾಠ; ಪಂಚಪಾದಿಕೆಯಲ್ಲಿ 'ಹೀನಸ್ಯ' ಎಂದೇ ಇದೆ.

5. ಇದು ಮೂಲಾನುಸಾರಿಯಾದ ಅನುವಾದ. ಇಲ್ಲಿ ಅನುಮಾನಾರ್ಥಾಪತ್ತಿಗಳನ್ನು ಪಂ. ವಿ. ಯಲ್ಲಿ ಉದಾಹರಿಸಿದೆ.

ಬೇಕು. ದೇಹವೆಂಬ ಶಬ್ದದಿಂದ ತಲೆಯಿಂದೊಡಗೂಡಿದ ಮನುಷ್ಯತ್ವಾದಿಜಾತಿಯುಳ್ಳ ಅವಯವಿಯ(ನ್ನು ಹೇಳಬೇಕೆಂದು) ಅಭಿಪ್ರೇತವಾಗಿದೆ, ಬರಿಯ ಶರೀರವನ್ನೇ ಅಲ್ಲ; ಏಕೆಂದರೆ 'ನಾನು ದೇಹವು' ಎಂದೇನೂ ಪ್ರತೀತಿಯಿರುವದಿಲ್ಲ. ಪ್ರತಿಯೊಬ್ಬನೂ 'ನಾನು ಮನುಷ್ಯನು', 'ನಾನು ದೇವತೆ' -ಎಂದು ಆಯಾ ಜಾತಿಗೆ ಸಮಾನಾಧಿಕರಣವಾದ ಚೈತನ್ಯದಲ್ಲಿಯೇ ಪ್ರವರ್ತಿಸುತ್ತಾನೆಂಬುದು ತಮ್ಮ ತಮ್ಮ ಅನುಭವದಲ್ಲಿರುತ್ತದೆ. ನನ್ನದೆಂಬ ಸಂಬಂಧದಿಂದ ಕೂಡಿದ ಮನುಷ್ಯಾವಯವಿಯಿಂದಲಾಗಲಿ, ಅದರಲ್ಲಿ ಕೂಡಿಕೊಂಡುಬಂದಿರುವ ಚಕ್ಷುರಾದಿಗಳಿಂದಲಾಗಲಿ 'ಪ್ರಮಾತೃ' ಮುಂತಾದ ವ್ಯವಹಾರವು ಸಿದ್ಧಿಸುವದಿಲ್ಲ.[1] ಹಾಗಾದರೆ ಸೇವಕನೇ ಮುಂತಾದ ಮನುಷ್ಯಾವಯವಿಯಿಂದಲೂ ಪ್ರವರ್ತಿಸಬೇಕಾದ ಪ್ರಸಂಗವು ಬಂದೀತು.

(ಆಕ್ಷೇಪ) : (ಇಲ್ಲಿ) ಮತ್ತೊಬ್ಬನು ಹೇಳುತ್ತಾನೇನೆಂದರೆ, ತನ್ನ ಇಚ್ಛೆಗೆ ಅನುಸಾರವಾಗಿ ನಡೆಯುವದೆಂಬುದೇ ಕಾರ್ಯಕರಣಸಂಘಾತಕ್ಕೂ ಆತ್ಮನಿಗೂ ಇರುವ ಸಂಬಂಧ.[2] ಆ (ಆತ್ಮನಿ)ಗೆ ಆ (ಕಾರ್ಯಕರಣಸಂಘಾತ)ದೊಡನೆ ಅವನ್ನು ಯಥೇಷ್ಟವಾಗಿ ವಿನಿಯೋಗಮಾಡುವದೆಂಬ ಸಂಬಂಧವಿದು. ಆದ್ದರಿಂದ ಆತ್ಮನಿಗೆ ಪ್ರಮಾತ್ರಾದಿಕವಾದ ಎಲ್ಲಾ ಕ್ರಿಯಾಕಾರಕಫಲವ್ಯವಹಾರವು (ಆಗುತ್ತದೆ). ಆದ್ದರಿಂದಲೇ 'ನಿಲ್ಲುತ್ತೇನೆ' ಎಂದು ಇಚ್ಛೆಯಿಂದ ನಿಲ್ಲುತ್ತಾನೆ, ಇಚ್ಛೆಯಿಂದ) ಕೂತುಕೊಳ್ಳುತ್ತಾನೆ. ಆದರೆ ಭೃತ್ಯಾದಿಗಳಲ್ಲಿ ಹಾಗಿಲ್ಲ. ಆದ್ದರಿಂದ ಆ (ಸಂಘಾತದಲ್ಲಿ) ಪ್ರಮಾತ್ರಾದಿವ್ಯವಹಾರವಿಲ್ಲ ; ಏಕೆಂದರೆ (ಅದರಲ್ಲಿ) 'ನಾನೇ' ಎಂಬ ಮುಖ್ಯಾಭಿಮಾನವು ಇರುವದಿಲ್ಲ.[3]

(ಪರಿಹಾರ) : ಅನುಭವದಲ್ಲಿ ಗೌರವವನ್ನಿಟ್ಟುಕೊಂಡಿರುವವನಿಗೆ ಈ ಮಾತು ಯುಕ್ತವಲ್ಲ. ಏಕೆಂದರೆ, 'ನಾನು ಮನುಷ್ಯನು' ಎಂಬ ಅರಿವು ತನ್ನ ಅನುಭವದಲ್ಲಿದೆ. 'ನನ್ನ ಮನುಷ್ಯ' ಎಂದಿಲ್ಲ. ಇದು ಗೌಣವು,[4] ಎಂದರೆ ಇದಕ್ಕೆ

---

1. ಬರಿಯ ದೇಹಾದಿಗಳಲ್ಲಿ ನಾನು ಎಂಬ ಅಭಿಮಾನವಿರುವದಿಲ್ಲ ; ದೇಹಕ್ಕೆ ಸಂಬಂಧಪಟ್ಟ ಜಾತಿಯನ್ನು ತನಗೆ ಸಂಬಂಧಪಡಿಸಿಕೊಂಡೇ 'ನಾನು' ಎನ್ನುತ್ತಾನೆ.

2. ದೇಹಕ್ಕೂ ಆತ್ಮನಿಗೂ ಅಧ್ಯಾಸವಾಗಿರುವದಲ್ಲ.

3. ಮತ್ತೊಬ್ಬನ ದೇಹವನ್ನು ತನ್ನ ಇಚ್ಛೆಯಂತೆ ನಿಲ್ಲಿಸುವದಕ್ಕೂ ಕೂರಿಸುವದಕ್ಕೂ ಆಗುವದಿಲ್ಲವಾದ್ದರಿಂದ ಅಲ್ಲಿ ತಾನು ಪ್ರಮಾತೃವೆಂದು ತಿಳಿಯುವದಿಲ್ಲ.

4. ಇಚ್ಛೆಯಿಂದ ಶರೀರವನ್ನು ವ್ಯಾಪಾರಮಾಡಿಸುವದರಿಂದ ಅದನ್ನು ನಾನು ಎಂದು ಗೌಣವೃತ್ತಿಯಿಂದ ಕರೆಯುತ್ತೇವೆ ಎಂದು ಮೀಮಾಂಸಕನ ಅಭಿಪ್ರಾಯ ; ಶರೀರವು ಬೇರೆ ಎಂದೇನೂ ನೀನು ತಿಳಿಯುವದಿಲ್ಲವಾದ್ದರಿಂದ ಅದನ್ನು ಗೌಣವೆನ್ನುವದು ಸರಿಯಲ್ಲ ಎಂದು ಸಿದ್ಧಾಂತಿಯ ಉತ್ತರ. ಗೌಣವೆನ್ನುವದಕ್ಕೆ ನೀನೇ ಪ್ರಮಾಣವು ಎಂಬುದಕ್ಕೆ ಸರ್ವತ ಅನುಭವದಲ್ಲಿಯೂ ಅದು ಮುಖ್ಯವೇ ಆಗಿರುತ್ತದೆ, ಗೌಣವೆಂದಿಲ್ಲ- ಎಂದೂ ಅರ್ಥವನ್ನು ಮಾಡಬಹುದು.

ನೀನೇ ಪ್ರಮಾಣವು ಇದಲ್ಲದೆ ಇಚ್ಛೆ ಎಂಬುದೂ ಪರಿಣಾಮವಿಶೇಷವು[1]; ಅದು ಪರಿಣಾಮಿಯಲ್ಲದ ಆತ್ಮನಿಗೆ ಪರಿಣಾಮಿಯಾದ ಅಂತಃಕರಣದೊಡನೆ ಕೂಡಿಕೊಂಡು ಅಹಂಕರ್ತೃತ್ವವಾದ ಹೊರತು ಹೇಗೆ ಆದೀತು ?[2] ಆದ್ದರಿಂದಲೇ 'ನಾನು ನಿಲ್ಲುತ್ತೇನೆ' ಎಂಬ ಇಚ್ಛೆಯಿಂದ ನಿಲ್ಲುತ್ತಾನೆ, ಇಚ್ಛೆಯಿಂದ ಕೂತುಕೊಳ್ಳುತ್ತಾನೆ. ಆದ್ದರಿಂದ ಯಾವದೋ (ಸಂಬಂಧವಿಲ್ಲದ ಮಾತು).

ಆದ್ದರಿಂದ ತಾನು ಅಸಂಗನಾಗಿ, ಅವಿಕಾರಿಯಾಗಿರುವ (ಆತ್ಮನಿಗೆ) ಅವಿದ್ಯಾಧ್ಯಾಸವಿಲ್ಲದೆ[3] ಪ್ರಮಾತೃತ್ವವು ಹೊಂದುವದಿಲ್ಲ. ಆದ್ದರಿಂದ ಪ್ರಮಾತೃತ್ವಶಕ್ತಿಯಿದ್ದುಕೊಂಡಿರುವದು ಮಾತ್ರವೇ ಪ್ರಮಾಣಪ್ರವೃತ್ತಿಗೆ ನಿಮಿತ್ತ ಎಂಬುದು (ನಿಜ)ವಾದರೂ ಆ (ಶಕ್ತಿ)ಯೇ ಅವಿದ್ಯಾಧ್ಯಾಸದ ವಿಲಾಸವಾಗಿರುವದರಿಂದ ಪ್ರಮಾಣಗಳು ಅವಿದ್ಯಾವಂತರ ವಿಷಯವೆಂದು ಹೇಳಿರುತ್ತದೆ.

## ಅವಿದ್ಯಾವದ್ವಿಷಯವಾಗಿದ್ದರೂ ಪ್ರಾಮಾಣ್ಯವು ಹೇಗೆ ?

(ಪಂಚಪಾದಿಕಾ)

೫೬. ತಥಾ ನಿರಪೇಕ್ಷಾಣಾಂ ಸ್ವಸಾಮರ್ಥ್ಯೇನ ಅರ್ಥಸಿದ್ಧಿಂ ವಿದಧತಾಂ ಬಾಧಾನುಪಲಬ್ಧೇಃ, ಪ್ರಾಮಾಣ್ಯಮ್, ಅವಿದ್ಯಾವದ್ವಿಷಯತ್ವಂ ಚ ವಿಧಿಮುಖೋಪದರ್ಶಿತಂ ನ ನೇತಿ ಶಕ್ಯಮುಪಹ್ನೋತುಮ್। ದೋಷಸ್ತು ಆಗನ್ತುಕ ಏವ ಮಿಥ್ಯಾತ್ವೇ ಹೇತುಃ, ನ ನೈಸರ್ಗಿಕಃ ತಥೋಪಲಬ್ಧೇಃ । ನ ಚ ಸರ್ವಸಾಧಾರಣೇ ನೈಸರ್ಗಿಕೇ ದೋಷಬುದ್ಧಿಃ । ತಥಾ ಹಿ– ಕ್ಷುತ್ಪಿಪಾಸೋಪಜನಿತೇ ಸಂತಾಪೇ ಶಶ್ವದನುವರ್ತಮಾನೇ ಜಾಠರಾಗ್ನಿಕೃತವಿಕಾರೇ ಅನ್ನಪಾನನಿಷ್ಯನ್ದೇ ವಾ ನ ರೋಗಬುದ್ಧಿರ್ಜನಸ್ಯ । ಮುಹೂರ್ತಮಾತ್ರಪರಿವರ್ತಿನಿ ಮನ್ದೇ ಜ್ವರೇ ಪ್ರತಿಶ್ಯಾಯೇ ವಾ ಅಲ್ಪಕಫಪ್ರಸೂತಾವಪಿ ರೋಗಬುದ್ಧಿಃ । ಅನೈಸರ್ಗಿಕತ್ವಾತ್ । ಅನೈಸರ್ಗಿಕತ್ವಂ ಚ ದೋಷಮ್ ಅಭಿಪ್ರೇತ್ಯೋಕ್ತಮ್ 'ಯಸ್ಯ ಚ ದುಷ್ಟಂ ಕರಣಂ ಯತ್ರ ಚ ಮಿಥ್ಯೇತಿ ಪ್ರತ್ಯಯಃ, ಸ ಏವಾಸಮೀಚೀನಃ ಪ್ರತ್ಯಯೋ ನಾನ್ಯಃ' (ಶಾ. ಭಾ. ೧-೧-೫) ಇತಿ ॥

(ಅರ್ಥ)

ಮತ್ತು ನಿರಪೇಕ್ಷಗಳಾದ ತಮ್ಮ ಸಾಮರ್ಥ್ಯದಿಂದ ಅರ್ಥಸಿದ್ಧಿಯನ್ನು ಮಾಡಿಕೊಡುವ (ಪ್ರಮಾಣ)ಗಳಿಗೆ ಬಾಧೆಯು ಕಾಣದೆ ಇರುವದರಿಂದ ಪ್ರಾಮಾಣ್ಯವೂ[4]

---

1. ಇಚ್ಛೆಯು ಒಂದು ಕಾಲದಲ್ಲಿ ಆಗಿಹೋಗುವ ವಿಕಾರವು.

2. ಅಂತಃಕರಣವು ಪರಿಣಾಮಿಯಾದ್ದರಿಂದ ಇಚ್ಛೆಯೆಂಬ ವಿಕಾರವೂ ಅದರ ಧರ್ಮವೆಂಬುದು ಯುಕ್ತ ; ಅಂತಃಕರಣಾಧ್ಯಾಸದಿಂದ ತನ್ನ ಧರ್ಮವೆಂದು ಭಾವಿಸುತ್ತಾರೆ, ಅಷ್ಟೆ.

3. ಅವಿದ್ಯೆಯನ್ನು ಅಧ್ಯಾಸಮಾಡಿಕೊಳ್ಳುವದು, ಅವಿದ್ಯೆಯಿಂದ ಅಧ್ಯಾಸಮಾಡಿಕೊಳ್ಳುವದು– ಎಂದು ಎರಡು ಬಗೆಯಲ್ಲಿಯೂ ಈ ಮಾತಿಗೆ ವಿಗ್ರಹವನ್ನು ಹೇಳಬಹುದು.

4. ಅಬಾಧಿತವಾಗಿರುವದರಿಂದ ಪ್ರಾಮಾಣ್ಯ.

ವಿಧಿಮುಖವಾಗಿ (ನಾವು) ತೋರಿಸಿಕೊಟ್ಟಿರುವ ಅವಿದ್ಯಾವದ್ವಿಷಯತ್ವವೂ[1] 'ಇಲ್ಲ'ಎಂದು ಅಲ್ಲಗಳೆಯುವದಕ್ಕೆ ಆಗುವಂತಿಲ್ಲ. (ಜ್ಞಾನವು) ಮಿಥ್ಯೆಯೆಂದಾಗುವದಕ್ಕೆ ಆಗಂತುಕವಾದ ದೋಷವೇ ಹೇತುವೇ ಹೊರತು ನೈಸರ್ಗಿಕದೋಷವಲ್ಲ.[2] ಏಕೆಂದರೆ, ಹಾಗೆ ಕಂಡುಬರುತ್ತದೆ. ಎಲ್ಲರಿಗೂ ಸಾಧಾರಣವಾಗಿರುವ ನೈಸರ್ಗಿಕ(ದೋಷ)ದಲ್ಲಿ ದೋಷಬುದ್ಧಿಯಿರುವದೂ ಇಲ್ಲ. ಹೇಗೆಂದರೆ, ಹಸಿವು ಬಾಯಾರಿಕೆಗಳಿಂದುಂಟಾಗುವ ಸಂತಾಪವು ಯಾವಾಗಲೂ ಬೆಂಬಿಡಿದುಬರುತ್ತಿರುವದರಲ್ಲಿಯೂ ಜಾಠರಾಗ್ನಿಯಿಂದಾಗಿರುವ ವಿಕಾರವಾದ ಅನ್ನಪಾನಗಳ ಪ್ರವಿಸುವದರಲ್ಲಾಗಲಿ ಜನರಿಗೆ ರೋಗಬುದ್ಧಿಯಿರುವದಿಲ್ಲ.[3] ಮುಹೂರ್ತಮಾತ್ರದಿಂದ ಅಲ್ಪಜ್ವರದಲ್ಲಿಯೂ ಅಲ್ಪಕಫದಿಂದಾಗುವ ನೆಗಡಿಯಲ್ಲಿ ಕೂಡ ರೋಗಬುದ್ಧಿಯಿರುತ್ತದೆ ; ಏಕೆಂದರೆ ಅದು ನೈಸರ್ಗಿಕವಲ್ಲ.[4] ಅನೈಸರ್ಗಿಕವಾದ ದೋಷವನ್ನು ಮನಸ್ಸಿನಲ್ಲಿಟ್ಟುಕೊಂಡೇ 'ಯಾವ (ಜ್ಞಾನ)ದ ಕರಣವು ದುಷ್ಟವಲ್ಲವೋ, ಯಾವದರಲ್ಲಿ ಮಿಥ್ಯೆ ಎಂಬ ಪ್ರತ್ಯಯವೂ ಆಗುವದೋ ಅದೇ ತಪ್ಪುತಿಳಿವಳಿಕೆಯೇ ಹೊರತು ಮತ್ತೊಂದಲ್ಲ (ಶಾ. ಭಾ. ೧-೧-೫) ಎಂದು ಭಾಷ್ಯಕಾರರು ಹೇಳಿರುತ್ತಾರೆ.[5]

## ೯. ಪ್ರಮಾಣವ್ಯವಹಾರಕ್ಕೆ ಪಶ್ವಾದಿದೃಷ್ಟಾಂತದ ಭಾಷ್ಯ

ಪಶ್ವಾದಿಭಿಶ್ಚ ಅವಿಶೇಷಾತ್ । ಯಥಾ ಹಿ ಪಶ್ವಾದಯಃ ಶಬ್ದಾದಿಭಿಃ ಶ್ರೋತ್ರಾದೀನಾಂ ಸಂಬನ್ಧೇ ಸತಿ ಶಬ್ದಾದಿವಿಜ್ಞಾನೇ ಪ್ರತಿಕೂಲೇ ಜಾತೇ ತತೋ ನಿವರ್ತನ್ತೇ, ಅನುಕೂಲೇ ಚ ಪ್ರವರ್ತನ್ತೇ- ಯಥಾ ದಣ್ಡೋದ್ಯತಕರಂ ಪುರುಷಮ್ ಅಭಿಮುಖಮ್ ಉಪಲಭ್ಯ ಮಾಂ ಹನ್ತುಮ್ ಅಯಮ್ ಇಚ್ಛತಿ- ಇತಿ ಪಲಾಯಿತುಮ್ ಆರಭನ್ತೇ, ಹರಿತತೃಣಪೂರ್ಣಪಾಣಿಮ್ ಉಪಲಭ್ಯ ತಂ

1. ಪ್ರಮಾತೃತ್ವವು ಅವಿದ್ಯಾಧ್ಯಾಸದಿಂದಾಗಿದೆ ಎಂದು ನಾವು ಸ್ಪಷ್ಟವಾಗಿ ತೋರಿಸಿಕೊಟ್ಟಿರುವದರಿಂದ ಅವಿದ್ಯಾವದ್ವಿಷಯತ್ವವಿದೆ.

2. ನೈಸರ್ಗಿಕವಾದ ದೋಷವು ಯಾವಾಗಲೂ ಇರುವದರಿಂದಲೂ ಪ್ರಮಾತೃತ್ವಕ್ಕೆ ಸಾಧಕವಾಗಿರುವದರಿಂದ ಪ್ರಮಾಣಮಿಥ್ಯಾತ್ವಕ್ಕೆ ಕಾರಣವಲ್ಲ.

3. ಇದು ಮನುಷ್ಯಸ್ವಭಾವಕ್ಕೆ ಸೇರಿದ್ದು ಎಂದೇ ತಿಳಿಯುತ್ತಾರೆ.

4. ಮನುಷ್ಯಸ್ವಭಾವವನ್ನು ಸದ್ಯಕ್ಕೆ ಮಾರ್ಪಡಿಸಿರುವ ದೋಷವಾಗಿರುತ್ತದೆ.

5. ಆದ್ದರಿಂದ ಪ್ರಮಾಣಗಳು ಅವಿದ್ಯಾವದ್ವಿಷಯ ಎಂದು ಈಗ ನಾವು ಹೇಳುವದು ಶಾಬರಭಾಷ್ಯಕ್ಕೆ ವಿರುದ್ಧವೆನ್ನುವದಕ್ಕೆ ಬರುವದಿಲ್ಲ. ಏಕೆಂದರೆ ಪ್ರಮಾಣವೇ ಅವಿದ್ಯಾವುತಃ ಸರವೆಂಬುದನ್ನು ಆ ಭಾಷ್ಯದಲ್ಲಿ ವಿಚಾರಕ್ಕೆ ತೆಗೆದುಕೊಂಡೇ ಇಲ್ಲ.

**ಪ್ರತಿ ಅಭಿಮುಖೀ ಭವನ್ತಿ, ಏವಂ ಪುರುಷಾ ಅಪಿ ವ್ಯುತ್ಪನ್ನಚಿತ್ತಾಃ ಕ್ರೂರದೃಷ್ಟೀನ್ ಆಕ್ರೋಶತಃ ಖಡ್ಗೋದ್ಯತಕರಾನ್ ಬಲವತ ಉಪಲಭ್ಯ ತತೋ ನಿವರ್ತನ್ತೇ, ತದ್ವಿಪರೀತಾನ್ ಪ್ರತಿ ಪ್ರವರ್ತನ್ತೇ । ಅತಃ ಸಮಾನಃ ಪಶ್ವಾದಿಭಿಃ ಪುರುಷಾಣಾಂ ಪ್ರಮಾಣಪ್ರಮೇಯವ್ಯವಹಾರಃ । ಪಶ್ವಾದೀನಾಂ ಚ ಪ್ರಸಿದ್ಧೋಽವಿವೇಕಪುರಃಸರಃ ಪ್ರತ್ಯಕ್ಷಾದಿವ್ಯವಹಾರಃ । ತತ್ಸಾಮಾನ್ಯದರ್ಶನಾತ್ ವ್ಯುತ್ಪತ್ತಿಮತಾಮಪಿ ಪುರುಷಾಣಾಂ ಪ್ರತ್ಯಕ್ಷಾದಿವ್ಯವಹಾರಸ್ತತ್ಕಾಲಃ ಸಮಾನ ಇತಿ ನಿಶ್ಚೀಯತೇ ॥**

## ವ್ಯವಹಾರವು ಅವಿವೇಕಪೂರ್ವಕವೆಂಬುದಕ್ಕೆ ಪಶ್ವಾದಿದೃಷ್ಟಾಂತ

(ಪಂಚಪಾದಿಕಾ)

೫೭. ಇತಶ್ಚೈತದೇವಮ್ । **ಪಶ್ವಾದಿಭಿಶ್ಚಾವಿಶೇಷಾತ್** । ತಥಾ ಚ ಪಶ್ವಾದಯಃ ಪ್ರಮಾತೃತ್ವಾದಿವ್ಯವಹಾರಕಾಲೇ ಪ್ರವೃತ್ತಿನಿವೃತ್ತ್ಯೌದಾಸೀನ್ಯಂ ಭಜಮಾನಾಃ ಕಾರ್ಯಕರಣಸಂಘಾತೇ[1] ಏವ ಅಹಂಮಾನಂ ಕುರ್ವನ್ತೀತಿ ಪ್ರಸಿದ್ಧಂ ಲೋಕೇ, ತದೇಕರೂಪಯೋಗಕ್ಷೇಮಾ ಹಿ ಮನುಷ್ಯಾಃ, ಜನ್ಮತ ಏವ ಪಶ್ವಾದಿಭ್ಯೋಽಧಿಕತರವಿವೇಕಮತಯಃ ಶಾಸ್ತ್ರಾರ್ಥೀಯಸಾಂಪರಾಯಿಕಮತಿಸಾಮರ್ಥ್ಯಾ ಅಪಿ ; ಅತಸ್ತದೇಕರೂಪಕಾರ್ಯದರ್ಶನಾತ್ ಕಾರ್ಯಕರಣಸಂಘಾತೇಽಪಿ ಆತ್ಮಾಭಿಮಾನಃ ಸಮಾನೋ ಯುಕ್ತಃ । ನನು ಪಶ್ವಾದೀನಾಮಪಿ ಕಾರ್ಯಕರಣಸಂಘಾತೇ ಅಹಙ್ಕಾರಾನುಬನ್ಧ ಇತಿ ಕುತೋಽವಸೀಯತೇ, ಯೇನ ಸಿದ್ಧವದ್ ಅಭಿಧೀಯತೇ? ಉಚ್ಯತೇ। ಪ್ರೌಢಮತಿಭ್ಯ ಏವ ಪ್ರತ್ಯಕ್ಷಾದಿವೃತ್ತಕುಶಲೈಃ ಆತ್ಮಾ ವ್ಯುತ್ಪಾದ್ಯತೇ॥ ಅನ್ಯಥಾ ತದನರ್ಥಕತ್ವಪ್ರಸಙ್ಗಾತ್, ಏವಮೇವ ಪ್ರಮಾಣವಿಚಾರವಿರಹಂ ಸರ್ವಃ ಸಂಪ್ರತಿಪದ್ಯೇತ । ನನು ಗೋಪಾಲಾಙ್ಗನಾದಯಃ ಪ್ರಮಾಣವಿರಹಮೇವ ವರ್ತಮಾನದೇಹಪಾತೇಽಪಿ ಸ್ಥಾಯಿನಂ ಭೋಕ್ತಾರಂ ಮನ್ಯಮಾನಾಃ ತದರ್ಥಮಾಚರನ್ತಿ । ನ । ತದಭಿಜ್ಞವ್ಯವಹಾರಮಾತ್ರಪ್ರಮಾಣಕತ್ವಾತ್ । ತಥಾ ಚ ತೇ ಪೃಷ್ಟಾಃ 'ಕಃ ಪರಲೋಕಸಂಬನ್ಧೀ' ಇತಿ 'ನ ವಿದ್ಮೋ

---

1. ಕಾರ್ಯಕಾರಣವೆಂದು ಅಚ್ಚಿನಪುಸ್ತಕದಲ್ಲಿದೆಯಾದರೂ ಕಾರ್ಯಕರಣವೆಂದೇ ಇರಬೇಕೆಂದು ಇಟ್ಟುಕೊಂಡಿದೆ; ಅಥವಾ ಕಾರ್ಯಕಾರಣವೆಂಬುದಕ್ಕೆ ಇಷ್ಟೇ ಅರ್ಥವೆಂದರೂ ಆಗುತ್ತದೆ.

**ವಿಶೇಷತಃ, 'ಪ್ರಸಿದ್ಧೋ ಲೋಕೇ' ಇತಿ ಪ್ರತಿಬ್ರುವನ್ತಿ । ತಸ್ಮಾತ್, ಯುಕ್ತಮುಕ್ತಮ್ । ಪಶ್ವಾದೀನಾಂ ಚ ಪ್ರಸಿದ್ಧೋಽವಿವೇಕಪೂರ್ವಕಃ ಪ್ರತ್ಯಕ್ಷಾದಿವ್ಯವಹಾರಃ, ತತ್ಸಾಮಾನ್ಯದರ್ಶನಾದ್ ವ್ಯುತ್ಪತ್ತಿಮತಾಮಪಿ ಪುರುಷಾಣಾಂ ಪ್ರತ್ಯಕ್ಷಾದಿವ್ಯವಹಾರಸ್ತತ್ಕಾಲಃ ಸಮಾನ' ಇತಿ ॥**

(ಅರ್ಥ)

ಇದರಿಂದಲೂ ಇದು ಹೀಗೆ: ಏಕೆಂದರೆ '**ಪಶ್ವಾದಿಭಿಶ್ಚಾವಿಶೇಷಾತ್**' (ಪಶ್ವಾದಿಗಳಿಗೆ ಸಮಾನವಾಗಿರುತ್ತದೆ.) ಆದ್ದರಿಂದಲೇ ಪಶ್ವಾದಿಗಳು ಪ್ರಮಾತೃತ್ವಾದಿವ್ಯವಹಾರಕಾಲದಲ್ಲಿ[1] ಪ್ರವೃತ್ತಿ, ನಿವೃತ್ತಿ, ಔದಾಸೀನ್ಯ- ಇವುಗಳನ್ನು ಹೊಂದುತ್ತಿರುವಾಗ ಕಾರ್ಯಕರಣಸಂಘಾತದಲ್ಲಿಯೇ ನಾನೆಂಬ ಅಭಿಮಾನವನ್ನು ಮಾಡಿಕೊಂಡಿರುತ್ತವೆ ಎಂಬುದು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ಹುಟ್ಟಿದಂದಿನಿಂದಲೇ ಪಶ್ವಾದಿಗಳಿಗಿಂತ ಹೆಚ್ಚಿನ ವಿವೇಕವುಳ್ಳ ಮನಸ್ಸಿನವರಾಗಿ ಶಾಸ್ತ್ರದಿಂದಾಗುವ ಪಾರಲೌಕಿಕಬುದ್ಧಿಯುಳ್ಳವರಾದರೂ[2] ಅವಕ್ಕೆ ಸಮಾನವಾದ ಯೋಗಕ್ಷೇಮವುಳ್ಳವರಾಗಿರುತ್ತಾರಲ್ಲವೆ? ಆದ್ದರಿಂದ, ಅವಕ್ಕೆ ಸಮಾನವಾದ ಕಾರ್ಯವು ಕಂಡುಬರುವದರಿಂದ, (ಅವರಿಗೆ) ಕಾರ್ಯಕರಣಸಂಘಾತದಲ್ಲಿಯೂ ತಾನೆಂಬ ಅಭಿಮಾನವು ಸಮಾನವು ಎಂಬುದು ಯುಕ್ತವು.

(ಆಕ್ಷೇಪ) : ಪಶ್ವಾದಿಗಳಿಗಾದರೂ ಕಾರ್ಯಕರಣಸಂಘಾತದಲ್ಲಿ ಅಹಂಕಾರದ ಸಂಬಂಧ(ವಿದೆ) ಎಂದು ಹೇಗೆ ನಿಶ್ಚಯಿಸುವದು ? ಅದು ಸಿದ್ಧವಾಗಿರುವಂತೆ ಹೇಳುತ್ತಿರುವಿರಲ್ಲ !

(ಪರಿಹಾರ) : ಹೇಳುತ್ತೇವೆ. ಪ್ರತ್ಯಕ್ಷಾದಿಗಳ (ಸ್ವಭಾವವನ್ನರಿಯಬಲ್ಲ) ಕುಶಲರಾದ ಪ್ರೌಢಬುದ್ಧಿಯುಳ್ಳವರಿಗೇ ಆತ್ಮನನ್ನು ತಿಳಿಸಿಕೊಡಲಾಗುತ್ತದೆ[3] ; ಹಾಗಿಲ್ಲದಿದ್ದರೆ ಅದು ವ್ಯರ್ಥವಾಗುವ ಪ್ರಸಂಗವಿರುವದು. ಹೀಗೆಯೇ ಪ್ರಮಾಣವಿಚಾರವಿಲ್ಲದೆಯೇ ಒಬ್ಬೊಬ್ಬನೂ ತಿಳಿದುಕೊಳ್ಳಬಹುದಾಗುವದು.[4]

(ಆಕ್ಷೇಪ) : ದನಕಾಯುವವರು, ಸ್ತ್ರೀಯರು - ಮೊದಲಾದವರು ಪ್ರಮಾಣವಿಲ್ಲದೆಯೇ ಈಗಿನ ದೇಹವು ಬಿದ್ದ ಮೇಲೂ ಭೋಕ್ತೃವು ಸ್ಥಿರವಾಗಿರುವನೆಂದು ಭಾವಿಸಿಕೊಂಡು ಅವನಿಗಾಗಿ (ಕರ್ಮವನ್ನು) ಮಾಡುತ್ತಿರುವರಲ್ಲ !

---

1. ಹೊರಗಿನ ವಿಷಯಗಳನ್ನು ಅರಿಯುವದನ್ನೇ ಇಲ್ಲಿ ಪ್ರಮಾತೃತ್ವವೆಂದಿದೆ. ಪಶ್ವಾದಿಗಳಿಗೆ ನಾವು ಪ್ರಮಾತೃಗಳು- ಎಂಬ ಅರಿವು ಇದೆ ಎಂಬ ಅಭಿಪ್ರಾಯವೇನೂ ಇಲ್ಲ.

2. ಶರೀರಾದಿವ್ಯತಿರಿಕ್ತನಾಗಿರುವ ಆತ್ಮನೊಬ್ಬನಿದಾನೆಂದು ನಂಬಿರುವವರಾದರೂ.

3. ಪಶ್ವಾದಿಗಳಿಗೆ ಯೋಗ್ಯತೆಯಿಲ್ಲವೆಂಬುದನ್ನು ಬಲ್ಲವರನ್ನು ಕುರಿತೇ ಹೀಗೆ ಹೇಳಿದೆ.

4. ಪ್ರತ್ಯಕ್ಷಾದಿಗಳ ಸ್ವಭಾವವನ್ನು ಅರಿಯದವರಿಗೂ ಆತ್ಮವಿಚಾರದಲ್ಲಿ ಅಧಿಕಾರವಿದೆ ಎಂದರೆ ಪ್ರಾಕೃತರೂ ಆತ್ಮತತ್ತ್ವವನ್ನು ತಿಳಿದುಕೊಳ್ಳಬಹುದೆಂದಾಗುವದು.

(ಸಿದ್ಧಾಂತ) : ಹಾಗಲ್ಲ. ಏಕೆಂದರೆ ಅದನ್ನರಿತುಕೊಂಡವರ ವ್ಯವಹಾರ ವೇ (ಅವರಿಗೆ) ಪ್ರಮಾಣವಾಗಿರುತ್ತದೆ. ಆದ್ದರಿಂದಲೇ ಅವರನ್ನು 'ಪರಲೋಕ ಸಂಬಂಧಿಯಾದ (ಆತ್ಮನು) ಯಾರು ?' ಎಂದು ಕೇಳಿದರೆ '(ಇಂಥವನೆಂದು) ಗೊತ್ತಾಗಿ ನಾವರಿಯೆವು ; ಲೋಕದಲ್ಲಿ ಪ್ರಸಿದ್ಧನಾಗಿರುತ್ತಾನೆ ' ಎಂದು ಉತ್ತರ ವನ್ನು ಕೊಡುತ್ತಾರೆ. ಆದ್ದರಿಂದ 'ಪಶ್ವಾದಿಗಳಿಗೆ ಅವಿವೇಕಪುರಃಸರವಾಗಿಯೇ ಪ್ರತ್ಯಕ್ಷಾದಿವ್ಯವಹಾರವೆಂಬುದು ಪ್ರಸಿದ್ಧವಾಗಿದೆ ; ಅದಕ್ಕೆ ಸಮಾನವಾಗಿರುವದು ಕಂಡುಬರುವದರಿಂದ ವ್ಯುತ್ಪತ್ತಿಯುಳ್ಳ ಪುರುಷರಿಗೂ ಪ್ರತ್ಯಕ್ಷಾದಿವ್ಯವಹಾರವು ಆ ಕಾಲಕ್ಕೆ ಸಮಾನವೆಂದು ನಿಶ್ಚಯವಾಗುತ್ತದೆ' ಎಂದು ಹೇಳಿದ್ದು ಸರಿ.

## ೧೦. ಶಾಸ್ತ್ರೀಯವ್ಯವಹಾರವೂ ಅವಿದ್ಯಾಪುರಃಸರವೆಂಬ ಭಾಷ್ಯ

**ಶಾಸ್ತ್ರೀಯೇ ತು ವ್ಯವಹಾರೇ ಯದ್ಯಪಿ ಬುದ್ಧಿಪೂರ್ವ ಕಾರೀ ನಾವಿದಿತ್ವಾ ಆತ್ಮನಃ ಪರಲೋಕಸಂಬನ್ಧಮ್ ಅಧಿ ಕ್ರಿಯತೇ, ತಥಾಪಿ ನ ವೇದಾನ್ತವೇದ್ಯಮ್ ಅಶನಾಯಾ- ದ್ಯತೀತಮ್, ಅಪೇತಬ್ರಹ್ಮಕ್ಷತ್ರಾದಿಭೇದಮ್, ಅಸಂಸಾರಿ ಆತ್ಮತತ್ತ್ವಮ್ ಅಧಿಕಾರೇ ಅಪೇಕ್ಷ್ಯತೇ । ಅನುಪಯೋ ಗಾತ್, ಅಧಿಕಾರವಿರೋಧಾಚ್ಚ । ಪ್ರಾಕ್ಚ ತಥಾಭೂತಾತ್ಮ ವಿಜ್ಞಾನಾತ್ ಪ್ರವರ್ತಮಾನಂ ಶಾಸ್ತ್ರಮ್ ಅವಿದ್ಯಾವ- ದ್ವಿಷಯತ್ವಂ ನಾತಿವರ್ತತೇ । ತಥಾ ಹಿ 'ಬ್ರಾಹ್ಮಣೋ ಯಜೇತ' ಇತ್ಯಾದೀನಿ ಶಾಸ್ತ್ರಾಣಿ ಆತ್ಮನಿ ವರ್ಣಾಶ್ರಮ ವಯೋಽವಸ್ಥಾದಿವಿಶೇಷಾಧ್ಯಾಸಮ್ ಆಶ್ರಿತ್ಯ ಪ್ರವರ್ತನ್ತೇ॥**

### ಶಾಸ್ತ್ರೀಯವ್ಯವಹಾರವು ಅವಿದ್ಯಾಪುರಃಸರ

**(ಪಂಚಪಾದಿಕಾ)**

೫೮. ಏವಂ ತಾವತ್ ಪ್ರತ್ಯಕ್ಷಾದೀನಿ ಪ್ರಮಾಣಾನಿ ಚಕ್ಷುರಾದಿಸಾಧ ನಾನಿ । ತಾನಿ ಚ ನಾಧಿಷ್ಠಾನಶೂನ್ಯಾನಿ ವ್ಯಾಪ್ರಿಯನ್ತೇ । ಅಧಿಷ್ಠಾನಂ ಚ ದೇಹಃ ; ನ ತೇನಾಧ್ಯಸ್ತಾತ್ಮಭಾವೇನ ಅಸಙ್ಗಸ್ಯ ಅವಿಕಾರಿಣಃ, ಚೈತನ್ಯೈಕ ರಸಸ್ಯ ಆತ್ಮನಃ ಪ್ರಮಾತೃತ್ವಮುಪಪದ್ಯತೇ– ಇತ್ಯನುಭವಾರೂಢಮ್ ಅವಿದ್ಯಾ ವದ್ವಿಷಯತ್ವಂ ಪ್ರತ್ಯಕ್ಷಾದೀನಾಮುಪದಿಶ್ಯ, ಪಶ್ವಾದಿವ್ಯವಹಾರಸಾಮ್ಯೇನ ಕಾರ್ಯ ತೋಽಪ್ಯಾಪಾದ್ಯ, ಶಾಸ್ತ್ರಂ ಪುನಃ ಪ್ರತಿಪನ್ನಾತ್ಮವಿಷಯಮೇವ, ತೇನ ನ ತತ್ರಾ

ಧ್ಯಾಸಪೂರ್ವಿಕಾ ಪ್ರವೃತ್ತಿಃ- ಇತಿ ವಿಶೇಷಮಾಶಙ್ಕ್ಯ ತಸ್ಯಾಪ್ಯವಿದ್ಯಾವದ್ವಿಷಯತ್ವಪ್ರದರ್ಶನಾಯಾಹ- **'ಶಾಸ್ತ್ರೀಯೇ ತು ವ್ಯವಹಾರೇ ಯದ್ಯಪಿ ಬುದ್ಧಿಪೂರ್ವಕಾರೀ ನಾವಿದಿತ್ವಾ ಆತ್ಮನಃ ಪರಲೋಕಸಂಬನ್ಧಮ್ ಅಧಿಕ್ರಿಯತೇ'** ಇತಿ ॥

(ಅರ್ಥ)

ಹೀಗೆ ಮೊದಲು ಪ್ರತ್ಯಕ್ಷಾದಿಪ್ರಮಾಣಗಳು ಚಕ್ಷುರಿಂದ್ರಿಯವೇ ಮುಂತಾದ ಸಾಧನಗಳುಳ್ಳವು ; ಅವು ಅಧಿಷ್ಠಾನವಿಲ್ಲದೆ ವ್ಯಾಪಾರಮಾಡುವದಿಲ್ಲ. ಅಧಿಷ್ಠಾನವಾದದ್ದು, ದೇಹವು ; ಅದಕ್ಕೆ ತನ್ನಲ್ಲಿ ಆತ್ಮನೆಂಬ ಅಧ್ಯಾಸವಾಗದೆ ಇದ್ದರೆ, ಆದರಿಂದ ಅಸಂಗನೂ ಅವಿಕಾರಿಯೂ ಚೈತನ್ಯೈಕರಸನೂ ಆಗಿರುವ ಆತ್ಮನಿಗೆ ಪ್ರಮಾತೃತ್ವವು (ಉಂಟಾಗುವದು) ಹೊಂದುವದಿಲ್ಲ- ಎಂದು ಪ್ರತ್ಯಕ್ಷಾದಿಗಳು ಅವಿದ್ಯಾವಂತರ ವಿಷಯವೆಂಬುದನ್ನು ಅನುಭವಕ್ಕೆ ಹೊಂದಿಸಿ ತಿಳಿಸಿಕೊಟ್ಟು, ಪಶ್ವಾದಿವ್ಯವಹಾರದ ಹೋಲಿಕೆಯಿಂದ ಕಾರ್ಯದಿಂದಲೂ (ಅವಿದ್ಯಾವದ್ವಿಷಯತ್ವವನ್ನು) ಉಪಪಾದನೆಮಾಡಿ, 'ಆದರೆ ಶಾಸ್ತ್ರವು ಆತ್ಮ(ಸ್ವರೂಪವನ್ನು) ಅರಿತುಕೊಂಡವರ ವಿಷಯವಾದದ್ದೇ ; ಆದ್ದರಿಂದ ಅಧ್ಯಾಸಪೂರ್ವಕವಾದ ಪ್ರವೃತ್ತಿಯಿಲ್ಲವಲ್ಲ' ಎಂದು ವಿಶೇಷವನ್ನು ಆಶಂಕಿಸಿ ಅದೂ ಅವಿದ್ಯಾವದ್ವಿಷಯವೇ ಎಂದು ತಿಳಿಸುವದಕ್ಕಾಗಿ (ಭಾಷ್ಯಕಾರರು) **'ಶಾಸ್ತ್ರೀಯೇ ತು ವ್ಯವಹಾರೇ ಯದ್ಯಪಿ ಬುದ್ಧಿಪೂರ್ವಕಾರೀ ನಾವಿದಿತ್ವಾ ಆತ್ಮನಃ ಪರಲೋಕಸಂಬನ್ಧಮಧಿಕ್ರಿಯತೇ'** (ಶಾಸ್ತ್ರೀಯವ್ಯವಹಾರದಲ್ಲಾದರೆ ಬುದ್ಧಿಪೂರ್ವಕವಾಗಿ ಕರ್ಮವನ್ನು ಮಾಡುವವನು ತನ್ನ ಆತ್ಮನಿಗೆ ಪರಲೋಕಸಂಬಂಧವಿದೆ ಎಂಬುದನ್ನು ಅರಿಯದೆ ಅಧಿಕೃತನಲ್ಲವಾದರೂ ....) ಎಂದು ಹೇಳಿರುತ್ತಾರೆ.

## ಕರ್ಮಾಚರಣೆಗೆ ಆತ್ಮಜ್ಞಾನವು ಬೇಕು

(ಪಂಚಪಾದಿಕಾ)

೫೯. ನನು ಫಲನೈಯಮಿಕನೈಮಿತ್ತಿಕಪ್ರಾಯಶ್ಚಿತ್ತಚೋದನಾಃ, ವರ್ತಮಾನಶರೀರಪಾತಾದೂರ್ಧ್ವಕಾಲಸ್ಥಾಯಿನಂ ಭೋಕ್ತಾರಮನ್ತರೇಣಾಪಿ ಪ್ರಮಾಣತಾಮ್ ಅಶ್ನುವತ ಏವ । ಯಥಾ ಚೈತದೇವಂ ತಥಾ 'ಏಕ ಆತ್ಮನಃ ಶರೀರೇ ಭಾವಾತ್' ( ವೇ. ಸೂ. ೩-೩-೫೩ ) ಇತ್ಯಧಿಕರಣಾರಮ್ಭೇ ವಕ್ಷ್ಯಾಮಃ[1] । ಸತ್ಯಮ್ ಏವಮ್ । ತಥಾಪಿ ಸಕಲಶಾಸ್ತ್ರಪರ್ಯಾಲೋಚನಾಪರಿನಿಷ್ಪನ್ನಂ ಪ್ರಾಮಾಣಿಕಮರ್ಥಮ್ ಅಙ್ಗೀಕೃತ್ಯ ಆಹ ಭಾಷ್ಯಕಾರಃ । ತಥಾ ಚ ವಿಧಿವೃತ್ತಿಮೀಮಾಂಸಾಭಾಷ್ಯಕಾರೋಽಪಿ ಉತ್ಸೂತ್ರಮೇವ ಆತ್ಮಸಿದ್ಧೌ ಪರಾಕ್ರಾನ್ತವಾನ್ । ತತ್ ಕಸ್ಯ ಹೇತೋಃ ? 'ಧರ್ಮಜಿಜ್ಞಾಸಾ ಇತಿ' ಕಾರ್ಯಾರ್ಥವಿಚಾರಂ ಪ್ರತಿ

1. 'ದರ್ಶಯಿಷ್ಯಾಮಃ' ಎಂದು ಪಾ॥

ಜ್ಞಾಯ ತದವಗಮಸ್ಯ ಪ್ರಾಮಾಣ್ಯೇ ಅನಪೇಕ್ಷತ್ವಂ ಕಾರಣಮ್ ಅನುಸರತಾ ಸೂತ್ರಕಾರೇಣ ವಿಶೇಷಾಭಾವಾತ್ ಸ್ವರೂಪನಿಷ್ಠಾನಾಮಪಿ **ವಾಕ್ಯಾನಾಂ** ಪ್ರಾಮಾಣ್ಯಮ್ ಅನುಸ್ಮೃತಂ ಮನ್ಯತೇ । ತಥಾ "ಚೋದನಾ ಹಿ ಭೂತಂ ಭವನ್ತಂ ಭವಿಷ್ಯನ್ತಂ ಸೂಕ್ಷ್ಮಂ ವ್ಯವಹಿತಂ ವಿಪ್ರಕೃಷ್ಟಮ್ ಇತ್ಯೇವಞ್ಜಾತೀಯಕಮ್ ಅರ್ಥಂ ಶಕ್ನೋತಿ ಅವಗಮಯಿತುಮ್' (ಶಾ. ಭಾ. ೧-೧-೨) ಇತಿ ವದನ್ ಚೋದನಾಶೇಷತ್ವೇನಾಪಿ ಸ್ವರೂಪಾವಗಮೇ ಅನಪೇಕ್ಷತ್ವಮ್. ಅವಿಶಿಷ್ಟಮ್ ಅವಗಚ್ಛತಿ- ಇತ್ಯವಗಮ್ಯತೇ। ಸ ಚ ಸ್ವರೂಪಾವಗಮಃ ಕಸ್ಮಿನ್ ಕಥಂ ವಾ ?- ಇತಿ ಧರ್ಮಮಾತ್ರವಿಚಾರಂ ಪ್ರತಿಜ್ಞಾಯ ತತ್ರೈವ ಪ್ರಯತಮಾನೇನ ಭಗವತಾ ಜೈಮಿನಿನಾ ನ ಮೀಮಾಂಸಿತಮ್ ಉಪಯೋಗಾಭಾವಾತ್ । ಭಗವಾಂಸ್ತು ಪುನ ರ್ಬಾದರಾಯಣಃ ಪೃಥಗ್ ವಿಚಾರಂ ಪ್ರತಿಜ್ಞಾಯ ವ್ಯಚೀಚರತ್ ಸಮನ್ವಯ ಲಕ್ಷಣೇನ । ತತ್ರ ಚ ದೇಹಾನ್ತರೋಪಭೋಗ್ಯಃ ಸ್ವರ್ಗಃ ಸ್ಥಾಸ್ಯತಿ। ತಚ್ಚ ಸರ್ವಂ ಕಾರ್ಯಕರಣಸಂಘಾತಾತ್ ಅನ್ಯೇನ ಭೋಕ್ತ್ರಾ ವಿನಾ ನ ಸಿಧ್ಯತಿ । ತತ್ಸಿದ್ಧಿಶ್ಚ ನಾಗಮಮಾತ್ರಾಯತ್ತಾ । ಪ್ರಮಾಣಾನ್ತರಗೋಚರಸ್ಯ ತದಭಾವೇ ತದ್ವಿರೋಧೇ ವಾ ಶಿಲಾಪ್ಲವನವಾಕ್ಯವತ್ ಅಪ್ರಾಮಾಣ್ಯಪ್ರಸಙ್ಗಾತ್ । ಅತಃ, ತತ್ಸಿದ್ಧೌ ಪರಾ ಕ್ರಾನ್ತವಾನ್ ತೇನ। ಸತ್ಯಮ್, ವಿನಾಪಿ ತೇನ ಸಿಧ್ಯೇತ್ ಪ್ರಾಮಾಣ್ಯಮ್ । ಅಸ್ತಿ ತು ತತ್ । ತಸ್ಮಿನ್ ವಿದ್ಯಮಾನೇ ನ ತೇನ ವಿನಾ ಪ್ರಾಮಾಣ್ಯಂ ಸಿಧ್ಯತಿ ಫಲಾದಿಚೋದನಾನಾಮ್ ಇತಿ ಮತ್ವಾ ಆಹ '**ಶಾಸ್ತ್ರೀಯೋ ತು ವ್ಯವಹಾರೇ ಯದ್ಯಪಿ ವಿದ್ಯಮಾನೇ ಬುದ್ಧಿಪೂರ್ವಕಾರೀ ನಾವಿದಿತ್ವಾ ಆತ್ಮನಃ ಪರಲೋಕಸಂಬನ್ಧಮ್ ಅಧಿಕ್ರಿಯತೇ**' ಇತಿ ॥

(ಅರ್ಥ)

(ಆಕ್ಷೇಪ) ; ಫಲ[1], ನಿಯತ(ಕರ್ಮ), ನೈಮಿತ್ತಿಕ, ಪ್ರಾಯಶ್ಚಿತ್ತ- ಎಂಬ ಚೋದನೆಗಳು ಈಗಿರುವ ಶರೀರವು ಬಿದ್ದುಹೋದಮೇಲೂ ಇದ್ದುಕೊಂಡಿರುವ ಭೋಕ್ತೃವು ಇಲ್ಲದಿದ್ದರೂ ಪ್ರಾಮಾಣ್ಯವನ್ನು ಪಡೆದೇತೀರುವವಲ್ಲ ! ಇದು ಹೇಗೆಂಬುದನ್ನು (ಮುಂದೆ) 'ಏಕ ಆತ್ಮನಃ ಶರೀರೇ ಭಾವಾತ್' (ವೇ. ಸೂ. ೩-೩-೫೩) ಎಂಬಲ್ಲಿ ತೋರಿಸಿಕೊಡುವೆವು.

---

1. ಕಾಮ್ಯ, ನಿತ್ಯ, ನೈಮಿತ್ತಿಕ, ಪ್ರಾಯಶ್ಚಿತ್ತ- ಎಂಬಿವೆಲ್ಲ ಈಗಿನ ಶರೀರದಲ್ಲಾಗುವ ಪ್ರಯೋಜನವನ್ನಿಟ್ಟುಕೊಂಡರೂ ಆಗಬಹುದು. ಪುತ್ರ, ಪಶು, ಸುಖರೂಪವಾದ ಸ್ವರ್ಗ- ಎಲ್ಲ ಈ ಜನ್ಮಕ್ಕೇ ಸೇರಿವೆ -ಎಂಬುದು ಪೂರ್ವಪಕ್ಷಿಯ ಭಾವ. 'ಫಲಚೋದನೆಯಲ್ಲಿ ಹೇಳಿರುವ ಪಶ್ವಾದಿಗಳು ಈ ಜನ್ಮದಲ್ಲಿ ಸಿಕ್ಕುತ್ತವೆ ; ಅದರಿಂದಾಗುವ ಸುಖವೇ ಸ್ವರ್ಗವು. ಜ್ಯೋತಿಷ್ಟೋಮವೇ ಮುಂತಾದವುಗಳಿಂದಾಗುವ ಪ್ರೀತಿಯೂ ಇಲ್ಲಿಯೇ ಆಗಬಹುದು. ನೈಯಮಿಕನೈಮಿತ್ತಿಕಚೋದನೆಗಳಿಗೆ ಫಲವೇ ಇಲ್ಲ; ಇದ್ದರೂ ಇಲ್ಲಿಯೇ ಅನುಭವಿಸಬಹುದು. ಪ್ರಾಯಶ್ಚಿತ್ತಕ್ಕೆ ದೋಷವನ್ನು ಕಳೆಯುವವೇ ಫಲ' ಎಂದು ಪೂರ್ವಪಕ್ಷದ ಅಭಿಪ್ರಾಯವನ್ನು ಪಂ. ವಿ. ದಲ್ಲಿ ವಿವರಿಸಿದೆ.

(ಸಮಾಧಾನ) : ನಿಜ, ಹೀಗೆಯೇ. ಆದರೂ ಸಕಲಶಾಸ್ತ್ರಾರ್ಥವನ್ನು ಪರ್ಯಾಲೋಚನೆಮಾಡಿದರೆ ಸಿದ್ಧವಾಗುವ ಪ್ರಾಮಾಣಿಕವಾಗುವ ಅರ್ಥವನ್ನು ಒಪ್ಪಿಕೊಂಡು ಭಾಷ್ಯಕಾರರು (ಹೀಗೆಂದು) ಹೇಳಿರುತ್ತಾರೆ.[1] ಆದ್ದರಿಂದಲೇ ವಿಧಿವ್ಯಾಪಾರದ ಮೀಮಾಂಸೆಯ[2] ಭಾಷ್ಯಕಾರರೂ ಉತ್ಸೂತ್ರವಾಗಿಯೇ[3] ಆತ್ಮಸಿದ್ಧಿಗಾಗಿ ಪ್ರಯತ್ನಿಸಿರುತ್ತಾರೆ.[4] ಅದಕ್ಕೆ ಕಾರಣವೇನು ?– ಎಂದರೆ 'ಧರ್ಮಜಿಜ್ಞಾಸಾ' (ಜೈ. ಸೂ. ೧-೧-೧) ಎಂದು ಕಾರ್ಯಾರ್ಥವಾದ ವಿಚಾರವನ್ನು ಪ್ರತಿಜ್ಞೆಮಾಡಿ ಅದರ ಜ್ಞಾನಕ್ಕೆ ಪ್ರಾಮಾಣ್ಯದಲ್ಲಿ ಅನಪೇಕ್ಷಿತತ್ವವೆಂಬ ಕಾರಣವನ್ನು ಅನುಸರಿಸುವ ಸೂತ್ರಕಾರರು[5] (ಯಾವ) ವಿಶೇಷವೂ ಇಲ್ಲದ್ದರಿಂದ ಸ್ವರೂಪನಿಷ್ಠವಾದ ವಾಕ್ಯಗಳಿಗೂ ಪ್ರಾಮಾಣ್ಯವಿದೆಯೆಂದು ಹೇಳಿದಂತಾಯಿತೆಂದು ಅಭಿಪ್ರಾಯಪಟ್ಟಿರುತ್ತಾರೆ.[6] ಮತ್ತು 'ಚೋದನೆಯು ಭೂತ, ವರ್ತಮಾನ, (ಮತ್ತು) ಭವಿಷ್ಯತ್ತಿನ, ಸೂಕ್ಷ್ಮವಾದ, ವ್ಯವಹಿತವಾದ, ವಿಪ್ರಕೃಷ್ಟವಾದ ಎಂಬೀ ಜಾತಿಯ ಅರ್ಥವನ್ನು ತಿಳಿಸುವದಕ್ಕೆ ಶಕ್ತವಾಗಿರುತ್ತದೆ' (ಶಾ. ಭಾ. ೧-೧-೨) ಎಂದು ಹೇಳಿರುವದರಿಂದ ಚೋದನಾಶೇಷವಾಗಿಯೂ ಸ್ವರೂಪವನ್ನು ತಿಳಿಸುವದರಲ್ಲಿ ಅನಪೇಕ್ಷತ್ವವು ಸಮಾನವಾಗಿದೆ ಎಂದು ನಿಶ್ಚಯಿಸಿರುತ್ತಾರೆಂದು ಗೊತ್ತಾಗುತ್ತದೆ.[7] ಆ ಸ್ವರೂಪದ ಅರಿವು ಏತರ (ವಿಷಯದ)ಲ್ಲಿ? ಅಥವಾ ಹೇಗೆ?– ಎಂಬುದನ್ನು ಧರ್ಮಮಾತ್ರದ ವಿಚಾರವನ್ನು ಪ್ರತಿಜ್ಞೆಮಾಡಿ ಅದರ (ವಿಷಯ)ದಲ್ಲಿ ಪ್ರಯತ್ನಿಸಿರುವ ಭಗವಾನ್ ಜೈಮಿನಿಗಳು ಮೀಮಾಂಸಾಮಾಡಿರುವದಿಲ್ಲ; ಏಕೆಂದರೆ (ಅಲ್ಲಿ) ಅದರ ಉಪಯೋಗವಿರುವದಿಲ್ಲ. ಆದರೆ ಭಗವಾನ್ ಬಾದರಾಯಣರಾದರೋ

---

1. ದೃಷ್ಟಫಲಗಳಿಗೆ ವ್ಯತಿರಿಕ್ತಾತ್ಮಜ್ಞಾನವು ಬೇಕಿಲ್ಲದಿದ್ದರೂ ಸತ್ತ ಬಳಿಕ ಆಗುವ ಫಲಗಳ ವಿಷಯಕ್ಕೆ ಬೇಕು. ಸೂ. ಭಾ. ೩-೪-೨ನ್ನು ನೋಡಿ.

2. ಪೂರ್ವಮೀಮಾಂಸಾಶಾಸ್ತ್ರದ.

3. ಸೂತ್ರಾಕ್ಷರದಲ್ಲಿ ಸೂಚಿತವಾಗಿ ಕಾಣದಿದ್ದರೂ ಸ್ವತಂತ್ರವಾಗಿಯೇ.

4. ಜೈ. ಸೂ. ೧-೧-೫ರ ಭಾಷ್ಯದಲ್ಲಿ 'ಸ ಏಷ ಯಜ್ಞಾಯುಧೀ ಯಜಮಾನೋಽಞ್ಜಸಾ ಸ್ವರ್ಗಂ ಲೋಕಂ ಯಾತಿ' ಎಂಬ ಶ್ರುತಿಯನ್ನು ಉದಾಹರಿಸಿಕೊಂಡು ಭಾಷ್ಯಕಾರರು ವ್ಯತಿರಿಕ್ತಾತ್ಮನನ್ನು ಬೌದ್ಧಮತಖಂಡನಾಪೂರ್ವಕವಾಗಿ ಸ್ಥಾಪಿಸಿದ್ದಾರೆ.

5. 'ಔತ್ಪತ್ತಿಕಸ್ತು ಶಬ್ದಸ್ಯಾರ್ಥೇನ ಸಂಬನ್ಧಃ...' ಇತ್ಯಾದಿಸೂತ್ರದಲ್ಲಿ ಶಬ್ದಾರ್ಥಗಳಿಗೆ ನಿತ್ಯಸಂಬಂಧವನ್ನು ಹೇಳಿರುತ್ತದೆ, ವೇದಪ್ರಾಮಾಣ್ಯಕ್ಕೆ ಅನಪೇಕ್ಷತ್ವವನ್ನೂ ಮತ್ತೊಂದು ಪ್ರಾಮಾಣ್ಯದ ಅಪೇಕ್ಷೆಯಿಲ್ಲದಿರುವಿಕೆಯನ್ನೂ– ಹೇಳಿರುತ್ತದೆ.

6. 'ಬಾದರಾಯಣರಿಗೂ ಒಪ್ಪು' ಎಂದದ್ದರಿಂದ ತಮಗೂ ಅದು ಒಪ್ಪಾಗಿದೆ ಎಂದು ಸೂತ್ರದಲ್ಲಿ ಹೇಳಿದಂತಾಯಿತೆಂದು ಮೀಮಾಂಸಾಭಾಷ್ಯಕಾರರು ಒಪ್ಪಿರುತ್ತಾರೆಂದು ಅಭಿಪ್ರಾಯ.

7. ಚೋದನೆಯೂ ಸ್ವರ್ಗಾದಿಭೂತವಸ್ತುಗಳನ್ನು ತಿಳಿಸಬಹುದೆಂದು ಭಾಷ್ಯಕಾರರ ಅಭಿಪ್ರಾಯವೆಂದು ಇದರಿಂದ ನಿಶ್ಚಯವಾಗುತ್ತದೆ ಎಂದರ್ಥ.

(ಅದಕ್ಕಿಂತ) ಬೇರೆಯಾದ (ಬ್ರಹ್ಮ)ವಿಚಾರವನ್ನು ಪ್ರತಿಜ್ಞೆಮಾಡಿ ಸಮನ್ವಯ ಲಕ್ಷಣದಿಂದ ವಿಚಾರಮಾಡಿರುತ್ತಾರೆ.[1] ಅದರಿಂದ ದೇಹಾಂತರದಲ್ಲಿ ಉಪಭೋಗಿಸ ಬೇಕಾದ ಸ್ವರ್ಗವು ಸ್ಥಾಪಿತವಾಗುತ್ತದೆ[2]. ಅದು ಯಾವದೂ ಕಾರ್ಯಕರಣಸಂಘಾತ ಕ್ಕಿಂತ ಬೇರೆಯಾಗಿರುವ ಭೋಕ್ತೃವಿಲ್ಲದೆ ಸಿದ್ಧವಾಗುವದಿಲ್ಲ. ಆ ಸಿದ್ಧಿಯು ಬರಿಯ ಆಗಮಮಾತ್ರಕ್ಕೆ ಅಧೀನವಾಗಿರುವದಿಲ್ಲ; ಏಕೆಂದರೆ ಪ್ರಮಾಣಾಂತರಕ್ಕೆ ಗೋಚರ ವಾಗಿರುವ ವಿಷಯಕ್ಕೆ ಆ (ಪ್ರಮಾಣ)ವಿಲ್ಲದಿದ್ದರೆ, ಅಥವಾ ಅದಕ್ಕೆ (ಶಾಸ್ತ್ರವು) ವಿರೋಧವಾಗಿದ್ದರೆ 'ಕಲ್ಲು ತೇಲುತ್ತದೆ' ಎಂಬ ವಾಕ್ಯದಂತೆ ಅಪ್ರಮಾಣವಾಗ ಬೇಕಾದೀತು. ಆದ್ದರಿಂದ ಅದು ಸಿದ್ಧವಾಗುವದಕ್ಕಾಗಿ ಪ್ರಯತ್ನಿಸಿರುತ್ತಾರೆ. ಅದ ರಿಂದ. ನಿಜ, ಅದಿಲ್ಲದಿದ್ದರೂ ಪ್ರಾಮಾಣ್ಯವು ಸಿದ್ಧವಾದೀತು[3]; ಆದರೆ ಅದು ಇರು ತ್ತದೆ.[4] ಅದು ಇರುವಾಗ ಅದಿಲ್ಲದೆ ಫಲಾದಿಚೋದನೆಗಳಿಗೆ ಪ್ರಾಮಾಣ್ಯವು ಸಿದ್ಧ ವಾಗುವದಿಲ್ಲ[5] –ಎಂಬ ಅಭಿಪ್ರಾಯದಿಂದ '**ಶಾಸ್ತ್ರೀಯವ್ಯವಹಾರದಲ್ಲಾದರೆ ಬುದ್ಧಿಪೂರ್ವಕವಾಗಿ ಕರ್ಮವನ್ನು ಮಾಡುವವನು ತನ್ನ ಆತ್ಮನಿಗೆ ಪರ ಲೋಕಸಂಬಂಧವನ್ನು ತಿಳಿಯದೆ ಅಧಿಕೃತನಾಗುವದಿಲ್ಲವೆಂಬುದು ನಿಜವಾದರೂ**' ಎಂದು (ಭಾಷ್ಯಕಾರರು) ಹೇಳಿರುತ್ತಾರೆ.

## ಆತ್ಮಜ್ಞಾನಕ್ಕಿಂತ ಮೊದಲು ಪ್ರವರ್ತಿಸುವ ಶಾಸ್ತ್ರವು ಅವಿದ್ಯಾವಂತರಿಗೆ

(ಪಂಚಪಾದಿಕಾ)

೬೦. **'ತಥಾಪಿ ನ ವೇದಾನ್ತವೇದ್ಯಮ್' ಇತಿ । ಕಿಂ ತದಿತಿ ? ಅತ ಆಹ–'ಅಸಂಸಾರ್ಯಾತ್ಮತತ್ತ್ವಮ್। ನ ತತ್ ಅಧಿಕಾರೇ ಅಪೇಕ್ಷ್ಯತೇ।**

---

1. ಜೈಮಿನಿಗಳಿಗೆ ಕಾರ್ಯವನ್ನು ತಿಳಿಸುವದೇ ಮುಖ್ಯವಾದ್ದರಿಂದ ಭೂತವಸ್ತುವನ್ನು ತಿಳಿಸುವದಕ್ಕೂ ಪ್ರಾಮಾಣ್ಯವುಂಟೆಂಬುದಕ್ಕೆ ಅವರು ಸೂತ್ರವನ್ನು ಮಾಡಿಲ್ಲ. ಬಾದರಾಯಣ ರು 'ಬ್ರಹ್ಮವಸ್ತು'ವನ್ನೇ ಕುರಿತ ಶಾಸ್ತ್ರವನ್ನು ರಚಿಸಿರುವದರಿಂದ ಸಿದ್ಧವಸ್ತುವಿನ ವಿಷಯಕ್ಕೂ ವೇದಕ್ಕೆ ಪ್ರಾಮಾಣ್ಯವಿದೆ ಎಂಬುದನ್ನು ನಾಲ್ಕನೆಯ ಸೂತ್ರದಲ್ಲಿ ಸ್ಥಾಪಿಸಿರುತ್ತಾರೆ.

2. ಭೂತವಸ್ತುವಾದ ಸ್ವರ್ಗಕ್ಕೆ ಪ್ರಾಮಾಣ್ಯವು ಸ್ಫುಟವಾಗುತ್ತದೆ ಎಂದರ್ಥ. ಬ್ರಹ್ಮ ವನ್ನು ಮಾತ್ರ ಇಲ್ಲಿ ವಿಚಾರಮಾಡಿದ್ದರೂ ಭೂತವಸ್ತುವಿನಲ್ಲಿ ಪ್ರಾಮಾಣ್ಯವನ್ನು ತೋರಿಸಿದ್ದ ರಿಂದ ಚೋದನಾಫಲವಾದ ಸ್ವರ್ಗಾದಿಗಳಲ್ಲೂ ಪ್ರಾಮಾಣ್ಯವಿದೆ ಎಂದು ಹೇಳಿದಂತಾಯಿತೆಂದು ಅಭಿಪ್ರಾಯ.

3. ಭೂತವಸ್ತುವಿಲ್ಲದಿದ್ದರೂ ಪೂರ್ವಪಕ್ಷಿಯು ಹೇಳಿದಂತೆ ಪ್ರಾಮಾಣ್ಯವು ಸಿದ್ಧವಾಗು ತ್ತದೆ.

4. ವೇದಪ್ರಾಮಾಣ್ಯದಿಂದ ಅದು ಇದೆ.

5. ಆದ್ದರಿಂದ ಫಲಾದಿಚೋದನೆಗಳಿಗೂ ಅದೃಷ್ಟವಾದ ಸ್ವರ್ಗ, ತತ್ಸಂಬಂಧಿಯಾದ ಆತ್ಮ–ಮುಂತಾದದ್ದಿಲ್ಲದೆ ಪ್ರಾಮಾಣ್ಯವು ಲಭಿಸಲಾರದು–ಎಂಬುದು ಭಾಷ್ಯಕಾರರ ಅಭಿಪ್ರಾಯ. ಆದ್ದರಿಂದ ದೇಹಾದಿವ್ಯತಿರಿಕ್ತಾತ್ಮನ ಜ್ಞಾನವಿಲ್ಲದೆ ಕರ್ಮದಲ್ಲಿ ಪ್ರಯತ್ನಿಸಲಾರನು– ಎಂದು ಭಾಷ್ಯಕಾರರು ಹೇಳಿರುತ್ತಾರೆ ಎಂದು ಭಾವ.

'ಅನುಪಯೋಗಾತ್, ಅಧಿಕಾರವಿರೋಧಾಚ್ಚ' । 'ಅಶನಾಯಾದ್ಯತೀತಮ್'-ಇತಿ ಅಸಂಸಾರ್ಯಾತ್ಮತತ್ತ್ವಂ ದರ್ಶಯತಿ। ಅಶನಾಯಾದ್ಯುಪಪ್ಲುತೋ ಹಿ ಸರ್ವೋ ಜನ್ತುಃ ಸ್ವಾಸ್ಥ್ಯಮ್ ಅಲಭಮಾನಃ ಪ್ರವರ್ತತೇ । ತದಪಾಯೇ ಸ್ವಾಸ್ಥ್ಯೇ ಸ್ಥಿತೋ ನ ಕಿಞ್ಚಿತ್ ಉಪಾದೇಯಂ ಹೇಯಂ ವಾ ಪಶ್ಯತಿ । 'ಅಪೇತಬ್ರಹ್ಮಕ್ಷತ್ರಾದಿಭೇದಮ್' ಇತಿ ಪ್ರಪಞ್ಚಶೂನ್ಯಮ್ ಏಕರಸಮ್ ದರ್ಶಯತಿ। ಪ್ರಾಕ್ ಚ ತಥಾಭೂತಾತ್ಮವಿಜ್ಞಾನಾತ್ ಪ್ರವರ್ತಮಾನಂ ಶಾಸ್ತ್ರಂ ಅವಿದ್ಯಾವದ್ವಿಷಯತ್ವಮ್ ನಾತಿವರ್ತತೇ। 'ತತ್ತ್ವಮಸಿ' ಇತಿ ವಾಕ್ಯಾರ್ಥಾವಗಮಾದರ್ವಾಕ್ ಅವಿದ್ಯಾಕೃತಂ ಸಂಸಾರಮಹಮುಲ್ಲೇಖಮಾಶ್ರಿತ್ಯ ಪ್ರವರ್ತಮಾನಂ ಶಾಸ್ತ್ರಂ ನಾವಿದ್ಯಾವದ್ವಿಷಯತ್ವಮತಿವರ್ತತೇ ॥

(ಅರ್ಥ)

'ತಥಾಪಿ ನ ವೇದಾನ್ತವೇದ್ಯಮ್' (ಆದರೂ ವೇದಾಂತವೇದ್ಯವಾದ)- ಅದು ಯಾವದು? ಎಂದರೆ ಅಸಂಸಾರಿಯಾದ ಆತ್ಮತತ್ತ್ವವು. ಅದು ಅಧಿಕಾರಕ್ಕೆ ಬೇಕಾಗಿರುವದಿಲ್ಲ; ಏಕೆಂದರೆ (ಕರ್ಮಕ್ಕೆ ಅದರ) ಉಪಯೋಗವಿಲ್ಲ; ಅಧಿಕಾರಕ್ಕೆ ಅದು ವಿರುದ್ಧವೂ ಆಗಿರುತ್ತದೆ. 'ಅಶನಾಯಾದ್ಯತೀತವಾದ' ಎಂಬುದು ಅಸಂಸಾರಿಯಾದ ಆತ್ಮತತ್ತ್ವವನ್ನು ತಿಳಿಸುತ್ತದೆ. ಹಸಿವು ಮುಂತಾದವುಗಳಿಂದ ಪೀಡಿತನಾಗಿರುವದರಿಂದಲ್ಲವೆ, ಪ್ರತಿಯೊಬ್ಬ ಜೀವನೂ ಸ್ವಾಸ್ಥ್ಯವನ್ನು ಹೊಂದದೆ ಪ್ರವರ್ತಿಸುತ್ತಾನೆ, ಅದು ಹೋದರೆ ಸ್ವಾಸ್ಥ್ಯದಲ್ಲಿದ್ದುಕೊಂಡಿರುವದರಿಂದ ಯಾವದೊಂದು ಉಪಾದೇಯವನ್ನಾಗಲಿ, ಹೇಯವನ್ನಾಗಲಿ ಕಾಣದೆ ಇರುತ್ತಾನೆ? 'ಅಪೇತಬ್ರಹ್ಮಕ್ಷತ್ರಾದಿಭೇದಮ್' (ಬ್ರಹ್ಮ, ಕ್ಷತ್ರ- ಮುಂತಾದ ವಿಶೇಷವಿಲ್ಲದ) ಎಂಬುದು ಪ್ರಪಂಚಶೂನ್ಯವಾದ ಏಕರಸವಾದ (ತತ್ತ್ವವನ್ನು) ತಿಳಿಸುತ್ತದೆ.[1] ಅಂಥ ಆತ್ಮವಿಜ್ಞಾನಕ್ಕಿಂತ ಮುಂಚೆ ಪ್ರವರ್ತಿಸುವ ಶಾಸ್ತ್ರವು ಅವಿದ್ಯಾವಂತನ ವಿಷಯವಾಗಿರುವದನ್ನು ಮೀರಿರುವದಿಲ್ಲ ಎಂದಿರುವ (ಭಾಷ್ಯಕ್ಕೆ) 'ಅದು ನೀನು' ಎಂಬ ವಾಕ್ಯಾರ್ಥವನ್ನು[2] ಅರಿತುಕೊಳ್ಳುವ ಮುಂಚೆ ಅವಿದ್ಯಾಕೃತವಾದ ಸಂಸಾರವನ್ನು ಅಹಂಪ್ರತ್ಯಯವನ್ನಾಶ್ರಯಿಸಿ ಹೊರಟಿರುವ ಶಾಸ್ತ್ರವು ಅವಿದ್ಯಾವಂತರ ವಿಷಯವನ್ನು ಬಿಟ್ಟಿರುವದಿಲ್ಲ[3] (ಎಂದರ್ಥ).

---

1. ಅಶನಾಯಾದ್ಯತೀತ- ಎಂಬುದು ಕರ್ತ್ರನ್ವಯನಿಷೇಧ; ಅಪೇತಬ್ರಹ್ಮಕ್ಷತ್ರಾದಿಭೇದ- ಎಂಬುದು ಅಧಿಕಾರಾನ್ವಯನಿಷೇಧ, ಅಸಂಸಾರ್ಯಾತ್ಮತತ್ತ್ವ- ಎಂಬುದು ಭೋಕ್ತ್ರನ್ವಯನಿಷೇಧ- ಎಂದು ಪಂ. ವಿ.ದಲ್ಲಿ ವಿವರಿಸಿದೆ.

2. ಇಲ್ಲಿ ಬೃ. ೩-೫-೧, (ಅಶನಾಯಾದ್ಯತೀತಬ್ರಹ್ಮಾತ್ಮನನ್ನು ಹೇಳುವ ವಾಕ್ಯ), ಬೃ. ೨-೪-೬ (ಅಪೇತಬ್ರಹ್ಮಕ್ಷತ್ರಾದಿಬೋಧಕ)ವಾಕ್ಯ- ಇವನ್ನು ಬಿಟ್ಟು 'ತತ್ತ್ವಮಸಿ' ಎಂಬ ವಾಕ್ಯವನ್ನೇಕೆ ಪ್ರದರ್ಶಿಸಿದೆಯೋ ತಿಳಿಯದು.

3. ಕರ್ಮಶಾಸ್ತ್ರವು ನಾನು ಹಸಿವು ಮುಂತಾದವುಗಳುಳ್ಳ ಬ್ರಹ್ಮಕ್ಷತ್ರಾದಿಗಳಲ್ಲೊಂದರ ಸಂಬಂಧವುಳ್ಳವನು ಎಂಬ ಅವಿದ್ಯೆಯುಳ್ಳವನಿಗೇ ಉಪದೇಶಮಾಡುವದಕ್ಕೆ ಬಂದಿದೆ.

# ಕರ್ಮಶಾಸ್ತ್ರವು ಅವಿದ್ಯಾಪೂರ್ವಕವೆಂಬುದಕ್ಕೆ ಉದಾಹರಣೆಗಳು

(ಪಂಚಪಾದಿಕಾ)

೬೧. ತಸ್ಮಾದ್ ಯುಕ್ತಮುಕ್ತಂ ಪ್ರತ್ಯಕ್ಷಾದೀನಾಂ ಪ್ರಮಾಣಾನಾಂ ಶಾಸ್ತ್ರಸ್ಯ ಚ ಅವಿದ್ಯಾವದ್ವಿಷಯತ್ವಮ್ । ತದೇವ ದರ್ಶಯತಿ । **ತಥಾ ಹಿ । "ಬ್ರಾಹ್ಮಣೋ ಯಜೇತ" (?) ಇತ್ಯಾದೀನಿ ಶಾಸ್ತ್ರಾಣಿ ಆತ್ಮನಿ ಅತದಧ್ಯಾಸಮ್ ಆಶ್ರಿತ್ಯ ಪ್ರವರ್ತನ್ತೇ ।** ವರ್ಣವಯೋಽಧ್ಯಾಸಃ 'ಅಷ್ಟವರ್ಷಂ ಬ್ರಾಹ್ಮಣಮ್ ಉಪನಯೀತ' (?) ಇತಿ[1] । ಆಶ್ರಮಾಧ್ಯಾಸೋ 'ನ ಹ ವೈ ಸ್ನಾತ್ವಾ ಭಿಕ್ಷೇತ' (?) ಅವಸ್ಥಾಧ್ಯಾಸಃ 'ಯೋ ಜ್ಯೋಗಾಮಯಾವೀ ಸ್ಯಾತ್ ಸ ಏತಾಮಿಷ್ಟಿಂ ನಿರ್ವಪೇತ್' (?) ಇತಿ । ಆದಿಶಬ್ದೇನ 'ಯಾವಜ್ಜೀವಂ ಜುಹುಯಾತ್' (?) ಇತಿ ಜೀವನಾಧ್ಯಾಸಃ ॥

(ಅರ್ಥ)

ಆದ್ದರಿಂದ ಪ್ರತ್ಯಕ್ಷಾದಿಪ್ರಮಾಣಗಳೂ ಶಾಸ್ತ್ರವೂ ಅವಿದ್ಯಾವಂತರ ವಿಷಯವಾಗಿರುವವೆಂದು ಹೇಳಿದ್ದು ಯುಕ್ತವಾಗಿರುತ್ತದೆ. ಅದನ್ನೇ (ಭಾಷ್ಯಕಾರರು ಈಗ ವಿವರಿಸಿ) ತಿಳಿಸುತ್ತಿದಾರೆ. ಹೇಗೆಂದರೆ, 'ಬ್ರಾಹ್ಮಣನು ಯಾಗಮಾಡಬೇಕು' ಮುಂತಾದ ಶಾಸ್ತ್ರಗಳು ಆತ್ಮನಲ್ಲಿ (ಆತ್ಮನಲ್ಲದ್ದರ) ಅಧ್ಯಾಸ[2]ವನ್ನು ಆಶ್ರಯಿಸಿಕೊಂಡೇ ಪ್ರವರ್ತಿಸುತ್ತವೆ. 'ಎಂಟು ವರ್ಷದ ಬ್ರಾಹ್ಮಣನನ್ನು ಉಪನಯನಮಾಡಬೇಕು' ಎಂಬುದು ಜಾತಿವಯಸ್ಸುಗಳ ಅಧ್ಯಾಸವು. 'ಸ್ನಾನಮಾಡಿದ ಬಳಿಕ[3] ಭಿಕ್ಷೆಮಾಡಬಾರದು' ಎಂಬುದು ಆಶ್ರಮಾಧ್ಯಾಸವು. 'ಯಾವನು ಬಲವಾದ ರೋಗವುಳ್ಳವನೋ ಅವನು ಈ ಇಷ್ಟಿಯನ್ನು ಮಾಡಬೇಕು' ಎಂಬುದು ಅವಸ್ಥಾಧ್ಯಾಸವು. 'ಆದಿ' ಎಂಬ ಶಬ್ದದಿಂದ 'ಜೀವಿಸಿರುವವರೆಗೂ ಹೋಮ ಮಾಡಬೇಕು' ಎಂಬುದು ಜೀವನಾಧ್ಯಾಸವು.[4]

---

1. 'ಇತ್ಯಾದಿ' ಎಂಬ ಅಚ್ಚಿನ ಮೂಲದಲ್ಲಿ 'ಆದಿ' ಹೆಚ್ಚು.
2. ಇಲ್ಲಿಂದ ಮುಂದಕ್ಕೆ ಟೀಕೆಯಲ್ಲಿಯ ಅಧ್ಯಾಸವೆಂದರೆ ಜ್ಞಾನಾಧ್ಯಾಸವೇ ಎಂದು ಸ್ಪಷ್ಟ.
3. ಸ್ನಾತಕವ್ರತವನ್ನು ಆಚರಿಸಿದ ಬಳಿಕ –ಎಂದರ್ಥ.
4. ಭಾಷ್ಯದಲ್ಲಿರುವ ಆದಿಶಬ್ದಕ್ಕೆ ಇದು ಅರ್ಥವೆಂದು ಇಟ್ಟುಕೊಳ್ಳಬಹುದು. ಇಲ್ಲಿಯವರೆಗೂ ಶಾಸ್ತ್ರಗಳು ಅಧ್ಯಾಸವನ್ನಿಟ್ಟುಕೊಂಡೇ ಪ್ರವರ್ತಿಸುತ್ತವೆ ಎಂಬುದಕ್ಕೆ ವಿವರವಾಯಿತೆಂದು ಭಾವ.

## ೧೧. ಅಧ್ಯಾಸದ ಉದಾಹರಣೆಗಳ ಭಾಷ್ಯ

**ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿರಿತ್ಯವೋಚಾಮ । ತದ್ ಯಥಾ- ಪುತ್ರಭಾರ್ಯಾದಿಷು ವಿಕಲೇಷು ಸಕಲೇಷು ವಾ ಅಹಮೇವ ವಿಕಲಃ, ಸಕಲೋ ವಾ ಇತಿ ಬಾಹ್ಯಧರ್ಮಾನ್ ಆತ್ಮನಿ ಅಧ್ಯಸ್ಯತಿ । ತಥಾ ದೇಹಧರ್ಮಾನ್ ‘ಸ್ಥೂಲೋಽಹಮ್’, ‘ಕೃಶೋಽಹಮ್’, ‘ಗೌರೋಽಹಮ್’, ‘ತಿಷ್ಠಾಮಿ’, ‘ಗಚ್ಛಾಮಿ’, ‘ಲಙ್ಘಯಾಮಿ’- ಚ ಇತಿ । ತಥಾ ಇನ್ದ್ರಿಯಧರ್ಮಾನ್ ‘ಮೂಕಃ’, ‘ಕಾಣಃ’, ‘ಕ್ಲೀಬಃ’, ‘ಬಧಿರಃ’, ‘ಅನ್ಧೋಽಹಮ್’- ಇತಿ । ತಥಾ ಅನ್ತಃಕರಣಧರ್ಮಾನ್, ಕಾಮಸಙ್ಕಲ್ಪವಿಚಿಕಿತ್ಸಾಧ್ಯವಸಾಯಾದೀನ್ । ಏವಮ್ ಅಹಂ-ಪ್ರತ್ಯಯಿನಮ್ ಅಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನಿ ಅಧ್ಯಸ್ಯ ತಂ ಚ ಪ್ರತ್ಯಗಾತ್ಮಾನಂ ಸರ್ವಸಾಕ್ಷಿಣಂ ತದ್ವಿಪ-ರ್ಯಯೇಣ ಅನ್ತಃಕರಣಾದಿಷು ಅಧ್ಯಸ್ಯತಿ ॥**

### ಮುಂದಿನ ಗ್ರಂಥದ ಸಂಬಂಧ

(ಪಂಚಪಾದಿಕಾ)

೬೨. ಏವಮ್ ಅಧ್ಯಾಸಸದ್ಭಾವಂ ಪ್ರಸಾಧ್ಯ ‘**ಸ್ಮೃತಿರೂಪಃ**’ ಇತ್ಯಾದಿನಾ ‘**ಸರ್ವಥಾಪಿ ತು ಅನ್ಯಸ್ಯಾನ್ಯಧರ್ಮಾವಭಾಸತಾಂ ನ ವ್ಯಭಿಚರತಿ** ಇತ್ಯನ್ತೇನ ಭಾಷ್ಯೇಣ ಲಕ್ಷಿತಂ ನಿರುಪಚರಿತಮ್ ಅತದಾರೋಪಮ್ ‘**ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿಃ- ಇತ್ಯವೋಚಾಮ**’ ಇತಿ ಪರಾಮೃಶತಿ-ಕಸ್ಯ ಯುಷ್ಮದರ್ಥಸ್ಯ ಕಸ್ಮಿನ್ ಅಸ್ಮದರ್ಥೇ,[1] ತದ್ವಿಪರ್ಯಯೇಣ ಚ ಅಧ್ಯಾಸಃ? ಇತಿ ವಿವೇಕತಃ ಪ್ರದರ್ಶಯಿತುಮ್ । ಅತಸ್ಮಿನ್ ಅಯುಷ್ಮದರ್ಥೇ **ಅನಿದಂಚಿತಿ** ತದ್ಬುದ್ಧಿಃ ಯುಷ್ಮದರ್ಥಾವಭಾಸಃ – ಇತ್ಯರ್ಥಃ । ತದಾಹ ‘**ತದ್ಯಥಾ ಪುತ್ರಭಾರ್ಯಾದಿಷು**’ ಇತ್ಯಾದಿ ॥

(ಅರ್ಥ)

ಹೀಗೆ ಅಧ್ಯಾಸವೆಂಬುದು ಉಂಟು ಎಂಬುದನ್ನು ಸಿದ್ಧಮಾಡಿ ‘ಸ್ಮೃತಿರೂಪಃ’ ಎಂಬುದರಿಂದ ಹಿಡಿದು ‘ಸರ್ವಥಾಪಿ ತು ಅನ್ಯಸ್ಯ ಅನ್ಯಧರ್ಮಾವಭಾ

1. ‘ಅಯುಷ್ಮದರ್ಥೇ’ ಎಂದು ಪಾ॥

ಸತಾಂ ನ ವ್ಯಭಿಚರತಿ' (೨೨) ಎಂಬವರೆಗಿನ ಭಾಷ್ಯದಲ್ಲಿ ಲಕ್ಷಣದಿಂದ ಹೇಳಿರುವ ನಿರುಪಚರಿತವಾದ[1] ಅತದಾರೋಪವನ್ನು[2] ಯಾವ (ಯಾವ) ಯುಷ್ಮದರ್ಥವನ್ನು ಯಾವ (ಯಾವ) ಅಯುಷ್ಮದರ್ಥದಲ್ಲಿ ಮತ್ತು ಅದಕ್ಕೆ ವಿಪರೀತವಾಗಿ ಅಧ್ಯಾಸ(ಮಾಡುತ್ತಾರೆ)" – ಎಂಬುದನ್ನು ವಿಂಗಡಿಸಿ ತೋರಿಸುವದಕ್ಕಾಗಿ **'ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿಃ ಇತ್ಯವೋಚಾಮ'**– (ಅಧ್ಯಾಸವೆಂದರೆ ಅದಲ್ಲದ್ದರಲ್ಲಿ ಅದರ ತಿಳಿವಳಿಕೆ ಎಂದು ಹೇಳಿದೆವು) ಎಂದು ಪರಾಮರ್ಶೆಮಾಡಿರುತ್ತಾರೆ.[3] ಅತಸ್ಮಿನ್ (ಅದಲ್ಲದ್ದರಲ್ಲಿ)[3] ಎಂದರೆ ಯುಷ್ಮದರ್ಥವಲ್ಲದ್ದರಲ್ಲಿ, ಅನಿದಂಚೈತನ್ಯದಲ್ಲಿ,[4] 'ತದ್ಬುದ್ಧಿಃ' ಎಂದರೆ ಯುಷ್ಮದರ್ಥದ ತೋರಿಕೆಯು ಎಂದರ್ಥ. 'ಅದು ಹೇಗೆಂದರೆ ಪುತ್ರಭಾರ್ಯಾದಿಗಳಲ್ಲಿ' ಎಂದು ಇದನ್ನೇ (ವಿವರಿಸಿ) ಹೇಳುತ್ತಾರೆ.

## ಪುತ್ರಾದಿಗಳ ಅಧ್ಯಾಸವು ಮುಖ್ಯವೇ

(ಪಂಚಪಾದಿಕಾ)

೬೩. ನನು ಪ್ರಣವ ಏವ ವಿಸ್ವರಃ । ನ ಹಿ ಪುತ್ರಾದೀನಾಂ ವೈಕಲ್ಯಂ ಸಾಕಲ್ಯಂ ವಾ ಆತ್ಮನಿ ಮುಖ್ಯಮ್ ಅಧ್ಯಸ್ಯತಿ । ಮುಖ್ಯೋ ಹಿ ಅತದಾರೋಪೋ ದರ್ಶಯಿತುಮ್ ಆರಬ್ಧಃ। ಸತ್ಯಮ್। ಸ ಏವ ನಿದರ್ಶ್ಯತೇ । ಕಥಮ್? ತದ್ಯಥಾ– ಬಾಲಕೇ ಪ್ರಾತಿವೇಶ್ಯಮಾತ್ರಸಂಬನ್ಧಿನಾ ಕೇನಚಿತ್, ವಸ್ತ್ರಾಲಙ್ಕಾರಾದಿನಾ ಪೂಜಿತೇ ನಿರುಪಚರಿತಮ್ ಆತ್ಮಾನಮೇವ ಪೂಜಿತಂ ಮನ್ಯತೇ ಪಿತಾ । ಪೂಜಯಿತಾಪಿ 'ಪಿತರಮೇವ ಅಪೂಪುಜಮ್' ಇತಿ ಮನ್ಯತೇ । ಯತೋ ನ ಬಾಲಕಸ್ಯ ಪೂಜಿತತ್ವಾಭಿಮಾನಃ, ಅವ್ಯಕ್ತತ್ವಾತ್ । ತಥೈವ ರಾಜಾನಮ್ ಉಪಹನ್ತುಕಾಮಃ, ಅನನ್ತರೋ ವಿಜಿಗೀಷುಃ, ತದ್ರಾಷ್ಟ್ರೇ ಗ್ರಾಮಮಾತ್ರಮಪಿ ಉಪಹತ್ಯ ತಮೇವ ಉಪಘ್ನನ್ತಮ್ ಆತ್ಮಾನಂ ಮನ್ಯತೇ ; ಸೋಽಪಿ ಉಪಹತೋಽಸ್ಮಿ ಇತಿ ಸಂತಪ್ಯತೇ । ತದೇವಂ ಪ್ರಸಿದ್ಧವ್ಯತಿರೇಕಸ್ಯ ಆತ್ಮನಿ ಮುಖ್ಯ ಏವಾಧ್ಯಾಸೋ ದೃಷ್ಟಃ, ಕಿಮು ವಕ್ತವ್ಯಮ್ ಕೃಶಸ್ಥೂಲಾದ್ಯಭಿಮಾನಸ್ಯ ಮುಖ್ಯತ್ವಮ್?– ಇತಿ ಕಥಯಿತುಮ್ ಆಹ **'ಅಹಮೇವ ವಿಕಲಃ ಸಕಲೋ ವಾ ಇತಿ ಬಾಹ್ಯಧರ್ಮಾನ್ ಆತ್ಮನ್ಯಧ್ಯಸ್ಯತಿ'** ಇತಿ । ಬಾಹ್ಯೇಷು ಪುತ್ರಾದಿಷು ಪೂಜಾದೇರ್ಧರ್ಮಮಾತ್ರಸ್ಯೈವ ಯುಷ್ಮದರ್ಥಸ್ಯ ಅಧ್ಯಾಸಃ । ಅಸ್ಮದರ್ಥಶ್ಚ ಅಹಂಪ್ರತ್ಯಯಿಸಂಭಿನ್ನ ಏವ ಅನಿದಂಚಿದಂಶೋ ವಿಷಯಃ । ನ ಪುನಃ ಶುದ್ಧ ಏವ ಅಹಂಪ್ರತ್ಯಯಿನ ಇವ ಅಧ್ಯಾಸೇ ಅಧ್ಯಾಸಾನ್ತರಾನಾಸ್ಕನ್ದಿತಃ ॥

1. ಗೌಣವಲ್ಲದ, ಮುಖ್ಯಾರ್ಥದ.
2. ಅದಲ್ಲದ್ದರ ಆರೋಪವನ್ನು, ಅದಲ್ಲದ್ದೆಂದು ತಿಳಿಯುವದನ್ನು.
3. ಇಲ್ಲಿ ಅರ್ಥಾಧ್ಯಾಸವನ್ನು ಭಾಷ್ಯದಲ್ಲಾಗಲಿ ಟೀಕೆಯಲ್ಲಾಗಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂಬುದು ಸ್ಪಷ್ಟ.
4. ವಿಷಯವಲ್ಲದ ಚೈತನ್ಯದಲ್ಲಿ.

(ಅರ್ಥ)

(ಆಕ್ಷೇಪ): ಪ್ರಣವದಲ್ಲಿಯೇ ಅಪಸ್ವರವಾಯಿತಲ್ಲ ![1] ಏಕೆಂದರೆ ಪುತ್ರಾದಿಗಳ ವೈಕಲ್ಯವನ್ನಾಗಲಿ ಸಾಕಲ್ಯವನ್ನಾಗಲಿ ತನ್ನಲ್ಲಿ ಮುಖ್ಯವಾಗಿ ಆರೋಪ ಮಾಡುವದೇ ಇಲ್ಲ. ಮುಖ್ಯವಾದ ಅತದಾರೋಪವನ್ನಲ್ಲವೆ, (ಇಲ್ಲಿ) ತೋರಿಸಿ ಕೊಡಬೇಕೆಂದು ಹೊರಟಿರುವದು ?[2]

(ಪರಿಹಾರ): ನಿಜ, ಅದನ್ನೇ (ಇಲ್ಲಿ ದೃಷ್ಟಾಂತದಿಂದ) ತೋರಿಸಲಾಗುತ್ತಿದೆ. ಹೇಗೆಂದರೆ, ನೆರೆಯವನೆಂಬುದೊಂದೇ ಸಂಬಂಧವುಳ್ಳ ಯಾವನಾದರೊಬ್ಬನಿಂದ (ತನ್ನ) ಹುಡುಗನು ಬಟ್ಟೆ, ಒಡವೆ- ಮುಂತಾದವುಗಳಿಂದ ಗೌರವಿಸಲ್ಪಟ್ಟರೆ, ತನ್ನನ್ನೇ ಗೌರವಿಸಿದಂತೆ ತಂದೆ ತಿಳಿದುಕೊಳ್ಳುತ್ತಾನೆ. (ಹಾಗೆ) ಗೌರವಿಸಿದವನೂ ತಂದೆಯನ್ನೇ ಗೌರವಿಸಿದೆನು ಎಂದು ತಿಳಿದುಕೊಳ್ಳುತ್ತಾನೆ. (ಅಲ್ಲಿ) ಹುಡುಗನಿಗೆ ಗೌರವಿಸಲ್ಪಟ್ಟೆನೆಂಬ ಅಭಿಮಾನವೇನೂ ಇರುವದಿಲ್ಲ ; ಏಕೆಂದರೆ (ಅಭಿಮಾನವು ಅವನಲ್ಲಿ ಇನ್ನೂ) ವ್ಯಕ್ತವಾಗಿರುವದಿಲ್ಲ. ಇದರಂತೆ ರಾಜನಿಗೆ ಕೇಡುಮಾಡಬೇಕೆಂದು ಬಯಸುವ ಹತ್ತಿರವಿರುವ ಜಯೇಚ್ಛುವಾದ ರಾಜನು ಅವನ ರಾಷ್ಟ್ರದಲ್ಲಿ (ಒಂದು) ಹಳ್ಳಿಗೆ ಕೇಡುಮಾಡಿದ್ದರಿಂದಲೇ ಅವನಿಗೆ ತಾನು ಕೇಡುಮಾಡಿದೆನೆಂದು ತಿಳಿದುಕೊಳ್ಳುತ್ತಾನೆ; ಅವನೂ ನನಗೆ ಕೇಡಾಯಿತು ಎಂದು ಸಂತಾಪಪಡುತ್ತಾನೆ. ಅಂತೂ ಹೀಗೆ ಬೇರೆ ಎಂಬುದು ಪ್ರಸಿದ್ಧವಾಗಿರುವದನ್ನೂ ಆತ್ಮನಲ್ಲಿ ಮುಖ್ಯವಾಗಿ ಅಧ್ಯಾಸಮಾಡುವದು ಕಂಡುಬಂದಿದೆ. (ಹೀಗಿರುವಲ್ಲಿ) ಬಡಕಲಾದವನು, ದಪ್ಪನಾಗಿರುವವನು- ಎಂಬುದೇ ಮುಂತಾದ ಅಭಿಮಾನವು ಮುಖ್ಯ (ಅಧ್ಯಾಸ)ವೆಂಬುದನ್ನು ಹೇಳುವದೇನಿದೆ ?- ಎಂದು ತಿಳಿಸುವದಕ್ಕಾಗಿ (ಭಾಷ್ಯಕಾರರು) 'ನಾನೇ ವಿಕಲನು ಅಥವಾ ಸಕಲನು-ಎಂದು ಬಾಹ್ಯ(ವಸ್ತುವಿನ) ಧರ್ಮಗಳನ್ನು ತನ್ನಲ್ಲಿ ಅಧ್ಯಾಸಮಾಡಿಕೊಳ್ಳುತ್ತಾನೆ' ಎಂದಿರುತ್ತಾರೆ. ಹೊರಗಿನ (ವಸ್ತುಗಳಲ್ಲಿರುವ) ಗೌರವವೇ ಮುಂತಾದ ಬರಿಯ ಧರ್ಮದ ರೂಪವಾದ ಯುಷ್ಮದರ್ಥವನ್ನೇ ಅಧ್ಯಾಸಮಾಡಿಕೊಳ್ಳುತ್ತಾರೆ[3] (ಅಲ್ಲಿ) ಅಹಂಪ್ರತ್ಯಯಿಯೊಡಗೂಡಿರುವ ಅನಿದಂಚಿದಂಶವಾದ ಅಸ್ಮದರ್ಥವೇ ವಿಷಯವು, ಅಹಂಪ್ರತ್ಯಯಿಯ ಅಧ್ಯಾಸದಲ್ಲಿರುವ ಮತ್ತೊಂದು ಅಧ್ಯಾಸದ ಸಂಬಂಧವಿಲ್ಲದ ಶುದ್ಧ(ವಾದ ಅಸ್ಮದರ್ಥ)ವಲ್ಲ.[4]

---

1. ಅಧ್ಯಯನವನ್ನು ಮಾಡುವ ಮೊದಲು ಓಂಕಾರವನ್ನು ಉಚ್ಚರಿಸುತ್ತಾರೆ ; ಅದನ್ನುಚ್ಚರಿಸುವಾಗಲೇ ಅಪಸ್ವರವಾದರೆ ಅಧ್ಯಯನಕ್ಕೆ ಸಾದ್ಗುಣ್ಯವೆಂತು ಬರುವದು ? ಹಾಗೆ ಮೊಟ್ಟಮೊದಲೇ ಇಲ್ಲಿ ತಪ್ಪುಮಾಡಿದಂತೆ ಆಯಿತಲ್ಲ ? -ಎಂದು ಭಾವ.

2. ಪುತ್ರಾದಿಗಳ ಧರ್ಮವನ್ನು ಆರೋಪಿಸುವದು ಗೌಣವಷ್ಟೆ ? -ಎಂದು ಭಾವ.

3. ಅಲ್ಲಿ 'ನಾನು ಮಗನು' ಎಂದೇನೂ ಯುಷ್ಮದರ್ಥವನ್ನು ಅಧ್ಯಾಸಮಾಡುವದಿಲ್ಲ.

4. 'ನಾನು' ಎಂಬ ಅಧ್ಯಾಸದಲ್ಲಿ ಶುದ್ಧಚೈತನ್ಯಾಧ್ಯಾಸ; 'ಪೂಜಿಸಲ್ಪಟ್ಟೆನು' ಎಂಬಲ್ಲಿ ಅಹಂಕಾರವಿಶಿಷ್ಟಚೈತನ್ಯದಲ್ಲಿ ಅಧ್ಯಾಸ.

# ದೇಹಾದಿಗಳ ಅಧ್ಯಾಸ

## (ಪಂಚಪಾದಿಕಾ)

೬೪. **'ತಥಾ ದೇಹಧರ್ಮಾನ್ ಕೃಶತ್ವಾದೀನ್'** ಇತಿ ಧರ್ಮಿಣೋಽಪಿ। ಧರ್ಮಶಬ್ದಸ್ತು ಮನುಷ್ಯತ್ವಾದಿಧರ್ಮಸಮವಾಯಿನ ಏವಾಧ್ಯಾಸೋ ನ 'ದೇಹೋಽಹಮ್' ಇತಿ (ಇತಿ) ಕಥಯಿತುಮ್ । ತನ್ನಿಮಿತ್ತಶ್ಚ ಶಾಸ್ತ್ರೇಣ ಇತಶ್ಚೇತಶ್ಚ ನಿಯಮಃ ಕ್ರಿಯತೇ । 'ತಥಾ ಇನ್ದ್ರಿಯಧರ್ಮಾನ್ ಮೂಕತ್ವಾದೀನ್' ಇತಿ ಧರ್ಮಮಾತ್ರಮ್ । **'ತಥಾ ಅನ್ತಃಕರಣಧರ್ಮಾನ್ ಕಾಮಾದೀನ್'** ಇತಿ ಧರ್ಮಗ್ರಹಣಮ್ । 'ಅನ್ತಃಕರಣಮ್' ಇತಿ ಅಹಂಪ್ರತ್ಯಯಿನೋ ವಿಜ್ಞಾನಶಕ್ತಿಭಾಗೋಽಭಿಧೀಯತೇ । ತಸ್ಯ ಧರ್ಮಾಃ ಕಾಮಾದಯಃ । **'ಏವಮಹಂ-ಪ್ರತ್ಯಯಿನಮ್'** ಇತಿ ಧರ್ಮಿಗ್ರಹಣಮ್ । ಪ್ರತ್ಯಯಾಃ ಕಾಮಾದಯೋಽಸ್ಯ -ಇತಿ ಪ್ರತ್ಯಯೀ । ಅಹಂ ಚ ಅಸೌ ಪ್ರತ್ಯಯೀ ಚ ಇತಿ ಅಹಂಪ್ರತ್ಯಯೀ । ತಮ್ **'ಅಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನಿ ಅಧ್ಯಸ್ಯ'** ಇತಿ ಸ್ವಶಬ್ದೇನ ಅಹಙ್ಕಾರಗ್ರನ್ಥಿಃ ಸಂಸಾರನೃತ್ಯಶಾಲಾಮೂಲಸ್ತಮ್ಭೋಽಭಿಧೀಯತೇ । ತಸ್ಯ ಪ್ರಚಾರಃ ಕಾಮಸಂಕಲ್ಪಕರ್ತೃತ್ವಾದಿರನೇಕವಿಧಃ ಪರಿಣಾಮಃ, ಯನ್ನಿಮಿತ್ತಂ ಬ್ರಹ್ಮಾದಿಸ್ಥಾವರಾನ್ತೇಷು ಪ್ರದೀಪ್ತಶಿರಾ ಇವ ಪರವಶೋ ಜನ್ತುರ್ಬಮ್ಭ್ರಮೀತಿ। ತಂ ಪ್ರಚಾರಮ್ ಅಶೇಷಮ್ ಅಸಙ್ಗತಯಾ ಅವಿಕಾರಿತ್ವೇನ ಚ ಹಾನೋಪಾದಾನಶೂನ್ಯಃ ಸಾಕ್ಷಾತ್ ಅವ್ಯವಧಾನಮ್ ಅವಭಾಸಯತಿ ಚಿತಿಧಾತುಃ । ಸ ಏವ ದೇಹಾದಿಷು ಇದಂತಯಾ ಬಹಿರ್ಭಾವಮ್ ಆಪದ್ಯಮಾನೇಷು ಪ್ರಾತಿಲೋಮ್ಯೇನ ಅಞ್ಚತೀವ ಉಪಲಕ್ಷ್ಯತೇ ಇತಿ ಪ್ರತ್ಯಗುಚ್ಯತೇ । ಆತ್ಮಾ ಚ, ನಿರುಪಚರಿತಸ್ವರೂಪತ್ವಾತ್ । ತತ್ರ 'ಅಧ್ಯಸ್ಯ' । **'ತಂ ಚ ಪ್ರತ್ಯಗಾತ್ಮಾನಮ್'** ಇತಿ। ಯದಿ ಯುಷ್ಮದರ್ಥಸ್ಯೈವ ಪ್ರತ್ಯಗಾತ್ಮನಿ ಅಧ್ಯಾಸಃ ಸ್ಯಾತ್, ಪ್ರತ್ಯಗಾತ್ಮಾ ನ ಪ್ರಕಾಶೇತ । ನ ಹಿ ಶುಕ್ತೌ ರಜತಾಧ್ಯಾಸೇ ಶುಕ್ತಿಃ ಪ್ರಕಾಶತೇ । ಪ್ರಕಾಶತೇ ಚ ಇಹ ಚೈತನ್ಯಮ್ ಅಹಙ್ಕಾರಾದೌ । ತಥಾ ಯದಿ ಚೈತನ್ಯಸ್ಯೈವ ಅಹಙ್ಕಾರಾದೌ ಅಧ್ಯಾಸೋ ಭವೇತ್, ತದಾ ನಾಹಙ್ಕಾರಪ್ರಮುಖಃ ಪ್ರಪಞ್ಚಃ, ಪ್ರಕಾಶೇತ । ತದುಭಯಂ ಮಾ ಭೂತ್ ಇತಿ, ಅನುಭವಮೇವಾನುಸರನ್ ಆಹ- **'ತಂ ಚ ಪ್ರತ್ಯಗಾತ್ಮಾನಂ ಸರ್ವಸಾಕ್ಷಿಣಂ ತದ್ವಿಪರ್ಯಯೇಣಾನ್ತಃಕರಣಾದಿಷು ಅಧ್ಯಸ್ಯತೀತಿ** । ನಾತ್ರ ವಿವದಿತವ್ಯಮ್ ಇತರೇತರಾಧ್ಯಾಸೇ ಪೃಥಗವಭಾಸನಾನ್ನ ಮಿಥ್ಯಾ ಗೌಣೋಽಯಮ್ ಇತಿ। ತಥಾ ಅನುಭವಾಭಾವಾತ್ ಮುಖ್ಯಾಭಿಮಾನಃ। ನ ಹಿ ದೃಷ್ಟೇ ಅನುಪಪನ್ನಂ ನಾಮ ॥

(ಅರ್ಥ)

'ಅದರಂತೆ ದೇಹಧರ್ಮಗಳಾದ ಕೃಶತ್ವಾದಿಗಳನ್ನು'[1] ಎಂಬಲ್ಲಿ ಧರ್ಮಿಯನ್ನು (ಅಧ್ಯಾಸಮಾಡುತ್ತಾರೆಂದು ಇಟ್ಟುಕೊಳ್ಳಬೇಕು). (ಇಲ್ಲಿ 'ದೇಹಧರ್ಮಿಗಳನ್ನು' ಎಂದು) ಧರ್ಮಶಬ್ದವನ್ನು (ಗ್ರಹಿಸಿರುವದಾದರೋ) ಮನುಷ್ಯತ್ವವೇ ಮುಂತಾದ ಧರ್ಮಸಂಬದ್ಧ(ವಾದ ದೇಹವನ್ನೇ) ಅಧ್ಯಾಸ(ಮಾಡುತ್ತಾರೆಯೇ) ಹೊರತು 'ದೇಹವು ನಾನು' ಎಂದಲ್ಲ ಎಂದು ಹೇಳುವದಕ್ಕೆ.[2] ಅದರ ನಿಮಿತ್ತದಿಂದಲೇ ಶಾಸ್ತ್ರದಲ್ಲಿ ಅಲ್ಲಲ್ಲಿ ನಿಯಮವನ್ನು ಮಾಡಿರುತ್ತದೆ.[3]

ಹೀಗೆಯೇ 'ಇಂದ್ರಿಯಧರ್ಮಗಳಾದ ಮೂಕತ್ವಾದಿಗಳನ್ನು (ಅಧ್ಯಾಸಮಾಡುತ್ತಾರೆ) ಎಂಬಲ್ಲಿ ಧರ್ಮಮಾತ್ರವನ್ನು (ತೆಗೆದುಕೊಳ್ಳಬೇಕು).[4] ಹೀಗೆಯೇ ಅಂತಃಕರಣಧರ್ಮಗಳಾದ 'ಕಾಮಾದಿಗಳನ್ನು' ಎಂಬಲ್ಲಿ ಧರ್ಮವನ್ನೇ ಗ್ರಹಿಸಬೇಕು. (ಇಲ್ಲಿ) ಅಂತಃಕರಣ ಎಂದು ಅಹಂಪ್ರತ್ಯಯಿಯ ವಿಜ್ಞಾನಶಕ್ತ್ಯಂಶ(ವನ್ನು ಹೇಳಿರುತ್ತದೆ) ; ಅದರ ಧರ್ಮಗಳು ಕಾಮಾದಿಗಳು.

'ಹೀಗೆಯೇ ಅಹಂಪ್ರತ್ಯಯಿಯನ್ನು' ಎಂಬಲ್ಲಿ ಧರ್ಮಿಯನ್ನು ಗ್ರಹಿಸಬೇಕು.[5] ಪ್ರತ್ಯಯಗಳು, ಕಾಮಾದಿಗಳು, ಇದಕ್ಕಿದೆಯಾದ್ದರಿಂದ (ಇದು) ಪ್ರತ್ಯಯಿ, 'ಅಹಮ್' (ನಾನು) ಎಂಬ ಪ್ರತ್ಯಯಿಯು ಅಹಂಪ್ರತ್ಯಯಿ. ಅದನ್ನು 'ಅಶೇಷಸ್ವಪ್ರಚಾರದ ಸಾಕ್ಷಿಯಾದ ಪ್ರತ್ಯಗಾತ್ಮನಲ್ಲಿ ಅಧ್ಯಾಸಮಾಡಿ' ಎಂಬಲ್ಲಿ ಸ್ವಶಬ್ದದಿಂದ ಸಂಸಾರದ ನೃತ್ಯಶಾಲೆಯ ಮೂಲಸ್ತಂಭವಾದ ಅಹಂಕಾರಗ್ರಂಥಿಯನ್ನು ಹೇಳಿದೆ.[6] ಅದರ ಪ್ರಚಾರ ಎಂದರೆ ಕಾಮ, ಸಂಕಲ್ಪ, ಕರ್ತೃತ್ವ- ಮುಂತಾದ ಅನೇಕ ಪ್ರಕಾರದ ಪರಿಣಾಮವು ; ಅದರ ನಿಮಿತ್ತದಿಂದಲೇ ಬ್ರಹ್ಮನಿಂದ ಹಿಡಿದು

---

1. 'ಕೃಶತ್ವಾದೀನ್ ಇತಿ' ಎಂಬ ಪಂ. ಪಾ. ಗ್ರಂಥವನ್ನು ನೋಡಿದರೆ ಹೀಗೆಂದು ಭಾಷ್ಯದಲ್ಲಿಯೂ ಪಾಠವಿತ್ತೆಂಬ ಭ್ರಾಂತಿಯಾಗುತ್ತದೆ ; ಅದರೆ 'ಕೃಶೋಽಹಮ್, ಗೌರೋಽಹಮ್' ಎಂದು ಮುಂತಾಗಿರುವ ಭಾಷ್ಯದ ಸಂಗ್ರಹವಿದೆಂದು ಇಟ್ಟುಕೊಂಡರೇ ಸಾಕಾಗುತ್ತದೆ.

2. ದೇಹವು ನಾನು ಎಂದು ನೇರಾಗಿ ಧರ್ಮಿಯನ್ನೇ ಅಧ್ಯಾಸಮಾಡುವರು ಎಂದು ತಿಳಿಸುವದಕ್ಕೆ.

3. 'ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿ ಉಪನಯನಮಾಡಬೇಕು' ಎಂದು ಮುಂತಾಗಿರುವ ನಿಯಮವು ದೇಹಾಧ್ಯಾಸವನ್ನು ನಿಮಿತ್ತಮಾಡಿಕೊಂಡೇ ಶಾಸ್ತ್ರದಲ್ಲಿ ಉಕ್ತವಾಗಿರುತ್ತದೆ.

4. ಇಲ್ಲಿ 'ಮೂಕಃ, ಕಾಣಃ' ಮುಂತಾದ ಭಾಷ್ಯವನ್ನು ಸಂಗ್ರಹಿಸಿರುತ್ತದೆ; ಇಂದ್ರಿಯವು ಎಂದರೆ ಕಣ್ಣು, ಕಿವಿ-.ಮುಂತಾದದ್ದು ನಾನೇ ಎಂದೇನೂ ಅಧ್ಯಾಸವಿಲ್ಲ, ಮೂಕತ್ವವೇ ಮುಂತಾದ ಧರ್ಮವನ್ನು ಮಾತ್ರ ಅಧ್ಯಾಸಮಾಡಿಕೊಂಡಿರುತ್ತದೆ.

5. ಕಾಮಾದಿಗಳು ಧರ್ಮಗಳು; ನಾನು ಎಂಬುದು ಧರ್ಮಿ.

6. 'ನಾನು' ಎಂಬ ಅಧ್ಯಾಸವೇ ಸಂಸಾರಕ್ಕೆಲ್ಲ ಮೂಲ.

ಸ್ಥಾವರಾಂತವಾದ (ಯೋನಿ)ಗಳಲ್ಲಿ ತಲೆಹೊತ್ತಿಕೊಂಡುರಿಯುವವನಂತೆ ಪರವಶನಾಗಿ ಜೀವನು ತೊಳಲುತ್ತಿರುವನು. ಆ ಪ್ರಚಾರವನ್ನೆಲ್ಲ ಅಸಂಗಿಯಾಗಿ ಅವಿಕಾರಿಯಾಗಿರುವದರಿಂದ ಹಾನೋಪಾದಾನರಹಿತವಾದ[1] ಚೈತನ್ಯಧಾತುವು ಯಾವ ವ್ಯವಧಾನವೂ ಇಲ್ಲದೆ ನೇರಾಗಿ ಬೆಳಗುತ್ತಿರುವದು. ಅದೇ ದೇಹಾದಿಗಳು 'ಇದು' ಎಂಬ ಬಹಿರ್ಭಾವವನ್ನು ಪಡೆಯುತ್ತಿರುವಲ್ಲಿ- ಪ್ರತಿಲೋಮವಾಗಿ (ಒಳಕ್ಕೆ) ಹೋಗುವಂತೆ ಕಾಣಬರುವದರಿಂದ (ಅದನ್ನು) 'ಪ್ರತ್ಯಕ್' ಎನ್ನುವರು; (ಅದನ್ನು) ಆತ್ಮನೆಂದೂ (ಕರೆಯುವರು), ಏಕೆಂದರೆ (ಅದು ನಮ್ಮ) ನಿರುಪಚರಿತ ಸ್ವರೂಪವಾಗಿರುತ್ತದೆ.[2] ಅದರಲ್ಲಿ 'ಅಧ್ಯಾಸಮಾಡಿ' ಎಂದರ್ಥ.

**'ಮತ್ತು ಆ ಪ್ರತ್ಯಗಾತ್ಮನನ್ನು....'** (ಎಂಬ ಭಾಷ್ಯದ ಅಭಿಪ್ರಾಯವೇನೆಂದರೆ), ಬರಿಯ ಯುಷ್ಮದರ್ಥವನ್ನೇ ಪ್ರತ್ಯಗಾತ್ಮನಲ್ಲಿ ಅಧ್ಯಾಸ(ಮಾಡುವದಾ)ಗಿದ್ದರೆ ಪ್ರತ್ಯಗಾತ್ಮನು ಕಾಣಬಾರದಾಗುವದು. ಶುಕ್ತಿಯಲ್ಲಿ ರಜತವನ್ನು ಅಧ್ಯಾಸಮಾಡಿದರೆ ಶುಕ್ತಿಯು ತೋರುವದಿಲ್ಲವಷ್ಟೆ[3]? ಆದರೆ ಇಲ್ಲಿ ಅಹಂಕಾರಾದಿಗಳಲ್ಲಿ ಚೈತನ್ಯವು ತೋರುತ್ತಿರುತ್ತದೆ. ಹೀಗೆಯೇ (ಬರಿಯ) ಚೈತನ್ಯಕ್ಕೇ ಅಹಂಕಾರಾದಿಗಳಲ್ಲಿ ಅಧ್ಯಾಸವಾಗಿದ್ದರೆ ಅಹಂಕಾರವೇ ಮುಂತಾದ ಪ್ರಪಂಚವು ತೋರಬಾರದು.[4] (ಆದ್ದರಿಂದ) ಈ ಎರಡೂ ಆಗಬಾರದೆಂದು ಅನುಭವವನ್ನೇ ಅನುಸರಿಸಿ 'ಸರ್ವಸಾಕ್ಷಿಯಾದ ಈ ಪ್ರತ್ಯಗಾತ್ಮನನ್ನು ಇದಕ್ಕೆ ವಿಪರೀತವಾಗಿ ಅಂತಃಕರಣಾದಿಗಳಲ್ಲಿ ಅಧ್ಯಾಸಮಾಡುತ್ತಾರೆ' ಎಂದಿರುತ್ತಾರೆ. ಇಲ್ಲಿ ಬೇರೆಯಾಗಿ ತೋರುವದರಿಂದ ಇದು ಮಿಥ್ಯೆಯಲ್ಲ, ಗೌಣವು- ಎಂದು ಈ (ವಿಷಯ)ದಲ್ಲಿ ವಿವಾದಮಾಡತಕ್ಕದ್ದಲ್ಲ, ಏಕೆಂದರೆ ಹಾಗೆ ಅನುಭವವಿಲ್ಲದ್ದರಿಂದ (ಇದು) ಮುಖ್ಯಾಭಿಮಾನವೇ. ಕಂಡದ್ದರಲ್ಲಿ ಅನುಪಪನ್ನವೆಂಬುದು ಇಲ್ಲವಷ್ಟೆ?[5] (ಎಂದಭಿಪ್ರಾಯ).

---

1. ಬಿಡುವದಕ್ಕಾಗಲಿ ತೆಗೆದುಕೊಳ್ಳುವದಕ್ಕಾಗಲಿ ಶಕ್ಯವಲ್ಲದ.

2. ಮಿಕ್ಕ ಅಧ್ಯಸ್ತಪದಾರ್ಥಗಳು ಹೊರಗಡೆ **ತೋರುವವು**; ನಮ್ಮ ನಿಜವಾದ ಸ್ವರೂಪವಾದ ಆತ್ಮನು ಅದಕ್ಕೆ ವಿರುದ್ಧವಾಗಿ ಒಳಗಡೆ ಇರುತ್ತಾನೆ. ಆದ್ದರಿಂದ ಅವನು ಪ್ರತ್ಯಗಾತ್ಮ.

3. ಯಾವದರಲ್ಲಿ ಅಧ್ಯಾಸಮಾಡುವರೋ ಅದು ಸಾಮಾನ್ಯರೂಪದಿಂದಲೂ ಯಾವದನ್ನು ಅಧ್ಯಾಸಮಾಡುವರೋ ಅದು ವಿಶೇಷರೂಪದಿಂದಲೂ ತೋರಬೇಕು- ಎಂದು ಅಭಿಪ್ರಾಯ.

4. ಚೈತನ್ಯವೊಂದೇ ತೋರಬೇಕು ಎಂದರ್ಥ.

5. ಯುಕ್ತಿಗಿಂತ ಅನುಭವವೇ ಪ್ರಬಲವೆಂದು ಅಭಿಪ್ರಾಯ. ಇದೇ ಇಲ್ಲಿ ಹೆಚ್ಚು ಲಕ್ಷ್ಯದಲ್ಲಿಡತಕ್ಕದ್ದು.

# ಅಂತಃಕರಣಾದಿಗಳಲ್ಲಾಗುವ ಅಧ್ಯಾಸದ ವಿಷಯಕ್ಕೆ ಆಕ್ಷೇಪಸಮಾಧಾನಗಳು

(ಪಂಚಪಾದಿಕಾ)

೬೫. ನನು ಅನ್ತಃಕರಣೇ ಏವ ಪ್ರತ್ಯಗಾತ್ಮನಃ, ಶುದ್ಧಸ್ಯ ಅಧ್ಯಾಸಃ। ಅನ್ಯತ್ರ ಪುನಶ್ಚೈತನ್ಯಾಧ್ಯಾಸಪರಿನಿಷ್ಪನ್ನಾಪರೋಕ್ಷ್ಯಮ್ ಅನ್ತಃಕರಣಮೇವ ಅಧ್ಯಸ್ಯತೇ। '**ಅತ ಏವ ತದ್ವಿಪರ್ಯಯೇಣ ವಿಷಯಿಣಃ ತದ್ಧರ್ಮಾಣಾಂ ಚ ವಿಷಯೇ ಅಧ್ಯಾಸೋ ಮಿಥ್ಯೇತಿ ಭವಿತುಂ ಯುಕ್ತಮ್**' ಇತ್ಯುಕ್ತಮ್। ಅನ್ಯಥಾ ಚೈತನ್ಯಮಾತ್ರೈಕರಸಸ್ಯ ಕುತೋ ಧರ್ಮಾಃ ? ಯೇ ಅಧ್ಯಸ್ಯೇರನ್। ಸತ್ಯಮಾಹ ಭವಾನ್। ಅಪಿ ತು ಅನ್ಯತ್ರ ಅನ್ತಃಕರಣಂ ಸಚಿತ್ಕಮೇವ ಅಧ್ಯಸ್ಯಮಾನಂ ಯತ್ರ ಅಧ್ಯಸ್ಯತೇ ತಸ್ಯೈವ ಆತ್ಮನಃ ಕಾರ್ಯಕರತ್ವಮ್ ಆಪಾದ್ಯ ಸ್ವಯಮ್ ಅವಿದ್ಯಮಾನಮಿವ ತಿರಸ್ಕೃತಂ ತಿಷ್ಠತಿ। ಚಿದ್ರೂಪಮೇವ ಸರ್ವತ್ರ ಅಧ್ಯಾಸೇ ಸ್ವತಃ ಪರತೋ ವಾ ನ ವಿಶಿಷ್ಯತೇ। ತೇನೋಚ್ಯತೇ '**ತಂ ಚ ಪ್ರತ್ಯಗಾತ್ಮಾನಂ ಸರ್ವಸಾಕ್ಷಿಣಂ ತದ್ವಿಪರ್ಯಯೇಣ ಅನ್ತಃಕರಣಾದಿಷು ಅಧ್ಯಸ್ಯತಿ**' ಇತಿ। ಅತ ಏವ ಬುದ್ಧ್ಯಾದಿಷ್ವೇವ ಚಿದ್ರೂಪಮ್ ಅನುಸ್ಯೂತಮ್ ಉತ್ಪ್ರೇಕ್ಷಮಾಣಾ ಬುದ್ಧಿಮನಃಪ್ರಾಣೇನ್ದ್ರಿಯಶರೀರೇಷು ಏಕೈಕಸ್ಮಿನ್ ಚೇತನತ್ವೇನ ಅಹಙ್ಕರ್ತೃತ್ವಂ ಯೋಜಯನ್ತೋ ಭ್ರಾಮ್ಯನ್ತಿ॥

(ಅರ್ಥ)

(ಆಕ್ಷೇಪ) :- ಅಂತಃಕರಣದಲ್ಲಿಯೇ ಶುದ್ಧನಾದ ಪ್ರತ್ಯಗಾತ್ಮನ ಅಧ್ಯಾಸವಾಗುತ್ತದೆ; ಮಿಕ್ಕ ಕಡೆಯಲ್ಲಿಯೋ ಎಂದರೆ ಚೈತನ್ಯಾಧ್ಯಾಸದಿಂದ ಸಿದ್ಧವಾದ ಆಪರೋಕ್ಷ್ಯವುಳ್ಳ ಅಂತಃಕರಣವೇ ಅಧ್ಯಸ್ತವಾಗುತ್ತದೆ.[1] ಆದ್ದರಿಂದಲೇ 'ಅದಕ್ಕೆ ವಿಪರೀತವಾಗಿ ವಿಷಯಿಯು ಮತ್ತು ಅದರ ಧರ್ಮಗಳನ್ನು ವಿಷಯದಲ್ಲಿ ಅಧ್ಯಾಸಮಾಡುವದು ಮಿಥ್ಯೆಯೆಂದಾಗುವದು ಯುಕ್ತವು' ಎಂದು (ಹಿಂದೆ ಭಾಷ್ಯದಲ್ಲಿ) ಹೇಳಿರುತ್ತದೆ. ಹಾಗಿಲ್ಲದಿದ್ದರೆ ಚೈತನ್ಯವೊಂದೇ ಏಕರಸವಾಗಿರುವ (ಆತ್ಮನಿಗೆ) ಧರ್ಮಗಳೆಲ್ಲಿಯವು ? (ಅವು) ಇದ್ದರೆತಾನೆ ಅಧ್ಯಾಸವಾಗುವದು ?[2]

(ಪರಿಹಾರ) :- ನೀನು ಹೇಳುವದು ನಿಜ. ಆದರೆ ಅಂತಃಕರಣವು ಮಿಕ್ಕ ಕಡೆಯಲ್ಲಿ ಸಚಿತ್ಕವಾಗಿಯೇ ಆಧ್ಯಸ್ತವಾಗುತ್ತದೆಯಾದರೂ ಯಾವದರಲ್ಲಿ ಅಧ್ಯಸ್ತವಾಗುತ್ತದೆಯೋ ಅದನ್ನೇ ಆತ್ಮನಲ್ಲಿ ಕಾರ್ಯಕರವಾಗುವಂತೆ ಮಾಡಿ

---

1. ನೇರಾಗಿ ಶುದ್ಧಚೈತನ್ಯವೇ ಅಧ್ಯಸ್ತವಾಗುವದಿಲ್ಲ.

2. ಚೈತನ್ಯದಲ್ಲಿ ಅಧ್ಯಸ್ತವಾಗಿರುವ ಅಂತಃಕರಣವನ್ನು ಸೇರಿಸಿಕೊಂಡು 'ಚೈತನ್ಯದ ಧರ್ಮಗಳನ್ನು' ವಿಷಯದಲ್ಲಿ ಅಧ್ಯಾಸಮಾಡಿರುತ್ತಾರೆ ಎಂದಿದೆ ಎಂದು ಭಾವ.

ತಾನು ಇಲ್ಲದಿರುವಂತೆಯೇ ಮರೆಯಾಗಿ ನಿಂತಿರುತ್ತದೆ.[1] ಚಿದ್ರೂಪವೊಂದೇ ಎಲ್ಲಾ ಅಧ್ಯಾಸದಲ್ಲಿಯೂ ತನ್ನಿಂದಲೇ ಆಗಲಿ ಮತ್ತೊಂದರಿಂದಲೇ ಆಗಲಿ ವಿಶೇಷವಿಲ್ಲದೆ ಇರುತ್ತದೆ. ಆದ್ದರಿಂದ 'ಆ ಸರ್ವಸಾಕ್ಷಿಯಾದ ಪ್ರತ್ಯಗಾತ್ಮನನ್ನು ಅದಕ್ಕೆ ವಿಪರೀತವಾಗಿ ಅಂತಃಕರಣಾದಿಗಳಲ್ಲಿ ಅಧ್ಯಾಸಮಾಡುತ್ತಾನೆ ಎಂದಿದೆ. ಆದ್ದರಿಂದಲೇ ಬುದ್ಧ್ಯಾದಿಗಳಲ್ಲಿಯೇ ಚಿದ್ರೂಪವು ಅನುಸ್ಯೂತವಾಗಿದೆ ಎಂದು ಊಹಿಸಿ ಬುದ್ಧಿ, ಮನಸ್ಸು, ಪ್ರಾಣ, ಇಂದ್ರಿಯ, ಶರೀರ- ಇವುಗಳಲ್ಲಿ ಒಂದೊಂದರಲ್ಲಿಯೂ ಚೇತನವಾಗಿರುವದರಿಂದ ಅಹಂಕರ್ತೃತ್ವವನ್ನು ಸಂಬಂಧಿಸಿ (ಜನರು) ಭ್ರಾಂತರಾಗುತ್ತಾರೆ.[2]

## ೧೨. ಅಧ್ಯಾಸನಿಗಮನಭಾಷ್ಯ

**ಏವಮಯಮನಾದಿರನನ್ತೋ ನೈಸರ್ಗಿಕೋಽಧ್ಯಾಸೋ ಮಿಥ್ಯಾಪ್ರತ್ಯಯರೂಪಃ, ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ । ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ ॥**

## ಅಧ್ಯಾಸದ ಉಪಸಂಹಾರದ ಬಗ್ಗೆ ಆಕ್ಷೇಪಸಮಾಧಾನಗಳು

### (೧) ಅಧ್ಯಾಸವೇ ವ್ಯವಹಾರ

(ಪಂಚಪಾದಿಕಾ)

೬೬. **'ಏವಮ್ ಅಯಮ್ ಅನಾದಿರನನ್ತೋ ನೈಸರ್ಗಿಕೋಽಧ್ಯಾಸಃ'** ಇತಿ ನಿಗಮಯತಿ । ನನು ಉಪನ್ಯಾಸಕಾಲೇ 'ನೈಸರ್ಗಿಕೋಽಯಂ ಲೋಕವ್ಯವಹಾರಃ' ಇತಿ ಲೋಕವ್ಯವಹಾರೋ ನೈಸರ್ಗಿಕ ಉಕ್ತಃ। ಕಥಮಿಹ ಅಧ್ಯಾಸೋ ನಿಗಮ್ಯತೇ 'ಅನಾದಿಃ' ಇತಿ ಚ ಅಧಿಕಾವಾಪಃ? ಅತ್ರೋಚ್ಯತೇ । ತತ್ರಾಪಿ ಪ್ರತ್ಯಗಾತ್ಮನ್ಯಪಿ ಅಹಙ್ಕಾರಾಧ್ಯಾಸ ಏವ ನೈಸರ್ಗಿಕೋ ಲೋಕವ್ಯವಹಾರೋಽಭಿಪ್ರೇತಃ । ಸ ಚ ಪ್ರತ್ಯಗಾತ್ಮಾ ಅನಾದಿಸಿದ್ಧಃ । ತಸ್ಮಿನ್ ನೈಸರ್ಗಿಕಸ್ಯ ಅನಾದಿತ್ವಮ್ ಅರ್ಥಸಿದ್ಧಮ್ । ಅತಃ ಪ್ರಕ್ರಮಾನುರೂಪಮೇವ ನಿಗಮನಮ್, ನ ಚಾಧಿಕಾವಾಪಃ ॥

---

1. ಅಂತಃಕರಣವೂ ಇಲ್ಲಿ ಅಧ್ಯಸ್ತವಾಗಿದೆ ಎಂಬುದನ್ನು ತೋರಗೊಡುವದಿಲ್ಲ.
2. ಪ್ರತಿಯೊಂದನ್ನೂ ಆತ್ಮನೆಂದೇ ತಪ್ಪಾಗಿ ವ್ಯವಹರಿಸುತ್ತಾರೆ.

(ಅರ್ಥ)

ಹೀಗೆ ಈ ಅಧ್ಯಾಸವು ಅನಾದಿಯೂ ಅಂತವಿಲ್ಲದ್ದೂ ಸ್ವಾಭಾವಿಕವೂ ಆಗಿದೆ ಎಂದು ಉಪಸಂಹಾರಮಾಡುತ್ತಾರೆ.

(ಆಕ್ಷೇಪ) :- ಉಪಕ್ರಮದ ಕಾಲದಲ್ಲಿ 'ನೈಸರ್ಗಿಕೋಽಯಂ ಲೋಕವ್ಯವಹಾರಃ' ಲೋಕವ್ಯವಹಾರವು ಸ್ವಾಭಾವಿಕವು ಎಂದು ಹೇಳಿತ್ತು. ಇಲ್ಲಿ ಅಧ್ಯಾಸವು (ನೈಸರ್ಗಿಕವೆಂದು) ನಿಗಮನಮಾಡಿರುವದು ಹೇಗೆ? 'ಅನಾದಿ' ಎಂದು ಹೆಚ್ಚಾಗಿ ಸೇರಿಸಿಕೊಂಡಿರುವದೂ (ಹೇಗೆ ಸರಿ)?

(ಪರಿಹಾರ) :- ಇದಕ್ಕೆ ಹೇಳುತ್ತೇವೆ. ಅಲ್ಲಿಯೂ ಪ್ರತ್ಯಗಾತ್ಮನಲ್ಲಿ ಅಹಂಕಾರದ ಅಧ್ಯಾಸವೇ ನೈಸರ್ಗಿಕವಾದ ಲೋಕವ್ಯವಹಾರವೆಂದು (ಭಾಷ್ಯಕಾರರಿಗೆ) ಅಭಿಪ್ರೇತವಾಗಿರುತ್ತದೆ.[1] ಆ ಪ್ರತ್ಯಗಾತ್ಮನು ಅನಾದಿಸಿದ್ಧನಾಗಿರುತ್ತಾನೆ. ಅವನಲ್ಲಿ ನೈಸರ್ಗಿಕವಾಗಿರುವ (ಅಧ್ಯಾಸವು) ಅನಾದಿ[2] ಎಂಬುದು ಅರ್ಥ(ವಶದಿಂದ) ಸಿದ್ಧವಾಗಿರುತ್ತದೆ.[3] ಆದ್ದರಿಂದ ಉಪಕ್ರಮಕ್ಕೆ ಅನುಗುಣವಾಗಿಯೇ ನಿಗಮನಮಾಡಿದೆ, ಹೆಚ್ಚಾಗಿ ಸೇರಿಸಿದ್ದು ಇಲ್ಲ.[4]

## (೨) ಅಧ್ಯಾಸವು ಅನಂತವೆಂಬುದು

(ಪಂಚಪಾದಿಕಾ)

೬೭. ನನು ಭವೇದನಾದಿಃ । ಅನನ್ತಃ ಕಥಮ್? ಯದಿ ಸ್ಯಾತ್ ತತ್ಪ್ರಹಾಣಾಯ ಕಥಂ ವೇದಾನ್ತಾ ಆರಭ್ಯನ್ತೇ? ಅನ್ತವತ್ತ್ವೇಽಪಿ ತರ್ಹಿ ಕಥಮ್? ಸ್ವತೋಽನ್ಯತೋ ವಾ ತತ್ಸಿದ್ಧೇಃ । ತಸ್ಮಾತ್ ಅನನ್ತಸ್ಯ ಪ್ರಹಾಣಾಯ ವೇದಾನ್ತಾ ಆರಭ್ಯನ್ತೇ ಇತ್ಯುಕ್ತೇ ಅರ್ಥಾತ್ ಏಷ ಏವ ಪ್ರಹಾಣಹೇತುಃ । ಅಸತ್ಯಸ್ಮಿನ್ ಅನನ್ತಃ ಇತಿ ನಿಶ್ಚೀಯತೇ ॥

---

1. ಹಿಂದೆ (ಪು. ೧೪) ಲೋಕವ್ಯವಹಾರವೆಂದರೆ 'ಮನುಷ್ಯನು ನಾನು ಎಂಬ ಅಭಿಮಾನವು' ಎಂದು ಹೇಳಿತ್ತು; ಇಲ್ಲಿ ಅಹಂಕಾರಾಧ್ಯಾಸವೇ ಆ ವಾಕ್ಯದಲ್ಲಿ ಅಭಿಪ್ರೇತವೆಂದಿರುವದೇಕೋ ತಿಳಿಯದು. ಅಲ್ಲಿ ಎಲ್ಲವೂ 'ಚೈತನ್ಯವು ಪುರುಷನ ಸ್ವರೂಪವು' ಎಂಬಂತೆ ವ್ಯಪದೇಶಮಾತ್ರವಿದು ಎಂದು ವಿವರಿಸಿದೆ.

2. ಅಧ್ಯಾಸವು ಅನಾದಿ ಎಂದರೆ ಅವಿದ್ಯೆಯು ಅನಾದಿಯಾದ್ದರಿಂದ ಅದರ ಕಾರ್ಯವಾದ ಇದೂ ಅನಾದಿ ಎಂದು ಹಿಂದೆ ಹೇಳಿರುವ ವಿಚಾರಕ್ರಮದಿಂದ ಅರ್ಥಮಾಡಿಕೊಳ್ಳಬೇಕಾಗುತ್ತದೆ. ೧೭-೧೮ನೆಯ ಪುಟಗಳನ್ನು ನೋಡಿರಿ.

3. ಅನಾದಿವಸ್ತುವನ್ನಾಶ್ರಯಿಸಿರುವದು ಅನಾದಿಯಾಗಿರಬೇಕೆಂದು ತಾನೇ ಸಿದ್ಧವಾಗುತ್ತದೆ ಎಂಬಭಿಪ್ರಾಯ.

4. ನೈಸರ್ಗಿಕವೆಂಬ ಮಾತಿನಲ್ಲಿ ಅಡಕವಾಗಿದ್ದದ್ದನ್ನೇ ಇಲ್ಲಿ 'ಅನಾದಿ' ಎಂದು ಬಿಡಿಸಿ ಹೇಳಿದೆ. ಹೇಳದೆ ಇದ್ದದ್ದನ್ನೇನೂ ಇಲ್ಲಿ ಹೆಚ್ಚಾಗಿ ಸೇರಿಸಿಕೊಂಡಿಲ್ಲ ಎಂದರ್ಥ.

(ಅರ್ಥ)

(ಆಕ್ಷೇಪ) :- ಅನಾದಿಯಾಗಿರಬಹುದು. ಅನಂತ(ವೆಂಬುದು) ಹೇಗೆ ? (ಅನಂತ)ವೆಂದಾದರೆ ಅದರ ನಾಶಕ್ಕಾಗಿ ವೇದಾಂತಗಳು ಆರಂಭವಾಗಿರುತ್ತವೆ ಎಂಬುದು ಹೇಗೆ ?[1]

(ಪರಿಹಾರ) :- ಹಾಗಾದರೆ ಅಂತವುಳ್ಳದ್ದಾದರೂ ಅದರ (ನಾಶಕ್ಕಾಗಿ ಆರಂಭವಾಗಿವೆ ಎಂಬುದು) ಹೇಗೆ ? ತನ್ನಷ್ಟಕ್ಕೆ ತಾನೇ, ಅಥವಾ ಮತ್ತೊಂದರಿಂದ ಆ (ನಾಶವು) ಸಿದ್ಧವಾಗಬಹುದಲ್ಲ ![2] ಆದ್ದರಿಂದ ಅನಂತವಾದದ್ದರ ನಾಶಕ್ಕಾಗಿ ವೇದಾಂತಗಳು ಆರಂಭವಾಗಿರುತ್ತವೆ ಎಂದರೆ ಅರ್ಥವಶದಿಂದ ಇದೇ (ಅದರ) ನಾಶಕ್ಕೆ ಹೇತು, ಇದು ಇಲ್ಲದಿದ್ದರೆ ಅನಂತವು ಎಂದಂತೆ ಎಂದು ನಿಶ್ಚಯವಾಗುತ್ತದೆ.[3]

## ಮಿಥ್ಯಾಪ್ರತ್ಯಯರೂಪತ್ವಾದಿವಿಶೇಷಣಗಳು

(ಪಂಚಪಾದಿಕಾ)

೬೮. 'ಮಿಥ್ಯಾಪ್ರತ್ಯಯರೂಪಃ' ಇತಿ ರೂಪಗ್ರಹಣಂ ಲಕ್ಷಣತಸ್ತಥಾ ರೂಪ್ಯತೇ, ನ ವ್ಯವಹಾರತಃ ಇತಿ ದರ್ಶಯಿತುಮ್ । 'ಕರ್ತೃತ್ವಭೋಕ್ತೃತ್ವಪ್ರವರ್ತಕಃ' ಇತಿ ಅನರ್ಥಹೇತುತ್ವಂ ದರ್ಶಯತಿ ಹೇಯತಾಸಿದ್ಧಯೇ । ತೇನ ಕರ್ತುರ್ಭೋಕ್ತುಶ್ಚ ಸತೋ ಮಿಥ್ಯಾಜ್ಞಾನಂ ದೋಷಪ್ರವರ್ತನಮ್- ಇತಿ ಯೇಷಾಂ ಮತಮ್, ತನ್ನಿರಾಕೃತಂ ಭವತಿ । 'ಸರ್ವಲೋಕಪ್ರತ್ಯಕ್ಷಃ' ಇತಿ । ದೇಹೇನ್ದ್ರಿಯಾದಿಷು ಅಹಂಮಮಾಭಿಮಾನಹೀನಸ್ಯ- ಇತ್ಯುಪನ್ಯಸ್ಯ 'ನ ಹೀನ್ದ್ರಿಯಾಣ್ಯನುಪಾದಾಯ' ಇತ್ಯಾದಿನಾ ಯೋಽನುಭವಃ, ಮಿಥ್ಯಾತ್ವಸಿದ್ಧಯೇ ಅನುಸೃತಃ, ತಂ ನಿಗಮಯತಿ ॥

(ಅರ್ಥ)

'ಮಿಥ್ಯಾಪ್ರತ್ಯಯರೂಪ(ವಾದ ಅಧ್ಯಾಸವು)' ಎಂದು 'ರೂಪ'(ಶಬ್ದ)ವನ್ನುಗ್ರಹಿಸಿರುವದೇಕೆಂದರೆ ಲಕ್ಷಣದಿಂದ ಹಾಗೆ ಕಾಣುತ್ತದೆ, ವ್ಯವಹಾರದಿಂದಲ್ಲ[4]

---

1. ಸಾಂತವಾಗಿದ್ದರಲ್ಲವೆ, ಉಪನಿಷತ್ತುಗಳಾಗಲಿ ಅಥವಾ ಬೇರೆ ಯಾವದೊಂದಾಗಲಿ ಅದರ ನಾಶಕ್ಕೆ ಪ್ರಯತ್ನಿಸಬಹುದಾಗುತ್ತದೆ ?

2. ಆದ್ದರಿಂದ ಅನಾದಿ ಎಂಬ ವಿಶೇಷಣವನ್ನು ಆಕ್ಷೇಪಿಸುವದಾದರೆ ಅನಂತವೆಂಬ ವಿಶೇಷಣವನ್ನೂ ಆಕ್ಷೇಪಿಸಬಹುದಾಗುವದು ಎಂದು ಭಾವ.

3. ಅನಂತವೆಂದಿರುವದು ಸರ್ವಥಾ ಅದಕ್ಕೆ ನಾಶವೇ ಇಲ್ಲವೆಂಬ ಅಭಿಪ್ರಾಯದಿಂದಲ್ಲ; ಜ್ಞಾನದಿಂದ ಬಾಧಿತವಾಗದೆಇದ್ದರೆ ಕೊನೆಗಾಣದೆ ಇರುತ್ತದೆ ಎಂಬ ಅಭಿಪ್ರಾಯದಿಂದ.

4. ವ್ಯವಹಾರದಲ್ಲಿ ಇದು ಸತ್ಯವೆಂದೇ ತೋರುತ್ತದೆ ; ಇದರ ಸ್ವರೂಪವನ್ನು ಬಿಡಿಸಿ ನೋಡಿದರೆ ಮಿಥ್ಯೆಯೇ ಆಗಿರುತ್ತದೆ. ಆದ್ದರಿಂದ ಮಿಥ್ಯಾಪ್ರತ್ಯಯ 'ರೂಪ' ಎಂದರೆ ಮಿಥ್ಯಾಪ್ರತ್ಯಯದ ಸ್ವರೂಪವುಳ್ಳದ್ದು ಎಂದಿದೆ- ಎಂದು ಭಾವ.

ಎಂದು ತಿಳಿಸುವದಕ್ಕೆ. ಕರ್ತೃತ್ವಭೋಕ್ತೃತ್ವಪ್ರವರ್ತಕವಾದ (ಅಧ್ಯಾಸವು) ಎಂದು ಹೇಯತ್ವವು ಸಿದ್ಧಿಸುವದಕ್ಕಾಗಿ ಅನರ್ಥಹೇತುತ್ವವನ್ನು ತಿಳಿಸಿರುತ್ತದೆ.[1] ಇದರಿಂದ ಕರ್ತೃವೂ ಭೋಕ್ತೃವೂ ಆಗಿರುವ (ಆತ್ಮನಿಗೆ) ಮಿಥ್ಯಾಜ್ಞಾನವು ದೋಷಪ್ರವರ್ತನವು[2]-ಎಂದು (ಹೇಳುವವರ) ಮತವಿದೆಯಲ್ಲ, ಅದನ್ನು ನಿರಾಕರಣೆಮಾಡಿದಂತೆ ಆಗಿರುತ್ತದೆ.[3] 'ಎಲ್ಲಾ ಜನರಿಗೂ ಪ್ರತ್ಯಕ್ಷವಾಗಿರುತ್ತದೆ' ಎಂದು 'ದೇಹೇಂದ್ರಿಯಗಳಲ್ಲಿ ನಾನು, ನನ್ನದು ಎಂಬ ಅಭಿಮಾನವಿಲ್ಲದವನಿಗೆ' ಎಂದು ಉಪಕ್ರಮಿಸಿ ಇಂದ್ರಿಯಗಳನ್ನು ತೆಗೆದುಕೊಳ್ಳದೆ ಪ್ರತ್ಯಕ್ಷಾದಿವ್ಯವಹಾರವಿಲ್ಲವಷ್ಟೆ ?' ಎಂದು ಮಿಥ್ಯಾತ್ವಸಿದ್ಧಿಗೆ ಅನುಭವವನ್ನು ಅನುಸರಿಸಿ (ಹೇಳಿತ್ತಲ್ಲ), ಅದನ್ನು ಉಪಸಂಹಾರಮಾಡಿರುತ್ತದೆ.[4]

## ೧೩. ವೇದಾಂತದ ಪ್ರಯೋಜನ-ಆತ್ಮೈಕತ್ವವಿದ್ಯೆ

**ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ ||**

### ಅನಾದಿಯಾದ ಅಧ್ಯಾಸಕ್ಕೆ ನಾಶವು ಹೇಗೆ ?

(ಪಂಚಪಾದಿಕಾ)

೬೯. ಏವಂ ತಾವತ್ ಸೂತ್ರೇಣಾರ್ಥೋಪಾತ್ತಯೋರ್ವಿಷಯಪ್ರಯೋಜನಯೋಃ ಸಿದ್ಧಯೇ ಜೀವಸ್ಯ ಅಬ್ರಹ್ಮಸ್ವರೂಪತ್ವಮ್ ಅಧ್ಯಾಸಾತ್ಮಕಮ್ ಉಪದರ್ಶ್ಯ 'ಅಸ್ಯಾನರ್ಥಹೇತೋಃ ಪ್ರಹಾಣಾಯ' ಇತಿ ಪ್ರಯೋಜನಂ ನಿರ್ದಿಶತಿ । 'ಹೇತೋಃ ಪ್ರಹಾಣ್ಯಾ' ಹಿ ಹೇತುಮತಃ ಪ್ರಹಾಣಿರಾತ್ಯನ್ತಿಕೀ ಯತಃ । ನನ್ವರ್ಥಹೇತುರಧ್ಯಾಸೋಽನಾದಿಃ ಸ ಕಥಂ ಪ್ರಹೀಯತೇ ? ತಥಾ ಹಿ ಮನುಷ್ಯಾದಿಜಾತಿವಿಶೇಷಮಾತ್ರಾಧ್ಯಾಸಃ ತತೋ ವಿವಿಕ್ತೇಽಪಿ ನ್ಯಾಯತೋಽಹಂಪ್ರತ್ಯಯೋ ಅನಾದಿತ್ವಾತ್ ಪೂರ್ವವತ್ ಅವಿಕಲೋ ವರ್ತತೇ। ನಾಯಂ ದೋಷಃ। 'ತತ್ತ್ವಮಸಿ' ಇತ್ಯಾದಿವಾಕ್ಯಾತ್ ಬ್ರಹ್ಮರೂಪಾವಗಾಹಿ ಜ್ಞಾನಾನ್ತರೋತ್ಪತ್ತೇಃ ಇಷ್ಟತ್ವಾತ್ । ತದ್ ಹಿ ಬ್ರಹ್ಮಣೋಽವಚ್ಛಿದ್ಯೈವ ಚೈತನ್ಯಸ್ಯ ಬ್ರಹ್ಮ

1. ಕರ್ತೃತ್ವಭೋಕ್ತೃತ್ವವನ್ನುಂಟುಮಾಡುವದು ಅನರ್ಥಕ್ಕೆ ಕಾರಣವೆಂದು ತಿಳಿಸಿದೆ.

2. ನೈಯಾಯಿಕರು ಮಿಥ್ಯಾಜ್ಞಾನದಿಂದ ದೋಷ, ದೋಷದಿಂದ ಪ್ರವೃತ್ತಿ, ಪ್ರವೃತ್ತಿಯಿಂದ ಜನ್ಮ, ಜನ್ಮದಿಂದ ದುಃಖ– ಹೀಗೆ ಸಂಸಾರವಾಗುವದು ಎನ್ನುತ್ತಾರೆ.

3. ಕರ್ತೃತ್ವವೇ ಅಧ್ಯಾಸದಿಂದಾದದ್ದು, ಪರಮಾರ್ಥವಲ್ಲ– ಎಂದು ಇಲ್ಲಿ ತಿಳಿಸಿರುತ್ತದೆ.

4. ಶರೀರಾದಿಗಳ ಅಧ್ಯಾಸವನ್ನಿಟ್ಟುಕೊಂಡೇ ಕರ್ತೃತ್ವಭೋಕ್ತೃತ್ವವುಂಟಾಗಿದೆ ಎಂದದ್ದರಿಂದ ಈ ಅಧ್ಯಾಸವು ಅನುಭವಾರೂಢವಾಗಿದೆ ಎಂದು ಹೇಳಿದ್ದನ್ನು ಮತ್ತೆ ಕೊನೆಯಲ್ಲಿ ಹೇಳಿದಂತೆ ಆಯಿತು.

ರೂಪತ್ವಪ್ರಚ್ಛಾದನೇನ ಜೀವರೂಪತ್ವಾಪಾದಿಕಾಮ್ ಅನಾದಿಸಿದ್ಧಾಮ್ ಅವಿದ್ಯಾಂ ಅಹಙ್ಕಾರಾದಿವಿಕ್ಷೇಪಹೇತುಂ ನಿರಾಕುರ್ವದೇವ ಉತ್ಪದ್ಯತೇ । ತತಃ ಕಾರಣನಿವೃತ್ತೌ ತತ್ಕಾರ್ಯಮ್ ಅಹಮಿತಿ ಜೀವೇ ಭೋಕ್ತೃತ್ವರೂಪತಾ ಸ ಪರಿಕರಾ ನಿವರ್ತತೇ ಇತಿ ಯುಜ್ಯತೇ। ಅಹಂಪ್ರತ್ಯಯಃ ಪುನಃ ಅನಾದಿಸಿದ್ಧೋನೈವ ಕಾರ್ಯಕರಣಮಾತ್ರೇಣ ಸಹಭಾವಾತ್ ಅವಿರೋಧಾತ್ ನ ಸ್ವರೂಪವಿವೇಕ ಮಾತ್ರೇಣ ನಿವರ್ತತೇ, ನಾಪಿ ಜ್ಞಾನಾನ್ತರಸಮುತ್ಪನ್ನಮ್ ಇತಿ ವಿಶೇಷಃ ॥

(ಅರ್ಥ)

ಇಲ್ಲಿಯವರೆಗೆ ಸೂತ್ರದಲ್ಲಿ ಅರ್ಥವಶದಿಂದ ಇಟ್ಟುಕೊಂಡಿದ್ದ ವಿಷಯ, ಪ್ರಯೋಜನ- ಇವುಗಳು ಸಿದ್ಧವಾಗುವದಕ್ಕಾಗಿ ಜೀವನಿಗೆ ಅಬ್ರಹ್ಮಸ್ವರೂಪ ವುಂಟಾಗಿರುವದು ಅಧ್ಯಾಸರೂಪವಾದದ್ದು ಎಂದು ತೋರಿಸಿ (ಈಗ) '**ಅನರ್ಥ ಹೇತೋಃ ಪ್ರಹಾಣಾಯ**' (ಅನರ್ಥಕ್ಕೆಲ್ಲ ಹೇತುವಾದ ಅಧ್ಯಾಸದ ನಾಶ ಕ್ಕಾಗಿ) ಎಂದು ಪ್ರಯೋಜನವನ್ನು ತಿಳಿಸುತ್ತಿದಾರೆ. ಹೇತುವಿನ ನಾಶದಿಂದಲ್ಲವೆ, ಹೇತುವನ್ನುಳ್ಳ (ಕಾರ್ಯದ) ನಾಶವು ಆತ್ಯಂತಿಕವಾಗುವದು[1] ?

(ಆಕ್ಷೇಪ) :- ಅನರ್ಥಕ್ಕೆ ಹೇತುವಾಗಿರುವ ಅಧ್ಯಾಸವು ಅನಾದಿ. ಅದನ್ನು ನಾಶಗೊಳಿಸುವದು ಹೇಗೆ? ಆದ್ದರಿಂದಲೆ ಅಲ್ಲವೆ, ಮನುಷ್ಯಾದಿಜಾತಿವಿಶೇಷ ಮಾತ್ರದ ಅಧ್ಯಾಸವು, ಅದರಿಂದ ಅಹಂಪ್ರತ್ಯಯವನ್ನು ಯುಕ್ತಿಯಿಂದ ವಿಂಗಡಿಸಿ ಕೊಂಡಮೇಲೂ ಅನಾದಿಯಾಗಿರುವದರಿಂದ ಮುನ್ನಿನಂತೆ (ಸ್ವಲ್ಪವೂ) ಮುಕ್ಕಾಗದೆ ಇದ್ದುಕೊಂಡೇ ಇರುವದು[2] ?

(ಪರಿಹಾರ) :- ಇದೇನೂ ತಪ್ಪಲ್ಲ. ಏಕೆಂದರೆ 'ತತ್ತ್ವಮಸಿ' ಮುಂತಾದ ವಾಕ್ಯದಿಂದ ಬ್ರಹ್ಮಸ್ವರೂಪವನ್ನು ತಿಳಿಸಿಕೊಡುವ ಜ್ಞಾನಾಂತರವುಂಟಾಗುವ ದೆಂದು (ನಮ್ಮ) ಮತವಾಗಿರುತ್ತದೆ.[3] ಏಕೆಂದರೆ ಆ (ಜ್ಞಾನವು) ಬ್ರಹ್ಮದಿಂದ

---

1. ಹೇತುವು ಇದ್ದುಕೊಂಡೇ ಇದ್ದರೆ, ಅನರ್ಥವು ತತ್ಕಾಲಕ್ಕೆ ಯಾವದಾದರೊಂದು ನಿಮಿತ್ತದಿಂದ ನಾಶವಾದರೂ ಮತ್ತೆ ಎದ್ದುಕೊಳ್ಳಬಹುದು ; ಹೇತುವು ನಾಶವಾದರೆ ಮತ್ತೆ ಅದು ಹುಟ್ಟಿಕೊಳ್ಳುವದಕ್ಕೆ ಕಾರಣವಿರುವದಿಲ್ಲ.

2. ಆದ್ದರಿಂದ ಪ್ರಕೃತದಲ್ಲಿಯೂ ಬ್ರಹ್ಮಜ್ಞಾನವುಂಟಾದರೂ ಅನಾದಿಯಾದ ಅಧ್ಯಾಸವು ಇದ್ದುಕೊಂಡೇ ಇರಬಹುದು.

3. ಶ್ರುತಿಯಿಂದ ಜ್ಞಾನವು ಹುಟ್ಟುವದು ಹೇಗೆ? ಅದು ಅಧ್ಯಾಸದ ಕಾರಣವಾದ ಅವಿದ್ಯೆಯನ್ನು ತೊಲಗಿಸುವದಾದರೂ ಹೇಗೆ ?- ಎಂಬುದನ್ನು ಇಲ್ಲಿ ವಿಶದಪಡಿಸಿಲ್ಲ. ವಿಪರ್ಯಾಸಕ್ಕೆ ವಿರೋಧಿಯಾಗಿ ಎರಡು ಜ್ಞಾನಗಳು ಇರುತ್ತವೆ. 'ಇದು ಕಪ್ಪೆಯ ಚಿಪ್ಪು' ಎಂಬ ವಿರೋಧಿವಸ್ತುವಿನ ಜ್ಞಾನಾಂತರವೊಂದು ; ಅಧ್ಯಸ್ತವಾದ ವಸ್ತು ನಿಜವಾಗಿಲ್ಲವೆಂಬ ಜ್ಞಾನವೊಂದು. ಅಧ್ಯಸ್ತವು ನಿಜವಾಗಿಲ್ಲವೆಂಬ ಜ್ಞಾನದಮೂಲಕ ಅಧ್ಯಾಸವನ್ನು ಕಳೆಯುವಲ್ಲಿ ನಞಾದಿಪದಗಳು ಬೇಕು ; ವಿರೋಧಿಯಾದ ಭಾವಾಂತರಜ್ಞಾನವಾಗುವಲ್ಲಿ ಬೇಕಿಲ್ಲ- ಎಂದು ಪಂ. ವಿ. ಆದರೆ 'ತತ್ತ್ವಮಸಿ' ಎಂಬಲ್ಲಿಯೂ ತ್ವಂಪದದಲ್ಲಿರುವ ಅನಾತ್ಮಾಂಶವನ್ನು ಅಲ್ಲಗಳೆದೇ ವಾಕ್ಯಜ್ಞಾನವಾಗುತ್ತದೆ ಎಂದು ಉ. ಸಾ. ಪದ್ಯ ೧೮-೧೮೪ರಲ್ಲಿದೆ.

ಬೇರ್ಪಡಿಸಿಯೇ ಚೈತನ್ಯಕ್ಕೆ ಬ್ರಹ್ಮರೂಪತ್ವವನ್ನು ಮುಚ್ಚಿಹಾಕಿ ಜೀವರೂಪತ್ವವನ್ನುಂಟುಮಾಡುವ ಅನಾದಿಸಿದ್ಧವಾದ ಅಹಂಕಾರವೇ ಮುಂತಾದ ವಿಕ್ಷೇಪಕ್ಕೆ ಕಾರಣವಾಗಿರುವ ಅವಿದ್ಯೆಯನ್ನು ತೊಲಗಿಸಿಕೊಂಡೇ ಹುಟ್ಟುತ್ತದೆ.[1] ಆದ್ದರಿಂದ **ಕಾರಣವಾದ (ಅವಿದ್ಯೆ) ಹೋಗಲು ಅದರ ಕಾರ್ಯವಾದ ನಾನು–ಎಂಬ ಭೋಕ್ತೃತ್ವವು ಜೀವನದಲ್ಲಿ ಪರಿಕರಸಮೇತವಾಗಿ ಹೋಗಿಬಿಡುತ್ತದೆ ಎಂಬುದು ಯುಕ್ತವಾಗಿದೆ.** (ದೃಷ್ಟಾಂತದ) ಅಹಂಪ್ರತ್ಯಯವಾದರೋ ಅನಾದಿಸಿದ್ಧವೇ ಆಗಿರುವ ಕಾರ್ಯಕರಣದೊಡನೆ ಜೊತೆಯಲ್ಲಿದ್ದುಕೊಂಡಿರುವದರಿಂದ (ಅವೆರಡಕ್ಕೂ) ವಿರೋಧವಿಲ್ಲವಾಗಿ ಸ್ವರೂಪವಿವೇಕಮಾತ್ರದಿಂದ ಹೋಗುವದಿಲ್ಲ, ಅಲ್ಲಿ ಜ್ಞಾನಾಂತರವು ಹುಟ್ಟಿಯೂ ಇರುವದಿಲ್ಲ ಎಂಬುದು (ಅಲ್ಲಿ) ವಿಶೇಷವು.[2]

## 'ಅನರ್ಥಹೇತುವಿನ ನಾಶಕ್ಕಾಗಿ' ಎಂಬ ಭಾಷ್ಯವಾಕ್ಯದ ಸ್ವಾರಸ್ಯ

**(ಪಂಚಪಾದಿಕಾ)**

೭೦. ನನು ನಿರತಿಶಯಾನನ್ದಂ ಬ್ರಹ್ಮ ಶ್ರೂಯತೇ, ಬ್ರಹ್ಮಾವಾಪ್ತಿಸಾಧನಂ ಚ ಬ್ರಹ್ಮವಿದ್ಯಾ। 'ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ. ೩–೨–೯) ಇತ್ಯಾದಿಶ್ರುತಿಭ್ಯಃ। ತಸ್ಮಾತ್, ನಿರತಿಶಯಸುಖಾವಾಪ್ತಯೇ ಇತಿ ವಕ್ತವ್ಯಮ್ ; ಕಿಮಿದಮ್ ಉಚ್ಯತೇ। **'ಅನರ್ಥಹೇತೋಃ ಪ್ರಹಾಣಾಯ'** ಇತಿ ? ನನು ಅನರ್ಥಸ್ಯಾಪಿ ಸಮೂಲಸ್ಯ ಪ್ರಹಾಣಂ ಶ್ರೂಯತೇ ಬ್ರಹ್ಮವಿದ್ಯಾಫಲಮ್ 'ತರತಿ ಶೋಕಮಾತ್ಮವಿತ್' (ಛಾಂ. ೭-೧-೩), 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ' (ಮುಂ. ೩–೧–೨)– ಇತಿ ಚ। ಉಭಯಂ ತರ್ಹಿ ವಕ್ತವ್ಯಮ್। ಶ್ರೂಯಮಾಣತ್ವಾತ್, ಪುರುಷಾರ್ಥತ್ವಾಚ್ಚ। ನ ವಕ್ತವ್ಯಮ್। ಕಥಮ್ ? 'ಆತ್ಮೈಕತ್ವವಿದ್ಯಾಪ್ರತಿಪತ್ತಯೇ' ಇತಿ ಆತ್ಮನೋ ಜೀವಸ್ಯ ಬ್ರಹ್ಮಾತ್ಮಕತಾ ಶಾಸ್ತ್ರಸ್ಯ

---

1. ಶ್ರುತಿಯಿಂದ ಬಾಧಕಜ್ಞಾನವುಂಟಾದಮೇಲಾದರೂ ಅನಾದ್ಯವಿದ್ಯೆಯಿಂದ ಬ್ರಹ್ಮವು ಮುಚ್ಚಿಕೊಂಡಿತ್ತು– ಎಂದು ಏಕೆ ತಿಳಿಯುವದಿಲ್ಲ ? ಎಂಬುದನ್ನು ಇಲ್ಲಿ ವಿವರಿಸಿಲ್ಲ.

2. ಸಾದಿಯಾಗಿರುವದಾಗಲಿ, ಅನಾದಿಯಾಗಿರುವದಾಗಲಿ ವಿನಾಶಾವಿನಾಶಗಳಿಗೆ ನಿಮಿತ್ತವಲ್ಲ; ಮತ್ತೇನೆಂದರೆ ವಿರುದ್ಧವಾದದ್ದು ಹುಟ್ಟುವದೇ, ಹುಟ್ಟದಿರುವದೇ. ಬೌದ್ಧಾದಿಗಳು ಅನಾದಿಯಾದದ್ದಕ್ಕೂ ನಾಶವುಂಟೆಂದು ಒಪ್ಪುತ್ತಾರೆ. ದೇಹವ್ಯತಿರಿಕ್ತಜ್ಞಾನವಾದಮೇಲೂ ಅಧ್ಯಾಸವು ನಿವೃತ್ತಿಯಾಗದಿರುವದಕ್ಕೆ ಕಾರಣವೇನೆಂದರೆ ಸಂಸಾರಕ್ಕೆ ವ್ಯತಿರೇಕಾಜ್ಞಾನವೇನೂ ನಿಮಿತ್ತವಲ್ಲ, ಬ್ರಹ್ಮಾಜ್ಞಾನವೇ ಕಾರಣ. ದಾರ್ಷ್ಟಾಂತಿಕದಲ್ಲಿ ಅಜ್ಞಾನವಿರೋಧಿಬ್ರಹ್ಮಜ್ಞಾನ ಉಂಟಾಗುವದರಿಂದ ಅದು ಹೋಗಬಹುದಾಗಿದೆ ಎಂದು ಪಂ. ವಿ.

ವಿಷಯಃ, ತೇನ ಆನನ್ದಾತ್ಮಕಬ್ರಹ್ಮಸ್ವರೂಪತಾಪ್ರಾಪ್ತಿರ್ಜೀವಸ್ಯ ವಿಷಯ ತಯೈವ ಸಂವೃತ್ತಾ । ನ ಚ ಸಾ ವಿಷಯಾದ್ ಬಹಿಃ, ಯೇನ ಪೃಥಙ್ನಿರ್ದೇಶಾ ಹರ್ಾ ಸ್ಯಾತ್ । ಸಮೂಲಾನರ್ಥಹಾನಿಸ್ತು ಬಹಿಃ ಶಾಸ್ತ್ರವಿಷಯಾದ್ ಬ್ರಹ್ಮಾತ್ಮ ರೂಪಾತ್ ||

(ಅರ್ಥ)

(ಆಕ್ಷೇಪ) :- ಬ್ರಹ್ಮವು ನಿರತಿಶಯ, ಆನಂದ(ಸ್ವರೂಪ)ವೆಂದು ಶ್ರುತಿ ಯಲ್ಲಿದೆ. ಬ್ರಹ್ಮವನ್ನು ಪಡೆಯುವದಕ್ಕೆ ಸಾಧನವು ಬ್ರಹ್ಮವಿದ್ಯೆಯು. 'ಯಾವ ನಾದರೆ ಆ ಪರಮಬ್ರಹ್ಮವನ್ನು ಅರಿತುಕೊಳ್ಳುವನೋ (ಅವನು) ಬ್ರಹ್ಮವೇ (ಆಗುವನು)' (ಮುಂ. ೩-೨-೯) ಎಂದುಮುಂತಾದ ಶ್ರುತಿಗಳಿರುತ್ತವೆ. ಆದ್ದ ರಿಂದ 'ನಿರತಿಶಯವಾದ ಸುಖವನ್ನು ಪಡೆಯುವದಕ್ಕಾಗಿ' ಎಂದು ಹೇಳಬೇಕು. (ಆದರೆ) '**ಅನರ್ಥಹೇತುವಿನ ನಾಶಕ್ಕಾಗಿ**' ಎಂದು ಹೇಳಿದೆಯಲ್ಲ, ಇದೇನು ?

(ಸಿದ್ಧಾಂತಿ) :- ಸಮೂಲವಾದ ಅನರ್ಥವಿನಾಶವೂ ಬ್ರಹ್ಮವಿದ್ಯೆಯ ಫಲ ವೆಂದು 'ಆತ್ಮನನ್ನರಿತುಕೊಂಡವನು ಶೋಕವನ್ನು ದಾಟುತ್ತಾನೆ' (ಛಾಂ. ೭-೧-೩) ಎಂದೂ 'ಅನ್ಯನಾದ ಈಶ್ವರನನ್ನು ಸೇವಿಸಿ ಇವನ ಮಹಿಮೆಯೆಂದು ಯಾವಾಗ ಕಂಡುಕೊಳ್ಳುತ್ತಾನೋ (ಆಗ) ಶೋಕವನ್ನು ಕಳೆದುಕೊಂಡವನಾಗು ವನು' (ಮುಂ. ೩-೧-೨) ಎಂದೂ ಹೇಳಿದೆಯಲ್ಲ !

(ಆಕ್ಷೇಪ) :- ಹಾಗಾದರೆ ಎರಡನ್ನೂ ಹೇಳಬೇಕು. ಏಕೆಂದರೆ ಎರಡೂ ಶ್ರುತಿಯಲ್ಲಿವೆ, (ಎರಡೂ) ಪುರುಷಾರ್ಥವಾಗಿವೆ.

(ಪರಿಹಾರ) :- ಹೇಳಬೇಕಾದದ್ದಿಲ್ಲ. ಏಕೆಂದರೆ 'ಆತ್ಮೈಕತ್ವವಿದ್ಯೆಯ ಪ್ರಾಪ್ತಿಗಾಗಿ' ಎಂದರೆ ಆತ್ಮನಾದ ಜೀವನು ಬ್ರಹ್ಮಾತ್ಮಕನೆಂಬ ಶಾಸ್ತ್ರದ ವಿಷಯ ವನ್ನು (ಹೇಳಿದೆ). ಆದ್ದರಿಂದ ಜೀವನಿಗೆ ಆನಂದಸ್ವರೂಪವಾದ ಬ್ರಹ್ಮಸ್ವರೂಪದ ಪ್ರಾಪ್ತಿಯು ವಿಷಯವೇ ಆಯಿತು ; ಅದು ವಿಷಯದ ಹೊರಗಿಲ್ಲ ; ಹಾಗಿದ್ದಿದ್ದರೆ (ಅದನ್ನು) ಬೇರೆಯಾಗಿ ಹೇಳಬೇಕಾಗುತ್ತಿತ್ತು. ಸಮೂಲವಾದ ಅನರ್ಥಹಾನಿ ಯಾದರೋ ಬ್ರಹ್ಮಾತ್ಮರೂಪವಾದ ಶಾಸ್ತ್ರವಿಷಯಕ್ಕಿಂತ ಹೊರಚ್ಚಾಗಿರುತ್ತದೆ.

( ಪಂಚಪಾದಿಕಾ )

೭೧. ಅನರ್ಥಹೇತುಪ್ರಹಾಣಮಪಿ ತರ್ಹಿ ನ ಪೃಥಕ್ ನಿರ್ದೇಷ್ಟವ್ಯಮ್ । **ಯತಃ** ಸರ್ವೇಷು ವೇದಾನ್ತೇಷು ಅಲೌಕಿಕತ್ವಾತ್ ಬ್ರಹ್ಮಣಃ, ತತ್ಪ್ರತಿಪಾದನ ಪೂರ್ವಕಮೇವ ಜೀವಸ್ಯ ತದ್ರೂಪತಾ ಪ್ರತಿಪಾದ್ಯತೇ । ತದ್ ಯಥಾ 'ಸದೇವ ಸೋಮ್ಯೇದಮಗ್ರ ಆಸೀತ್' (ಛಾಂ. ೬-೨-೧) ಇತ್ಯುಪಕ್ರಮ್ಯ 'ಐತದಾತ್ಮ್ಯ ಮಿದಂ ಸರ್ವಂ ತತ್ ಸತ್ಯಂ ಸ ಆತ್ಮಾ' (ಛಾಂ. ೬-೮-೭) ಇತ್ಯವಸಾನಂ

ನಿರಸ್ತಸಮಸ್ತಪ್ರಪಞ್ಚಂ ವಸ್ತು ತತ್ಪದಾಭಿಧೇಯಂ ಸಮರ್ಪಯದೇಕಂ ವಾಕ್ಯಮ್। ತಥಾ ಸತಿ ತಾದೃಶೇನ ತತ್ಪದಾರ್ಥೇನ ಸಂಸೃಜ್ಯಮಾನಸ್ತ್ವಂಪದಾರ್ಥಃ ಪರಾಕೃತ್ಯೈವ ನಿರ್ಲೇಪಮ್ ಅನರ್ಥಹೇತುಮ್ ಅಗ್ರಹಣಮ್ ಅನ್ಯಥಾಗ್ರಹಣಂ ಚ ತಥಾ ನಿಶ್ಚೀಯತ ಇತಿ । ಯದ್ಯೇವಂ ಬ್ರಹ್ಮಾತ್ಮಾವಗತಿನಾನ್ತರೀಯಕಮ್ ಅನರ್ಥಹೇತೋರವಿದ್ಯಾಯಾಃ ಪ್ರಹಾಣಂ ನ ಶಬ್ದಸ್ಯ ತತ್ರ ವ್ಯಾಪಾರಃ, ತೇನ ಪೃಥಕ್ ನಿರ್ದಿಶ್ಯತೇ । ಯುಕ್ತಂ ಚೈತತ್ । ನ ಹಿ ವಿಪರ್ಯಾಸಗೃಹೀತಂ ವಸ್ತು ತನ್ನಿರಾಸಾದೃತೇ ತತ್ತ್ವತೋ ನಿರ್ಣೇತುಂ ಶಕ್ಯಮ್ । ತಸ್ಮಾತ್, ಪೂರ್ವಾವಸಿತಮ್ ಅತದ್ಧರ್ಮಂ ನಿರಸ್ಯದೇವ ತತ್ತ್ವಾವದ್ಯೋತಿ ವಾಕ್ಯಂ ತತ್ತ್ವಮವಸಾಯಯತಿ ॥

(ಅರ್ಥ)

(ಆಕ್ಷೇಪ) :– ಹಾಗಾದರೆ ಅನರ್ಥಹೇತುವಿನ ನಾಶವನ್ನು ಕೂಡ ಬೇರೆ ತೋರಿಸಬೇಕಾದದ್ದಿಲ್ಲ ; ಏಕೆಂದರೆ ಸರ್ವವೇದಾಂತಗಳಲ್ಲಿಯೂ ಬ್ರಹ್ಮವೂ ಅಲೌಕಿಕವಾಗಿರುವದರಿಂದ[1] ಅದನ್ನು ತಿಳಿಯಿಸಿಕೊಡುವ ಮೂಲಕವಾಗಿಯೇ ಜೀವನು ಆ (ಬ್ರಹ್ಮ)ರೂಪನಾಗಿರುವನೆಂದು ತಿಳಿಯಿಸಿಕೊಟ್ಟಿರುತ್ತದೆ. ಅದು ಹೇಗೆಂದರೆ: 'ಸೋಮ್ಯನೆ, ಇದೆಲ್ಲವೂ ಮೊದಲು ಸತ್ತೇ ಆಗಿದ್ದಿತು' (ಛಾಂ. ೬–೨–೧) ಎಂದು ಉಪಕ್ರಮಿಸಿ 'ಇದೆಲ್ಲಕ್ಕೂ ಇದೇ ಆತ್ಮನು, ಅದು ಸತ್ಯವು, ಅದೇ ಆತ್ಮನು' (ಛಾಂ. ೬–೮–೭) ಎಂಬವರೆಗೆ ಯಾವ ಪ್ರಪಂಚವೂ ಇಲ್ಲದ ವಸ್ತುವಾದ ತತ್ಪದದ ಅರ್ಥವನ್ನು ಸಮರ್ಪಿಸಿರುವದು ಒಂದೇ ವಾಕ್ಯವು. ಹಾಗಾದರೆ ಅಂಥ ತತ್ಪದಾರ್ಥದೊಡನೆ ಸಂಬಂಧಿಸಿಕೊಂಡಿರುವ ತ್ವಂಪದಾರ್ಥವು ಅನರ್ಥಹೇತುವಾದ ಅಗ್ರಹಣದಂತೆ ಅನ್ಯಥಾಗ್ರಹಣವನ್ನು ಸ್ವಲ್ಪವೂ ಅಂಟಿಕೊಳ್ಳದಂತೆ ತೊಲಗಿಸಿಯೇ ಹಾಗೆಂದು ನಿಶ್ಚಿತವಾಗುತ್ತದೆ.[2]

(ಸಿದ್ಧಾಂತಿ) :– ಹಾಗಾದರೆ ಬ್ರಹ್ಮಾತ್ಮನನ್ನು ಅರಿತುಕೊಳ್ಳುವದರಿಂದ ಅವಶ್ಯವಾಗಿಯೇ ಅನರ್ಥಹೇತುವಾದ ಅವಿದ್ಯೆಯು ನಾಶವು ಆಗಿಬಿಡುವದು, ಅದರಲ್ಲಿ ಶಬ್ದವ್ಯಾಪಾರವೇನೂ ಇಲ್ಲ[3] ; ಆದ್ದರಿಂದ ಅದನ್ನು ಬೇರೆಯಾಗಿ

---

1. ಪ್ರತ್ಯಕ್ಷಾದ್ಯಗೋಚರವಾಗಿರುವದರಿಂದ.

2. ಆದ್ದರಿಂದ ತಾನೇ ಸಿದ್ಧವಾಗುವದರಿಂದ ಅನರ್ಥನಾಶವನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

3. ಬ್ರಹ್ಮಾತ್ಮತ್ವವನ್ನು ಅರಿತುಕೊಂಡದ್ದರಿಂದ ಸಾಮರ್ಥ್ಯಲಬ್ಧವಾಗುವದು. ಅನರ್ಥನಾಶವು ಶಾಸ್ತ್ರಪ್ರತಿಪಾದ್ಯವಲ್ಲ. ಪಂ. ವಿ. ಇದು ಮಾಂಡೂಕ್ಯದಲ್ಲಿ ಪ್ರತಿಪಾದಿತವಾಗಿರುವ ನಿಷೇಧಶಾಸ್ತ್ರವ್ಯಾಪಾರದ ಕ್ರಮಕ್ಕೆ ವಿರುದ್ಧವಾಗಿರುವಂತೆ ತೋರುತ್ತದೆ. ಅದ್ವೈತದಲ್ಲಿ ಶಾಸ್ತ್ರವ್ಯಾಪಾರವಿಲ್ಲನೆಂದೇ ಅಲ್ಲಿ ಸ್ಪಷ್ಟವಾಗಿ ಹೇಳಿದೆ.

ತಿಳಿಸಿರುತ್ತದೆ.[1] ಇದು ಯುಕ್ತವೂ ಆಗಿದೆ; ಏಕೆಂದರೆ ವಿಪರ್ಯಾಸಮಾಡಿ ತಿಳಿದುಕೊಂಡಿರುವ ವಸ್ತುವನ್ನು ಆ (ವಿಪರ್ಯಾಸ)ವನ್ನು ತಳ್ಳಿಹಾಕದೆ ಅದು ಇದ್ದಂತೆ ನಿರ್ಣಯಿಸಿಕೊಳ್ಳುವದು ಆಗಲಾರದು. ಆದ್ದರಿಂದ ಮೊದಲು ನಿಶ್ಚಯಿಸಿದ್ದ ಅತದ್ಧರ್ಮವನ್ನು ತಿರಸ್ಕಾರಮಾಡಿಕೊಂಡೇ ತತ್ತ್ವವನ್ನು ಬೆಳಗುವ ವಾಕ್ಯವು ತತ್ತ್ವವನ್ನು ನಿಶ್ಚಯಿಸುತ್ತದೆ.[2]

## ತತ್ತ್ವಮಸಿವಾಕ್ಯದ ಜ್ಞಾನದಿಂದ ಅವಿದ್ಯಾನಿರಾಸ ಹೇಗೆ?

(ಪಂಚಪಾದಿಕಾ)

೭೨. ನನು ಚ ನಞಾದೇರ್ನಿರಾಸಕೃತಃ, ನಿರಸ್ಯಮಾನವಾಚಿನಶ್ಚ ಪದಸ್ಯ ಅಶ್ರವಣಾತ್, ಕಥಂ ತನ್ನಿರಸ್ಯದೇವೇತಿ? ಉಚ್ಯತೇ। ನೇದಂ ರಜತಮಿತಿ ಯತ್ರ ವಿಪರ್ಯಾಸಮಾತ್ರಂ ನಿರಸ್ಯತೇ ನ ವಸ್ತುತತ್ತ್ವಮ್ ಅವಬೋಧ್ಯತೇ, ತತ್ರ ತಥಾ ಭವತು। ಇಹ ಪುನರ್ವಿಜ್ಞಾನಮೇವ ತಾದೃಶಮುತ್ಪನ್ನಂ ಯದ್ ವಿರೋಧಿನಿರಾಕರಣಮನ್ತರೇಣ ನ ಸ್ವಾರ್ಥಂ ಸಾಧಯಿತುಮಲಮ್। ತುಲೋನ್ನಮನವ್ಯಾಪಾರ ಇವ, ಅವನಮನನಾನ್ತರೀಯಕಃ। ತಥಾ ಹಿ; ಉನ್ನಮನವ್ಯಾಪಾರಃ ಸ್ವವಿಷಯಸ್ಯ ತುಲಾದ್ರವ್ಯಸ್ಯ ಊರ್ಧ್ವದೇಶಸಂಬನ್ಧಂ ನ ಸಾಧಯಿತುಮ್ ಅಲಂ ತತ್ಕಾಲಮೇವ ತಸ್ಯ ಅಧೋದೇಶಸಂಬನ್ಧಮ್ ಅನಾಪಾದ್ಯ। ನ ಚ ಉನ್ನಮನಕಾರಕಸ್ಯ ಹಸ್ತಪ್ರಯತ್ನಾದೇಃ, ಅವನಮನೇಽಪಿ ಕಾರಕತ್ವಮ್। ಪ್ರಸಿದ್ಧ್ಯಭಾವಾತ್, ಅನುಭವವಿರೋಧಾಚ್ಚ। ತತ್ರ ಏವಂ ವಿಪರ್ಯಾಸಗೃಹೀತೇ ವಸ್ತುನಿ ತತ್ತ್ವಮಸೀತಿಶಬ್ದನಿಮಿತ್ತ ಆತ್ಮನೋ ಜ್ಞಾನವ್ಯಾಪಾರೋ 'ನಾಹಂ ಕರ್ತಾ, ಬ್ರಹ್ಮಾಹಮ್' ಇತಿ ಗ್ರಾಹಯತಿ। 'ನೇದಂ ರಜತಮ್, ಶುಕ್ತಿಕೇಯಮ್' ಇತಿ ಯಥಾ। ತಸ್ಮಾತ್, 'ಶುಕ್ತಿಕೇಯಮ್' ಇತ್ಯೇವ ನಿರಾಕಾಙ್ಕ್ಷಂ ವಾಕ್ಯಮ್। 'ನೇದಂ ರಜತಮ್' ಇತ್ಯನುವಾದಃ। ಅತ ಏವ ಆಖ್ಯಾತಪದಸ್ಯ ವಾಕ್ಯತ್ವೇ ಕ್ರಿಯಾಜ್ಞಾನಾದೇವ ತತ್ಸಾಧನಮಾತ್ರೇಽಪಿ ಪ್ರತೀತಿಸಿದ್ಧೇಃ; ಪದಾನ್ತರಾಣಿ ನಿಯಮಾಯ, ಅನುವಾದಾಯ ವಾ ಇತಿ ನ್ಯಾಯವಿದಃ। ತಥಾ ಚಾಹುಃ— 'ಯಜತಿಚೋದನಾ ದ್ರವ್ಯದೇವತಾಕ್ರಿಯಾಸಮುದಾಯೇ ಕೃತಾರ್ಥತ್ವಾತ್' ಇತಿ। ಅಪರೇ ತು 'ಯಜ್ಞಂ ವ್ಯಾಖ್ಯಾಸ್ಯಾಮಃ, ದ್ರವ್ಯಂ ದೇವತಾ ತ್ಯಾಗಃ' ಇತಿ। ಕಥಂ ಕ್ರಿಯಾ

---

1. ಅಜ್ಞಾನನಾಶದಲ್ಲಿ ಶಬ್ದವ್ಯಾಪಾರವೇನೂ ಇಲ್ಲದ್ದರಿಂದ, ಆ ನಾಶವು ತಾನೇ ಅವಶ್ಯವಾಗಿ ಆಗುವದೆಂಬುದನ್ನು ತಿಳಿಸಿಕೊಡುವದಕ್ಕಾಗಿ ಇಲ್ಲಿ ಬೇರೆಯಾಗಿ ಅದನ್ನು ಹೇಳಿದೆ ಎಂದು ಅಭಿಪ್ರಾಯ.

2. 'ಅದು ನೀನಾಗಿರುವೆ' ಎಂಬ ವಾಕ್ಯದ ಜ್ಞಾನವು 'ನೀನು ಸಂಸಾರಿಯಲ್ಲ' ಎಂದು ತಿಳಿಸಿಕೊಟ್ಟೇ ತನ್ನ ವಿಷಯವನ್ನು ತಿಳಿಸಬೇಕಾಗಿದೆ.

ಮಾತ್ರವಾಚಿನೋ ದ್ರವ್ಯದೇವತಾಭಿಧಾನಂ ನಾನ್ತರೀಯಕಂ ತದ್ವಿಷಯಜ್ಞಾನನಿಮಿತ್ತತ್ವಂ ವಿಹಾಯ । ಪ್ರತ್ಯಕ್ಷಬಾಧಸ್ಯಾಪಿ ಅಯಮೇವ ಪ್ರಕಾರಃ । ಅಸಂಪ್ರಯುಕ್ತವಿಷಯತ್ವಾದ್ ಬಾಧಸ್ಯ ॥

ತದೇವಮ್ ಅಶಬ್ದಮ್ ಅವಿದ್ಯಾವಿಲಯಂ ಮನ್ವಾನಃ ಶ್ರುತಿನ್ಯಾಯಕೋವಿದೋ ಭಗವಾನ್ ಭಾಷ್ಯಕಾರೋ ವಿಷಯಾತ್ ಪ್ರತ್ಯಙ್ ನಿರ್ದಿಶತಿ 'ಅಸ್ಯಾನರ್ಥಹೇತೋಃ ಪ್ರಹಾಣಾಯ' ಇತಿ । ಚತುರ್ಥೀಪ್ರಯೋಗೋಽಪಿ ವಿದ್ಯಾಸಾಮರ್ಥ್ಯಪ್ರಸಿದ್ಧಿಮ್ ಅಭಿಪ್ರೇತ್ಯ, ನ ತದರ್ಥಮ್ ಉಪಾದಾನಮ್ । ಪ್ರಯೋಜನತ್ವಂ ಚ ಪುರುಷಾಕಾಙ್ಕ್ಷಯಾ ಏವಾಸ್ತು ॥

(ಅರ್ಥ)

(ಆಕ್ಷೇಪ) :– ನಿರಾಸಮಾಡುವ ಮತ್ತು ನಿರಸ್ಯಮಾನವಾದ ಪದಾರ್ಥವನ್ನು ಹೇಳುವ ನಞ್ ಪದವೇ ಮುಂತಾದದ್ದು (ಇಲ್ಲಿ) ಶ್ರುತಿಯಲ್ಲಿಲ್ಲದಾಗ[1] ಅದನ್ನು ತಿರಸ್ಕಾರಮಾಡಿಯೇ (ನಿಶ್ಚಯಿಸುತ್ತದೆ) ಎಂಬುದು ಹೇಗೆ ?

(ಪರಿಹಾರ):–ಹೇಳುತ್ತೇವೆ, 'ಇದು ಬೆಳ್ಳಿಯಲ್ಲ' ಎಂದು ಎಲ್ಲಿ ವಿಪರ್ಯಾಸವನ್ನು ಮಾತ್ರ ನಿರಾಸಮಾಡುತ್ತಾರೋ, ವಸ್ತುತತ್ತ್ವವನ್ನು ತಿಳಿಸುವದಿಲ್ಲವೋ, ಅಲ್ಲಿ ಹಾಗಾಗಲಿ.[2] ಆದರೆ ಇಲ್ಲಿಯಾದರೋ ವಿಜ್ಞಾನವೇ ಹೇಗೆ ಹುಟ್ಟುತ್ತದೆಯೆಂದರೆ, ವಿರೋಧಿಯಾದ (ಅಜ್ಞಾನವನ್ನು) ನಿರಾಕರಣಮಾಡಿದಲ್ಲದೆ ತನ್ನ ಅರ್ಥವನ್ನು ಸಾಧಿಸುವಹಾಗಿಲ್ಲ. ತಕ್ಕಡಿಯ (ಒಂದು ಪರಡಿಯ) ಏರಿಸುವಿಕೆಯ ವ್ಯಾಪಾರವು (ಮತ್ತೊಂದರ) ಇಳಿಯಿಸುವಿಕೆಯಿಲ್ಲದೆ ಆಗಲಾರದೆ ಇರುವಂತೆಯೇ ಇದು. (ಅದು) ಹೇಗೆಂದರೆ, ಏರಿಸುವಿಕೆಯ ವ್ಯಾಪಾರವು ತನ್ನ ವಿಷಯವಾದ ತುಲಾದ್ರವ್ಯವನ್ನು ಮೇಲಿನ ದೇಶದ ಸಂಬಂಧವನ್ನು– ಅದೇ ಕಾಲದಲ್ಲಿಯೇ ಆ (ಮತ್ತೊಂದ)ಕ್ಕೆ ಕೆಳಗಿನ ಪ್ರದೇಶದ ಸಂಬಂಧವನ್ನು ಮಾಡಿಸಿದಲ್ಲದೆ– ಮಾಡಿಕೊಡಲಾರದು.[3] (ಅಲ್ಲಿ) ಏರಿಸುವಿಕೆಯನ್ನು ಮಾಡುವದಕ್ಕೆ ಕಾರಕವಾಗಿರುವ ಕೈಯವ್ಯಾಪಾರವೇ ಮುಂತಾದದ್ದು ತಗ್ಗಿಸುವಿಕೆಯಲ್ಲಿಯೂ ಕಾರಕವಾಗಿರುವದಿಲ್ಲ.[4]

---

1. 'ತತ್ ತ್ವಮಸಿ' ಎಂಬ ವಾಕ್ಯದಲ್ಲಿ ನಿಷೇಧವನ್ನು ತಿಳಿಸುವ 'ನ' ಮುಂತಾದ ಶಬ್ದಗಳ ಪ್ರಯೋಗವಿಲ್ಲದಿದ್ದರೂ 'ಇಂಥದ್ದಲ್ಲ' ಎಂದು ಮತ್ತೊಂದನ್ನು ಅಲ್ಲಗಳೆಯುವ ಶಬ್ದವಿಲ್ಲದಿದ್ದರೂ ಎಂದರ್ಥ.

2. ಅಲ್ಲಿ 'ಅಲ್ಲ' ಎಂದು ನಿರಾಸಮಾಡುವ ಪದವೂ 'ಇಂಥದ್ದಲ್ಲ' ಎಂದು ನಿರಾಸಮಾಡಲ್ಪಡುವದನ್ನು ಹೇಳುವ ಪದವೂ ಇರಬೇಕೆಂದಾಗಲಿ.

3. ತಕ್ಕಡಿಯ ದಂಡಿಗೆಯ ಒಂದು ಪಕ್ಕವನ್ನೇರಿಸಿದಮಾತ್ರದಿಂದಲೇ ಇನ್ನೊಂದು ಪಕ್ಕವು ಇಳಿಯುವದು.

4. ಆ ಪಕ್ಕವನ್ನು ಇಳಿಸುವದಕ್ಕೆ ನಮ್ಮ ಪ್ರಯತ್ನವೇನೂ ಆಗುವದಿಲ್ಲ ; ಆದರೂ ಅದು ಅವಶ್ಯವಾಗಿ ಇಳಿದೇತೀರುವದು.

ಏಕೆಂದರೆ ಹಾಗೆಂದು ಪ್ರಸಿದ್ಧಿಯಿಲ್ಲ. (ಅದು) ಅನುಭವಕ್ಕೆ ವಿರುದ್ಧವೂ ಆಗಿರುತ್ತದೆ.[1] ಅಂತೂ ಹೀಗೆ ವಿಪರ್ಯಾಸದಿಂದ (ತಪ್ಪಾಗಿ) ತಿಳಿದುಕೊಂಡಿರುವ ವಸ್ತುವಿನ ತತ್ತ್ವವನ್ನು ತಿಳಿಸುವ ಶಬ್ದನಿಮಿತ್ತವಾದ ತನ್ನ ಜ್ಞಾನವ್ಯಾಪಾರವು 'ನಾನು ಕರ್ತೃವಲ್ಲ, ನಾನು ಬ್ರಹ್ಮವು' ಎಂದು ತಿಳಿಯಿಸುತ್ತದೆ.[2] 'ಇದು ಬೆಳ್ಳಿಯಲ್ಲ, ಕಪ್ಪೆಯಚಿಪ್ಪು' ಎಂಬ ಹಾಗೆಯೇ (ಇದು). ಆದ್ದರಿಂದ ಇದು ಶುಕ್ತಿಕೆ ಎಂಬುದೇ ನಿರಾಕಾಂಕ್ಷವಾದ ವಾಕ್ಯವು, 'ಇದು ರಜತವಲ್ಲ' ಎಂಬುದು ಅನುವಾದವು.[3] ಆದ್ದರಿಂದಲೇ ಆಖ್ಯಾತಪದವು ವಾಕ್ಯವಾಗಿರುವದರಿಂದ ಕ್ರಿಯಾಜ್ಞಾನದಿಂದಲೇ ಅದರ ಸಾಧನದಲ್ಲಿಯೂ ಜ್ಞಾನವು ಸಿದ್ಧವಾಗುವದರಿಂದ, ಮಿಕ್ಕ ಪದಗಳು ನಿಯಮಕ್ಕಾಗಿ ಅಥವಾ ಅನುವಾದಕ್ಕಾಗಿ (ಪ್ರಯುಕ್ತವಾಗಿರುತ್ತವೆ) ಎಂದು (ಶಬ್ದವ್ಯಾಪಾರ)ನ್ಯಾಯವನ್ನು ಬಲ್ಲವರು ಹೇಳುತ್ತಾರೆ.[4] ಆದ್ದರಿಂದಲೇ "ಯಾಗಚೋದನೆಯು ದ್ರವ್ಯ, ದೇವತೆ, ಕ್ರಿಯ–ಇವುಗಳ ಸಮುದಾಯದಲ್ಲಿ (ಪ್ರವರ್ತಿಸುತ್ತದೆ) ; ಏಕೆಂದರೆ (ಆಗ) ಕೃತಾರ್ಥವಾಗುತ್ತದೆ" (ಜೈ.ಸೂ. ೪–೨–೨೭)[5] ಎನ್ನುತ್ತಾರೆ. ಮತ್ತೆ ಕೆಲವರಾದರೋ "ಯಜ್ಞವನ್ನು ವ್ಯಾಖ್ಯಾನಮಾಡುತ್ತೇವೆ ; ದ್ರವ್ಯ, ದೇವತೆ, ತ್ಯಾಗ– (ಇದೇ ಯಜ್ಞವು)[6] ಎಂದು ಹೇಳುತ್ತಾರೆ. ಕ್ರಿಯಾಮಾತ್ರವಾಚಕವಾದ (ಯಜ್ಞಶಬ್ದವು) ದ್ರವ್ಯದೇವತೆಗಳನ್ನು ಹೇಳುವದೆಂಬುದು ಅದರ ವಿಷಯದ ಜ್ಞಾನವು ಅವಶ್ಯವಾಗಿ (ತಾನೇ) ಆಗುತ್ತದೆ– ಎಂಬುದನ್ನು ಬಿಟ್ಟರೆ ಹೇಗೆತಾನೆ[7] (ಆದೀತು ?) ಪ್ರತ್ಯಕ್ಷಬಾಧೆಗೂ ಇದೇ ಪ್ರಕಾರವು ;

---

1. ನಾವು ಒಂದು ಕಡೆಯ ತಕ್ಕಡಿಯ ಭಾಗವನ್ನು ಏರಿಸುವದಕ್ಕೆ ಮಾಡಿದ ಪ್ರಯತ್ನವೇ ಇನ್ನೊಂದನ್ನು ಇಳಿಯಿಸುವದಕ್ಕೂ ಕಾರಣವಾಯಿತು–ಎಂದು ಯಾರೂ ತಿಳಿಯುವದಿಲ್ಲ.

2. ಅವಶ್ಯವಾಗಿ ತಾನೇ ಆಗುವ ವಿಪರೀತಜ್ಞಾನದ ನಾಶ, ಬ್ರಹ್ಮವು ತಾನೆಂಬ ಜ್ಞಾನದ ಉದಯ– ಇವೆರಡಕ್ಕೂ ಕಾರಣವಾಗುತ್ತದೆ ಎಂದರ್ಥ.

3. ನಾನು ಬ್ರಹ್ಮವೆಂದಾದಮೇಲೆ, ಕರ್ತನಲ್ಲವೆಂದಾಯಿತು ; ಇದು ಕಪ್ಪೆಯಚಿಪ್ಪೇ ಎಂದಾದದ್ದರಿಂದ ಇದು ಬೆಳ್ಳಿಯಲ್ಲ– ಎಂದಾಯಿತು ಎಂದಂತೆಯೇ ಇದು. ಪಂ. ವಿ. ಮಾಂಡೂಕ್ಯದಲ್ಲಿಯೂ ಬ್ರಹ್ಮಸೂತ್ರಭಾಷ್ಯದಲ್ಲಿಯೂ ಅಧ್ಯಾರೋಪಿತನಿಷೇಧಮಾತ್ರದಿಂದ ಆತ್ಮಜ್ಞಾನವಾಗುವದೆಂದು ಪ್ರತಿಪಾದಿಸಿರುವದಕ್ಕೆ ಇದು ವಿರುದ್ಧವೆಂತ ಕಾಣುತ್ತದೆ.

4. ಇದು ಎಲ್ಲಿಯ ವಾಕ್ಯವೆಂದು ತಿಳಿಯಲಿಲ್ಲ ; ವ್ಯಾಖ್ಯಾನದಲ್ಲಿ 'ಭಾಷ್ಯ'ವೆಂಬ ಮಾತಿರುವದರಿಂದ ಶಾಬರಭಾಷ್ಯದಲ್ಲಿದೆ ಎಂದು ತಿಳಿಯಬೇಕಾಗಿದೆ.

5. ಕ್ರಿಯೆಯು ಪ್ರಧಾನವಾಗಿ ದ್ರವ್ಯದೇವತೆಗಳು ಅದರಲ್ಲಿ ಸೇರಿಹೋಗಿದೆ ಎಂಬುದನ್ನು ಇದು ತಿಳಿಸುತ್ತದೆ.

6. ಇದು ಯಾವ ಸೂತ್ರವೆಂಬುದು ತಿಳಿಯಲಿಲ್ಲ. ಬೋಧಾಯನ ಶ್ರೌತಸೂತ್ರವಿರಬಹುದು. ಇದಕ್ಕೂ ಜೈಮಿನಿಯಸೂತ್ರದ ಅರ್ಥದಲ್ಲಿಯೇ ತಾತ್ಪರ್ಯವಿದೆ.

7. ಯಜ್ಞಶಬ್ದಪ್ರಯೋಗಮಾತ್ರದಿಂದಲೇ ದ್ರವ್ಯದೇವತೆಗಳನ್ನು ಅವಶ್ಯವಾಗಿ ಗ್ರಹಿಸಬೇಕು. ಏಕೆಂದರೆ ಯಜ್ಞಶಬ್ದದ ಅರ್ಥದಲ್ಲಿಯೇ ಅವೂ ಸೇರಿಕೊಂಡುಬಿಟ್ಟಿರುತ್ತವೆ.

ಏಕೆಂದರೆ ಬಾಧೆ ಎಂಬುದು (ಇಂದ್ರಿಯ)ಸಂಪ್ರಯುಕ್ತವಲ್ಲದ್ದರ ವಿಷಯವಾಗಿರುತ್ತದೆ.[1]

ಅಂತೂ ಹೀಗೆ ಅವಿದ್ಯಾನಾಶವು ಶಾಬ್ದವಲ್ಲವೆಂಬ ಅಭಿಪ್ರಾಯದಿಂದ[2] ಶ್ರುತಿನ್ಯಾಯಕೋವಿದರಾದ ಭಗವಾನ್ ಭಾಷ್ಯಕಾರರು 'ಈ ಅನರ್ಥಹೇತುವಿನ ನಾಶಕ್ಕಾಗಿ' ಎಂದು ವಿಷಯಕ್ಕಿಂತ ಬೇರೆಯಾಗಿ (ಅವಿದ್ಯಾನಾಶವನ್ನು) ನಿರ್ದೇಶ ಮಾಡಿರುತ್ತಾರೆ. ಚತುರ್ಥೀ(ವಿಭಕ್ತಿ)ಯನ್ನು ಪ್ರಯೋಗಿಸಿರುವದೋ ಎಂದರೆ[3] ವಿದ್ಯಾಸಾಮರ್ಥ್ಯದಿಂದ ಸಿದ್ಧವಾಗುತ್ತದೆ ಎಂಬ ಅಭಿಪ್ರಾಯದಿಂದಲೇ ಹೊರತು, ಅದಕ್ಕಾಗಿ ತೆಗೆದುಕೊಂಡದ್ದಲ್ಲ.[4] ಪ್ರಯೋಜನತ್ವವೋ ಎಂದರೆ (ಅದನ್ನು) ಪುರುಷರು ಬಯಸುತ್ತಾರೆಂಬುದರಿಂದಲೇ ಆಗಬಹುದಾಗಿದೆ.

## ವಿದ್ಯಾಪ್ರಾಪ್ತಿಗಾಗಿ ಎಂಬುದರ ಅಭಿಪ್ರಾಯ

**(ಪಂಚಪಾದಿಕಾ)**

೭೩. ನ ಹಿ ವಿದ್ಯಾ ಗವಾದಿವತ್ ತಟಸ್ಥಾ ಸಿಧ್ಯತಿ ಯೇನಾಪ್ತಿಃ ಪೃಥಗುಪಾದೀಯೇತ । ಸಾ ಹಿ ವೇದಿತ್ರಾಶ್ರಯಾ ವೇದ್ಯಂ ತಸ್ಮೈ ಪ್ರಕಾಶಯನ್ತ್ಯೇವ ಉದೇತಿ । ಸತ್ಯಮ್ ಏವಮನ್ಯತ್ರ। ಪ್ರಕೃತೇ ಪುನರ್ವಿಷಯೇ ವಿದ್ಯಾ ಉದಿತಾಪಿ ನ ಪ್ರತಿಷ್ಠಾಂ ಲಭತೇ । ಅಸಂಭಾವನಾವಿಪರೀತಭಾವನಾ[5]ಭಿಭೂತವಿಷಯತ್ವಾತ್ । ತಥಾ ಚ ಲೋಕೇ ಅಸ್ಮಿನ್ ದೇಶೇ ಕಾಲೇ ಚ ಇದಂ ವಸ್ತು ಸ್ವರೂಪತ ಏವ ನ ಸಂಭವತೀತಿ ದೃಢಭಾವಿತಂ ಯದಿ ತತ್ ಕಥಞ್ಚಿತ್ ದೈವವಶಾತ್ ಉಪಲಭ್ಯೇತ । ತದಾ ಸ್ವಯಮ್ ಈಕ್ಷಮಾಣೋಽಪಿ ತಾವತ್

---

1. ಬೆಳ್ಳಿ ಎಂಬ ಜ್ಞಾನವು ಇಂದ್ರಿಯಸಂಪ್ರಯುಕ್ತವಿಷಯವಲ್ಲ ; ಆದ್ದರಿಂದ ಶುಕ್ತಿಜ್ಞಾನದಿಂದ ಅದು ತಾನೇ ಹೋಗಿಬಿಡುತ್ತದೆ ಎಂದು ಅಭಿಪ್ರಾಯ.

2. 'ಅಸ್ಯಾನರ್ಥಹೇತೋಃ ಪ್ರಹಾಣಾಯ' ಎಂಬಲ್ಲಿ ಅನರ್ಥನಾಶವು ಶಾಬ್ದವ್ಯಾಪಾರದ ಫಲವೆಂಬ, ಅಥವಾ ತಾನೇ ಆಗುವದೆಂಬ, ಕಾರಣದಿಂದ.

3. 'ಪ್ರಹಾಣಾಯ' ಎಂಬ ಚತುರ್ಥೀವಿಭಕ್ತಿಯು ಅವಿದ್ಯಾನಾಶವೇ ಪ್ರಯೋಜನವೆಂದು ತಿಳಿಸುವದಿಲ್ಲವೆ ?– ಎಂಬ ಶಂಕೆಗೆ ಪರಿಹಾರವಿದು.

4. ಅದು ಸಾಕ್ಷಾತ್ ಪ್ರಯೋಜನವೇ ಎಂಬುದನ್ನು ತಿಳಿಸಬೇಕೆಂಬ ಅಭಿಪ್ರಾಯದಿಂದಲ್ಲ– ಎಂದರ್ಥ. ಅಧ್ಯಾಸರೂಪವಾದ ಅವಿದ್ಯೆಯನ್ನು ಕುರಿತೇ ವಿಸ್ತಾರವಾದ ವಿಚಾರ ಮಾಡಿ 'ಇದರ ನಾಶಕ್ಕಾಗಿ' ಎಂದು ಬರೆದಿದ್ದರೂ ಇದು ಸಾಕ್ಷಾತ್ಪ್ರಯೋಜನವಲ್ಲವೆಂಬುದು ಹೇಗೆ ಸಿದ್ಧವಾಗುತ್ತದೆ ?– ಎಂಬ ಶಂಕೆಗೆ ಒಂದು ಪರಿಹಾರವು ಇಲ್ಲಿ ಬೇಕೆನಿಸುತ್ತದೆ.

5. 'ವಿಪರೀತಭಾವನಾ' ಎಂಬ ಮಾತು ಕ॥ ಪಾಠದಲ್ಲಿಲ್ಲ ; ಅದಿಲ್ಲದಿದ್ದರೂ ಸಾಗುತ್ತದೆ ಎಂತ ಕಾಣುತ್ತದೆ. 'ವಿಪರೀತಸಂಭಾವನಾ' ಎಂಬ ಪಾಠವೂ ಇದೆ.

ನಾಧ್ಯವಸ್ಯತಿ ಯಾವತ್ ತತ್ಸಂಭವಂ ನಾನುಸರತಿ । ತೇನ ಸಮ್ಯಗ್ಜ್ಞಾನಮಪಿ ಸ್ವವಿಷಯೇ ಅಪ್ರತಿಷ್ಠಿತಮ್ ಅನವಾಪ್ತಮಿವ ಭವತಿ । ತೇನ ತತ್ಸ್ವರೂಪಪ್ರತಿಷ್ಠಾಯೈ ತರ್ಕಂ ಸಹಾಯೀಕರೋತಿ । ಅತ ಏವ "ಪ್ರಮಾಣಾನಾಮನುಗ್ರಾಹಕಸ್ತರ್ಕಃ" ಇತಿ ತರ್ಕವಿದಃ ॥

(ಅರ್ಥ)

(ಆಕ್ಷೇಪ) : ವಿದ್ಯೆಯು ಗೋವು ಮುಂತಾದವುಗಳಂತೆ ತಟಸ್ಥವಾಗಿ[1] ಸಿದ್ಧವಾಗುವದಲ್ಲವಲ್ಲ ? ಹಾಗಿದ್ದರಲ್ಲವೆ, ಅದನ್ನು ಬೇರೆಯಾಗಿ ಹೇಳಬಹುದಾಗಿತ್ತು ? ಅದು ಅರಿಯುವವನನ್ನು ಆಶ್ರಯಿಸಿಕೊಂಡು ಅರಿಯಬೇಕಾದದ್ದನ್ನು ಅವನಿಗೆ ತಿಳಿಸಿಕೊಡುತ್ತಲೇ ಹುಟ್ಟುತ್ತದೆಯಲ್ಲವೆ ?

(ಪರಿಹಾರ) ; ನಿಜ. ಮಿಕ್ಕ ಕಡೆಗಳಲ್ಲಿ[2] ಹೀಗೆಯೇ. ಆದರೆ ಪ್ರಕೃತ ವಿಷಯದಲ್ಲಿ ವಿದ್ಯೆಯು ಹುಟ್ಟಿದರೂ ಪ್ರತಿಷ್ಠೆಯನ್ನು ಪಡೆಯದೆ ಇರುತ್ತದೆ;[3] ಏಕೆಂದರೆ (ಇದರ) ವಿಷಯವನ್ನು ಅಸಂಭಾವನೆಯೂ ವಿಪರೀತಭಾವನೆಯೂ ತಿರಸ್ಕರಿಸಿರುತ್ತವೆ.[4] ಆದ್ದರಿಂದಲೇ ಲೋಕದಲ್ಲಿ ಇಂಥ ದೇಶದಲ್ಲಿ ಇಂಥ ಕಾಲದಲ್ಲಿ ಈ ವಸ್ತು ಸ್ವರೂಪದಿಂದ ಇರುವಹಾಗಿಲ್ಲವೆಂಬ ದೃಢಭಾವನೆಯಿದ್ದು, ಅದು ಹೇಗೋ ದೈವವಶದಿಂದ ಕಂಡುಬಂದರೆ ಆಗ ತಾನೇ ನೋಡುತ್ತಿದ್ದರೂ ಅದು ಇರಬಹುದೆಂಬ (ನಂಬಿಕೆಯನ್ನು) ಅನುಸರಿಸುವದಿಲ್ಲವೋ ಅಲ್ಲಿಯವರೆಗೆ (ಅದು ಇದೆ) ಎಂದು ನಿಶ್ಚಯಿಸುವದಿಲ್ಲ. ಅದರಿಂದ ಸಮ್ಯಗ್ಜ್ಞಾನವು ಕೂಡ ತನ್ನ ವಿಷಯದಲ್ಲಿ ಅಪ್ರತಿಷ್ಠಿತವಾಗಿ ಉಂಟಾಗದೆ ಇದರಂತೆಯೇ ಆಗಿರುತ್ತದೆ.[5] ಆದ್ದರಿಂದ ಅದರ ಸ್ವರೂಪದ ಪ್ರತಿಷ್ಠೆಗಾಗಿ ತರ್ಕ

---

1. ಗೋವು ತನಗಿಂತ ಬೇರೆಯಿದ್ದುಕೊಂಡಿದ್ದು ಪ್ರಯತ್ನದಿಂದ ಪಡೆದುಕೊಳ್ಳತಕ್ಕದ್ದು, ವಿದ್ಯೆ ಹಾಗಲ್ಲ. ತನ್ನಲ್ಲಿಯೇ ಹುಟ್ಟಿ ತನ್ನನ್ನೇ ಆಶ್ರಯಿಸಿಕೊಂಡಿರುವದಾಗಿದೆ. ಅದನ್ನು ಮತ್ತೆ ಪಡೆದುಕೊಳ್ಳತಕ್ಕದ್ದೇನಿದೆ ?– ಎಂದು ಶಂಕೆ.

2. ಮಿಕ್ಕ ಪ್ರತ್ಯಕ್ಷಜ್ಞಾನಗಳ ವಿಷಯದಲ್ಲಿ, ವಿಷಯದ ಅಪರೋಕ್ಷವಾದ ಇದು ಎಂಬ ರೂಪದ ಜ್ಞಾನವುಂಟಾಗುತ್ತದೆ ; 'ಪ್ರಾಪ್ತಿ' ಎಂದರೆ ವಿಷಯುಮೊಡನೆ ಅಪರೋಕ್ಷ್ಯನಿಶ್ಚಯವು. ಅದು ಇಲ್ಲಿ ಸಂಭವಿಸುವದಿಲ್ಲ. ಪಂ. ವಿ.

3. ಇಲ್ಲಿ ವಿದ್ಯೆ ಎಂದರೆ ಶಕ್ತಿತಾತ್ಪರ್ಯದೊಡನೆ ಶಬ್ದದಿಂದಾಗುವ ಪ್ರಮಾಣಜ್ಞಾನವು. ಅದರ 'ಪ್ರತಿಷ್ಠೆ' ಎಂದರೆ ವಿಷಯದ ಅಪರೋಕ್ಷ್ಯವು. ಪಂ. ವಿ.

4. 'ಅಸಂಭಾವನೆ' ಎಂದರೆ ಚಿತ್ತವು ಬ್ರಹ್ಮಾತ್ಮಭಾವನಾಪ್ರಾಬಲ್ಯನಿಮಿತ್ತದಿಂದಾದ ಏಕಾಗ್ರವೃತ್ತಿಗೆ ಯೋಗ್ಯವಲ್ಲದೆ ಇರುವದು ; 'ವಿಪರೀತಭಾವನೆ' ಎಂದರೆ ಶರೀರವೇ ಮುಂತಾದದ್ದರಲ್ಲಿ ಅಧ್ಯಾಸದ ಸಂಸ್ಕಾರವು ಪ್ರಬಲವಾಗಿರುವದು. ಪಂ. ವಿ.

5. ಸಮ್ಯಗ್ಜ್ಞಾನವುಂಟಾದರೂ, ಅಪರೋಕ್ಷನಿಶ್ಚಯವಾಗಿರುವದಿಲ್ಲ ಎಂದರ್ಥ.

ವನ್ನು ಸಹಾಯಕ್ಕೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ 'ಪ್ರಮಾಣಗಳಿಗೆ ತರ್ಕವು ಅನುಗ್ರಾಹಕವು'[1] ಎಂದು ತರ್ಕವನ್ನು ಬಲ್ಲವರು ಹೇಳುತ್ತಾರೆ.

(ಪಂಚಪಾದಿಕಾ)

೭೪. ಅಥ ಕೋಽಯಂ ತರ್ಕೋ ನಾಮ? ಯುಕ್ತಿಃ । ನನು ಪರ್ಯಾಯ ಏಷಃ । ಸ್ವರೂಪಮಭಿಧೀಯತಾಮ್ । ಇದಮುಚ್ಯತೇ । ಪ್ರಮಾಣಶಕ್ತಿವಿಷಯತತ್ಸಂಭವಾಸಂಭವ[2]ಪರಿಚ್ಛೇದಾತ್ಮಾ ಪ್ರತ್ಯಯಃ । ನನ್ವೇವಂ ತರ್ಕಸಾಪೇಕ್ಷಂ ಸ್ವಮರ್ಥಂ ಸಾಧಯತೋಽನಪೇಕ್ಷತ್ವಹಾನೇಃ, ಅಪ್ರಾಮಾಣ್ಯಂ ಸ್ಯಾತ್ । ನ ಸ್ಯಾತ್ । ಸ್ವಮಹಿಮ್ನೈವ ವಿಷಯಾಧ್ಯವಸಾಯಹೇತುತ್ವಾತ್ । ಕ್ವ ತರ್ಹಿ ತರ್ಕಸ್ಯ ಉಪಯೋಗಃ ? ವಿಷಯಾಸಂಭವಾಶಙ್ಕಾಯಾಮ್ । ತಥಾ ಅನುಭವಫಲಾನುತ್ಪತ್ತೌ ತತ್ಸಂಭವಪ್ರದರ್ಶನಮುಖೇನ ಫಲಪ್ರತಿಬನ್ಧವಿಗಮೇ । ತಥಾ ಚ ತತ್ತ್ವಮಸಿವಾಕ್ಯೇ ತ್ವಂಪದಾರ್ಥೋ ಜೀವಃ, ತತ್ಪದಾರ್ಥಬ್ರಹ್ಮಸ್ವರೂಪತಾಮ್ ಆತ್ಮನೋಽಸಂಭಾವಯನ್, ವಿಪರೀತಂ ಚ ರೂಪಂ ಮನ್ವಾನಃ, ಸಮುತ್ಪನ್ನೇಽಪಿ ಜ್ಞಾನೇ ತಾವನ್ನಾಧ್ಯವಸ್ಯತಿ ಯಾವತ್ ತರ್ಕೇಣ ವಿರೋಧಮಪನೀಯ ತದ್ರೂಪತಾಮ್ ಆತ್ಮನೋ ನ ಸಂಭಾವಯತಿ । ತತಃ ಪ್ರಾಗ್ ವಿದ್ಯಾ ಉದಿತಾಪಿ ವಾಕ್ಯಾತ್ ಅನವಾಪ್ತೇವ ಭವತಿ । ಅವಾಪ್ತಿಪ್ರಕಾರಶ್ಚ ವೇದಾನ್ತೇಷ್ವೇವ ನಿರ್ದಿಷ್ಟಃ ಸಾಕ್ಷಾದನುಭವಫಲೋದ್ದೇಶೇನ । ತೇನೋಚ್ಯತೇ 'ವಿದ್ಯಾಪ್ರತಿಪತ್ತಯೇ' ಇತಿ ॥

(ಅರ್ಥ)

(ಪ್ರಶ್ನೆ) : ಇನ್ನು ಈ ತರ್ಕವೆಂಬುದು ಯಾವದು ?

(ಉತ್ತರ) : ಯುಕ್ತಿ.

(ಆಕ್ಷೇಪ) : ಇದು (ಬರಿಯ) ಪರ್ಯಾಯವು. (ತರ್ಕದ) ಸ್ವರೂಪವನ್ನು ಹೇಳಿರಿ.

(ಪರಿಹಾರ) : ಇಗೋ ಹೇಳುತ್ತೇವೆ. ಪ್ರಮಾಣ, (ಅದರ) ಶಕ್ತಿ, ವಿಷಯ, (ಅದರ) ಸಂಭವ (ಅಥವಾ) ಅಸಂಭವ– ಇವುಗಳನ್ನು ಗೊತ್ತುಪಡಿಸುವ ರೂಪದ ಪ್ರತ್ಯಯವು (ತರ್ಕವು).[3]

---

1. 'ತತ್ತ್ವಜ್ಞಾನವಿಷಯಧ್ಯಾನಲಕ್ಷಣಾನುಗ್ರಹೋದ್ಭೂತಾತ್ ಪ್ರಸನ್ನಾದನನ್ತರಂ ಪ್ರಮಾಣಸಾಮರ್ಥ್ಯಾತ್ ತತ್ತ್ವಜ್ಞಾನಮುತ್ಪದ್ಯತೇ ಇತ್ಯೇವ ತತ್ತ್ವಜ್ಞಾನಾರ್ಥಃ'– ಎಂಬ ನ್ಯಾಯಭಾಷ್ಯ ೧-೪–೪೦ರ ಆಧಾರದಿಂದ ಈ ವಾಕ್ಯವನ್ನು ಬರೆದಿರುತ್ತದೆ ಎಂತ ತೋರುತ್ತದೆ.

2. 'ಅಸಂಭವ' ಎಂಬ ಮಾತು ಕ॥ ಪಾಠದಲ್ಲಿಲ್ಲ.

3. ಪ್ರಮಾಣಾದಿಗಳ ತತ್ತ್ವದ ವಿಷಯಕ್ಕೆ ಸಂಭವ ಅಥವಾ ಅಸಂಭವ ಎಂಬುದನ್ನು ತಿಳಿಸುವ ಪ್ರತ್ಯಯವೇ ತರ್ಕವು, ಅದು ನಿಶ್ಚಯರೂಪವಾದದ್ದಲ್ಲ. ಪಂ. ವಿ.

(ಆಕ್ಷೇಪ) : ಹೀಗೆ ತರ್ಕಸಾಪೇಕ್ಷವಾಗಿ ತನ್ನ ಅರ್ಥವನ್ನು ಸಾಧಿಸುವ (ಪ್ರಮಾಣಕ್ಕೆ) ಅನಪೇಕ್ಷತ್ವವು ಇಲ್ಲವಾಗುವದರಿಂದ[1] (ಅದಕ್ಕೆ) ಅಪ್ರಾಮಾಣ್ಯವು ಆದೀತು.

(ಪರಿಹಾರ) : ಆಗಲಾರದು. ಏಕೆಂದರೆ ( ಅದು ) ತನ್ನ ಮಹಿಮೆ ಯಿಂದಲೇ ವಿಷಯವನ್ನು ನಿಶ್ಚಯಿಸುವದಕ್ಕೆ ಕಾರಣವಾಗಿರುತ್ತದೆ.

(ಆಕ್ಷೇಪ) : ಹಾಗಾದರೆ ತರ್ಕದ ಉಪಯೋಗವೆಲ್ಲಿ ?[2]

(ಪರಿಹಾರ) : ವಿಷಯವು ಸಂಭವಿಸುವದಿಲ್ಲವೆಂಬ ಶಂಕೆಯುಂಟಾಗಲು (ಇದ್ದು) ಹಾಗೆಯೇ ಅನುಭವರೂಪವಾದ ಫಲವುಂಟಾಗದೆ ಇರುವಲ್ಲಿ ಅದು ಸಂಭವಿಸುವದೆಂದು ತೋರಿಸಿಕೊಡುವ ಮೂಲಕ ಫಲಕ್ಕಿರುವ ಅಡ್ಡಿಯನ್ನು ತೆಗೆದುಹಾಕುವದರಲ್ಲಿ[3] (ಅದಕ್ಕೆ ಉಪಯೋಗ).

---

1. ಸ್ವತಂತ್ರವಾಗಿಯೇ ಪ್ರಮಾಣವು ತನ್ನ ವಿಷಯವನ್ನು ತಿಳಿಸಲಾರದೆಂದಾಗುವದರಿಂದ.

2. ಪ್ರಮಾಣವೇ ತನ್ನ ವಿಷಯವನ್ನು ಸರಿಯಾಗಿ ತಿಳಿಸಿಬಿಡುವದಾದರೆ ತರ್ಕವೇತಕ್ಕೆ?

3. ಇದರ ಅಭಿಪ್ರಾಯವನ್ನು ಪಂ. ವಿ.ದಲ್ಲಿ ಎರಡು ವಿಧವಾಗಿ ವಿವರಿಸಿರುತ್ತದೆ :- (೧) ಬ್ರಹ್ಮವೇ ಎಲ್ಲಾ ಜ್ಞಾನಕ್ಕೂ ಉಪಾದಾನವಾದ್ದರಿಂದ, ಶಬ್ದಪ್ರಮಾಣದಿಂದುಂಟಾಗುವ ಬ್ರಹ್ಮಾಕಾರಜ್ಞಾನಕ್ಕಿಂತ ತಾನು ಅಭಿನ್ನವಾಗಿರುವದರಿಂದ, ಅಥವಾ ಜ್ಞಾನವನ್ನುಂಟುಮಾಡುವದರಿಂದ ಬ್ರಹ್ಮವೂ ಮೊದಲೇ ಅಪರೋಕ್ಷವಾಗಿಯೇ ತೋರುತ್ತದೆ. ಆದರೆ ಚಿತ್ತಕ್ಕೆ ಅತಿಸೂಕ್ಷ್ಮವಸ್ತುವಿನಲ್ಲಿ ಏಕಾಗ್ರತೆಯಿಲ್ಲದ ದೋಷದಿಂದಲೂ ವಿಪರೀತಜ್ಞಾನದ ಸಂಸ್ಕಾರದ ದೋಷದಿಂದಲೂ ಪ್ರತಿಬಂಧವಾಗಿರುವದರಿಂದ ಭ್ರಾಂತಿಯಿಂದ ಪರೋಕ್ಷವಾಗಿ ಕಾಣುತ್ತದೆ; ಅಲ್ಲಿ ಅಪರೋಕ್ಷಜ್ಞಾನವಾಗುವದಕ್ಕೆಂದು ಯಜ್ಞಾದಿಗಳನ್ನೂ ಶಮಾದಿಗಳನ್ನೂ ಮತ್ತು ನಿದಿಧ್ಯಾಸನಾದಿಗಳನ್ನೂ ವಿಧಿಸಿರುವದರಿಂದ ಕಲ್ಮಷರೂಪವಾದ ಪ್ರತಿಬಂಧವು ಯಜ್ಞಾದಿಗಳಿಂದ ನಾಶವಾಗಿ ಶಮಾದಿಗಳಿಂದ ವಿಪರೀತಪ್ರವೃತ್ತಿದೋಷವು ತೊಲಗಿ ಮನನದಿಂದುಂಟಾದ ಪ್ರಮೇಯಾದಿಸಂಭಾವನೆ ಎಂಬ ಗುಣದಿಂದ ಉಜ್ಜ್ವಲವಾಗಿ ಅತಿಸೂಕ್ಷ್ಮವಾದ ಬ್ರಹ್ಮಾತ್ಮವಿಷಯದ ನಿದಿಧ್ಯಾಸನವು ಹೆಚ್ಚಳು ಏಕಾಗ್ರವೃತ್ತಿ ಎಂಬ ಗುಣವುಳ್ಳದ್ದಾಗಿ ಮನಸ್ಸು ಪಾರೋಕ್ಷ್ಯಭ್ರಾಂತಿಯನ್ನು ತೊಲಗಿಸಿಕೊಂಡು ಶಬ್ದದಿಂದಲೇ ಅಪರೋಕ್ಷನಿಶ್ಚಯಕ್ಕೆ ಕಾರಣವಾಗುತ್ತದೆ. ತರ್ಕವೆಂದರೆ ಸರ್ವಪ್ರತಿಬಂಧಗಳನ್ನೂ ತೊಲಗಿಸುವ ಚಿತ್ತದರ್ಪಣವು. (೨) ಅಥವಾ ಶಬ್ದವೇ ಬ್ರಹ್ಮದ ವಿಷಯದಲ್ಲಿ ಮೊದಲು ಪರೋಕ್ಷಜ್ಞಾನವನ್ನುಂಟುಮಾಡಿ ಮೇಲೆ ಹೇಳಿದ ಚಿತ್ತದರ್ಪಣದ ಸಹಾಯದಿಂದ ಎರಡನೆಯ ಅಪರೋಕ್ಷಜ್ಞಾನವನ್ನು ಉಂಟುಮಾಡುತ್ತದೆ. ಎರಡು ಪಕ್ಷದಲ್ಲಿಯೂ ಅಪರೋಕ್ಷಜ್ಞಾನಕ್ಕೆ ಪ್ರಯತ್ನಾಂತರವು ಬೇಕಾಗಿರುವದರಿಂದ 'ವಿದ್ಯಾಪ್ರಾಪ್ತಿ'ಗಾಗಿ ಎಂಬರ್ಥವು ಬರುವದಕ್ಕಾಗಿ 'ಪ್ರತಿಪತ್ತಿ'ಶಬ್ದವನ್ನು ಭಾಷ್ಯದಲ್ಲಿ ಪ್ರಯೋಗಿಸಿರುವದು ಸರಿ.

ವಿವರಣದಲ್ಲಿ ವರ್ಣಿಸಿರುವ ಈ ಅಪರೋಕ್ಷಜ್ಞಾನಪ್ರಾಪ್ತಿಪ್ರಕಾರವು ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ ಕಾಣಬರುವದಿಲ್ಲ.

ಆದ್ದರಿಂದಲೇ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ತ್ವಂಪದದ ಅರ್ಥವಾದ ಜೀವನು ತತ್ಪದದ ಅರ್ಥವಾದ ಬ್ರಹ್ಮಸ್ವರೂಪನು ತಾನೆಂಬುದು ಅಸಂಭಾವಿತವೆಂದು ತಿಳಿಸು (ಅವಕ್ಕೆ) ವಿಪರೀತವಾದ ರೂಪವು (ತನ್ನದೆಂದು) ತಿಳಿದುಕೊಂಡಿರುವದರಿಂದ ಜ್ಞಾನವು ಉಂಟಾಗಿದ್ದರೂ ಎಲ್ಲಿಯವರೆಗೆ ತರ್ಕದಿಂದ (ಈ) ವಿರೋಧವನ್ನು ಕಳೆದುಹಾಕಿ ಆ ರೂಪದವನು ತಾನೆಂಬುದನ್ನು ಸಂಭಾವಿತವೆಂದುಕೊಳ್ಳುವದಿಲ್ಲವೋ ಅಲ್ಲಿಯವರೆಗೆ (ಹಾಗೆಂದು) ನಿಶ್ಚಯಿಸಿಕೊಳ್ಳುವದಿಲ್ಲ. ಅದಕ್ಕಿಂತ ಮೊದಲು ವಾಕ್ಯದಿಂದ ವಿದ್ಯೆಯು ಹುಟ್ಟಿದ್ದರೂ ಪ್ರಾಪ್ತವಾಗದಂತೆಯೇ ಇರುತ್ತದೆ.[1] ಸಾಕ್ಷಾದನುಭವವೆಂಬ ಫಲವನ್ನು ಉದ್ದೇಶಿಸಿ (ಅದನ್ನು) ಪಡೆದುಕೊಳ್ಳುವ ಪ್ರಕಾರವನ್ನು ವೇದಾಂತಗಳಲ್ಲಿಯೇ ತಿಳಿಸಿರುತ್ತದೆ.[2] ಆದ್ದರಿಂದ[3] 'ವಿದ್ಯಾಪ್ರಾಪ್ತಿಗಾಗಿ' ಎಂದು (ಭಾಷ್ಯದಲ್ಲಿ) ಹೇಳಿದೆ.

## ಬ್ರಹ್ಮವಿದ್ಯೆಯಿಂದ ಅವಿದ್ಯೆಯು ಹೋಗಿದ್ದರೂ ಅಹಂಕಾರಾನುವೃತ್ತಿ

( ಪಂಚಪಾದಿಕಾ )

೭೫. ನನು ಆತ್ಮೈಕತ್ವವಿದ್ಯಾಪ್ರತಿಪತ್ತಿರ್ನಾನರ್ಥಹೇತುಪ್ರಹಾಣಾಯ ಪ್ರಭವತಿ । ತಥಾ ಹಿ । ಜೀವಸ್ಯ ಕಾರ್ಯಕಾರಣಸಂಘಾತಾದನ್ಯತ್ವಪ್ರತಿಪತ್ತೇಃ, ಬ್ರಹ್ಮಸ್ವರೂಪತಾಪ್ರತಿಪತ್ತಿರ್ನ ವಿಶಿಷ್ಯತೇ । ಉಭಯತ್ರಾಪಿ ಅಹಙ್ಕಾರಗ್ರನ್ಥೇಃ, ಮನುಷ್ಯಾಭಿಮಾನಪರ್ಯನ್ತಸ್ಯ ಅವಿಕಲಮ್ ಅನುವರ್ತಮಾನತ್ವಾತ್ । ಉಚ್ಯತೇ । ಭವತು ತತ್ರ ಅವಿದ್ಯಾಯಾ ಅನಿವರ್ತಿತತ್ವಾತ್ । ತತ್, ಇಹ ಪುನಃ ಅಪಸಾರಿತಾವಿದ್ಯಾದೋಷಂ ಬ್ರಹ್ಮಾತ್ಮಜ್ಞಾನಮ್ ಉದಯಮ್ ಆಸಾದಯತ್, ಕಥಂ ತನ್ನಿಮಿತ್ತಂ ಭೋಕ್ತ್ರಾದಿಗ್ರನ್ಥಿಪ್ರವಾಹಂ ನಾಪನಯತಿ ? ನ ಹಿ ಜೀವಸ್ಯ ಬ್ರಹ್ಮಾತ್ಮಾವಗಮಃ, ತದ್ವಿಷಯಾನವಗಮಮ್ ಅಬಾಧಮಾನ ಉದೇತಿ ॥

ನನು ಬ್ರಹ್ಮಜ್ಞಾನಾದಗ್ರಹಣಾಪಾಯೇ ತನ್ನಿಮಿತ್ತಸ್ಯ ಅಹಙ್ಕಾರಗ್ರನ್ಥೇಃ ತತ್ಕಾಲಮೇವ ಅಭಾವಃ ಪ್ರಸಜ್ಯೇತ । ನ । ಸಂಸ್ಕಾರಾದಪಿ ಅಗ್ರಹಣಾನುವೃತ್ತೇಃ

---

1. ವಾಕ್ಯಜ್ಞಾನವುಂಟಾದ ಬಳಿಕವೂ ಅಸಂಭಾವನೆಯುನ್ನು ಕಳೆದುಕೊಳ್ಳಬೇಕೆಂಬ ವಾದವು 'ಸಕೃದುತ್ಪನ್ನೈವ ಹ್ಯಾತ್ಮಪ್ರತಿಪತ್ತಿರವಿದ್ಯಾಂ ನಿವರ್ತಯತಿ' ಒಮ್ಮೆ ಹುಟ್ಟಿದ ಮಾತ್ರದಿಂದಲೇ ಆತ್ಮಜ್ಞಾನವು ಅವಿದ್ಯೆಯನ್ನು ಕಳೆಯುತ್ತದೆ (ಸೂ. ಭಾ. ೪-೧-೨) ಎಂಬ ಭಾಷ್ಯವಾಕ್ಯಕ್ಕೆ ವಿರುದ್ಧವೆಂದು ತೋರುತ್ತದೆ.

2. ಮನನನಿದಿಧ್ಯಾಸಗಳೇ ಈ ಸಾಕ್ಷಾದನುಭವಕ್ಕೆ ಸಾಧನಗಳು ಎಂಬ ಅಭಿಪ್ರಾಯದಿಂದ ಈ ವಾಕ್ಯವು ಬಂದಿರಬಹುದು.

3. ಸಾಕ್ಷಾದನುಭವಪ್ರಾಪ್ತಿಯು ಜ್ಞಾನಪ್ರಾಪ್ತಿಯಾದಮೇಲೂ ಆಗಬೇಕಾಗಿರುವದರಿಂದ.

ಸಂಭವಾತ್, ಭಯಾನುವೃತ್ತಿವತ್ । ತಥಾ ಹಿ ಸಮ್ಯಗ್ಜ್ಞಾನಾನ್ನಿವೃತ್ತಮಪಿ ಭಯಂ ಸ್ವಸಂಸ್ಕಾರಾದನುವರ್ತತೇ, ಕಮ್ಪಾದಿನಿಮಿತ್ತಂ ಚ ಭವತಿ । ತಥಾ ಅಗ್ರಹಣಮಪಿ ಸ್ವಸಂಸ್ಕಾರಾದನುವರ್ತತೇ ಅಹಙ್ಕಾರಗ್ರನ್ಥೇಶ್ಚ ನಿಮಿತ್ತಂ ಭವತೀತಿ ನ ಕಿಞ್ಚಿದನುಪಪನ್ನಮಸ್ತಿ ॥

(ಅರ್ಥ)

(ಆಕ್ಷೇಪ) : ಆತ್ಮೈಕತ್ವವಿದ್ಯಾಪ್ರಾಪ್ತಿಯು ಅನರ್ಥಹೇತುವನ್ನು ನಾಶಗೊಳಿಸುವದಕ್ಕೆ ಶಕ್ತವಲ್ಲ. ಹೇಗೆಂದರೆ, ಜೀವನು ಕಾರ್ಯಕಾರಣಸಂಘಾತಕ್ಕಿಂತ ಬೇರೆ ಎಂಬ ಅರಿವಿಗಿಂತ ಬ್ರಹ್ಮಸ್ವರೂಪನೇ (ತಾನೆಂಬ) ಅರಿವಿನಲ್ಲಿ (ಯಾವ) ವಿಶೇಷವೂ ಇಲ್ಲ.[1] ಏಕೆಂದರೆ ಎರಡು ಕಡೆಯಲ್ಲಿಯೂ ಮನುಷ್ಯಾಭಿಮಾನಪರ್ಯಂತವಾದ 'ಅಹಂಕಾರಗ್ರಂಥಿ'ಯು ಮುಕ್ತಾಗದೆ ಅನುಸರಿಸಿಕೊಂಡೇ ಬಂದಿರುತ್ತದೆ.

(ಪರಿಹಾರ) : (ಇದಕ್ಕೆ) ಹೇಳುತ್ತೇವೆ. ಅಲ್ಲಿ ಅವಿದ್ಯೆಯು ನಿವೃತ್ತಿಯಾಗಿಲ್ಲವಾಗಿ ಹಾಗಾಗಬಹುದು ; ಆದರೆ ಇಲ್ಲಿಯೋ ಅವಿದ್ಯಾದೋಷವನ್ನು ಕಳೆದೇ ಬ್ರಹ್ಮಾತ್ಮಜ್ಞಾನವು ಹುಟ್ಟುವದಾದ್ದರಿಂದ,[2] ಹೇಗೆತಾನೆ ಅದರ ನಿಮಿತ್ತದಿಂದಾದ ಭೋಕ್ತೃತ್ವನೇ ಮುಂತಾದ ಗ್ರಂಥಿಯು ಪ್ರವಾಹವನ್ನು ಹೋಗಲಾಡಿಸದೆ ಇದ್ದೀತು ? ಜೀವನಿಗೆ ತಾನು ಬ್ರಹ್ಮಸ್ವರೂಪವೆಂಬ ಜ್ಞಾನವು ಆ ವಿಷಯದ ಅಜ್ಞಾನವನ್ನು ನಾಶಮಾಡದೆ ಹುಟ್ಟಲಾರದಷ್ಟೆ ?

(ಆಕ್ಷೇಪ) : ಬ್ರಹ್ಮಜ್ಞಾನದಿಂದ ಅಗ್ರಹಣವು ಹೋದರೆ ಅದರ ನಿಮಿತ್ತದಿಂದಾಗಿದ್ದ ಅಹಂಕಾರದ ಗ್ರಂಥಿಯು ತತ್ಕಾಲದಲ್ಲಿಯೇ ಇಲ್ಲವಾಗಬೇಕಾಗುವದಲ್ಲ ?

(ಪರಿಹಾರ): ಹಾಗಲ್ಲ. ಸಂಸ್ಕಾರದಿಂದಲೂ ಅಗ್ರಹಣದ ಅನುವೃತ್ತಿಯು ಆಗಬಹುದಾಗಿದೆ.[3] ಅಂಜಿಕೆಯ ಅನುವೃತ್ತಿಯಂತೆ (ಇದನ್ನರಿಯಬೇಕು). ಹೇಗೆಂದರೆ, ಸರಿಯಾದ ತಿಳಿವಳಿಕೆಯಿಂದ ಅಂಜಿಕೆಯು ತೊಲಗಿದ್ದರೂ ತನ್ನ

---

1. ಫಲದಲ್ಲಿ ಯಾವ ಹೆಚ್ಚುಕಡಿಮೆಯೂ ಇಲ್ಲ.

2. ಕಾರ್ಯಕಾರಣಸಂಘಾತಕ್ಕಿಂತ ವ್ಯತಿರಿಕ್ತನಾದವನು ಆತ್ಮನು- ಎಂಬಲ್ಲಿ ಅವಿದ್ಯೆಯು ನಾಶವಾಗಿರುವದಿಲ್ಲ ; ತತ್ತ್ವಮಸ್ಯಾದಿವಾಕ್ಯಜ್ಞಾನದಿಂದ ಆಗುವ ಅಪರೋಕ್ಷಜ್ಞಾನವಾದರೋ ಅವಿದ್ಯೆಯನ್ನು ಕಳೆದೇ ಹುಟ್ಟುತ್ತದೆ.

3. ಅವಿದ್ಯಾಸಂಸ್ಕಾರವು ಅವಿದ್ಯಾನಾಶದಿಂದ ಉಂಟಾಗುತ್ತದೆ, ಅದೂ ಅವಿದ್ಯೆಯಂತೆ ಚೈತನ್ಯದ ದೋಷವೇ, ಆತ್ಮನನ್ನು ಆಶ್ರಯಿಸಿಕೊಂಡಿರುತ್ತದೆ, ಅದು ಅವಿದ್ಯೆಯ ಕಾರ್ಯವಲ್ಲ, ತತ್ತ್ವಜ್ಞಾನದಿಂದಲೇ ಕ್ರಮಕ್ರಮವಾಗಿ ಅದು ನಾಶವಾಗುತ್ತದೆ ; ಅಥವಾ ಅವಿದ್ಯಾಲೇಶವನ್ನೇ ಇಲ್ಲಿ ಅವಿದ್ಯಾಸಂಸ್ಕಾರವೆಂದಿವೆ- ಎಂದು ಪಂ. ವಿ.

ಸಂಸ್ಕಾರದಿಂದ ಮುಂದುವರಿದಿರುತ್ತದೆ, ನಡುಕವೇ ಮುಂತಾದದ್ದಕ್ಕೆ ಕಾರಣವೂ ಆಗಿರುತ್ತದೆ. ಹಾಗೆಯೇ ಅಗ್ರಹಣವೂ[1] ತನ್ನ ಸಂಸ್ಕಾರದಿಂದ ಮುಂದುವರಿದಿರುತ್ತದೆ, ಅಹಂಕಾರಗ್ರಂಥಿಗೂ ನಿಮಿತ್ತವಾಗುತ್ತದೆ;[2] ಆದ್ದರಿಂದ (ಇಲ್ಲಿ) ಯಾವದೂ ಹೊಂದುಗಡೆಯಾಗಲಿಲ್ಲವೆಂಬುದಿಲ್ಲ.

## ಸರ್ವವೇದಾಂತಗಳೂ ಆತ್ಮೈಕತ್ವವಿದ್ಯೆಗೇ ಪ್ರಾರಂಭವಾಗಿವೆ

(ಪಂಚಪಾದಿಕಾ)

೭೬. ನನು ನ ಸರ್ವೇ ವೇದಾನ್ತಾ ವಿದ್ಯಾರ್ಥಮೇವ ಆರಭ್ಯನ್ತೇ। ತದೇಕದೇಶಃ ಕ್ರಮಮುಕ್ತಿಫಲಾಯ, ಐಶ್ವರ್ಯಾಯ, ಅಭ್ಯುದಯಾರ್ಥಮ್, ಕರ್ಮಸಮೃದ್ಧಯೇ ಚ ಉಪಾಸನಾನಿ ವಿವಿಧಾನಿ ಉಪದಿಶನ್ ಉಪಲಭ್ಯತೇ। ಸತ್ಯಮ್। ಉಪಾಸನಾಕರ್ಮ ತು ಬ್ರಹ್ಮ। ತಚ್ಚ ಅವ್ಯಾಕೃತಾಶೇಷಪ್ರಪಞ್ಚಂ ಜೀವಸ್ಯ ನಿಜಂ ರೂಪಮ್ ಇತಿ ನಿರೂಪಯಿತುಮ್ ಅಖಿಲಪ್ರಪಞ್ಚಜನ್ಮಾದಿ ಹೇತುತಯಾ ಪ್ರಥಮಂ ಸರ್ವಾತ್ಮಕಂ ಸರ್ವಜ್ಞಂ ಸರ್ವಶಕ್ತಿ ಚ ಬ್ರಹ್ಮ ಲಕ್ಷಿತಮ್। ಅಸ್ಯಾಂ ಚ ಅವಸ್ಥಾಯಾಮ್ ಅನಪಾಕೃತ್ಯೈವ ಬ್ರಹ್ಮಣಿ ಪ್ರಪಞ್ಚಂ ತೇನ ತೇನ ಪ್ರಪಞ್ಚೇನ ಉಪಧೀಯಮಾನಂ ಬ್ರಹ್ಮ ತಸ್ಮೈತಸ್ಮೈ ಫಲಾಯ ಉಪಾಸ್ಯತ್ವೇನ ವಿಧೀಯತೇ, ದರ್ಶಪೂರ್ಣಮಾಸಾರ್ಥಾಪ್ರಣಯನಮಿವ ಗೋದೋಹನೋಪರಕ್ತಂ ಪಶುಭ್ಯಃ। ತಸ್ಮಾತ್, ತದರ್ಥೋಪಜೀವಿತ್ವಾದಿತರಸ್ಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತ ಇತಿ ನ ವಿರುಧ್ಯತೇ॥

ನನು ಅಬ್ರಹ್ಮೋಪಾಸನಾನ್ಯಪಿ ವೇದಾನ್ತೇಷು ದೃಶ್ಯನ್ತೇ ಪ್ರಾಣಾದಿ ವಿಷಯಾಣಿ। ಸತ್ಯಮ್। ತಾನ್ಯಪಿ ಕಾರ್ಯಬ್ರಹ್ಮಾವಾಪ್ತಿಕ್ರಮೇಣ ಮುಕ್ತಿ ಫಲಾನ್ಯೇವ। ವಕ್ಷ್ಯತ್ಯೇತತ್ಸೂತ್ರಕಾರಃ 'ಕಾರ್ಯಾತ್ಯಯೇ ತದಧ್ಯಕ್ಷೇಣ ಸಹಾತಃ ಪರಮ್ ಅಭಿಧಾನಾತ್' (ವೇ. ಸೂ. ೪-೩-೧೦) ಇತಿ॥

(ಅರ್ಥ)

(ಆಕ್ಷೇಪ) :– ಎಲ್ಲಾ ವೇದಾಂತಗಳೂ ವಿದ್ಯೆಗಾಗಿ ಪ್ರಾರಂಭವಾಗಿಲ್ಲವಲ್ಲ! ಅದರಲ್ಲಿ ಒಂದು ಭಾಗವು ಕ್ರಮಮುಕ್ತಿಫಲಕ್ಕಾಗಿ, ಐಶ್ವರ್ಯ(ಪ್ರಾಪ್ತಿ)ಗಾಗಿ, ಅಭ್ಯುದಯಕ್ಕೋಸ್ಕರ, ಮತ್ತು ಕರ್ಮಸಮೃದ್ಧಿಗಾಗಿ ಬಗೆಬಗೆಯ ಉಪಾಸನೆಗಳನ್ನು ಉಪದೇಶಮಾಡುತ್ತಿರುವದು ಕಂಡುಬರುತ್ತಿದೆಯಲ್ಲ!

---

1. ಇಲ್ಲಿ 'ಅಗ್ರಹಣ'ವೆಂದರೆ ಈ ಪ್ರಸ್ಥಾನಕ್ಕೆ ಅಸಾಧಾರಣವಾಗಿರುವ ಅವಿದ್ಯೆಯೇ.

2. ಅವಿದ್ಯೆಯಿಂದ ಅಹಂಕಾರಗ್ರಂಥಿಯಾಗುವಂತೆ ಅದರ ಸಂಸ್ಕಾರದಿಂದಲೂ ಆಗಬಹುದೆಂಬ ವಾದವು ಬ್ರಹ್ಮಸಿದ್ಧಿ, ಭಾಮತೀ– ಈ ಪ್ರಸ್ಥಾನಗಳಲ್ಲಿಯೂ ಇದೆ ಸಂಸ್ಕಾರವನ್ನು ನಾಶಮಾಡಿಕೊಳ್ಳುವದಕ್ಕೆ ಪ್ರಯತ್ನಾಂತರವೂ ಬೇಕೆಂದು ಬ್ರಹ್ಮಸಿದ್ಧಿ– ಮುಂತಾದವುಗಳಲ್ಲಿರುವಂತೆ ಭಾಷ್ಯದಲ್ಲಿ ಹೇಳಿರುವದು ಕಾಣುವದಿಲ್ಲ.

(ಪರಿಹಾರ) :- ನಿಜ. (ಆ) ಉಪಾಸನೆಗೆ ವಿಷಯುವಾದದ್ದಾದರೆ ಬ್ರಹ್ಮವು. ಯಾವ ಪ್ರಪಂಚವೂ ಇಲ್ಲದ ಆ (ಬ್ರಹ್ಮವೇ) ಜೀವನ ನಿಜಸ್ವರೂಪವು ಎಂದು ತಿಳಿಸುವದಕ್ಕೆ ಸಮಸ್ತಪ್ರಪಂಚದ ಜನ್ಮಾದಿಗಳಿಗೆ ಹೇತುವೆಂದು ಸರ್ವಾತ್ಮಕವೂ ಸರ್ವಜ್ಞವೂ ಸರ್ವಶಕ್ತಿಯುಳ್ಳದ್ದೂ ಆಗಿರುವ ಬ್ರಹ್ಮದ ಲಕ್ಷಣವನ್ನು ಮೊದಲು ಹೇಳಿರುತ್ತದೆ.[1] ಈ ಅವಸ್ಥೆಯಲ್ಲಿ[2] ಪ್ರಪಂಚವು ಬ್ರಹ್ಮದಲ್ಲಿಲ್ಲವೆನ್ನದೆಯೇ ಆಯಾ ಪ್ರಪಂಚದಿಂದ ಉಪಹಿತವಾಗಿರುವ ಬ್ರಹ್ಮವನ್ನು ಆಯಾ ಫಲಕ್ಕಾಗಿ ಉಪಾಸನೆಮಾಡಬೇಕು ಎಂದು ವಿಧಿಸಿರುತ್ತದೆ. ದರ್ಶಪೂರ್ಣಮಾಸಕ್ಕಾಗಿ ಅಪ್ಪ್ರಣಯನವನ್ನು ಗೋದೋಹನಕ್ಕೆ ಸಂಬಂಧಿಸಿ ಪಶುಗಳೆಂಬ (ಫಲ)ಕ್ಕಾಗಿ ವಿಧಿಸಿರುವಂತೆಯೇ ಇದು.[3] ಆದ್ದರಿಂದ ಇನ್ನೊಂದು ಬಗೆಯ ವಾಕ್ಯವು ಈ ಅರ್ಥವನ್ನು ಅವಲಂಬಿಸಿಕೊಂಡಿರುವದರಿಂದ ಆತ್ಮೈಕತ್ವವಿದ್ಯೆಗಾಗಿ ಸರ್ವವೇದಾಂತಗಳೂ ಆರಂಭಿಸಲ್ಪಟ್ಟಿವೆ ಎಂದು ಹೇಳಿದ್ದು ವಿರೋಧವಲ್ಲ.[4]

(ಆಕ್ಷೇಪ) :- ಪ್ರಾಣವೇ ಮುಂತಾದವುಗಳ ವಿಷಯವಾಗಿರುವ ಅಬ್ರಹ್ಮೋಪಾಸನೆಗಳೂ ವೇದಾಂತಗಳಲ್ಲಿ ಕಾಣಬರುತ್ತಿವೆಯಲ್ಲ !

(ಪರಿಹಾರ) :- ನಿಜ. ಅವುಗಳೂ ಕಾರ್ಯಬ್ರಹ್ಮವನ್ನು ಪಡೆಯುವ ಕ್ರಮದಿಂದ ಮುಕ್ತಿಫಲವುಳ್ಳವೇ ಆಗಿರುತ್ತವೆ.[5] ಇದನ್ನು ಸೂತ್ರಕಾರರು **'ಕಾರ್ಯಾತ್ಯಯೇ ತದಧ್ಯಕ್ಷೇಣ ಸಹಾತಃ ಪರಮಭಿಧಾನಾತ್'** (ವೇ. ಸೂ. ೪-೩-೧೦) ಕಾರ್ಯಬ್ರಹ್ಮಲೋಕದ ಪ್ರಲಯವಾಗುವಾಗ ಆ ಲೋಕದ ಒಡೆಯನಾದ (ಹಿರಣ್ಯಗರ್ಭನೊಡನೆ) ಮುಕ್ತಿಯನ್ನು ಪಡೆಯುತ್ತಾರೆ- ಎಂದು ಮುಂದೆ ಹೇಳಿರುತ್ತಾರೆ.[6]

---

1. ಲಕ್ಷಣವು ಸಗುಣಬ್ರಹ್ಮಪರವೆ, ನಿರ್ಗುಣಬ್ರಹ್ಮಪರವೆ? -ಎಂಬ ವಾದವು ಈ ವಾಕ್ಯವನ್ನು ನೆಪವಾಗಿ ಮಾಡಿಕೊಂಡು ಹೊರಟಿರುವಂತೆ ತೋರುತ್ತದೆ.

2. ಬ್ರಹ್ಮವು ಜಗತ್ಕಾರಣವೆಂದಿಟ್ಟುಕೊಂಡಿರುವ ಅವಸ್ಥೆಯಲ್ಲಿ.

3. ಹೇಗೆ ದರ್ಶಪೂರ್ಣಮಾಸದಲ್ಲಿ ವಿಧಿಸಿರುವ ಅಪ್ಪ್ರಣಯನ (ನೀರು ತುಂಬುವ) ಕರ್ಮವನ್ನು ಪಶುಕಾಮನಾದವನಿಗೆ ಗೋದೋಹನದಲ್ಲಿ (ಹಾಲುಕರೆಯುವ ಪಾತ್ರೆಯಲ್ಲಿ) ಮಾಡಬೇಕೆಂದು ಹೇಳಿದೆಯೋ ಹಾಗೆ ಜೀವನ ನಿಜವಾದ ಸ್ವರೂಪವಾದ ಬ್ರಹ್ಮವನ್ನೇ ಉಪಾಸನೆಗಾಗಿ ವಿಧಿಸಿದೆ. ಇಲ್ಲಿ ದರ್ಶಪೂರ್ಣಮಾಸಕ್ಕೆ ಅಧಿಕಾರಿಯಾದವನೇ, ಗೋದೋಹನವನ್ನು ಉಪಯೋಗಿಸಬೇಕೆಂದು ಹೇಳಿದಂತಾಗಿದೆ. ಹೀಗೆಯೇ ಬ್ರಹ್ಮಜ್ಞಾನಿಗಳು ತಿಳಿದು ಹೇಳಿರುವ ಬ್ರಹ್ಮವನ್ನೇ ಆಯಾ ಫಲವು ಬೇಕೆನ್ನುವವರು ಉಪಾಸಿಸಬೇಕೆಂದಿದೆ.

4. ಉಪಾಸನಾವಾಕ್ಯಕ್ಕೆ ಉಪಾಸನೆಯಲ್ಲಿ ಅವಾಂತರತಾತ್ಪರ್ಯವಿದ್ದರೂ ಮಹಾತಾತ್ಪರ್ಯವು ಬ್ರಹ್ಮತತ್ತ್ವನಿರ್ಧಾರಣೆಯಲ್ಲಿ. ಆದ್ದರಿಂದ ಎಲ್ಲಾ ವೇದಾಂತಗಳೂ ಆತ್ಮೈಕತ್ವವನ್ನು ತಿಳಿಸುವದಕ್ಕೆ ಹೊರಟಿವೆ ಎಂದು ಹೇಳಬಹುದು.

5. ಕ್ರಮಮುಕ್ತಿ ಎಂಬ ಫಲವನ್ನು ಕೊಡದೆ ಇರುವ ಉಪಾಸನೆಗಳನ್ನೇಕೆ ಇಲ್ಲಿ ಹೇಳಿದೆ ?- ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿಲ್ಲ.

6. ಆದ್ದರಿಂದ ಉಪಾಸನಾವಾಕ್ಯಗಳೂ ಪರಂಪರೆಯಿಂದ ಆತ್ಮೈಕತ್ವವನ್ನೇ ಹೇಳಿದಂತಾಯಿತು.

# ೧೪. ಮೀಮಾಂಸಾಸಂಬಂಧಭಾಷ್ಯ

**ಯಥಾ ಚಾಯಮರ್ಥಃ ಸರ್ವೇಷಾಂ ವೇದಾನ್ತಾನಾಂ ತಥಾ ವಯಮಸ್ಯಾಂ ಶಾರೀರಕಮೀಮಾಂಸಾಯಾಂ ಪ್ರದರ್ಶಯಿಷ್ಯಾಮಃ ॥**

## ಉಪನಿಷತ್ತುಗಳಿಗೂ ಶಾರೀರಕಮೀಮಾಂಸೆಗೂ ಸಂಬಂಧ

(ಪಂಚಪಾದಿಕಾ)

೭೭. **'ಯಥಾ ಚಾಯಮರ್ಥಃ ಸರ್ವೇಷಾಂ ವೇದಾನ್ತಾನಾಮ್ ತಥಾ ವಯಮ್ ಅಸ್ಯಾಂ ಶಾರೀರಕಮೀಮಾಂಸಾಯಾಂ ಪ್ರದರ್ಶಯಿಷ್ಯಾಮಃ'** ಇತಿ ಪ್ರತಿಜ್ಞಾತೇ ಅರ್ಥೇ ವೇದಾನ್ತಾನಾಂ ತಾತ್ಪರ್ಯಮ್ ಉಪದರ್ಶಯಿತುಂ ಸಮನ್ವಯಸೂತ್ರಪ್ರಮುಖೈಃ ಸೂತ್ರವಾಕ್ಯೈಃ ಗ್ರಥಿತೋ ನ್ಯಾಯ ಇತಿ ದರ್ಶಯತಿ । ಶರೀರಮೇವ ಶರೀರಕಮ್ । ಶರೀರಕೇ ಭವಃ ಶಾರೀರಕೋ ಜೀವಃ । ತಮ್ ಅಧಿಕೃತ್ಯ ಕೃತೋ ಗ್ರನ್ಥಃ ಶಾರೀರಕಃ । ತದಿಹ ವೇದಾನ್ತಾನಾಂ ಜೀವಸ್ಯ ತತ್ತ್ವಮ್ ಅಧಿಕೃತ್ಯ ಪ್ರವೃತ್ತಾನಾಂ ಬ್ರಹ್ಮರೂಪತಾಯಾಂ ಪರ್ಯವಸಾನಮ್ ಇತಿ ಕಥಯಿತುಂ ಪ್ರಣೀತಾನಾಂ ಶಾರೀರಕಂ ಜೀವತತ್ತ್ವಮಧಿಕೃತ್ಯ ಕೃತತ್ವಮಸ್ತೀತಿ ಶಾರೀರಕಾಭಿಧಾನಮ್ ॥

(ಅರ್ಥ)

**ಯಥಾ ಚಾಯಮರ್ಥಃ ಸರ್ವೇಷಾಂ ವೇದಾನ್ತಾನಾಂ ತಥಾ ವಯಮಸ್ಯಾಂ ಶಾರೀರಕಮೀಮಾಂಸಾಯಾಂ ಪ್ರದರ್ಶಯಿಷ್ಯಾಮಃ** ('ಸರ್ವವೇದಾಂತಗಳಿಗೂ ಇದೇ ಅರ್ಥವೆಂಬುದು ಹೇಗೆಂಬುದನ್ನು ನಾವು ಈ ಶಾರೀರಕಮೀಮಾಂಸೆಯಲ್ಲಿ ತೋರಿಸಿಕೊಡುವೆವು') ಎಂಬುದರಿಂದ ಪ್ರತಿಜ್ಞೆ ಮಾಡಿದ ಅರ್ಥದಲ್ಲಿ ವೇದಾಂತಗಳಿಗೆ ತಾತ್ಪರ್ಯ(ವಿದೆ) ಎಂಬುದನ್ನು ತೋರಿಸಿಕೊಡುವದಕ್ಕಾಗಿ ಸಮನ್ವಯಸೂತ್ರವೇ ಮುಂತಾದ ಸೂತ್ರವಾಕ್ಯಗಳಿಂದ ನ್ಯಾಯವನ್ನು ರಚಿಸಲಾಗಿದೆ ಎಂತ ತಿಳಿಸಿರುತ್ತಾರೆ.[1] ಶರೀರಕವೆಂದರೆ ಶರೀರವೇ ; ಶರೀರಕದಲ್ಲಿ ಇರುವವನು ಶಾರೀರಕನು,[2] ಜೀವನು ; ಅವನ ವಿಷಯದಲ್ಲಿ ಮಾಡಿರುವ ಗ್ರಂಥವು ಶಾರೀರಕವು. ಅದ್ದರಿಂದ ಇಲ್ಲಿ ವೇದಾಂತಗಳು ಜೀವನ

1. ಪ್ರತಿಜ್ಞೆಮಾಡಿರುವ ವಿಷಯವನ್ನು ಎಂದರೆ ಆತ್ಮ ತತ್ತ್ವವನ್ನು ವೇದಾಂತಗಳು ತಾತ್ಪರ್ಯದಿಂದ ತಿಳಿಸುತ್ತವೆ ಎಂಬುದನ್ನು ಈ ಗ್ರಂಥದಲ್ಲಿ ಯುಕ್ತಿಯಿಂದ ತಿಳಿಸಿಕೊಟ್ಟಿರುತ್ತದೆ ಎಂದು ಈ ವಾಕ್ಯದಲ್ಲಿ ಹೇಳಿದೆ ಎಂದು ಅರ್ಥ.

2. ಶರೀರ ಎಂಬುದನ್ನೇ ತಿಳಿಸುವ ಸ್ವಾರ್ಥದ ಪ್ರತ್ಯಯವು ಬಂದು ಅದರಿಂದ ಶಾರೀರಕ ಎಂಬ ರೂಪವಾಗಿದೆ.

ಇರುವಿಕೆಯನ್ನು ಕುರಿತು ಪ್ರವೃತ್ತವಾಗಿ (ಅವನಿಗೆ) ಬ್ರಹ್ಮರೂಪತ್ವವನ್ನು (ಹೇಳುವದರಲ್ಲಿ) ಕೊನೆಗಂಡಿರುವವೆಂದು ತಿಳಿಸುವದಕ್ಕೆ ಹೊರಟಿರುವ (ಸೂತ್ರಗಳಿಗೆ) ಶಾರೀರಕನಾದ ಜೀವನ ತತ್ತ್ವವನ್ನು ಕುರಿತು ಮಾಡಿದಂತೆ ಆಗಿದೆಯಾಗಿ (ಈ ಗ್ರಂಥಕ್ಕೆ) **'ಶಾರೀರಕ'**ವೆಂದು ಹೆಸರು.[1]

## ಶಾಸ್ತ್ರವಿಷಯದ ಪ್ರಯೋಜನಗಳು

**(ಪಂಚಪಾದಿಕಾ)**

೭೮. ಮುಮುಕ್ಷುತ್ವೇ ಸತಿ ಅನನ್ತರಂ ಬ್ರಹ್ಮಜ್ಞಾನಂ ಕರ್ತವ್ಯಮ್ ಇತಿ ಯದ್ಯಪ್ಯೇತಾವಾನ್ ಸೂತ್ರಸ್ಯ ಶ್ರೌತೋಽರ್ಥಃ, ತಥಾಪಿ ಅರ್ಥಾತ್ ಬ್ರಹ್ಮಜ್ಞಾನಸ್ಯ ಮೋಕ್ಷಃ ಪ್ರಯೋಜನಂ ನಿರ್ದಿಷ್ಟಂ ಭವತಿ । ತಥಾ ಹಿ ಪುರುಷಾರ್ಥವಸ್ತುಕಾಮನಾನನ್ತರಂ ಯತ್ರ ಪ್ರವೃತ್ತಿರುಪದಿಶ್ಯತೇ, ತಸ್ಯ ತತ್ಸಾಧನತ್ವಮಪಿ ಅರ್ಥಾನ್ನಿರ್ದಿಷ್ಟಂ ಪ್ರತೀಯತೇ । ತಥಾ ಸತಿ ಕುತಸ್ತನ್ಮೋಕ್ಷಸಾಧನಂ ಬ್ರಹ್ಮಜ್ಞಾನಂ ಭವತಿ ? ಇತ್ಯಪೇಕ್ಷಾಯಾಮ್ ಅರ್ಥಾತ್ ಅಸ್ಮಾಚ್ಛಾಸ್ತ್ರಾದ್ ಭವತಿ- ಇತಿ ಶಾಸ್ತ್ರಸ್ಯ ಬ್ರಹ್ಮಜ್ಞಾನಂ ವಿಷಯೋ ನಿರ್ದಿಷ್ಟಃ ॥

**(ಅರ್ಥ)**

'ಮುಮುಕ್ಷುತ್ವವಿದ್ದರೆ ಅನಂತರದಲ್ಲಿ ಬ್ರಹ್ಮಜ್ಞಾನವನ್ನು ಮಾಡಿಕೊಳ್ಳಬೇಕು' ಎಂದಿಷ್ಟೇ ಸೂತ್ರಕ್ಕೆ ಅಕ್ಷರಾರ್ಥವಾದರೂ ಬ್ರಹ್ಮಜ್ಞಾನಕ್ಕೆ ಮೋಕ್ಷವು ಪ್ರಯೋಜನವೆಂದು ಅರ್ಥವಶದಿಂದ ತಿಳಿಸಿದಂತೆ ಆಯಿತು. ಹೇಗೆಂದರೆ : ಪುರುಷಾರ್ಥವಾದ ವಸ್ತುವಿನ ಕಾಮವುಂಟಾದ ಬಳಿಕ ಯಾವದರಲ್ಲಿ ಪ್ರವೃತ್ತನಾಗಬೇಕೆಂದು ಉಪದೇಶಿಸಿದೆಯೋ ಅದಕ್ಕೆ ಅದು ಸಾಧನವೆಂಬುದನ್ನು ಅರ್ಥವಶದಿಂದ ತಿಳಿಸಿಕೊಟ್ಟಿದೆ ಎಂದು ತಿಳಿಯಬೇಕಾಗುತ್ತದೆ.[2] ಹಾಗಾದರೆ ಆ ಮೋಕ್ಷಸಾಧನವಾದ ಬ್ರಹ್ಮಜ್ಞಾನವು ಏತರಿಂದ ಆಗುತ್ತದೆ ?- ಎಂಬ ಅಪೇಕ್ಷೆಯುಂಟಾಗಲು ಈ ಶಾಸ್ತ್ರದಿಂದ ಆಗುತ್ತದೆ ಎಂದು ಅರ್ಥವಶದಿಂದ ಶಾಸ್ತ್ರಕ್ಕೆ ಬ್ರಹ್ಮಜ್ಞಾನವು ವಿಷಯವು- ಎಂದು ತಿಳಿಸಿದಂತಾಯಿತು.[3]

---

1. ಇಲ್ಲಿ ಬ್ರಹ್ಮವನ್ನು ಕುರಿತು ಹೇಳಿದೆ. ಶಾರೀರಕನನ್ನು ಕುರಿತು ಹೇಳಿಲ್ಲವಲ್ಲ !- ಎಂಬ ಶಂಕೆಗೆ ಪರಿಹಾರವಿದು. ಶಾರೀರಕನಾದ ಜೀವನ ಪರಮಾರ್ಥಸ್ವರೂಪವೇ ಬ್ರಹ್ಮವು ಎಂದು ಇಲ್ಲಿ ತಿಳಿಸಿದೆಯಾದ್ದರಿಂದ ಶಾರೀರಕನನ್ನು ಕುರಿತೇ ಹೇಳಿದಂತೆ ಆಗಿದೆ ಎಂದು ಅಭಿಪ್ರಾಯ.

2. ಸೂತ್ರದಲ್ಲಿ ಮುಮುಕ್ಷುತ್ವಾನಂತರದಲ್ಲಿ ಬ್ರಹ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಎಂದದ್ದರಿಂದ ಜ್ಞಾನವು ಮೋಕ್ಷಸಾಧನವೆಂದು ಹೇಳಿದಂತಾಯಿತು- ಎಂಬ ಅರ್ಥಿಕಾರ್ಥವನ್ನು ಇಲ್ಲಿ ತಿಳಿಸಿದೆ.

3. ಆತ್ಮೈಕತ್ವಪ್ರಾಪ್ತಿಯೇ ವೇದಾಂತಾರ್ಥವೆಂಬುದನ್ನು ಶಾರೀರಕದಲ್ಲಿ ತಿಳಿಸುತ್ತೇವೆಂದದ್ದರಿಂದ ಶಾಸ್ತ್ರಕ್ಕೆ ಬ್ರಹ್ಮಜ್ಞಾನವೇ ವಿಷಯ ಎಂಬ ಅರ್ಥಿಕಾರ್ಥವನ್ನು ತಿಳಿಸಿದಂತಾಯಿತು- ಎಂದಭಿಪ್ರಾಯ.

# ೧೫. ಸೂತ್ರಾವತರಣಿಕಾಭಾಷ್ಯ

**ವೇದಾನ್ತಮೀಮಾಂಸಾಶಾಸ್ತ್ರಸ್ಯ ವ್ಯಾಚಿಖ್ಯಾಸಿತಸ್ಯ ಇದಮಾದಿಮಂ ಸೂತ್ರಮ್ ॥**

## ಮೊದಲು ಪ್ರಯೋಜನವಿಷಯಗಳನ್ನು ಹೇಳಿರುವದಕ್ಕೆ ಕಾರಣ

(ಪಂಚಪಾದಿಕಾ)

೭೯. ತದೇವಂ ಮುಮುಕ್ಷುತ್ವಾನನ್ತರಂ ಬ್ರಹ್ಮಜ್ಞಾನಕರ್ತವ್ಯತೋಪದೇಶಮುಖೇನ ವೇದಾನ್ತಾನಾಂ ವಿಷಯಪ್ರಯೋಜನನಿರ್ದೇಶೇಽಪಿ ಅರ್ಥಂ ಸೂತ್ರಸ್ಯ ವ್ಯಾಪಾರಂ ದರ್ಶಯಿತ್ವಾ ತದಪೇಕ್ಷಿತಮಪ್ಯರ್ಥಾತ್ ಸೂತ್ರಿತಮ್ ಅವಿದ್ಯಾತ್ಮಕಬನ್ಧಮ್ ಉಪವರ್ಣ್ಯ, ಪ್ರತಿಜ್ಞಾತಾರ್ಥಸಿದ್ಧಯೇ ಹೇತ್ವಾಕಾಙ್ಕ್ಷಾಯಾಮ್ ಅಸ್ಮಿನ್ನೇವ ತಂ ಪ್ರದರ್ಶಯಿಷ್ಯಾಮ- ಇತಿ ವ್ಯಾಖ್ಯೇಯತ್ವಮುಪಕ್ಷಿಪ್ಯ ವ್ಯಾಖ್ಯಾತುಕಾಮಃ ಪ್ರಥಮಂ ತಾವತ್ ಪ್ರಯೋಜನವಿಷಯಯೋರುಪಾದಾನೇ ನಿಮಿತ್ತಮಾಹ- ವೇದಾನ್ತಮೀಮಾಂಸಾಶಾಸ್ತ್ರಸ್ಯ ವ್ಯಾಚಿಖ್ಯಾಸಿತಸ್ಯ ಇದಮಾದಿಮಂ ಸೂತ್ರಮ್ ಅಥಾತೋ ಬ್ರಹ್ಮಜಿಜ್ಞಾಸೇತಿ। ಅಯಮಸ್ಯಾರ್ಥಃ। ಶಾಸ್ತ್ರಸ್ಯ ಆದಿರಯಮ್। ಆದೌ ಚ ಪ್ರವತ್ತ್ಯಂಗತಯಾ ಪ್ರಯೋಜನಂ ವಿಷಯಶ್ಚ ದರ್ಶನೀಯಃ। ಸೂತ್ರಂ ಚೈತತ್। ಅತೋ ಯಃ ಕಶ್ಚಿದರ್ಥಃ ಶಬ್ದಸಾಮರ್ಥ್ಯೇನ ಅರ್ಥಬಲಾದ್ ವಾ ಉತ್ಪ್ರೇಕ್ಷಿತಃ ಸ ಸರ್ವಸ್ತದರ್ಥ ಏವೇತಿ ಭವತಿ ಅಯಮರ್ಥಕಲಾಪಃ, ತನ್ಮಹಿಮಾಧಿಗತಃ ॥

ಏವಂ ಸೂತ್ರಸ್ಯ ಆದಿತ್ವೇನ ಕಾರಣೇನ ಸೂತ್ರತಯಾ ಚ ವಿಷಯಪ್ರಯೋಜನಂ ತತ್ಸಿದ್ಧಿಕರಂ ಚ ಅವಿದ್ಯಾಖ್ಯಂ ಬನ್ಧಂ ತತ್ಸಾಮರ್ಥ್ಯಾವಗತಮ್ ಆಪಾದ್ಯ ತತ್ರ ಸೂತ್ರಸಾಮರ್ಥ್ಯಂ ದರ್ಶಯಿತುಂ ಪ್ರತಿಪದಂ ವ್ಯಾಖ್ಯಾತುಮಾರಭತೇ ॥

(ಅರ್ಥ)

ಅಂತೂ ಹೀಗೆ ಮುಮುಕ್ಷುತ್ವಾನಂತರದಲ್ಲಿ ಬ್ರಹ್ಮಜ್ಞಾನವನ್ನು ಮಾಡಿಕೊಳ್ಳಬೇಕೆಂದು ಉಪದೇಶಮಾಡುವ ಮೂಲಕ ವೇದಾಂತಗಳಿಗೆ ವಿಷಯಪ್ರಯೋಜನಗಳನ್ನು ತಿಳಿಸುವದರಲ್ಲಿಯೂ ಸೂತ್ರದ ವ್ಯಾಪಾರವು ಅರ್ಥಿಕವಾಗಿರುತ್ತದೆ ಎಂಬುದನ್ನು ತಿಳಿಸಿ ಅದರಿಂದ ಅಪೇಕ್ಷಿತವಾದ ಅವಿದ್ಯಾರೂಪವಾದ ಬಂಧವೂ ಅರ್ಥವಶದಿಂದ ಸೂತ್ರಿತವಾಗಿರುವದರಿಂದ[1] (ಅದನ್ನು) ವರ್ಣಿಸಿ,

1. ಇದುವರೆಗೆ ಉಪನಿಷತ್ತುಗಳಿಗೆ ವಿಷಯಪ್ರಯೋಜನವನ್ನು ತಿಳಿಸುವದೂ ಜ್ಞಾನದಿಂದ ಮೋಕ್ಷವುಂಟಾಗುವದೆಂದು ಹೇಳಿದ್ದರಿಂದ ಬಂಧವು ಅವಿದ್ಯಾನಿಮಿತ್ತಕವೆಂದು ಸೂಚಿಸುವದೂ ಸೂತ್ರದ ಅರ್ಥಿಕಾರ್ಥವು ಎಂದು ಹೇಳಿದ್ದಾಗಿದೆ ; ಇದನ್ನು ಈ ಶಾಸ್ತ್ರದಲ್ಲಿ ವಿವರಿಸುವದರಿಂದ ಇದನ್ನು ವ್ಯಾಖ್ಯಾನಮಾಡುವದು ಯುಕ್ತವೆಂದು ಹೇಳಿದಂತೆ ಆಗಿದೆ.

ಪ್ರತಿಜ್ಞಾತವಾದ ಅರ್ಥದ ಸಿದ್ಧಿಗೆ ಕಾರಣದ ಆಕಾಂಕ್ಷೆಯುಂಟಾಗಲಾಗಿ ಈ (ಶಾಸ್ತ್ರದಲ್ಲಿಯೇ) ಅದನ್ನು ತಿಳಿಸುವೆವು ಎಂಬ (ವಾಕ್ಯದಿಂದ) ಗ್ರಂಥವು ವ್ಯಾಖ್ಯಾನಕ್ಕೆ ತಕ್ಕದ್ದೆಂದು ತಿಳಿಸಿ (ಈಗ ಅದನ್ನು) ವ್ಯಾಖ್ಯಾನಮಾಡುವದಕ್ಕೆ ಹೊರಟು ಮೊಟ್ಟ ಮೊದಲನೆಯದಾಗಿ ವಿಷಯಪ್ರಯೋಜನಗಳನ್ನೇ ತೆಗೆದುಕೊಂಡಿರುವದಕ್ಕೆ ನಿಮಿತ್ತವನ್ನು '**ವೇದಾನ್ತಮೀಮಾಂಸಾಶಾಸ್ತ್ರಸ್ಯ ವ್ಯಾಚಿಖ್ಯಾಸಿತಸ್ಯ ಇದಮಾದಿಮಂ ಸೂತ್ರಮ್ ಅಥಾತೋ ಬ್ರಹ್ಮಜಿಜ್ಞಾಸೇತಿ**' (ವ್ಯಾಖ್ಯಾನ ಮಾಡಬೇಕೆಂದು ಹೊರಟಿರುವ ವೇದಾಂತಮೀಮಾಂಸಾಶಾಸ್ತ್ರಕ್ಕೆ 'ಇನ್ನು ಆದ್ದರಿಂದ ಬ್ರಹ್ಮಜಿಜ್ಞಾಸೆಯು' ಎಂಬ ಇದು ಮೊದಲನೆಯ ಸೂತ್ರವು) ಎಂಬ (ವಾಕ್ಯದಿಂದ) ಹೇಳಿರುತ್ತಾರೆ. ಈ (ವಾಕ್ಯಕ್ಕೆ) ಇದು ಅರ್ಥವು: ಶಾಸ್ತ್ರಕ್ಕೆ ಇದು 'ಆದಿ'ಯು (ಮೊದಲು). ಮೊದಲೇ (ಅಧಿಕಾರಿಗಳು) ಪ್ರವರ್ತಿಸುವದಕ್ಕೆ ಅಂಗವಾಗಿ ಪ್ರಯೋಜನವನ್ನೂ ವಿಷಯವನ್ನೂ ತಿಳಿಸಬೇಕು.[1] ಇದು ಸೂತ್ರವೂ (ಆಗಿದೆ). ಆದ್ದರಿಂದ ಯಾವಯಾವ ಅರ್ಥವನ್ನು ಶಬ್ದಸಾಮರ್ಥ್ಯದಿಂದಲಾಗಲಿ ಅರ್ಥಬಲದಿಂದಲಾಗಲಿ ಊಹಿಸಬಹುದಾಗಿರುವದೋ ಅದೆಲ್ಲವೂ ಆ (ಸೂತ್ರದ) ಅರ್ಥವೇ ಆಗಿರುತ್ತದೆಯಾಗಿ[2] ಆ (ಸೂತ್ರದ) ಮಹಿಮೆಯಿಂದಲೇ ಈ ಅರ್ಥಸಮೂಹವೆಲ್ಲ ಅರಿತುಕೊಂಡದ್ದು ಎಂದಾಗುವದು.[3]

ಹೀಗೆ ಸೂತ್ರವು (ಶಾಸ್ತ್ರದ) ಆದಿ ಎಂಬ ಕಾರಣದಿಂದಲೂ (ಇದು) ಸೂತ್ರವಾಗಿರುವದರಿಂದಲೂ ವಿಷಯವನ್ನೂ ಪ್ರಯೋಜನವನ್ನೂ ಅವೆರಡನ್ನೂ ಸಾಧಿಸುವ ಅವಿದ್ಯೆ ಎಂಬ ಬಂಧವನ್ನು ಆ ಸೂತ್ರದ ಸಾಮರ್ಥ್ಯದಿಂದ ನಿಶ್ಚಯಿಸಿದ್ದೆಂದು ಸಾಧಿಸಿ ಅವುಗಳನ್ನು (ತಿಳಿಯಿಸುವದರಲ್ಲಿ) ಸೂತ್ರಕ್ಕೆ ಸಾಮರ್ಥ್ಯವಿದೆ ಎಂದು ತೋರಿಸಿಕೊಡುವದಕ್ಕಾಗಿ ಒಂದೊಂದು ಪದಕ್ಕೂ ವ್ಯಾಖ್ಯಾನಮಾಡುವದಕ್ಕೆ ಆರಂಭಿಸಿರುತ್ತಾರೆ.[4]

**ಇತಿ ಪಞ್ಚಪಾದಿಕಾಯಾಂ ಪ್ರಥಮಂ ವರ್ಣಕಮ್**

---

1. ಮೊದಲೇ ಶಾಸ್ತ್ರದ ವಿಷಯಪ್ರಯೋಜನಗಳನ್ನು ತಿಳಿಸಿದರೆ ಶ್ರೋತೃಗಳು ಅದನ್ನು ಓದಿ ತಿಳಿದುಕೊಳ್ಳುವದಕ್ಕೆ ಹೊರಡುತ್ತಾರೆ.

2. ಸೂತ್ರವೆಂದರೆ ವಿಷಯಗಳನ್ನು ತಿಳಿಸುವದಲ್ಲದೆ ಸೂಚಿಸುವದೂ ಆಗಿರಬೇಕು. ಪ್ರತಿಯೊಂದು ವಿಷಯವನ್ನೂ ಬಾಯಿಬಿಟ್ಟು ಹೇಳಬೇಕಾದದ್ದೇನೂ ಇರುವದಿಲ್ಲ.

3. ವಿಷಯ, ಪ್ರಯೋಜನ, ಅವಿದ್ಯೆ– ಇವುಗಳನ್ನು ಆಯಾ ಶಬ್ದದಿಂದ ಹೇಳದಿದ್ದರೂ ಸೂತ್ರವು ಸೂಚಿಸಿರುವದರಿಂದ, ಇವು ಮೂರೂ ಸೂತ್ರದ ಅರ್ಥವೇ ಎಂದು ಅಧ್ಯಾಸಭಾಷ್ಯದಲ್ಲಿ ಸೂಚಿಸಿದಂತೆ ಆಯಿತು– ಎಂದು ಭಾವ. ಮೂಲಸೂತ್ರದಲ್ಲಿ ಹೇಳದೆ ಇದ್ದ ಅಧ್ಯಾಸವಿಚಾರವು ಭಾಷ್ಯದಲ್ಲೇಕೆ ಬಂದಿದೆ ?–ಎಂಬ ಆಕ್ಷೇಪಕ್ಕೆ ಸಮಾಧಾನವಿದು.

4. ಸೂತ್ರದಲ್ಲಿ ವಿಷಯಪ್ರಯೋಜನಗಳನ್ನು ಸ್ಪಷ್ಟವಾಗಿ ಹೇಳಿಯೂ ಇದೆ –ಎಂದು ತಿಳಿಸುವದಕ್ಕಾಗಿ ಪ್ರತಿಪದಾರ್ಥವ್ಯಾಖ್ಯಾನವನ್ನು ಮುಂದಿನ ವರ್ಣಕದಲ್ಲಿ ಆರಂಭಿಸಿರುತ್ತಾರೆ– ಎಂದರ್ಥ.

22-10-62, 1000. ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

# ಅಧ್ಯಾತ್ಮಪ್ರಕಾಶ ಕಾರ್ಯಾಲಯ,
## ಹೊಳೆನರಸೀಪುರ.

---

## ಈ ಕಾರ್ಯಾಲಯದಿಂದ
## ತಾವು ಯಾವಯಾವ ಲಾಭವನ್ನು ಪಡೆಯಬಹುದು?

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸ, ಅನುಷ್ಠಾನಗಳು– ಇವುಗಳನ್ನು ನೋಡಿ ನಲಿಯಬಹುದು.

೨. ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯವಾದ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿರುವ "ವಿದ್ಯಾನಿಲಯ"ಕ್ಕೆ ನಿಮ್ಮ ಕಡೆಯಲ್ಲಿರುವ ಬ್ರಾಹ್ಮಣ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ, ಅವರಿಂದ ನಿಮ್ಮ ಪ್ರಾಂತದಲ್ಲಿ ವಿದ್ಯಾಪ್ರಸಾರವನ್ನು ಮಾಡಿಸಬಹುದು.

೪. ಕಾರ್ಯಾಲಯದಲ್ಲಿ ಪ್ರಕಟವಾಗುವ "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು. ಮಹಾಪೋಷಕರೂ ಪೋಷಕರೂ ಆಗಿ ಪತ್ರಿಕೆಯನ್ನು ಪ್ರೋತ್ಸಾಹಿಸಬಹುದು.

೫. ಕಾರ್ಯಾಲಯದಲ್ಲಿ ಸಿದ್ಧವಾಗುತ್ತಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಮಹಾಪೋಷಕರು, ಅಥವಾ ಪೋಷಕರು ಎನಿಸಿ ಈ ಪ್ರಕಟನೆಗಳ ಪುಸ್ತಕಭಂಡಾರವೊಂದನ್ನು ಏರ್ಪಡಿಸಿಕೊಳ್ಳಬಹುದು.

೬. ಗ್ರಂಥಗಳ ಪ್ರಚಾರಕ್ಕಾಗಿ ಏರ್ಪಡಿಸಿರುವ (1) ಬ್ರಹ್ಮವಿದ್ಯಾದಾನ (2) ಅಧ್ಯಾತ್ಮಗ್ರಂಥಪಾರಿತೋಷಿಕ (2) ವಿಶೇಷವಿನಿಯೋಗ– ಈ ಯೋಜನೆಗಳಲ್ಲಿ ಭಾಗವನ್ನು ವಹಿಸಿ ಪುಣ್ಯವನ್ನೂ ಪುರುಷಾರ್ಥವನ್ನೂ ಸಂಪಾದಿಸಬಹುದು.

೭. ಕಾರ್ಯಾಲಯದ ಕಟ್ಟಡಕ್ಕೂ, ವಿದ್ಯಾರ್ಥಿನಿಲಯಕ್ಕೂ, ಪೂಜಾಮಂದಿರಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದು.

# ಕೆಲವು ಗ್ರಂಥಗಳು

ನೈಷ್ಕರ್ಮ್ಯಸಿದ್ಧಿ : ಇದು ಆಚಾರ್ಯರ ಬೆಂಬಳಿಯ ಶಿಷ್ಯರಾದ ಶ್ರೀಸುರೇಶ್ವರಾಚಾರ್ಯರು ಅನುಗ್ರಹಿಸಿರುವ ಅಮೋಘಗ್ರಂಥವಾಗಿದ್ದು ಶಾಂಕರಪ್ರಕ್ರಿಯೆಗೆ ಶಿಲಾಹಸ್ತಿರವಾಗಿರುತ್ತದೆ. ಆತ್ಮನು ಸ್ವತಃಸಿದ್ಧನಾಗಿದ್ದರೂ ಅವನ ವಿಷಯದಲ್ಲಿರುವ ಅಜ್ಞಾನವನ್ನು ತೊಲಗಿಸುವದಕ್ಕೆ 'ತತ್ತ್ವಮಸಿ' ಮುಂತಾದ ವೇದಾಂತವಾಕ್ಯವೇ ಬೇಕು. ವಾಕ್ಯಜನ್ಯಜ್ಞಾನವಾದಮೇಲೆ ಮಾಡಬೇಕಾದ ಸಾಧನಗಳಾವುವೂ ಇರುವದಿಲ್ಲ- ಎಂಬುದನ್ನು ಮನಗಾಣಿಸುವ ಅಮೋಘಪ್ರಕರಣಗ್ರಂಥವಿದು. ಪುಟಗಳು : ಕ್ರೌನ್ ೪೦+೩೪೦

ವೇದಾಂತವಿಚಾರದ ಇತಿಹಾಸ : ತುಲನಾತ್ಮಕದೃಷ್ಟಿಯಿಂದ ವೇದಾಂತವಿಚಾರದ ಮುನ್ನಡೆಯನ್ನು ತೋರಿಸುವ ಪುಸ್ತಕವಿದು. ಶ್ರೀಶಂಕರಾಚಾರ್ಯರಿಂದೀಚೆಗೆ ಬಂದಿರುವ ಮಂಡನಮಿಶ್ರ, ಸುರೇಶ್ವರ, ಪದ್ಮಪಾದ, ಭಾಸ್ಕರಾಚಾರ್ಯ, ವಾಚಸ್ಪತಿಮಿಶ್ರ, ವಿಮುಕ್ತಾತ್ಮ, ಪ್ರಕಾಶಾತ್ಮ, ಆನಂದಬೋಧ, ಶ್ರೀಹರ್ಷ, ಚಿತ್ಸುಖೀ, ಸರ್ವಜ್ಞಾತ್ಮ- ಎಂಬ ಹನ್ನೊಂದು ಜನ ವೇದಾಂತಾಚಾರ್ಯರುಗಳ ಪ್ರಕ್ರಿಯೆಯನ್ನು ಇಲ್ಲಿ ಪರಾಮರ್ಶಿಸಿದೆ. ವಿಚಾರಪ್ರಧಾನರಾಗಿರುವ ಜಿಜ್ಞಾಸುಗಳಿಗೆ ಅಮೂಲ್ಯಗ್ರಂಥವಿದು. ಪುಟಗಳು : ಡೆಮ್ಮಿ ೨೬೪

ಶಂಕರಸಿದ್ಧಾಂತ : ಶಾಂಕರವೇದಾಂತದಲ್ಲಿ ವಿದ್ಯೆ, ಅವಿದ್ಯೆ- ಇವುಗಳ ಸ್ವರೂಪ, ಕಾರ್ಯ- ಮುಂತಾದವುಗಳನ್ನು ಭಾಷ್ಯದ ಆಧಾರದಿಂದ ಪ್ರತಿಪಾದಿಸುವ ಪ್ರಕರಣವಿದು. ಆಚಾರ್ಯರು ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ ಒಪ್ಪದೆ ಇರುವ ಮೂಲಾವಿದ್ಯೆಯನ್ನು ಒಪ್ಪಿರುವ ವ್ಯಾಖ್ಯಾನಪ್ರಸ್ಥಾನಗಳ ಪ್ರಕ್ರಿಯೆಯು ಭಾಷ್ಯಪ್ರಕ್ರಿಯೆಗೆ ವಿರುದ್ಧವಾಗಿದೆಯೆಂಬುದನ್ನು ಸ್ಫುಟಗೊಳಿಸುತ್ತದೆ. ಮೂಲಾವಿದ್ಯಾವಾದಿಗಳಿಗೆ ಕೆಲವು ಪ್ರಶ್ನೆಗಳನ್ನೂ ಇಲ್ಲಿ ಹಾಕಲಾಗಿದೆ. ಪುಟಗಳು : ಕ್ರೌನ್ ೧೦+೯೭

ವೇದಾಂತದರ್ಶನ : ಸುಪ್ರಸಿದ್ಧರಾದ ಮೂವರು ಆಚಾರ್ಯರುಗಳಿಗೆ ಸಮ್ಮತವಾದ ವೇದಾಂತಸಿದ್ಧಾಂತವು ಹೇಗಿದೆ? ಎಂಬುದನ್ನು ಇಲ್ಲಿ ವಿವರಿಸಿದೆ. ಪುಟಗಳು: ಕ್ರೌನ್ ೪೪

ಉಪದೇಶಸಾಹಸ್ರಿ (ಪದ್ಯ) : ಈ ಗ್ರಂಥದಲ್ಲಿ ಒಟ್ಟು ೧೯ ಪ್ರಕರಣಗಳಿವೆ. ವೇದಾಂತಸಿದ್ಧಾಂತವನ್ನು ನಿಸ್ಸಂಶಯವಾಗಿ ತಿಳಿಯಬೇಕೆನ್ನುವವರಿಗೆ ಅತ್ಯಾವಶ್ಯಕವಾದದ್ದು. ಈ ಗ್ರಂಥದಿಂದ ಆರಿಸಿರುವ ಶ್ಲೋಕಗಳನ್ನು ಸುರೇಶ್ವರಾಚಾರ್ಯರು ನೈಷ್ಕರ್ಮ್ಯಸಿದ್ಧಿಯಲ್ಲಿಯೂ ಬೃಹದಾರಣ್ಯಕವಾರ್ತಿಕದಲ್ಲಿಯೂ ಉದಾಹರಿಸಿರುತ್ತಾರೆ. ಮೂಲಶ್ಲೋಕಗಳು, ಅರ್ಥ, ವಿಸ್ತಾರವಾದ ಕನ್ನಡವ್ಯಾಖ್ಯಾನ- ಇವುಗಳಿಂದ ಕೂಡಿ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಪುಟಗಳು : ಒಟ್ಟು ಡೆಮ್ಮಿ ೫೪೨

ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ.

---

**ಕಾರ್ಯದರ್ಶಿ,**

**ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.**